ರಾಷ್ಟ್ರ ಜಾಗೃತಿಯ ದೈನಿಕ

ಮಂಗಳೂರು
ಬುಧವಾರ, 22 ಏಪ್ರಿಲ್ 2026
ಸಂಪುಟ 48, ಸಂಚಿಕೆ 34, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸತ್ಯ ಸಾಬೀತುಪಡಿಸುವ ತಾಕತ್ತು ಮುಖ್ಯ | ೦೭
ಮೋದಿ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ | ೦೭
ಎಥೆನಾಲ್ ಮಿಶ್ರಣಕ್ಕೆ ಮುನ್ನುಡಿ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಆರ್ದ್ರೆ

ದಿನದ ಮಾತು

ಕಾಲವು ನಮ್ಮನ್ನು ದಾಟಿ ಸಾಗುತ್ತದೆ. ಆದರೆ ನೆರಳನ್ನು ಹಿಂದಕ್ಕೆ ಬಿಟ್ಟಿರುತ್ತದೆ.
▲ಸುಭಾಷಿತ

ಹಿಂದಿ ದ್ವೇಷಕ್ಕೆ ವಿದ್ಯಾರ್ಥಿಗಳು ಬಲಿಯಾದರೇ?

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
• ಪುಟ ೬

ಕಿರುಸುದ್ದಿ

ಏ.25ರಂದು ರಾಜ್ಯಾದ್ಯಂತ ಬಿಜೆಪಿ ಆಕ್ರೋಶ ಯಾತ್ರೆ

• **ಬೆಂಗಳೂರು:** ಮಹಿಳಾ ವಿರೋಧಿ ಕಾಂಗ್ರೆಸ್ ಮತ್ತು ಇಂಡಿ ಕೂಟದ ವಿರುದ್ಧ ರಾಜ್ಯಾದ್ಯಂತ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಏ.25ರಂದು ಆಕ್ರೋಶ ಯಾತ್ರೆ ಮತ್ತು ಸಭೆಗಳನ್ನು ಏರ್ಪಡಿಸಲಾಗುವುದು ಎಂದು ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ತಿಳಿಸಿದ್ದಾರೆ. ಮಂಗಳವಾರ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಇದೇ 27ರಿಂದ ರಾಜ್ಯದ ಎಲ್ಲ 224 ವಿಧಾನಸಭಾ ಕ್ಷೇತ್ರಗಳಲ್ಲಿ ಮತ್ತು ಬಿಜೆಪಿಯ 300 ಸಂಘಟನಾತ್ಮಕ ಮಂಡಲಗಳಲ್ಲಿ ಹೋರಾಟ ನಡೆಯಲಿದೆ ಎಂದರು. ➡ಪುಟ ೪

ಪಟಾಕಿ ತಯಾರಿಕಾ ಘಟಕ ಸ್ಫೋಟ: 13 ಜನರ ಸಾವು

• **ತ್ರಿಶೂರ್:** ಮುಂಡತ್ತಿಕೋಡ್‌ನಲ್ಲಿರುವ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಮಂಗಳವಾರ ಮಧ್ಯಾಹ್ನ ಸಂಭವಿಸಿದ ಭೀಕರ ಸ್ಫೋಟದಲ್ಲಿ ಕನಿಷ್ಠ 13 ಜನರು ಮೃತಪಟ್ಟಿದ್ದು, 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

• ಪುಟ ೭

ಗ್ರೆನೇಡ್ ದಾಳಿ ಸಂಚು: ಭಟ್ಟಿ ಸಹಚರರಿಬ್ಬರ ಸೆರೆ

• ಪುಟ ೭

ಮೇಕೆದಾಟಿಗೆ ಡಿಪಿಆರ್ ಸಿದ್ಧ: ಡಿಸಿಎಂ ಡಿಕೆಶಿ

• ಪುಟ ೫

ದೇಶದ ಜನರಿಗೆ ಖರ್ಗೆ ಅಪಮಾನ: ವಿಜಯೇಂದ್ರ

• ಪುಟ ೫

ಇಂದಿನಿಂದ ಸಿಇಟಿ: ವ್ಯಾಪಕ ಭದ್ರತೆ

• ಪುಟ ೫

ಬೈಕ್ ಟ್ಯಾಕ್ಸಿ ಸೇವೆಗೆ ನಿರ್ದೇಶನ: ಸಿಎಂ

• ಪುಟ ೫

ತೃತೀಯ ಭಾಷೆಗೆ ಅಂಕ ಪದ್ಧತಿಯೇ ಇರಲಿ: ಹೈ ಸೂಚನೆ

ಗ್ರೇಡ್ ಬಿಡಿ, ಅಂಕ ಕೊಡಿ

• **ಬೆಂಗಳೂರು:** ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುವ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕಗಳ ಬದಲು ಗ್ರೇಡ್ ನೀಡಲು ಮುಂದಾಗಿದ್ದ ರಾಜ್ಯ ಸರ್ಕಾರದ ಕ್ರಮಕ್ಕೆ ಹೈಕೋರ್ಟ್‌ನಲ್ಲಿ ಹಿನ್ನಡೆಯಾಗಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಅಂಕಗಳನ್ನು ನೀಡುವ ಪದ್ಧತಿ ಮುಂದುವರಿಸಬೇಕು ಎಂದು ಸ್ಪಷ್ಟ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಅತಂತ್ರ ಸ್ಥಿತಿಗೆ ಸಿಲುಕಿದ್ದಾರೆ.

ಇತ್ತೀಚೆಗೆ ಅಂಕಗಳನ್ನೇ ನೀಡಬೇಕೆಂದು ನಿರ್ದೇಶನ ನೀಡಿದ್ದ ಹೈಕೋರ್ಟ್ ಆದೇಶದ ಕ್ರಮವನ್ನು ಮರುಪರಿಶೀಲಿಸುವಂತೆ ಕೋರಿ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಇ.ಎಸ್.ಇಂದಿರೇಶ್ ಅವರ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಎಸ್ಎಸ್ಎಲ್‌ಸಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿದಾಗಲೇ ಅಂಕಗಳ ಬದಲಿಗೆ ಗ್ರೇಡ್ ನೀಡುವುದಾಗಿ ಸ್ಪಷ್ಟಪಡಿಸಬೇಕಿತ್ತು. ಆದರೆ, ಅಧಿಸೂಚನೆಯಲ್ಲಿ ತಿಳಿಸದ ಅಂಶವನ್ನು ಪರಿಚಯಿಸಿ ಗ್ರೇಡ್ ಪದ್ಧತಿಯನ್ನು ಅನುಷ್ಠಾನಕ್ಕೆ ಮುಂದಾಗಿದ್ದೀರಿ. ನಿಯಮ ರೂಪಿಸಿದ ಬಳಿಕ ಸರ್ಕಾರ ಸೂಕ್ತವೆನಿಸಿದ ಕ್ರಮ ಕೈಗೊಳ್ಳಬಹುದು. ನಿಯಮ ರೂಪಿಸುವ ಮುಂಚಿನ ಪರೀಕ್ಷೆಯ ಅಂಕ ಪದ್ಧತಿ ಬದಲಾವಣೆ ಸೂಕ್ತವಲ್ಲ ಎಂದು ತಿಳಿಸಿದ ಪೀಠ, 2025-26ನೇ ಸಾಲಿಗೆ ಹಿಂದಿ ಭಾಷೆ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕಗಳನ್ನೇ ನೀಡುವುದನ್ನು ಮುಂದುವರಿಸಬೇಕು ಎಂದು ಸೂಚಿಸಿ ಅರ್ಜಿ ಇತ್ಯರ್ಥಪಡಿಸಿದೆ. ಇದಕ್ಕೂ ಮುನ್ನ ಸರ್ಕಾರದ ಪರವಾಗಿ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ಇದೇ ಅಂಶವನ್ನು ಪ್ರಶ್ನಿಸಿ ವಿಭಾಗೀಯ ಪೀಠದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಜಾಗೊಂಡಿದ್ದು, ಅರ್ಜಿದಾರರಿಗೆ ದಂಡ ವಿಧಿಸಲಾಗಿದೆ. ಅಲ್ಲದೆ, ಹಿಂದಿ ಭಾಷೆಯಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಅನುತ್ತೀರ್ಣರಾಗುತ್ತಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳ ಮೇಲೆ ಒತ್ತಡ ಕಡಿಮೆ ಮಾಡುವ ಸಲುವಾಗಿ ಈ ಕ್ರಮಕ್ಕೆ ಮುಂದಾಗಿದ್ದೇವೆ. ಅಗತ್ಯ ಸೂಕ್ತ ತಿದ್ದುಪಡಿಯೊಂದಿಗೆ ನಿಯಮ ರಚಿಸಲು ಸರ್ಕಾರ ಕರಡು ರೂಪಿಸುತ್ತಿದೆ ಎಂದು ಪೀಠಕ್ಕೆ ವಿವರಿಸಿದರು.

ಅತಂತ್ರ ಸ್ಥಿತಿಯಲ್ಲಿ ಮಕ್ಕಳು

ಸರ್ಕಾರ ತೃತೀಯ ಭಾಷೆಗೆ ಗ್ರೇಡ್ ನೀಡುವುದಾಗಿ ಘೋಷಣೆ ಮಾಡಿದ ಮೇಲೆ ಬಹುತೇಕ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರೂ ಹಿಂದಿ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಕೆಲವು ವಿದ್ಯಾರ್ಥಿಗಳು ಪೂರ್ಣ ಪ್ರಮಾಣದಲ್ಲಿ ಉತ್ತರಿಸದೆ ಹಾಗೇ ಬಿಟ್ಟಿದ್ದರು. ಆದರೆ, ಈಗ ಹೈಕೋರ್ಟ್ ತೀರ್ಪಿನಿಂದ ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ. ಪ್ರತಿಶತ ಅಂಕದಲ್ಲಿ ತಾವು ಹಿನ್ನಡೆ ಅನುಭವಿಸಬಹುದು ಎನ್ನುವ ಆತಂಕವೂ ಕೆಲವು ವಿದ್ಯಾರ್ಥಿಗಳನ್ನು ಕಾಡುತ್ತಿದೆ.



ಸಿಎಂ ಜತೆ ಚರ್ಚಿಸಿ ಅಂತಿಮ ನಿರ್ಧಾರ: ಮಧು

• **ಬೆಂಗಳೂರು:** ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷಾ ವಿಷಯಗಳಿಗೆ ಗ್ರೇಡ್ ಬದಲು ಅಂಕಗಳನ್ನು ನೀಡಬೇಕು ಎಂಬ ನ್ಯಾಯಾಲಯದ ಆದೇಶವನ್ನು ಗೌರವಿಸುತ್ತೇವೆ. ಆದರೆ ಅಂತಿಮ ನಿರ್ಧಾರವನ್ನು ಮುಖ್ಯಮಂತ್ರಿ ಜತೆ ಚರ್ಚಿಸಿ ತೆಗೆದುಕೊಳ್ಳಲಾಗುತ್ತದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಹೈಕೋರ್ಟ್ ಆದೇಶದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಹೈಕೋರ್ಟ್ ಆದೇಶದ ಕುರಿತು ನಾನು ಅಡ್ವೊಕೇಟ್ ಜನರಲ್ ಜತೆ ಮಾತನಾಡಿದ್ದೇನೆ. ಮುಖ್ಯಮಂತ್ರಿಗಳಿಗೂ ಮಾಹಿತಿ ನೀಡಿದ್ದೇವೆ. ಬುಧವಾರ ಸಿಎಂ ಅವರನ್ನು ಭೇಟಿ ಮಾಡಿ ಮುಂದಿನ ಕ್ರಮಗಳ ಬಗ್ಗೆ ಚರ್ಚೆ ಮಾಡುತ್ತೇನೆ ಎಂದರು. ➡ಪುಟ ೪



> ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲಾಗುವುದು. ತೃತೀಯ ಭಾಷೆಗೆ ಹಿಂದಿನ ವರ್ಷಗಳಂತೆಯೇ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡಬೇಕೆಂದು ಉಚ್ಚ ನ್ಯಾಯಾಲಯ ಹೇಳಿದ್ದು, ಮುಂದಿನ ತೀರ್ಮಾನ ಮಾಡಲು ಸೂಚಿಸಿದೆ. ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲಾಗುವುದು.
> ■ **ಸಿದ್ದರಾಮಯ್ಯ**, ಮುಖ್ಯಮಂತ್ರಿ

> ಎಸ್ಎಸ್ಎಲ್‌ಸಿ ಫಲಿತಾಂಶ ಪ್ರಕಟಣೆಯಲ್ಲಿ ಹೆಚ್ಚಿನ ವಿಳಂಬ ಆಗುವುದಿಲ್ಲ. ಗರಿಷ್ಠ ಒಂದು ದಿನ ಹಿಂದೆ ಮುಂದೆ ಆಗಬಹುದು. ಎಲ್ಲವೂ ಸರಿಯಾಗುತ್ತದೆ. ವಿದ್ಯಾರ್ಥಿಗಳು ಆತಂಕಗೊಳ್ಳಬಾರದು. ಸಿಎಂ ಜತೆ ಚರ್ಚೆಯ ಬಳಿಕ ಸ್ಪಷ್ಟ ನಿರ್ಧಾರ ಪ್ರಕಟಿಸುತ್ತೇವೆ.
> ■ **ಮಧು ಬಂಗಾರಪ್ಪ**, ಶಿಕ್ಷಣ ಸಚಿವ

ನಾನು ಹಾಗೆ ಹೇಳಿಲ್ಲ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮಜಾಯಿಷಿ

ಮೋದಿ ಟೆರರಿಸ್ಟ್ ಖರ್ಗೆ ವ್ಯಗ್ರೋಕ್ತಿ


• **ಹೊಸದಿಲ್ಲಿ:** ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದು ಟೀಕಿಸಿದ್ದು, ಇದು ಭಾರೀ ವಿವಾದಕ್ಕೆ ಕಾರಣವಾಗಿದೆ.

ತಕ್ಷಣವೇ ಸಮಜಾಯಿಷಿ ನೀಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾನು ಹಾಗೆ ಹೇಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ತೆಲಂಗಾಣ ಕಾಂಗ್ರೆಸ್ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮೋದಿಯವರನ್ನು ರಾಕ್ಷಸ ಮಾರೀಚನಿಗೆ ಹೋಲಿಸಿ ನಿಂದಿಸಿದ್ದಾರೆ. ಇದನ್ನು ಖಂಡಿಸಿರುವ ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಅವರು, ವಿಪಕ್ಷ ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿಯವರನ್ನು ಗುರಿಯಾಗಿಸಿ ಅವಹೇಳನಕಾರಿ ಪದಗಳನ್ನು ಬಳಸುವಂತೆ ಪಕ್ಷದ ಅಧ್ಯಕ್ಷರಿಗಿಂತಲೂ ಮೇಲಿರುವ 'ಹೈಕಮಾಂಡ್'ನಿಂದ ಸೂಚನೆ ಹೋಗಿದೆ ಎಂದಿದ್ದಾರೆ. ಕಾಂಗ್ರೆಸ್ ನಾಯಕರ ಹತಾಶೆ, ಪ್ರಧಾನಿ ಮೋದಿ ವಿರುದ್ಧದ ಅಸಹನೆ ಅತಿರೇಕಕ್ಕೆ ಹೋಗುತ್ತಿರುವುದಕ್ಕೆ ಇದು ಸಾಕ್ಷಿ ಎಂದು ಬಿಜೆಪಿ ಪ್ರತಿಕ್ರಿಯಿಸಿದೆ.

ಪ್ರಧಾನಿ ಮೋದಿ ವಿರುದ್ಧದ ತಾನು ಬಳಸಿದ 'ಭಯೋತ್ಪಾದಕ' ಪದ ಭಾರೀ ವಿವಾದವಾಗುತ್ತಲೇ, ಖರ್ಗೆ ಈ ಬಗ್ಗೆ ಸಮಜಾಯಿಷಿ ನೀಡಿ ನಾನು ಆ ಅರ್ಥದಲ್ಲಿ ಹೇಳಿಲ್ಲ ಎಂದಿದ್ದಾರೆ. ತಮಿಳುನಾಡು ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಚೆನ್ನೈನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಎಐಡಿಎಂಕೆಯು ಪ್ರಧಾನಿ ಮೋದಿಯವರ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರುವುದನ್ನು ಟೀಕಿಸುವ ವೇಳೆ ಖರ್ಗೆ ಈ ರೀತಿ ದೂಷಿಸಿದ್ದರು. ➡ಪುಟ ೪

> ಖರ್ಗೆ ಸಾರ್ವಜನಿಕ ಚರ್ಚೆಯನ್ನು ಇಷ್ಟೊಂದು ಕೀಳು ಮಟ್ಟಕ್ಕೆ ಎಳೆದಿರುವುದು ಇದೇ ಮೊದಲಲ್ಲ. ಈ ಹೇಳಿಕೆಯೊಂದಿಗೆ ಅವರು ತಮ್ಮನ್ನು ತಾವು ಕುಗ್ಗಿಸಿಕೊಂಡಿಲ್ಲ. ಬದಲಿಗೆ ಕಾಂಗ್ರೆಸ್‌ನ ಒಂದು ನಿರ್ದಿಷ್ಟ ವಿಧಾನವನ್ನು ಬಹಿರಂಗಪಡಿಸಿದ್ದಾರೆ.
> ■ **ಅಮಿತ್ ಮಾಳವೀಯ**, ಬಿಜೆಪಿ ಐಟಿ ಸೆಲ್ ಮುಖ್ಯಸ್ಥ

- ಮೋದಿಯವರನ್ನು ಮಾರೀಚನಿಗೆ ಹೋಲಿಸಿದ ರೇವಂತ್ ರೆಡ್ಡಿ
- ಕಾಂಗ್ರೆಸ್‌ನ ಹತಾಶೆ, ಅಸಹನೆ ಅತಿರೇಕಕ್ಕೆ: ಬಿಜೆಪಿ



ಮೋದಿ ವಿರುದ್ಧ 150ಕ್ಕೂ ಅಧಿಕ ಅವಹೇಳನ ಹೇಳಿಕೆ

ಕಾಂಗ್ರೆಸ್ ಪಕ್ಷವು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಬಗ್ಗೆ 150 ಕ್ಕೂ ಹೆಚ್ಚು ಅವಹೇಳನಕಾರಿ ಹೇಳಿಕೆಗಳನ್ನು ನೀಡಿದೆ. 'ನಾರಿ ಶಕ್ತಿ'ಗೆ ಉತ್ತೇಜನ ನೀಡಿದ ಕಾರಣಕ್ಕೂ ಕಾಂಗ್ರೆಸಿಗರು ಮತ್ತೆ ಅವರನ್ನು ನಿಂದಿಸುತ್ತಿದ್ದಾರೆ. ಇದು ಅಪರೂಪದ ಘಟನೆ ಅಲ್ಲ, ಪೂರ್ವನಿಯೋಜಿತ ರಾಜಕೀಯ ಪ್ರಯೋಗ ಎಂದು ಪೂನಾವಾಲಾ ತಿಳಿಸಿದರು.

ಕೆರೆಗೆ ನೀರು ತುಂಬಿಸುವ ಕಾರ್ಯಕ್ಕೆ ಸಿಎಂ ಚಾಲನೆ



• **ಚಾಮರಾಜನಗರ:** ನಂಜುಂಡಪ್ಪ ವರದಿ ಶಿಫಾರಸಿನಂತೆ ಅತ್ಯಂತ ಹಿಂದುಳಿದ ಗುಂಡ್ಲುಪೇಟೆ ತಾಲೂಕಿನ ಅಭಿವೃದ್ಧಿಗೆ 475 ಕೋಟಿ ರೂ. ವೆಚ್ಚದಲ್ಲಿ 110 ಕೆರೆಕಟ್ಟೆ ತುಂಬಿಸುವ ಮೂಲಕ ತಾಲೂಕಿನ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಜಿಲ್ಲೆಯ ಗುಂಡ್ಲುಪೇಟೆಯಲ್ಲಿ 110 ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕಿನಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ 800 ಕೋಟಿಗೂ ಹೆಚ್ಚು ಅಭಿವೃದ್ಧಿ ಕಾರ್ಯಗಳಾಗಿವೆ ಎಂದರು. ನಮ್ಮ ಸರ್ಕಾರದ 3 ವರ್ಷಗಳ ಅಧಿಕಾರದ ಅವಧಿಯಲ್ಲಿ ರಾಜ್ಯವನ್ನು ಅಭಿವೃದ್ಧಿ ಯತ್ತ ಕೊಂಡೊಯ್ಯುತ್ತಿದೆ. ಆದರೂ, ವಿಪಕ್ಷಗಳು ರಾಜಕೀಯ ದುರುದ್ದೇಶದಿಂದ ಅಪಪ್ರಚಾರ ಮಾಡುತ್ತಿವೆ. ➡ಪುಟ ೪

ನಿರ್ಲಕ್ಷಿಸಿದರೆ ತಕ್ಕ ಪಾಠ: ಸಿಎಂ, ಡಿಸಿಎಂ, ಖರ್ಗೆಗೆ ಪತ್ರ

ಕೈ ಪಾಳೆಯಕ್ಕೆ ಮುಸ್ಲಿಮರ ಎಚ್ಚರಿಕೆ

• **ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ಮುಸ್ಲಿಂ ಸಮುದಾಯ ಹಾಗೂ ಮುಸ್ಲಿಂ ನಾಯಕರನ್ನು ಕಡೆಗಣಿಸಲಾಗುತ್ತಿದೆ. ಇದು ಹೀಗೆ ಮುಂದುವರಿದರೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಮುಸ್ಲಿಂ ಸಮುದಾಯ ಕೈ ಪಾಳೆಯಕ್ಕೆ ಎಚ್ಚರಿಕೆ ನೀಡಿದೆ. ಇದರ ಬೆನ್ನಲ್ಲೇ ಕಾಂಗ್ರೆಸ್‌ನಲ್ಲಿ ಹಲವು ಬೆಳವಣಿಗೆಗಳು ನಡೆದಿವೆ.

ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರ ವಿಚಾರದಲ್ಲಿ ಅದರಲ್ಲೂ ಪ್ರಮುಖವಾಗಿ ಮುಸ್ಲಿಂ ಸಮುದಾಯದವರ ವಿಚಾರದಲ್ಲಿ ಅಸಡ್ಡೆಯಾಗಿ ನಡೆದುಕೊಳ್ಳುತ್ತಿದೆ. ನಮ್ಮನ್ನು ಕೇವಲ ಮತಕ್ಕಾಗಿ ಮಾತ್ರ ಬಳಸಿಕೊಳ್ಳುತ್ತಿದ್ದಾರೆ ಎಂದು ಕೆಲವು ಮೌಲ್ವಿಗಳು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಕೆಲವು ಸಂಘ ಸಂಸ್ಥೆಗಳ ಮುಖಂಡರು ಹಾಗೂ ಮುಸ್ಲಿಂ ಗುರುಗಳು ಪತ್ರ ಬರೆದಿದ್ದಾರೆ. ಇದರ ಪರಿಣಾಮವನ್ನು ಮುಂಬರುವ ಚುನಾವಣೆಯಲ್ಲಿ ಎದುರಿಸಬೇಕಾಗುತ್ತದೆ ಎಂದು ಪತ್ರದಲ್ಲಿ ಎಚ್ಚರಿಸಿದ್ದಾರೆ. ➡ಪುಟ ೪



> ಸಿದ್ದರಾಮಯ್ಯ ಟಗರು ಮುಂಚೆ ಹೇಗಿದ್ರು, ಈಗಲೂ ಹಾಗೇ ಇದ್ದಾರೆ. ಟಗರು ಟಗರೇ...ಸಿಎಂ ಈಗ ಸೈಲೆಂಟ್ ಆಗಿರಬಹುದು. ಅವರು ಮಾತನಾಡಿದರೆ ಬೇರೆ ತರಹ ಸೌಂಡ್ ಆಗುತ್ತೆ. ಈಗ ಮಾತನಾಡುವ ಅಗತ್ಯ ಇಲ್ಲ. ಸಂದರ್ಭ ಬಂದಾಗ ಮಾತನಾಡುತ್ತಾರೆ.
> ■ **ಜಮೀರ್ ಅಹ್ಮದ್ ಖಾನ್**, ಸಚಿವ

ಮುಸ್ಲಿಂ ಮುಖಂಡರ ಸಸ್ಪೆಂಡ್ ರದ್ದು ಸಾಧ್ಯತೆ: ಸಚಿವ ಸತೀಶ್

• ಪುಟ ೪

4 ವಿವಾಹಗಳಿಗೆ ಅಂತ್ಯ ಖಚಿತ: ಅಮಿತ್ ಶಾ

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದಲ್ಲಿ ಬಿಜೆಪಿ



ಅಧಿಕಾರಕ್ಕೆ ಬಂದಲ್ಲಿ ವಿವಾಹ, ವಿಚ್ಛೇದನ, ವಾರಸುತನ ಇತ್ಯಾದಿಗೆ ಸಂಬಂಧಿಸಿ ಮತಧರ್ಮಗಳ ಭೇದವಿಲ್ಲದೆ ಎಲ್ಲಾ ನಾಗರಿಕರಿಗೂ ಸಮಾನವಾಗಿ ಅನ್ವಯವಾಗುವ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿ ಮಾಡಲಿದೆ. ➡ಪುಟ ೪

ಪರಿಹಾರ ತಾರತಮ್ಯಕ್ಕೆ ಶಾಸಕ ಅತೃಪ್ತಿ

ಮುಖ್ಯಮಂತ್ರಿಗೆ ಪತ್ರ ಬರೆದ ಶರಣಗೌಡ ಕಂದಕೂರ್। ಎಲ್ಲರಿಗೂ ಪರಿಹಾರ ನೀಡುತ್ತೇವೆ: ಸಿಎಂ

• **ಬೆಂಗಳೂರು:** ಸಂತ್ರಸ್ತ ಕುಟುಂಬಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ನೀಡುವ ಹಣದ ವಿಚಾರದಲ್ಲಿ ಈಗ ಜೆಡಿಎಸ್ ಶಾಸಕ ಹಾಗೂ ಸಿಎಂ



ನಡುವಿನ ಮುಸುಕಿನ ಗುದ್ದಾಟ ಹಾಗೂ ಅಸಮಾಧಾನಕ್ಕೆ ಕಾರಣವಾಗಿದೆ. ಪರಿಹಾರ ಧನ ಘೋಷಣೆ ಮಾಡುವ ಕುರಿತಂತೆ ಜೆಡಿಎಸ್ ಶಾಸಕ ಶರಣಗೌಡ ಕಂದಕೂರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಈ ಪತ್ರ ಬರೆದ ವಿಚಾರಕ್ಕೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದು, ಎಲ್ಲರಿಗೂ ಪರಿಹಾರ ನೀಡಲಾಗುತ್ತಿದೆ. ➡ಪುಟ ೪

ಕಿರು ಸುದ್ದಿ

ಕರ್ಣಾಟಕ್ ಬ್ಯಾಂಕ್‌ನಿಂದ ಪೈನ್ ಲ್ಯಾಬ್ ಸೇವೆ

• **ಮಂಗಳೂರು:** ಸಾರ್ವಜನಿಕ ರಂಗದ ಪ್ರತಿಷ್ಠಿತ ಬ್ಯಾಂಕ್‌ಗಳಲ್ಲಿ ಒಂದಾದ ಕರ್ಣಾಟಕ ಬ್ಯಾಂಕ್ ಡಿಜಿಟಲ್ ಪಾವತಿ ಸೇವೆಗಳನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಪೈನ್ ಲ್ಯಾಬ್ ಲಿಮಿಟೆಡ್ ಸಂಸ್ಥೆಯೊಂದಿಗೆ ತಂತ್ರಜ್ಞಾನ ಸಹಭಾಗಿತ್ವಕ್ಕೆ ಕೈಜೋಡಿಸಿದೆ. ಈ ಒಪ್ಪಂದದ ಮೂಲಕ ಬ್ಯಾಂಕ್ ತನ್ನ ಗ್ರಾಹಕರಿಗೆ ಅತ್ಯಾಧುನಿಕ ಪಾಯಿಂಟ್ ಆಫ್ ಸೇಲ್ (ಪಿಒಎಸ್) ಸೇವೆಗಳನ್ನು ಒದಗಿಸಲು ಮುಂದಾಗಿದೆ.



ಮಂಗಳವಾರ ಬ್ಯಾಂಕಿನ ಪ್ರಧಾನ ಕಚೇರಿ ಮಂಗಳೂರಿನಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ರಾಘವೇಂದ್ರ ಎಸ್.ಭಟ್, ಡಿಜಿಟಲ್ ಬ್ಯಾಂಕ್ ಆಫ್ ದ ಫ್ಯೂಚರ್ ಆಗುವ ನಮ್ಮ ದೃಷ್ಟಿಗೆ ಈ ಸಹಭಾಗಿತ್ವ ಪೂರಕವಾಗಿದೆ. ಪೈನ್ ಲ್ಯಾಬ್ಸ್ ಒದಗಿಸುವ ಬಳಕೆದಾರ ಸ್ನೇಹಿ ಮತ್ತು ವಿಶ್ವಾಸಾರ್ಹ ಸೇವೆಗಳು ಇಂದಿನ ಡಿಜಿಟಲ್ ಪಾವತಿ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಸಹಯೋಗದ ಮೂಲಕ ನಮ್ಮ ರೀಟೈಲ್ ಮತ್ತು ಎಂಎಸ್‌ಎಂಇ ಗ್ರಾಹಕರು ಸುಲಭವಾಗಿ ಆಧುನಿಕ ಪಿಒಎಸ್ ಟರ್ಮಿನಲ್‌ಗಳನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜಾ ಬಿ.ಎಸ್. ಅವರು, ಗ್ರಾಹಕರ ಅಗತ್ಯಗಳನ್ನು ಪೂರೈಸುವುದು ಕರ್ಣಾಟಕ ಬ್ಯಾಂಕಿನ ಮುಖ್ಯ ಗುರಿಯಾಗಿದೆ. ಈ ಹೊಸ ಒಪ್ಪಂದದ ಮೂಲಕ ಮುಂದಿನ ತಲೆಮಾರಿನ ಡಿಜಿಟಲ್ ಪಾವತಿ ಪರಿಹಾರಗಳನ್ನು ನೀಡಲು ಸಾಧ್ಯವಾಗುತ್ತದೆ. ದೇಶದಾದ್ಯಂತ ನಮ್ಮ ಎಲ್ಲಾ ಶಾಖೆಗಳಲ್ಲಿ ಈ ಸೇವೆ ಲಭ್ಯವಿರಲಿದ್ದು, ಗ್ರಾಹಕರು ಇದರ ಸದುಪಯೋಗ ಪಡೆಯಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಬ್ಯಾಂಕಿನ ಜನರಲ್ ಮ್ಯಾನೇಜರ್‌ಗಳಾದ ರಘುರಾಮ ಎಚ್.ಎಸ್, ವೆಂಕಟೇಶ್ವರಲು ಮಲ್ಲಿನೇನಿ, ಪೈನ್ ಲ್ಯಾಬ್ಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಮಿತ್ ಚೋಪ್ರಾ, ಇವಿಪಿ ಬ್ಯಾಂಕ್ ಅಲೈಯನ್ಸ್‌ನ ಸ್ವಪನ್ ಘೋಷ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಸವಣ್ಣ ಜನ್ಮ ದಿನಾಚರಣೆ

• **ಕುಂದಾಪುರ:** 12ನೇ ಶತಮಾನದ ದಾರ್ಶನಿಕ, ಸಮಾಜ ಸುಧಾರಕ ಬಸವಣ್ಣ ಅವರ ಜನ್ಮ ದಿನಾಚರಣೆಯನ್ನು ಕುಂದಾಪುರದ ತಾಲೂಕು ಆಡಳಿತದ ವತಿಯಿಂದ ಕುಂದಾಪುರದ ಮಿನಿ ವಿಧಾನಸೌಧದ ಹಾಲ್‌ನಲ್ಲಿ ಸೋಮವಾರ ಆಚರಿಸಲಾಯಿತು. ಉಪತಹಶೀಲ್ದಾರ್ ಎಸ್.ವಿ. ವಿನಯ್ ಕಾರ್ಯಕ್ರಮ ಉದ್ಘಾಟಿಸಿ, ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪ ನಮನದ ಮೂಲಕ ಗೌರವ ಸಲ್ಲಿಸಿದರು. ವಿವಿಧ ಇಲಾಖಾ ಅಧಿಕಾರಿಗಳು, ಸಿಬಂದಿ ಕಾಂತರಾಜು, ಹರೀಶ್, ಗಿರಿಜಾ, ನವೀನ ಪೂಜಾರಿ, ಸುರೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ನಿಧನ ಸುದ್ದಿ

ಎಂ. ಎಂ. ನರೇಂದ್ರ

ನಾಪೋಕ್ಲು: ಇಲ್ಲಿನ ಪಟ್ಟಣ ನಿವಾಸಿ ಶ್ರೀ ರಾಘವೇಂದ್ರ ಮೆಡಿಕಲ್ಸ್ ಮಾಲೀಕ ಎಂ. ಎಂ. ನರೇಂದ್ರ (69) ಸೋಮವಾರ ಹೃದಯಾಘಾತದಿಂದ ನಿಧನರಾದರು.



ನರೇಂದ್ರ ನಾಪೋಕ್ಲು ಗ್ರಾಮ ಪಂಚಾಯತ್ ಮಾಜಿ ಸದಸ್ಯರು, ಉತ್ತಮ ಕೃಷಿಕನಾಗಿ ಹಾಗೂ ಹಿಂದೂಪರ ಸಂಘಟನೆಗಳ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸಿರುವ ಇವರು ವಿವಿಧ ಸಂಘ ಸಂಸ್ಥೆಗಳಲ್ಲಿ, ದುಡಿದಿದ್ದರು. ಕೊಡಗು ಜಿಲ್ಲಾ ಔಷಧಿ ವ್ಯಾಪಾರಿ ಸಂಘದ ಮಾಜಿ ನಿರ್ದೇಶಕರು ಒಬ್ಬರು. ಅವರ ಸೇವೆಯನ್ನು ಗುರುತಿಸಿ ಜಿಲ್ಲಾ ಸಂಘದ ವತಿಯಿಂದ ಇತ್ತೀಚೆಗೆ ಸನ್ಮಾನಿಸಿತ್ತು. ಮೃತರಿಗೆ ಗೌರವ ಹಾಗೂ ಸಂತಾಪ ಸೂಚಿಸುವ ಸಲುವಾಗಿ ಪಂಚಾಯತ್ ಹಾಗೂ ವರ್ತಕರ ಸಂಘದ ಸೂಚನೆಯಂತೆ ಒಂದು ಗಂಟೆಗಳ ಕಾಲ ಪಟ್ಟಣದ ವರ್ತಕರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಗೌರವ ಸಲ್ಲಿಸಿದರು. ನರೇಂದ್ರ ಅವರ ಅಗಲಿಕೆಗೆ ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ನಿರ್ದೇಶಕರು ಎಂ. ಎ. ಮನ್ಸೂರ್ ಆಲಿ ಹಾಗೂ ಸ್ಥಳೀಯ ವರ್ತಕರ ಸಂಘದ ಪ್ರಮುಖ ಮಾಚೇಟಿರ ಕುಸು ಕುಶಾಲಪ್ಪ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರು ಪತ್ನಿ , ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಹೊಸ್ಮಾರು ಸರೋಜಿನಿ ಶೆಣೈ

ಮಂಗಳೂರು: ಮಂಗಳೂರಿನ ಶ್ರೀನಿವಾಸ ಪಾಠಶಾಲಾ ವಠಾರದ ನಿವಾಸಿ ಪಾಕತಜ್ಞೆ ದಿ.ಹೊಸ್ಮಾರು ವಾಸುದೇವ ಶೆಣೈಯವರ ಪತ್ನಿ ಹೊಸ್ಮರು ಸರೋಜಿನಿ ಶೆಣೈ (84) ಏ. 18 ರಂದು ಮಂಗಳೂರಿನಲ್ಲಿ ನಿಧನರಾದರು. ಇವರು ಸುಮಾರು 35 ವರ್ಷಗಳ ಕಾಲ ಮಣ್ಣಗುಡ್ಡೆ, ಕೋಡಿಕಲ್‌ನಲ್ಲಿ ಮಹಾಲಕ್ಷ್ಮೀ ಕ್ಯಾಂಟಿನ್ ನಡೆಸಿ ಜನಪ್ರಿಯರಾಗಿದ್ದರು. ಇವರು ಇಬ್ಬರು ಪುತ್ರರನ್ನು ಅಗಲಿದ್ದಾರೆ.



ಉಡುಪಿ ಜಿಲ್ಲಾಡಳಿತದಿಂದ ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮ | ಕೋಟ ಅಭಿಮತ

ಶಂಕರಾಚಾರ್ಯರ ಚಿಂತನೆಗಳು ದಾರಿದೀಪ

• **ಉಡುಪಿ:** ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಶ್ರೇಷ್ಠ ಮಹಾಪುರುಷರೆಂದು ಗುರುತಿಸಲ್ಪಟ್ಟವರಲ್ಲಿ ಶಂಕರಾಚಾರ್ಯರು ಪ್ರಮುಖರಾಗಿದ್ದು, ಸನಾತನ ಧರ್ಮ ನಶಿಸಿ ಹೋಗುತ್ತಿರುವಂತಹ ಸಂದರ್ಭದಲ್ಲಿ ದೇಶದೆಲ್ಲೆಡೆ ಕಾಲ್ನಡಿಗೆಯಲ್ಲಿ ಸಂಚರಿಸಿ, ಅದ್ವೈತ ಸಿದ್ಧಾಂತದ ಸಾರವನ್ನು ಜಗತ್ತಿಗೆ ಸಾರಿರುವ ಶಂಕರಾಚಾರ್ಯರ ಆದರ್ಶ, ಚಿಂತನೆ ಹಾಗೂ ವಿವೇಚನೆಗಳು ಮನುಕುಲದ ಒಳಿತಿಗೆ ದಾರಿದೀಪವಾಗಿದೆ ಎಂದು ಉಡುಪಿ – ಚಿಕ್ಕಮಗಳೂರು ಕ್ಷೇತ್ರದ ಲೋಕಸಭಾ ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಅವರು ಮಂಗಳವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಡುಪಿ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡುತ್ತಿದ್ದರು.

ಕೇರಳದ ಕಾಲಡಿ ಎಂಬ ಸಣ್ಣ ಗ್ರಾಮದಲ್ಲಿ ಜನಿಸಿ, ಸನ್ಯಾಸತ್ವವನ್ನು ಸ್ವೀಕರಿಸಿ, ಶಂಕರನೆಂಬ ಬಾಲಕ ಶಂಕರಾಚಾರ್ಯರಾಗಿ ಜಗತ್ಪ್ರಸಿದ್ಧಿ ಆಗಿದ್ದಾರೆ ಎಂಬುದನ್ನು ಇತಿಹಾಸ ನಮಗೆ ತಿಳಿಸುತ್ತದೆ. ಹಿಂದೂ ಧರ್ಮದ ಅವನತಿಯ ಕಾಲದಲ್ಲಿ ಸನಾತನ ಧರ್ಮ ಹಾಗೂ ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ದೇಶದೆಲ್ಲೆಡೆ ಕಾಲ್ನಡಿಗೆಯಲ್ಲಿ ಸಂಚರಿಸಿ, ಹಿಂದೂ ಧರ್ಮದ ಆದರ್ಶ, ಆಚಾರ, ವಿಚಾರಗಳನ್ನು ಪಸರಿಸುತ್ತಾ, ಉತ್ತರದ ಬದರಿ, ದಕ್ಷಿಣದ ಶೃಂಗೇರಿ ಶಾರದಾ ಪೀಠ, ಪೂರ್ವದ ಪುರಿ, ಪಶ್ಚಿಮದ ದ್ವಾರಕಾ ಪೀಠ ಈ ನಾಲ್ಕು ಕಡೆ ಶಕ್ತಿಪೀಠಗಳನ್ನು ಸ್ಥಾಪಿಸಿದ್ದಾರೆ ಎಂದ ಅವರು, ಶಂಕರಾಚಾರ್ಯರೆಂಬ ಜ್ಞಾನದ ಗಣಿ ಕೇವಲ 32 ವರ್ಷಗಳ ಕಾಲ ಬದುಕಿದ್ದರೂ ಸಹ, ತಮ್ಮ ಜೀವಿತಾವಧಿಯಲ್ಲಿ ಶ್ರೇಷ್ಠ ಸಾಧನೆ ಮಾಡಿದ್ದಾರೆ ಎಂದರು.

ಮಂಗಳೂರು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್ ಮಾತನಾಡಿ, ಸಮಾಜದಲ್ಲಿ ಸಾಮರಸ್ಯದಿಂದ ಜೀವನ ನಡೆಸುವುದರೊಂದಿಗೆ ಸನ್ಮಾರ್ಗದಲ್ಲಿನಡೆಯಲುಹಲವಾರುಮಹನೀಯರು ಮಾರ್ಗ ತೋರಿದ್ದು, ಅವರುಗಳ ಜಯಂತಿಯನ್ನು ಸರಕಾರದ ವತಿಯಿಂದ ಆಚರಿಸಲಾಗುತ್ತಿದೆ. ಇಂತಹ ಆಚರಣೆಗಳು ಸಂಸ್ಕೃತಿ, ಪರಂಪರೆ, ಆಚಾರ–ವಿಚಾರ, ವೇದ– ಉಪನಿಷತ್ತುಗಳನ್ನು ಉಳಿಸಲು ಸಹಕಾರಿಯಾಗಲಿವೆ ಎಂದ ಅವರು, ಶಂಕರಾಚಾರ್ಯರ ಅದ್ವೈತ ಸಿದ್ಧಾಂತದ ಪ್ರಕಾರ ಪ್ರತಿಯೊಬ್ಬರೂ ದ್ವೇಷ, ಅಸೂಯೆಯೆಂಬ ಭಾವನೆಯನ್ನು ಮರೆತು ಸತ್ಯದ ಹಾದಿಯಲ್ಲಿ ಸಾಗಬೇಕಿದೆ ಎಂದರು.



> ಶಂಕರಾಚಾರ್ಯರ ಆದರ್ಶಗಳನ್ನು ಪ್ರಸ್ತುತ ಸಮಾಜಕ್ಕೆ ಅರ್ಥೈಸುವ ನಿಟ್ಟಿನಲ್ಲಿ ಸರಕಾರ ಜಯಂತಿ ಕಾರ್ಯಕ್ರಮಗಳನ್ನು ಆಚರಿಸುತ್ತಿದೆ. ಒಬ್ಬ ವ್ಯಕ್ತಿ ಒಂದು ಶಕ್ತಿಯಾಗಿ ಸಮಾಜದಲ್ಲಿ ಸುಧಾರಣೆ ತರಲು ಸಾಧ್ಯ ಎಂಬುದಕ್ಕೆ ಶಂಕರಾಚಾರ್ಯರು ಸೂಕ್ತ ನಿದರ್ಶನ. ಎಲ್ಲಾ ಜಾತಿ, ಧರ್ಮದವರು ಒಂದಾದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ತೋರಿಸಿಕೊಟ್ಟ ಶಂಕರಾಚಾರ್ಯರ ಆದರ್ಶಗಳನ್ನು ಮುಂದಿನ ಪೀಳಿಗೆಯು ಪಾಲಿಸುವಂತಾಗಬೇಕು.
>
> ■ **ಕೋಟ ಶ್ರೀನಿವಾಸ ಪೂಜಾರಿ,** ಸಂಸದ

ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಸಂಸ್ಕೃತ ಉಪನ್ಯಾಸಕ ಡಾ. ಜಯಶಂಕರ ಕಂಗಣ್ಣಾರು ಉಪನ್ಯಾಸ ನೀಡಿ ಮಾತನಾಡಿ, ಆಧ್ಯಾತ್ಮ ಲೋಕಕ್ಕೆ ಚೈತನ್ಯ ನೀಡಿದ ಆದಿ ಗುರು ಶ್ರೀ ಶಂಕರಾಚಾರ್ಯರು ಭಾರತದ ಆಧ್ಯಾತ್ಮಿಕ ಪರಂಪರೆಯಲ್ಲಿ ಶ್ರೇಷ್ಠ ಸ್ಥಾನ ಪಡೆದಿದ್ದಾರೆ. ಕೇರಳದ ಕಾಲಡಿಯಲ್ಲಿ ಜನಿಸಿದ ಇವರು, ವೇದ, ಉಪನಿಷತ್ತು, ಪುರಾಣ ಅಧ್ಯಯನಗಳನ್ನು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಮೈಗೂಡಿಸಿಕೊಂಡಿದ್ದರು. ತಮ್ಮ ಅತ್ಯಲ್ಪ ಜೀವಿತಾವಧಿಯಲ್ಲಿ ಹಲವಾರು ಗ್ರಂಥ ರಚನೆ ಮಾಡಿ ಸಾಹಿತ್ಯಲೋಕಕ್ಕೆ ಅಸಾಧಾರಣ ಕೊಡುಗೆ ನೀಡಿದ್ದಾರೆ. ಅದ್ವೈತ ಮತವನ್ನು ಬೋಧಿಸುವುದರೊಂದಿಗೆ ಆಗ ಪ್ರಚಲಿತವಿದ್ದ ಎಲ್ಲ ಮತಗಳಿಗೂ ಮಾರ್ಗದರ್ಶಕರಾಗಿದ್ದ ಮಹಾನ್ ತತ್ವಜ್ಞಾನಿಗಳಾಗಿದ್ದರು. ಉಪನಿಷತ್, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗೂ ಭಾಷ್ಯ ಬರೆದಿದ್ದರು ಎಂದರು.

ಸನಾತನ ಧರ್ಮ ಮತ್ತು ರಾಷ್ಟ್ರೀಯ ಏಕತೆಗೆ ಅಪಾಯ ಬಂದಿದ್ದ ಕಾಲಘಟ್ಟದಲ್ಲಿ ಹಾಗೂ ಅಂತಹ ದುಃಸ್ಥಿತಿಯ ಸಂದರ್ಭದಲ್ಲಿ ದೇಶವನ್ನು ಸಂರಕ್ಷಿಸಿ, ಧರ್ಮ ಸಂಸ್ಥಾಪನೆ ಮಾಡಲು ದೇಶದ ಉದ್ದಗಲಕ್ಕೂ ಸಂಚರಿಸಿ, ಅದ್ವೈತ ಸಿದ್ಧಾಂತವನ್ನು ಪಸರಿಸಿದರು ಎಂದ ಅವರು, ರಾಷ್ಟ್ರೀಯ ಭಾವೈಕ್ಯ ಪ್ರತಿಪಾದಿಸಿದ ಶಂಕರಾಚಾರ್ಯರ ತತ್ವಗಳು ಇಂದಿಗೂ ಪ್ರಸ್ತುತವಾದುದು ಎಂದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಎ.ಎಸ್.ಪಿ ಸುಧಾಕರ್ ನಾಯಕ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಬ್ರಹ್ಮಣ್ಯ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮುದಾಯದ ಬಾಂಧವರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿ, ನಿರೂಪಿಸಿದರೆ, ಉಡುಪಿ ಶಂಕರಾಚಾರ್ಯ ಸಮಿತಿಯ ಸದಸ್ಯರಾದ ವಿಶ್ವನಾಥ ಶಾನುಭಾಗ್ ವಂದಿಸಿದರು.

ದ.ಕ.ಜಿಲ್ಲಾಡಳಿತದಿಂದ ಶ್ರೀ ಶಂಕರಾಚಾರ್ಯ ಜಯಂತಿ

ಶಂಕರಾಚಾರ್ಯರು ಪ್ರಪಂಚಕ್ಕೇ ಶ್ರೇಷ್ಠರು



• **ಮಂಗಳೂರು:** ದ.ಕ.ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಮಂಗಳೂರು ಹವ್ಯಕ ಮಂಡಲ ಸಹಯೋಗದೊಂದಿಗೆ ನಗರದ ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆಯ ಶಂಕರಶ್ರೀ ಸಭಾಭವನದಲ್ಲಿ ಮಂಗಳವಾರ ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮ ನೆರವೇರಿತು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಶ್ರೀ ಶಂಕರಾಚಾರ್ಯರು ಪ್ರಪಂಚಕ್ಕೇ ಶ್ರೇಷ್ಠರು. ಅವರ ಆದರ್ಶ, ತತ್ವಗಳು ಸಾರ್ವಕಾಲಿಕವಾಗಿದೆ. ಜಾತಿ, ಮತ, ಬೇಧವಿಲ್ಲದೇ ಸರ್ವರನ್ನೂ ಒಂದುಗೂಡಿಸಿದ ಮಹಾತ್ಮರು. ಅವರನ್ನು ನೆನಪಿಸಿಕೊಂಡು, ಅನುಸರಿಸುವುದು ಅತ್ಯಂತ ಅವಶ್ಯ ಎಂದರು.

ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ ಮಾತನಾಡಿ, ಗುರುಕುಲ ಮಾದರಿಯಲ್ಲಿ ವೇದಾಧ್ಯಯನ ನಡೆಯುತ್ತಿರುವ ಸ್ಥಳದಲ್ಲಿ ಶ್ರೀ ಶಂಕರಾಚಾರ್ಯರ ಮಹತ್ವವನ್ನು ಸಾರಲಾಗಿದೆ. ಅವರ ಆದರ್ಶ, ತತ್ವಗಳನ್ನು ಅನುಸರಿಸಲು ಮಕ್ಕಳಿಗೆ ಯೋಗ್ಯ ಮಾಹಿತಿ ಲಭ್ಯವಾಯಿತು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಶಾಲೆಟ್ ಪಿಂಟೊ ಮಾತನಾಡಿ, ಶ್ರೀ ಶಂಕರಾಚಾರ್ಯರ ಸಾಧನೆ, ಆದರ್ಶ, ಮಾಹಿತಿ ತಲುಪಲು ಅರ್ಹವಾದ ಶಿಕ್ಷಣ ಸಂಸ್ಥೆಯಲ್ಲಿ ಸರಕಾರದಿಂದ ಶ್ರೀ ಶಂಕರಾಚಾರ್ಯ ಜಯಂತಿ ಆಚರಿಸುವುದು ಸೂಕ್ತವಾಗಿದೆ ಎಂದರು.

ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆಯ ಕಾರ್ಯಾಧ್ಯಕ್ಷ ಗಣೇಶಮೋಹನ ಕಾಶಿಮಠ ಅಧ್ಯಕ್ಷತೆ ವಹಿಸಿದ್ದರು.

ಸಾಹಿತಿ, ಮಂಗಳೂರು ಮಧ್ಯ ಹವ್ಯಕ ವಲಯಾಧ್ಯಕ್ಷ ಅನಂತಸುಬ್ರಹ್ಮಣ್ಯ ಶರ್ಮ ಉಪನ್ಯಾಸ ನೀಡಿದರು.

ಮಂಗಳೂರು ಹವ್ಯಕ ಮಂಡಲ ಪ್ರಧಾನ ಕಾರ್ಯದರ್ಶಿ ಉಮೇಶ್ ಭಟ್ ಕೋಣಮ್ಮೆ, ಶಂಕರಶ್ರೀ ವೇದಪಾಠಶಾಲೆ ಮುಖ್ಯ ಗುರು ವೇ.ಮೂ.ಅಮೈ ಶಿವಪ್ರಸಾದ ಭಟ್, ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆಯ ಕಾರ್ಯದರ್ಶಿ ಶ್ರೀಕೃಷ್ಣನೀರಮೂಲೆ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಾಜೇಶ್ ಜಿ. ಸ್ವಾಗತಿಸಿದರು. ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆಯ ಪ್ರಾಂಶುಪಾಲ ಸಂದೀಪ್ ಆಚಾರ್ಯ ವಂದಿಸಿದರು. ನಿವೃತ್ತ ಮುಖ್ಯೋಪಾಧ್ಯಾಯ ಭಾಸ್ಕರ ಹೊಸಮನೆ ಕಾರ್ಯಕ್ರಮ ನಿರೂಪಿಸಿದರು.

ಬೆಂಗಳೂರಿನಲ್ಲಿ 25ನೇ ಯುವ ಸಾಂಸ್ಕೃತಿಕ ಉತ್ಸವ

ಮೂಡಬಿದಿರೆ ಆಳ್ವಾಸ್‌ಗೆ 4ನೇ ಸ್ಥಾನ



• **ಮಂಗಳೂರು:** ಬೆಂಗಳೂರಿನಲ್ಲಿ ನಡೆದ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟ ಕಾಲೇಜುಗಳ '25ನೇ ಯುವ ಸಾಂಸ್ಕೃತಿಕ ಉತ್ಸವ'ದಲ್ಲಿ ಆಳ್ವಾಸ್ ತಾಂತ್ರಿಕ ಮಹಾವಿದ್ಯಾಲಯ ನಾಲ್ಕನೇ ಸ್ಥಾನ ಪಡೆಯಿತು.

ರಾಜ್ಯದ ವಿವಿಧ ಭಾಗಗಳಿಂದ ಸುಮಾರು 160ಕ್ಕೂ ಹೆಚ್ಚು ತಾಂತ್ರಿಕ ಕಾಲೇಜುಗಳು ಭಾಗವಹಿಸಿದ್ದು, ವಿದ್ಯಾರ್ಥಿಗಳು ತಮ್ಮ ಸಾಂಸ್ಕೃತಿಕ ಪ್ರತಿಭೆಯನ್ನು ಅನಾವರಣಗೊಳಿಸಿದರು. ಉತ್ಸವದ ಅಂಗವಾಗಿ ಮೆರವಣಿಗೆ, ಸಂಗೀತ, ನಾಟಕ, ಕಲಾ ಸ್ಪರ್ಧೆಗಳು ಸೇರಿದಂತೆ ಹಲವು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು.

ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಮೆರವಣಿಗೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಪೌರಾತ್ಯ ಸಂಗೀತದಲ್ಲಿ ದ್ವಿತೀಯ ಸ್ಥಾನ, ಬೆಸ್ಟ್ ಔಟ್ ಆಫ್ ವೇಸ್ಟ್‌ನಲ್ಲಿ ದ್ವಿತೀಯ ಸ್ಥಾನ, ಕ್ಲೇ ಮಾಡೆಲಿಂಗ್‌ನಲ್ಲಿ ದ್ವಿತೀಯ ಸ್ಥಾನ, ಏಕಾಂಕ ನಾಟಕಕ್ಕೆ ಕಂಚಿನ ಪದಕ ಪಡೆದರೆ, ಕಿರು ಪ್ರಹಸನದಲ್ಲಿ ನಾಲ್ಕನೇ ಸ್ಥಾನ ಪಡೆದು ಸಮಗ್ರ ನಾಲ್ಕನೇ ಸ್ಥಾನ ಪಡೆಯಿತು. ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ, ಟ್ರಸ್ಟಿ ವಿವೇಕ್ ಆಳ್ವ ಅಭಿನಂದಿಸಿದ್ದಾರೆ.

ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಕೊಡುಗೆ

ಫಲಾನುಭವಿಗಳಿಗೆ ಹೊಲಿಗೆ ಯಂತ್ರ



• **ಮಂಗಳೂರು:** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ದಕ್ಷಿಣ ಕನ್ನಡ ಜಿಲ್ಲೆ ವತಿಯಿಂದ 2024–25ನೇ ಸಾಲಿನ 'ಹೊಲಿಗೆ ಯಂತ್ರ ವಿತರಣೆ ಯೋಜನೆ'ಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮ ಮಂಗಳವಾರ ನಡೆಯಿತು.

ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ವೈ. ಭರತ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆಯಾದ ಒಟ್ಟು 20 ಹಿಂದುಳಿದ ವರ್ಗಗಳ ಬಡ ಕುಟುಂಬಗಳ ಮಹಿಳೆಯರಿಗೆ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಡಾ. ಭರತ್ ಶೆಟ್ಟಿ, ಸರ್ಕಾರದ ಕಲ್ಯಾಣ ಯೋಜನೆಗಳು ನಿಜವಾದ ಅರ್ಹರಿಗೆ ತಲುಪಬೇಕು ಎಂಬುದು ನಮ್ಮ ಉದ್ದೇಶವಾಗಿದ್ದು, ಮಹಿಳೆಯರು ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳಲು ಈ ಯೋಜನೆ ಸಹಕಾರಿಯಾಗಲಿದೆ ಎಂದು ಹೇಳಿದರು.

ತಾಲೂಕು ಪಂಚಾಯತ್ ಯೋಜನಾಧಿಕಾರಿ ಸುಕನ್ಯಾ, ಸಹಾಯಕ ಲೆಕ್ಕಾಧಿಕಾರಿ ಪರಮೇಶ್ವರ ಹಾಗೂ ಸಹಾಯಕ ಅಭಿವೃದ್ಧಿ ಅಧಿಕಾರಿ ಜಯಶ್ರೀ ಸೇರಿದಂತೆ ನಿಗಮದ ಅಧಿಕಾರಿಗಳು ಉಪಸ್ಥಿತರಿದ್ದರು.

ಕರಾಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶ

ಶಿವನ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ: ಶ್ರೀಕಾಂತ್ ಶೆಟ್ಟಿ



• **ಬೆಳ್ತಂಗಡಿ:** ಕರಾಯದಲ್ಲಿ ಸುಮಾರು 60 ವರ್ಷಗಳ ಬಳಿಕ ರಥೋತ್ಸವ ನಡೆಯಲಿದ್ದು ಕರಾಯ ಮತ್ತೆ ಐತಿಹಾಸಿಕ ಕ್ಷಣಕ್ಕೆ ಅಣಿಯಾಗುವ ಮೂಲಕ ಇತಿಹಾಸ ಮರುಕಳಿಸಲಿದೆ. ಶಿವನು ಪವಿತ್ರವಾಗಿದ್ದು ಜಾತಿ ಮತ ಪಂಥ ಮೀರಿ ದೇವರ ಅನುಗ್ರಹವನ್ನು ಪಡೆದುಕೊಳ್ಳಬೇಕು. ಶಿವ ದೇವರು ವೈರಾಗ್ಯ ಮೂರ್ತಿಯಾಗಿದ್ದು, ಅವರ ತತ್ವಗಳನ್ನು ಅಳವಡಿಸಿಕೊಂಡು ಜೀವನ ಸಾಗಿಸಬೇಕು ಎಂದು ವಾಗ್ಮಿ ಶ್ರೀಕಾಂತ್ ಶೆಟ್ಟಿ ಕಾರ್ಕಳ ಹೇಳಿದರು.

ಕರಾಯ ಶ್ರೀ ಮಹಾಲಿಂಗೇಶ್ವರ ದೇವಳದ ಬ್ರಹ್ಮಕಲಶೋತ್ಸವದಲ್ಲಿ ಅವರು ಧಾರ್ಮಿಕ ಉಪನ್ಯಾಸ ನೀಡಿದರು. ದೈವಾರಾಧನೆಯಲ್ಲಿ ಈಶ್ವರ ದೇವರ ಉಲ್ಲೇಖಗಳಿವೆ. ಈಶ್ವರ ದೇವರು ಸಮಾಜದ ಕಟ್ಟ ಕಡೆಯ ವ್ಯಕ್ತಿಯ ವಿಕಸನ ಸಮಾಜಿಕ ಕಳಕಳಿಯ ಸೇವಾ ಮನೋಭಾವ ಬಯಸುತ್ತಾರೆ. ಕೋಟಿ ರೂ.ವೆಚ್ಚದಲ್ಲಿ ದೇವಸ್ಥಾನಗಳನ್ನು ಜೀರ್ಣೋದ್ಧಾರಗೊಳಿಸಿ ವಿಜೃಂಭಣೆಯಿಂದ ಉತ್ಸವ ನಡೆಸುತ್ತೇವೆ. ಆದ್ದರಿಂದ ಸಮಾಜದಲ್ಲಿರುವ ಅಶಕ್ತ ಕುಟುಂಬಗಳ ಸಂಕಷ್ಟಗೆ ಸ್ಪಂದಿಸುವ ಸೇವಾ ಚಟುವಟಿಕೆಗೆ ರೂ.1 ಕೋಟಿ ಮೊತ್ತವನ್ನು ಮೀಸಲಿಡುವುದು ಭಗವಂತನಿಗೆ ಸಲ್ಲಿಸುವ ನಿಜಾರ್ಥದ ಸೇವೆಯಾಗಿದೆ ಎಂದರು.

ಮಾಜಿ ಸಚಿವ ಬಿ. ರಮಾನಾಥ ರೈ ಮಾತನಾಡಿ, ದೇವರಿಗೆಬ್ರಹ್ಮಕಲಶವಾಗುವ ಮೂಲಕ ನಮ್ಮ ಮನಸ್ಸಿನ ಅಂತರಗದ ಶುದ್ಧೀಕರಣವಾಗಬೇಕು. ಪರಿಶುದ್ಧ ಮನಸ್ಸಿನಿಂದ ಸಮಾಜದಲ್ಲಿ ಸಾಮಾರಸ್ಯದ ಬದುಕನ್ನು ಸಾಗಿಸುವುದರ ಮೂಲಕ ಸ್ವಾಸ್ಥ್ಯ ಸಮಾಜದ ನಿರ್ಮಾಣವಾಗಲಿ ಎಂದರು.

ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಅತುಲ್ ಕುಮಾರ್ ಕೆ.ಎನ್. ಹಲೇಜಿ ಮಾತನಾಡಿ, ದೇವಳದ ನೂತನ ಕೊಡಿ ಮರದ ನಂದಿ ಪ್ರತಿಷ್ಠೆಗೊಳ್ಳುವ ಗರುಡನ ಪ್ರದಕ್ಷಿಣೆ ಹಾಕಿರುವುದು ಸಂತೋಷದಾಯಕ. ಕರಾಯ ಶ್ರೀ ಮಹಾಲಿಂಗೇಶ್ವರ ದೇವರ ಕೆಲಸ ಮಾಡುವ ಅವಕಾಶ ಸಿಕ್ಕಿರುವುದು ನನ್ನ ಭಾಗ್ಯ. ಕರಾಯ ಗ್ರಾಮದ 560 ಮನೆಗಳ ಸೇರಿ ರೂ.2.5 ಕೋಟಿ ಹಣವನ್ನು ದೇವಸ್ಥಾನಕ್ಕೆ ನೀಡಿದ್ದಾರೆ. ಸ್ವಯಂ ಸೇವಕರು ಉತ್ಸಾಹಭಾರಿತ ಕೆಲಸದಿಂದ ಉತ್ಸವ ಯಶಸ್ವಿಯಾಗಿ ನಡೆಯುತ್ತಿದೆ. ಶಾಸಕ ಹರೀಶ್ ಪೂಂಜರು ರೂ.45 ಲಕ್ಷ ಅನುದಾನ ಬಿಡುಗಡೆ ಮಾಡಿದ್ದಾರೆ. ಶಾಸಕರು ಹಲವು ಬಾರಿ ದೇವಸ್ಥಾನಕ್ಕೆ ಬಂದು ಜೀರ್ಣೋದ್ಧಾರ ಕಾರ್ಯವನ್ನು ಪರಿಶೀಲನೆ ನಡೆಸಿ ಸಲಹೆಗಳನ್ನು ನೀಡಿದ್ದಾರೆ. ಅನ್ನಛತ್ರದ ವ್ಯವಸ್ಥೆ ಶಾಸಕರ ನೇತೃತ್ವದಲ್ಲಿ ಒಳ್ಳೆಯ ರೀತಿಯಿಂದ ನಡೆದಿದೆ. ಬ್ರಹ್ಮಕಲಶೋತ್ಸವ ಬಳಿಕ ಭಕ್ತರು ನಿರಂತರವಾಗಿ ದೇವಸ್ಥಾನಕ್ಕೆ ಆಗಮಿಸುವ ಮೂಲಕ ದೇಗುಲವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಬೇಕು ಎಂದರು.

ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸುದರ್ಶನ್ ಕೊಲ್ಲಿ, ಬ್ರಹ್ಮಕಲಶೋತ್ಸವ ಸಮಿತಿಯ ಗೌರವಾಧ್ಯಕ್ಷ ನಾಗಾರ್ಜುನ ರಾವ್, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ದುರ್ಗೇಶ್ ವಿ. ಕೆದಿಲಾಯ, ನಿವೃತ್ತ ಪ್ರಾಂಶುಪಾಲ ಎ. ಕೃಷ್ಣಪ್ಪ ಪೂಜಾರಿ, ಉಪ್ಪಿನಂಗಡಿ ಅಮೂಲ್ಯ ಗ್ಯಾಸ್ ಮಾಲಕ ಚಂದಪ್ಪ ಮೂಲ್ಯ, ಉದ್ಯಮಿ ಕರುಣಾಕರ ಸುವರ್ಣ ಇಳಂತಿಲ ಪೆದಮಲೆ, ಪಿಲಿಗೂಡು ಶ್ರೀ ಚಾಮುಂಡೇಶ್ವರಿ ಶಿಲ್ಪಾ ಕಲಾಕೇಂದ್ರದ ಪದ್ಮನಾಭ ಶಿಲ್ಪಿ, ಕೋಡಿಂಬಾಡಿ ಶ್ರೀ ಮಹಿಷಮರ್ದಿನಿ ದೇವಸ್ಥಾನದ ಅಧ್ಯಕ್ಷ ನಿರಂಜನ್ ರೈ ಮಠಂತಬೆಟ್ಟು, ಅನನ್ಯ ಎಂಟರ್ ಪ್ರೈಸಸ್‌ನ ನಟೇಶ್ ಪೂಜಾರಿ, ವಾಣಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ವಿಷ್ಣುಪ್ರಕಾಶ್, ಉಪ್ಪಿನಂಗಡಿಯ ದಂತ ವೈದ್ಯ ಡಾ. ರಾಜಾರಾಮ್ ಕೆ.ಬಿ., ಉದ್ಯಮಿ ನಾರಾಯಣ ಗೌಡ ಸೋಮಂತಡ್ಕ, ಹಿರಿಯ ನಾಗರಿಕ ಗೋವಿಂದ ಗೌಡ ಮಲ್ಲಿಗೆ ಉಪಸ್ಥಿತರಿದ್ದರು.

ರಕ್ಷಾ ಪ್ರಾರ್ಥಿಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಜಗದೀಶ್ ಶೆಟ್ಟಿ ಮೈರಾ ಸ್ವಾಗತಿಸಿ, ಸ್ವಾಗತ ಸಮಿತಿಯ ಸದಸ್ಯ ಜನಾರ್ದನ ಗೌಡ ವಂದಿಸಿದರು.

ದಕ್ಷಿಣ ಭಾರತದಲ್ಲಿ ಸದ್ಗುರು ರವಿದಾಸ್ ಕುರಿತು ಮೊದಲ ರಾಷ್ಟ್ರೀಯ ವಿಚಾರಗೋಷ್ಠಿ

• **ಮಂಗಳೂರು:** ಸದ್ಗುರು ರವಿದಾಸ್ ಜಿ ಅವರ 650ನೇ ಜನ್ಮ ಜಯಂತಿ ಅಂಗವಾಗಿ ಮಂಗಳೂರು ವಿಶ್ವವಿದ್ಯಾಲಯದ ಹಿಂದಿ ವಿಭಾಗ, ಕರ್ನಾಟಕ ರಾಜ್ಯ ಕಾಲೇಜು ಶಿಕ್ಷಕ ಸಂಘ (ಮಂಗಳೂರು ವಿಭಾಗ), ಮಂಗಳೂರು ವಿಶ್ವವಿದ್ಯಾಲಯ ಹಿಂದಿ ಅಧ್ಯಾಪಕ ಸಂಘ ಮತ್ತು ಬ್ಯಾಂಕ್ ಆಫ್ ಬರೋಡಾ ಸಂಯುಕ್ತ ಆಶ್ರಯದಲ್ಲಿ ನಗರದ ವಿಶ್ವವಿದ್ಯಾಲಯ ಕಾಲೇಜು ರವೀಂದ್ರ ಕಲಾಭವನದಲ್ಲಿ ಸದ್ಗುರು ರವಿದಾಸ್ ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರಗೋಷ್ಠಿ ಆಯೋಜಿಸಲಾಯಿತು.

ಉದ್ಘಾಟನಾ ಸಮಾರಂಭ

ಈ ವಿಚಾರಗೋಷ್ಠಿಯನ್ನು ಹೊಸ ದಿಗಂತ ಪತ್ರಿಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಎಸ್. ಪ್ರಕಾಶ್ ಉದ್ಘಾಟಿಸಿದರು. ಇಂದಿನ ಯುವ ಪೀಳಿಗೆಯಲ್ಲಿ ಮಾನವೀಯತೆ ಮತ್ತು ಸಾಮಾಜಿಕ ಸಮರಸತೆಯ ಅಗತ್ಯತೆಯ ಬಗ್ಗೆ ಅವರು ಮಾತನಾಡಿದರು. ಆಂಧ್ರಪ್ರದೇಶದ ತಿರುಪತಿಯ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯದ ಪ್ರೊ. ರಾಮಪ್ರಕಾಶ ಅವರು 'ಸಂತ ರವಿದಾಸ್' ಕುರಿತು ದಕ್ಷಿಣ ಭಾರತದಲ್ಲಿ ನಡೆದ ಮೊದಲ ವಿಚಾರಗೋಷ್ಠಿ ಇದು ಎಂದು ಘೋಷಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಪ್ರೊ. ಸೀತಾರಾಮ್ ಪವಾರ್ ಅವರು ರವಿದಾಸ, ಕಬೀರ ದಾಸ ಹಾಗೂ ಕರ್ನಾಟಕದ ಬಸವಣ್ಣ, ಶಿಶುನಾಳ್ ಶರೀಫ ಮುಂತಾದ ಸಂತರ ಪರಂಪರೆಯ ಮಹತ್ವವನ್ನು ವಿವರಿಸಿದರು.



ಉದ್ಘಾಟನೆಯ ನಂತರ ನಾಲ್ಕು ಪ್ರಮುಖ ಗೋಷ್ಠಿಗಳು ನಡೆದವು. ಮೊದಲ ಗೋಷ್ಠಿಯಲ್ಲಿ ದಿಲ್ಲಿಯ ರಾ.ಸ್ವ.ಸಂಘದ ಅಖಿಲ ಭಾರತ ಮಹಾಬೌದ್ಧಿಕ ಪ್ರಮುಖ ಸುಧೀರ ಜಿ ಅವರು 'ಸಾಂಸ್ಕೃತಿಕ ಸಮರಸತೆಯ ಹರಿಕಾರ ಸದ್ಗುರು ರವಿದಾಸ್' ವಿಷಯದ ಬಗ್ಗೆ ಮಾತನಾಡಿದರು. ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ಅಧ್ಯಕ್ಷ ಸಿ.ಎ. ಶಾಂತಾರಾಮ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಎರಡನೇ ಗೋಷ್ಠಿಯಲ್ಲಿ ತಿರುಪತಿಯ ಪ್ರೊ. ರಾಮಪ್ರಕಾಶ ಜಿ ಅವರು 'ಸಮಾಜ ಸುಧಾರಕ ಸಂತ ರವಿದಾಸ್' ವಿಷಯದ ಬಗ್ಗೆ ವಿಶ್ಲೇಷಿಸಿದರು. ಮಂಗಳೂರು ವಿವಿ ಕಾಲೇಜಿನ ವಾಣಿಜ್ಯ ವಿಭಾಗದ ಪ್ರೊ. ಸುಭಾಷಿಣಿ ಶ್ರೀವತ್ಸ ಅಧ್ಯಕ್ಷತೆ ವಹಿಸಿದ್ದರು. ಮೂರನೇ ಗೋಷ್ಠಿಯಲ್ಲಿ ಕೇರಳದ ಕೇಂದ್ರೀಯ ವಿವಿಯ ಪ್ರೊ. ತಾರೂ ಪವಾರ ಅವರು 'ಮಾನವತಾವಾದಿ ಸಂತ ರವಿದಾಸ್' ಎಂಬ ಬಗ್ಗೆ ಮಾತನಾಡಿದರು. ವಿಶ್ವವಿದ್ಯಾಲಯ ಕಾಲೇಜಿನ ಹಿಂದಿ ವಿಭಾಗದ ಪ್ರೊ. ಸುಮಾ ಟಿ.ಆರ್. ಅಧ್ಯಕ್ಷತೆ ವಹಿಸಿದ್ದರು. ನಾಲ್ಕನೇ ಗೋಷ್ಠಿಯಲ್ಲಿ ಪುಣೆಯ ಸಾವಿತ್ರಿಬಾಯಿ ಫುಲೆ ವಿವಿಯ ಅಮೋಲ್ ರಾಜಾಭಾಯಿ ವಾಘ್ಮಾರೆ ಅವರು 'ಸಾಮಾಜಿಕ ಸಮಾನತೆಯ ಹರಿಕಾರ ಸಂತ ರವಿದಾಸ್' ಬಗ್ಗೆ ತಮ್ಮ ವಿಚಾರದ ಬೆಳಕು ಚೆಲ್ಲಿದರು ಹಾಗೂ ಸದ್ಗುರು ರವಿದಾಸರ ಪದಗಳ ಗಾಯನ ಮಾಡಿದರು. ಬೆಸೆಂಟ್ ಪಿಯು ಕಾಲೇಜಿನ ಪ್ರಾಂಶುಪಾಲರಾದ ಡಾ. ರೂಪಸಿಂಗ ನಾಯಕ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಮಾರೋಪ ಸಮಾರಂಭ

ಸಮಾರೋಪ ಸಮಾರಂಭದಲ್ಲಿ ಹುಬ್ಬಳ್ಳಿಯ ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ, ಕರ್ನಾಟಕ ಮಹಾವಿದ್ಯಾಲಯದ ಶಿಕ್ಷಕ ಸಂಘದ ಉಪಾಧ್ಯಕ್ಷ ಸಂದೀಪ್ ಬೂದಿಹಾಳ, ಬ್ಯಾಂಕ್ ಆಫ್ ಬರೋಡಾದ ರಾಜಭಾಷಾ ವಿಭಾಗದ ಡಾ. ಬಾಲಮುರುಗನ್ ಅವರು ಇಂದಿನ ಸಮಾಜಕ್ಕೆ ರವಿದಾಸ ಅವರ ವಿಚಾರಗಳ ಅಗತ್ಯತೆಯನ್ನು ತಿಳಿಸಿದರು. ಕೇರಳದ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರೊ. ತಾರೂ ಪವಾರ ಸಮಾರೋಪ ಭಾಷಣ ಮಾಡಿದರು. ಪ್ರೊ. ನಾಗರತ್ನ ರಾವ್ ಕಾರ್ಯಕ್ರಮದ ರೂವಾರಿಯಾಗಿದ್ದರು. 60 ಮಂದಿ ಪ್ರಾಧ್ಯಾಪಕರು ಮತ್ತು 50 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮಂಗಳೂರು ವಿಶ್ವವಿದ್ಯಾಲಯದ ಹಿಂದಿ ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಸಂತ ರವಿದಾಸ ಅವರ ಜೀವನ ಮತ್ತು ವಚನಗಳ ಕುರಿತು ಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಮುಂದಿನ ಯೋಜನೆ

ಮುಂದಿನ ವರ್ಷದ ರವಿದಾಸ ಜಯಂತಿ ಆಚರಿಸುವುದರೊಳಗೆ ವಿವಿಧ ಶಾಲೆ–ಕಾಲೇಜುಗಳಲ್ಲಿ ಸಂತ ರವಿದಾಸರ ವಿಚಾರಗಳನ್ನು ಪ್ರಚಾರಪಡಿಸಲು ಸುಮಾರು 100 ವಿಶೇಷ ಉಪನ್ಯಾಸ ಮಾಲೆಗಳನ್ನು ಆಯೋಜಿಸಲು ಕರ್ನಾಟಕ ಮಹಾವಿದ್ಯಾಲಯ ಶಿಕ್ಷಕ ಸಂಘ ಯೋಜಿಸಿದೆ. ಇದರ ಸಂಯೋಜನೆಯನ್ನು ಪ್ರೊ. ನಾಗರತ್ನ ಎನ್. ರಾವ್ ಅವರು ನಿರ್ವಹಿಸಲಿದ್ದಾರೆ.

ಕಿರುಸುದ್ದಿ

ಜೆ.ಇ.ಇ. ಮೈನ್ಸ್-2 2025-26 ಪ್ರವೇಶ ಪರೀಕ್ಷೆ: ಇಂದ್ರಪ್ರಸ್ಥ ವಿದ್ಯಾರ್ಥಿಗಳ ಉತ್ತಮ ಸಾಧನೆ



ಉಪ್ಪಿನಂಗಡಿ: ರಾಷ್ಟ್ರ ಮಟ್ಟದ ಜೆ.ಇ.ಇ. ಮೈನ್ಸ್ 2 ಪರೀಕ್ಷೆಯಲ್ಲಿ ಇಂದ್ರಪ್ರಸ್ಥ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಕೊಕ್ಕಡ ಗ್ರಾಮದ ವಿಶ್ವನಾಥ ಕೆ. ಮತ್ತು ದಿವ್ಯ ದಂಪತಿ ಪುತ್ರ ಯಶ್ವಿತ್ ಕೆ. 93.3 ಪರ್ಸಂಟೈಲ್, ಉಪ್ಪಿನಂಗಡಿ ಗ್ರಾಮದ ಗಣೇಶ್ ಪ್ರಭು ಮತ್ತು ಬಿಂದುರೇಖಾ ದಂಪತಿ ಪುತ್ರಿ ಕೆ. ಪ್ರಜ್ಞಾ ಪ್ರಭು 90.3 ಪರ್ಸಂಟೈಲ್, ಹಿರೆಬಂಡಾಡಿ ಗ್ರಾಮದ ಜಯರಾಜ್ ಮತ್ತು ದೀಪ್ತಿ ದಂಪತಿ ಪುತ್ರ ಪ್ರಣಾಮ್ 89.0 ಪರ್ಸಂಟೈಲ್ ಗಳಿಸಿ ಜೆ.ಇ.ಇ. ಅಡ್ವಾನ್ಸ್ ಪರೀಕ್ಷೆಗೆ ಆಯ್ಕೆಯಾಗಿದ್ದಾರೆ ಎಂದು ಸಂಸ್ಥೆಯ ಪ್ರಾಂಶುಪಾಲರು ತಿಳಿಸಿದ್ದಾರೆ.

ಮಾನ್ಯ 8ನೇ ರ‍್ಯಾಂಕ್



ಕುಂದಾಪುರ: ಇತ್ತೀಚೆಗೆ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಹೆಮ್ಮಾಡಿ ಜನತಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಮಾನ್ಯ ಪೂಜಾರಿ 592 ಅಂಕಗಳನ್ನು ಪಡೆದು ರಾಜ್ಯಕ್ಕೆ 8ನೇ ರ‍್ಯಾಂಕ್ ಪಡೆದಿದ್ದಾರೆ. ಈಕೆ ತ್ರಾಸಿ ಅಂಚೆ ಕಚೇರಿಯ ಅಂಚೆ ಪಾಲಕ ಚನ್ನಯ ಪೂಜಾರಿ ಮತ್ತು ಹಕ್ಲಾಡಿ ಶಾಲೆಯ ಶಿಕ್ಷಕಿ ಚಂದ್ರಿಕಾ ದಂಪತಿ ಪುತ್ರಿ.

ಕೆ-ಸೆಟ್ ಮತ್ತು ಯುಜಿಸಿ-ನೆಟ್ ಪರೀಕ್ಷೆಗಳಿಗೆ ತರಬೇತಿ

ಮಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ, ಕರ್ನಾಟಕ ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ನಡೆಸಲಿರುವ ರಾಜ್ಯ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ-ಸೆಟ್) ಹಾಗೂ ನವದೆಹಲಿಯ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದವರು ನಡೆಸಲಿರುವ ರಾಷ್ಟ್ರಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ-ನೆಟ್) ಮತ್ತು ಕಿರಿಯ ಶಿಷ್ಯ ವೇತನ ಸಂಶೋಧನ ಸಹಾಯಕರ (ಜೆಆರ್‌ಎಫ್) ಅರ್ಹತಾ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನೀಡಲು ನಿರ್ಧರಿಸಲಾಗಿದೆ. ಆಸಕ್ತರು ಏ. 24 ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯೊಳಗಿನ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ದೂರವಾಣಿ ಸಂಖ್ಯೆ0821-2515944 ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾನಿಧ್ಯ, ಅರ್ಜುನ್ ಶೆಟ್ಟಿ ಆಟಿಸಂ ಕೇಂದ್ರದ ಕಾಮಗಾರಿ ಸಂಪೂರ್ಣ

ಮಂಗಳೂರು: 'ಆಟಿಸಂ'ನಿಂದ ಬಳಲುತ್ತಿರುವ ವಿಶೇಷ ಮಕ್ಕಳನ್ನು ಗಮನದಲ್ಲಿರಿಸಿಕೊಂಡು ಮುಲ್ಲೈನ ಅರ್ಜುನ್ ಶೆಟ್ಟಿ ಫೌಂಡೇಶನ್ ಮುಖಾಂತರ ಸುಮಾರು ಒಂದು ಕೋಟಿ ರೂ. ವೆಚ್ಚದಲ್ಲಿ ಮಂಗಳೂರು ಶಕ್ತಿನಗರದಲ್ಲಿರುವ ಸಾನಿಧ್ಯ ವಠಾರದಲ್ಲಿ ನಿರ್ಮಾಣವಾಗುತ್ತಿರುವ ಸಾನಿಧ್ಯ ಅರ್ಜುನ್ ಶೆಟ್ಟಿ ಆಟಿಸಂ ಕೇಂದ್ರದ ಕಾಮಗಾರಿ 2026 ಮೇ ತಿಂಗಳ ಅಂತ್ಯದೊಳಗೆ ಪೂರ್ಣಗೊಂಡು, 'ಆಟಿಸಂ' ಮಕ್ಕಳ ಪ್ರವೇಶಕ್ಕೆ ಸಿದ್ಧವಾಗುತ್ತಿದೆ. 'ಆಟಿಸಂ' ಹೊಂದಿರುವ ಮಕ್ಕಳಿಗೆ ಅಗತ್ಯವಿರುವಂತೆ ವೈಯಕ್ತಿಕ ಶಿಕ್ಷಣ ಯೋಜನೆ, ಫಿಸಿಯೋಥೆರಪಿ, ವಾಕ್‌ಚಿಕಿತ್ಸೆ, ಆಕ್ಯುಪೇಶನಲ್ ಥೆರಪಿ, ಮಾಂಟೆಸ್ಸೋರಿ ಕಲಿಕಾ ಪದ್ಧತಿ, ರಾಜ್ಯ ಮುಕ್ತ ಶಾಲಾ ಕಲಿಕಾ ವ್ಯವಸ್ಥೆ, ಕೌನ್ಸೆಲಿಂಗ್ ಹಾಗೂ ಆಟಿಸಂ ಮಕ್ಕಳ ತರಬೇತಿಗೆ ಅನುಕೂಲವಾಗುವಂತಹ ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಸಾನಿಧ್ಯ ಅರ್ಜುನ್ ಶೆಟ್ಟಿ ಆಟಿಸಂ ಕೇಂದ್ರ ಹೊಂದಿರುತ್ತದೆ. ಹೊರಜಿಲ್ಲೆ ಹಾಗೂ ಹೊರರಾಜ್ಯದ 'ಆಟಿಸಂ' ಹೊಂದಿರುವ ಮಕ್ಕಳಿಗೆ ವಸತಿ ವ್ಯವಸ್ಥೆ ಮಾಡಲಾಗುವುದು. ವಿಶೇಷ ಶಿಕ್ಷಣದಲ್ಲಿ ತರಬೇತಿ ಹೊಂದಿದ್ದು, ವಿಶೇಷ ಅನುಭವ ಹೊಂದಿರುವ ವಿಶೇಷ ಶಿಕ್ಷಕರಿಂದ ಮಕ್ಕಳಿಗೆ ಪರಿಣಾಮಕಾರಿ ತರಬೇತಿಯನ್ನು ಈ ಕೇಂದ್ರದಲ್ಲಿ ಒದಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಾನಿಧ್ಯದ ಆಡಳಿತಾಧಿಕಾರಿ ಡಾ. ವಸಂತಕುಮಾರ್ ಶೆಟ್ಟಿ (9448215397) ಅವರನ್ನು ಸಂಪರ್ಕಿಸಬಹುದು.

ಡಾ.ರಾಜ್ ಜನ್ಮ ದಿನಾಚರಣೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಮಂಗಳೂರು ವಿವಿ ಕಾಲೇಜಿನ ಸ್ನಾತಕೋತ್ತರ ವಾಣಿಜ್ಯ ವಿಭಾಗದ ಸಹಕಾರದೊಂದಿಗೆ ವರನಟ ಡಾ.ರಾಜ್‌ಕುಮಾರ್ ಅವರ 97ನೇ ಜನ್ಮ ದಿನಾಚರಣೆ ಸಮಾರಂಭ ಏ. 24 ರಂದು ಬೆಳಿಗ್ಗೆ 11 ಗಂಟೆಗೆ ನಗರದ ವಿಶ್ವವಿದ್ಯಾನಿಲಯ ಕಾಲೇಜಿನ ಡಾ. ಶಿವರಾಮ ಕಾರಂತ ಸಭಾಂಗಣದಲ್ಲಿ ಆಯೋಜಿಸಲಾಗಿದೆ.



ಧರ್ಮಸ್ಥಳದಲ್ಲಿ ಏ. 14 ರಿಂದ ನಡೆಯುತ್ತಿರುವ ಕಾಲಾವಧಿ ಜಾತ್ರೆ ಪ್ರಯುಕ್ತ ಸೋಮವಾರ ರಾತ್ರಿ ಚಂದ್ರಮಂಡಲ ಉತ್ಸವ ನಡೆಯಿತು. ನಾಡಿನೆಲ್ಲೆಡೆಯಿಂದ ಸಾವಿರಾರು ಭಕ್ತರು ಉತ್ಸವವನ್ನು ಶ್ರದ್ಧಾ-ಭಕ್ತಿಯಿಂದ ವೀಕ್ಷಿಸಿ ಕಣ್ತುಂಬಿಕೊಂಡರು.

ಏ.23: 'ಕೊರಗ್ಗಾ ತನಿಯಾ', 'ಕನ' ಸಿನಿಮಾಕ್ಕೆ ಮುಹೂರ್ತ

ಮಂಗಳೂರು: ಪ್ರಾರ್ಥನಾ ಕ್ರಿಯೇಷನ್ಸ್ ಮಂಗಳೂರು ಲಾಂಛನದಲ್ಲಿ ಬಹುಭಾಷೆಯಲ್ಲಿ ಡಾ। ಆರ್. ಧನರಾಜ್ ನಿರ್ದೇಶನದಲ್ಲಿ ತಯಾರಾಗುತ್ತಿರುವ 'ಕೊರಗ್ಗಾ ತನಿಯ' (ಕೊರಗಜ್ಜ) ಮತ್ತು 'ಕನ' ತುಳು ಚಲನಚಿತ್ರದ ಮುಹೂರ್ತ ಸಮಾರಂಭವು ಏ.23 ಗುರುವಾರ ಬೆಳಗ್ಗೆ 9 ಗಂಟೆಗೆ ಕದ್ರಿ ಶ್ರೀ ಮಂಜುನಾಥೇಶ್ವರ ದೇವಸ್ಥಾನದಲ್ಲಿ ನಡೆಯಲಿದೆ ಎಂದು ಸಿನಿಮಾದ ನಿರ್ದೇಶಕ ನಿರ್ಮಾಪಕ ಆರ್ ಧನರಾಜ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ವಜ್ರದೇಹಿ ಮಠದ ಸ್ವಾಮೀಜಿ ಶ್ರೀ ರಾಜಶೇಖರಾನಂದ ಸ್ವಾಮೀಜಿ ದೀಪ ಪ್ರಜ್ವಲನೆ ಮಾಡಲಿದ್ದಾರೆ. 'ಕೊರಗ್ಗಾ ತನಿಯ' ಸಿನಿಮಾಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರಂಭ ಫಲಕ ತೋರಿಸಲಿದ್ದಾರೆ. ಚಿತ್ರದುರ್ಗ ವಿಧಾನ ಸಭಾ ಕ್ಷೇತ್ರದ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಕ್ಯಾಮರ ಚಾಲನೆಗೊಳಿಸಲಿದ್ದಾರೆ. ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಿ ವೇದವ್ಯಾಸ ಕಾಮತ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

'ಕನ' ತುಳು ಸಿನಿಮಾಕ್ಕೆ ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾ ರೆಡ್ಡಿ ಆರಂಭ ಫಲಕ ತೋರಿಸಲಿದ್ದಾರೆ. ವಿಧಾನ ಸಭಾಧ್ಯಕ್ಷರಾದ ಯು.ಟಿ ಖಾದರ್ ಮತ್ತು ಬಹುಭಾಷಾ ನಟ ಸುಮನ್ ತಲ್ವಾರ್ ದೀಪ ಬೆಳಗಿಸಲಿದ್ದಾರೆ. ಶಾಸಕರಾದ ಸಿ.ಬಿ. ಸುರೇಶ್ ಬಾಬು ಕ್ಯಾಮರ ಚಾಲನೆಗೊಳಿಸಲಿದ್ದಾರೆ. ಸಂಸದರು, ಶಾಸಕರು ಸಹಿತ ಅನೇಕ ಮಂದಿ ಗಣ್ಯರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಬಹುಭಾಷಾ 'ಕೊರಗ್ಗಾ ತನಿಯ' ಸಿನಿಮಾಕ್ಕೆ ಡಾ. ಆರ್. ಧನರಾಜ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ಮಾಣದೊಂದಿಗೆ ನಿರ್ದೇಶನ ಮಾಡಲಿದ್ದಾರೆ.

'ಕನ' ತುಳು ಸಿನಿಮಾಕ್ಕೆ ವಿಶ್ವನಾಥ್ ಕೋಡಿಕಲ್ ಕಥೆ ಚಿತ್ರಕಥೆ ಸಂಭಾಷಣೆ ಬರೆದು ನಿರ್ದೇಶಿಸಲಿದ್ದಾರೆ. ಅರ್ಚನ ಶೆಟ್ಟಿ ಎರಡೂ ಸಿನಿಮಾಗಳ ಸಹ ನಿರ್ಮಾಪಕಿಯಾಗಿದ್ದಾರೆ.

ಆಳ್ವಾಸ್ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜಿಗೆ ಒಟ್ಟು 85 ರ‍್ಯಾಂಕ್
ಟಾಪ್ 10ರೊಳಗೆ 5 ರ‍್ಯಾಂಕ್‌ಗಳು

ಮೂಡುಬಿದಿರೆ: ಆಳ್ವಾಸ್ ಹೋಮಿಯೋಪಥಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪರೀಕ್ಷೆಯಲ್ಲಿ ಒಟ್ಟು 85 ರ‍್ಯಾಂಕ್‌ಗಳನ್ನು ಪಡೆದು ಶ್ರೇಷ್ಠ ಸಾಧನೆ ಮೆರೆದಿದ್ದಾರೆ. ಅಲ್ಲದೇ ರಾಜ್ಯದ ಟಾಪ್ 10 ರ‍್ಯಾಂಕ್‌ಗಳಲ್ಲಿ 5 ರ‍್ಯಾಂಕ್‌ಗಳನ್ನು ಪಡೆದುಕೊಂಡಿದ್ದಾರೆ ಕಳೆದ 4 ವರ್ಷಗಳಲ್ಲಿ ಸಮಗ್ರ ಪದವಿಯಲ್ಲಿ ಮೂರು ಬಾರಿ ಪ್ರಥಮ ರ‍್ಯಾಂಕ್‌ನ್ನು ಗಳಿಸಿದ್ದಾರೆ.

ಡಾ. ಪವಿತ್ರ ಸಮಗ್ರ ಪದವಿಯಲ್ಲಿ ಪ್ರಥಮ ರ‍್ಯಾಂಕ್‌ನೊಂದಿಗೆ ಚಿನ್ನದ ಪದಕ ವಿಜೇತರಾಗಿದ್ದು, ಇವರು ದ್ವಿತೀಯ ವರ್ಷದ ಹೋಮಿಯೋಪಥಿ ಪರೀಕ್ಷೆಯಲ್ಲಿ 1ನೇ ರ‍್ಯಾಂಕ್, ತೃತೀಯ ವರ್ಷದಲ್ಲಿ 7ನೇ ರ‍್ಯಾಂಕ್ ಹಾಗೂ ನಾಲ್ಕನೇ ವರ್ಷದಲ್ಲಿ 1ನೇ ರ‍್ಯಾಂಕ್ ಗಳಿಸಿದ್ದಾರೆ.

ಡಾ. ಐಶ್ವರ್ಯ ಟಿ.ಸಿ. ಸಮಗ್ರ ಪದವಿಯಲ್ಲಿ 5ನೇ ರ‍್ಯಾಂಕ್ ಪಡೆದರೆ, ಪ್ರಥಮ ವರ್ಷದಲ್ಲಿ 2ನೇ ರ‍್ಯಾಂಕ್, ದ್ವಿತೀಯ ವರ್ಷದಲ್ಲಿ 7ನೇ ರ‍್ಯಾಂಕ್ ಹಾಗೂ ನಾಲ್ಕನೇ ವರ್ಷದಲ್ಲಿ 3ನೇ ರ‍್ಯಾಂಕ್ ಗಳಿಸಿದ್ದಾರೆ.

ಡಾ. ಅಕ್ಷತಾ ಸಮಗ್ರ ಪದವಿಯಲ್ಲಿ 6ನೇ ರ‍್ಯಾಂಕ್ ಗಳಿಸಿದರೆ, ಪ್ರಥಮ ವರ್ಷದಲ್ಲಿ 7ನೇ ರ‍್ಯಾಂಕ್, ದ್ವಿತೀಯ ವರ್ಷದಲ್ಲಿ 4ನೇ ರ‍್ಯಾಂಕ್ ಹಾಗೂ ನಾಲ್ಕನೇ ವರ್ಷದಲ್ಲಿ 6ನೇ ರ‍್ಯಾಂಕ್ ಪಡೆದಿದ್ದಾರೆ.

ಡಾ. ಶೆಟ್ಟಿ ಶೃಷ್ಟಿ ಶ್ರೀಧರ್ ಸಮಗ್ರ ಪದವಿಯಲ್ಲಿ 8ನೇ ರ‍್ಯಾಂಕ್ ಗಳಿಸಿದ್ದು, ನಾಲ್ಕನೇ ವರ್ಷದಲ್ಲಿ 2ನೇ ರ‍್ಯಾಂಕ್ ಪಡೆದಿದ್ದಾರೆ.





ಡಾ. ಅಂಜಲಿ ರಾಜ್ ವಿ. ಸಮಗ್ರ ಪದವಿಯಲ್ಲಿ 10ನೇ ರ‍್ಯಾಂಕ್ ಪಡೆದು, ದ್ವಿತೀಯ ವರ್ಷದಲ್ಲಿ 5ನೇ ರ‍್ಯಾಂಕ್ ಹಾಗೂ ನಾಲ್ಕನೇ ವರ್ಷದಲ್ಲಿ 8ನೇ ರ‍್ಯಾಂಕ್ ಗಳಿಸಿದ್ದಾರೆ.

ಡಾ. ಎಂ. ಸ್ಮಿತಾ ಕಿಣಿ ತೃತೀಯ ವರ್ಷದಲ್ಲಿ 8ನೇ ರ‍್ಯಾಂಕ್ ಪಡೆದಿದ್ದು, ವಿಷಯವಾರು ರ‍್ಯಾಂಕಗಳಲ್ಲಿ ಮೆಟೀರಿಯಾ ಮೆಡಿಕಾ ವಿಷಯದಲ್ಲಿ -3ನೇ ರ‍್ಯಾಂಕ್, ರೆಪರ್ಟರಿ -7ನೇ ರ‍್ಯಾಂಕ್, ಒಬಿಜಿ-8ನೇ ರ‍್ಯಾಂಕ್ ಹಾಗೂ ಅನಾಟಮಿಯಲ್ಲಿ- 10ನೇ ರ‍್ಯಾಂಕ್ ಗಳಿಸಿದ್ದಾರೆ. ಡಾ.ಸೀಮಾ ಥಾಪಾ ಮೆಟೀರಿಯಾ ಮೆಡಿಕಾ ವಿಷಯದಲ್ಲಿ ಎರಡನೇ ವರ್ಷದ ಪದವಿಯಲ್ಲಿ 2ನೇ ರ‍್ಯಾಂಕ್ ಮತ್ತು ನಾಲ್ಕನೇ ವರ್ಷದ ಪದವಿಯಲ್ಲಿ 3ನೇ ರ‍್ಯಾಂಕ್, ರೆಪರ್ಟರಿ 5ನೇ ರ‍್ಯಾಂಕ್ ಹಾಗೂ ಫೊರೆನ್ಸಿಕ್ ಮೆಡಿಸಿನ್‌ನಲ್ಲಿ 6ನೇ ರ‍್ಯಾಂಕ್ ಗಳಿಸಿದ್ದಾರೆ.

ಡಾ. ಶ್ರೇಯಾ ಎಸ್. ಪವಿತ್ರನ್ ಎಫ್‌ಎಮ್‌ಟಿಯಲ್ಲಿ 7ನೇ ರ‍್ಯಾಂಕ್, ರೆಪರ್ಟರಿ-8ನೇ ರ‍್ಯಾಂಕ್, ಪೆಥಾಲಜಿ-9ನೇ ರ‍್ಯಾಂಕ್ ಹಾಗೂ ಮೆಟೀರಿಯಾ ಮೆಡಿಕ್ಸ್‌ಲ್ಲಿ - 10ನೇ ರ‍್ಯಾಂಕ್ ಗಳಿಸಿದ್ದಾರೆ.

ಡಾ.ಎಂ.ಐ. ಶರಧಿ ಎಫ್‌ಎಮ್‌ಟಿ ಹಾಗೂ ಮೆಟೀರಿಯಾ ಮೆಡಿಕಾ ಎರಡೂ ವಿಷಯದಲ್ಲಿ 4ನೇ ರ‍್ಯಾಂಕ್ ಹಾಗೂ ಫಾರ್ಮಸಿ- 5ನೇ ರ‍್ಯಾಂಕ್ ಪಡೆದಿದ್ದಾರೆ.

ಡಾ. ಪಲಕೂರ್ತಿ ಕಿರಣ್ಮಯಿ ರೆಪರ್ಟರಿ-4ನೇ ರ‍್ಯಾಂಕ್, ಎಫ್‌ಎಮ್‌ಟಿ- 5ನೇ ರ‍್ಯಾಂಕ್ ಹಾಗೂ ಫಾರ್ಮಸಿ-9ನೇ ರ‍್ಯಾಂಕ್ ಗಳಿಸಿದ್ದಾರೆ.

ಡಾ. ಸ್ವಾತಿ ಎಂ.ಎಸ್. ಮೆಟೀರಿಯಾ ಮೆಡಿಕಾ ವಿಷಯದಲ್ಲಿ ಮೂರನೇ ವರ್ಷದ ಪದವಿಯಲ್ಲಿ 6ನೇ ರ‍್ಯಾಂಕ್ ಮತ್ತು ನಾಲ್ಕನೇ ವರ್ಷದ ಪದವಿಯಲ್ಲಿ 7ನೇ ರ‍್ಯಾಂಕ್ ಹಾಗೂ ರೆಪರ್ಟರಿ ವಿಷಯದಲ್ಲಿ - 8ನೇ ರ‍್ಯಾಂಕ್ ಪಡೆದಿದ್ದಾರೆ.

ಡಾ. ಸಾವಂತ್ ಅನುಷ್ಕಾ ದಿನೇಶ್ ಅನಾಟಮಿ ಮತ್ತು ರೆಪರ್ಟರಿ ಎರಡರಲ್ಲೂ 8ನೇ ರ‍್ಯಾಂಕ್ ಗಳಿಸಿದ್ದಾರೆ.

ಡಾ. ಅಫ್ರಾ ಪಿ. ಎಫ್‌ಎಮ್‌ಟಿ - 6ನೇ ರ‍್ಯಾಂಕ್ ಪಡೆದರೆ, ಡಾ. ಅನೀಷಾ ಎಫ್‌ಎಮ್‌ಟಿಯಲ್ಲಿ - 8ನೇ ರ‍್ಯಾಂಕ್, ಡಾ. ಆರ್ಥಿ ಆರ್. ಫಾರ್ಮಸಿ ವಿಷಯದಲ್ಲಿ 1ನೇ ರ‍್ಯಾಂಕ್, ಡಾ. ನಿವಿತಾ ಸಿ. ಸಮುದಾಯ ವೈದ್ಯಕೀಯದಲ್ಲಿ 4ನೇ ರ‍್ಯಾಂಕ್, ಡಾ. ಶಥಾ ರಹೀಮ್ ವಿ. ಎಫ್‌ಎಮ್‌ಟಿ - 8ನೇ ರ‍್ಯಾಂಕ್, ಡಾ. ಸೋನಾಲಿ ದತವಾಡ ಮೆಟೀರಿಯಾ ಮೆಡಿಕಾ - 10ನೇ ರ‍್ಯಾಂಕ್, ಡಾ. ಸ್ವಲೇಹಾ ತಬಸ್ಸುಮ್ ಖಾತೀಬ್ ಆರ್ಗನಾನ್ ಆಫ್ ಮೆಡಿಸಿನ್ ವಿಷಯದಲ್ಲಿ 8ನೇ ರ‍್ಯಾಂಕ್ ಪಡೆದಿದ್ದಾರೆ.

ಆಳ್ವಾಸ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ ಎಂ ಮೋಹನ ಆಳ್ವ, ಟ್ರಸ್ಟಿ ವಿವೇಕ ಆಳ್ವ, ಪ್ರಾಚಾರ್ಯ ಡಾ ರೋಷನ್ ಪಿಂಟೊ ಅಭಿನಂದಿಸಿದ್ದಾರೆ.

ರೈಲ್ವೇ ನಿಲ್ದಾಣಗಳಿಗೆ ಪಾಲಕ್ಕಾಡು ವಿಭಾಗೀಯ ರೈಲ್ವೇ ವ್ಯವಸ್ಥಾಪಕ ಭೇಟಿ

ಕಾಸರಗೋಡು: ಕಾಸರಗೋಡು ಹಾಗೂ ಕಾಞಂಗಾಡು ರೈಲ್ವೇ ನಿಲ್ದಾಣಗಳಿಗೆ ಪಾಲಕ್ಕಾಡು ವಿಭಾಗೀಯ ವ್ಯವಸ್ಥಾಪಕ ಮಧುಕರ್ ರೋಟ್ ಭೇಟಿ ನೀಡಿದರು. ಕಾಞಂಗಾಡು ರೈಲ್ವೇ ನಿಲ್ದಾಣದಲ್ಲಿ ಎರ್ನಾಕುಳಂ ಮಂಗಳಾ ಎಕ್ಸ್‌ಪ್ರೆಸ್‌ಗೆ ನಿಲ್ದಾಣ ಮರುಸ್ಥಾಪಿಸಬೇಕು ಎಂದು ಆಗ್ರಹಿಸಿ ರೈಲ್ವೇ ಪ್ರೊಟೆಕ್ಷನ್ ಫಾರಂನಿಂದ ಮಧುಕರ್ ರೋಟ್ ಅವರಿಗೆ ಮನವಿ ಸಲ್ಲಿಸಲಾಯಿತು.

ಕೊರೋನಾ ಕಾಲದಲಿ ನಿಲ್ಲಿಸಲಾಗಿದ್ದ ಎರ್ನಾಕುಳಂ ಮಂಗಳಾ ಎಕ್ಸ್‌ಪ್ರೆಸ್ (12618) ನಿಲ್ದಾಣ ಮರುಸ್ಥಾಪಿಸಬೇಕು ಎಂದು ಪ್ರಧಾನವಾಗಿ ಮನವಿಯಲ್ಲಿ ಆಗ್ರಹಿಸಲಾಗಿದೆ.

ಅಲ್ಲದೆ ರಾತ್ರಿ 6 ಗಂಟೆಯ ಬಳಿಕ ಕಲ್ಲಿಕೋಟೆಯಿಂದ ಮಲಬಾರ್ ವಲಯಕ್ಕೆ ರೈಲು ಸೇವೆ ಇಲ್ಲದೇ ಇರುವುದರಿಂದ ಅದಕ್ಕೆ ಪರಿಹಾರವಾಗಿ ಆಲಪ್ಪುಳ ಎಕ್ಸಿಕ್ಯೂಟಿವ್ ಎಕ್ಸ್‌ಪ್ರೆಸ್ ಪಾಲಕ್ಕಾಡು - ಕಣ್ಣೂರು ಪ್ಯಾಸೆಂಜರ್ ಕಾಸರಗೋಡು ವರೆಗೆ ವಿಸ್ತರಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಕಾಞಂಗಾಡು ರೈಲು ನಿಲ್ದಾಣಕ್ಕೆ ಭೇಟಿ ನೀಡಿದ ಮಧುಕರ್ ರೋಟ್ ಅವರಿಗೆ ಕಾಞಂಗಾಡು ನಗರಸಭಾಧ್ಯಕ್ಷ ವಿ.ವಿ.ರಮೇಶನ್, ಸ್ಟೇಷನ್ ಮಾಸ್ಟರ್ ಪ್ರಸಾಂತ್‌ಕುಮಾರ್, ರೈಲ್ವೇ ವಾಣಿಜ್ಯ ಅಧೀಕ್ಷಕ ಅಶ್ರಫ್, ರೈಲ್ವೇ ಸಂರಕ್ಷಣಾ ಫಾರಂ ಕಾರ್ಯದರ್ಶಿ ಸಿ.ಕೆ.ನಾಸರ್ ಬರಮಾಡಿಕೊಂಡರು.

ರೈಲ್ವೇ ಸಲಹಾ ಸಮಿತಿ ಸದಸ್ಯ ಪಿ.ಎಂ.ನಾಸರ್, ನಗರಸಭಾ ಕೌನ್ಸಿಲರ್ ಸೇತು ಉಣ್ಣಿಕೃಷ್ಣನ್, ರೈಲ್ವೇ ಸಂರಕ್ಷಣಾ ಫಾರಂ ಸಮಿತಿ ಸದಸ್ಯರಾದ ಸಿ.ಪಿ.ಇಬ್ರಾಹಿಂ, ಪಿ.ಪಿ.ರಾಜು, ಕೆ.ಮುಹಮ್ಮದ್ ಕುಂಞಿ, ಮೋಹನನ್ ಸತ್ತಾರ್ ಆವಿಕ್ಕರೆ ಭಾಗವಹಿಸಿದ್ದರು.

ಮಹಿಳಾ ಮೀಸಲಾತಿ, ಕ್ಷೇತ್ರ ಮರುವಿಂಗಡಣೆ ಜಾರಿಗೆ ಪ್ರಧಾನಿ ಮೋದಿ ಬದ್ಧ: ಸಂಸದ ಕೋಟ

ಉಡುಪಿ: ಲೋಕಸಭೆಯಲ್ಲಿ ಕೇಂದ್ರ ಸರ್ಕಾರ ಮಂಡಿಸಿದ ಕ್ಷೇತ್ರ ಮರುವಿಂಗಡಣೆ ಹಾಗೂ ಮಹಿಳಾ ಮೀಸಲಾತಿ ವಿಧೇಯಕಗಳು ವಿರೋಧ ಪಕ್ಷಗಳ ಅಸಹಕಾರದಿಂದ ಸದ್ಯಕ್ಕೆ ಹಿನ್ನಡೆ ಅನುಭವಿಸಿರಬಹುದು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಯಾವುದಾದರೊಂದು ದಾರಿಯಲ್ಲಿ ಈ ವಿಧೇಯಕಗಳನ್ನು ಜಾರಿಗೆ ತಂದೇ ತರುತ್ತಾರೆ ಎಂದು ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ವಿಶ್ವಾಸ ವ್ಯಕ್ತಪಡಿಸಿದರು.



ಮಂಗಳವಾರ ಉಡುಪಿ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈ ಮಹತ್ವದ ವಿಧೇಯಕಗಳು ಜಾರಿಯಾದರೆ ಅದರ ಸಂಪೂರ್ಣ ಶ್ರೇಯಸ್ಸು ಪ್ರಧಾನಿ ಮೋದಿಯವರಿಗೆಸಲ್ಲುತ್ತದೆಎಂಬ ಹೊಟ್ಟೆಕಿಚ್ಚಿನಿಂದ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ವಿರೋಧಿಸಿವೆ ಎಂದು ಕೋಟ ಕಿಡಿಕಾರಿದರು. ಮಹಿಳೆಯರಿಗೆ ಮೀಸಲಾತಿ ನೀಡದಿದ್ದರೆ ತಮಗೇನೂ ನಷ್ಟವಿಲ್ಲ ಎಂಬ ಧೋರಣೆ ವಿಪಕ್ಷಗಳದ್ದು. ಇವರ ಈ ರಾಜಕೀಯ ನಡೆ ಸಂವಿಧಾನದ ಆಶಯದಂತೆ ಮಹಿಳೆಯರಿಗೆ ಸಿಗಬೇಕಿದ್ದ ಸಮಾನ ನ್ಯಾಯದ ಸುವರ್ಣ ಅವಕಾಶವನ್ನು ತಪ್ಪಿಸಿದೆ ಎಂದು ಅವರು ಆರೋಪಿಸಿದರು.

ಕ್ಷೇತ್ರ ಮರುವಿಂಗಡಣೆ ಅನಿವಾರ್ಯ: ಕೋಟ

ಕ್ಷೇತ್ರ ಮರುವಿಂಗಡಣೆ ಮತ್ತು ಮಹಿಳಾ ಮೀಸಲಾತಿ ಪರಸ್ಪರ ಪೂರಕವಾಗಿವೆ ಎಂದು ಸಮರ್ಥಿಸಿಕೊಂಡ ಅವರು, ಚುನಾವಣಾ ಗಿಮಿಕ್ ಎಂಬ ವಿಪಕ್ಷಗಳ ಆರೋಪವನ್ನು ತಳ್ಳಿಹಾಕಿದರು. ದೇಶದಲ್ಲಿ ಒಂದಲ್ಲ ಒಂದು ರಾಜ್ಯದಲ್ಲಿ ಚುನಾವಣೆ ನಡೆಯುತ್ತಲೇ ಇರುತ್ತದೆ. ಹಾಗೆಂದು ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ಹಿಂದೆ 10 ಲಕ್ಷ ಮತದಾರರಿಗೆ ಒಂದು ಕ್ಷೇತ್ರವಿತ್ತು, ಇಂದು ಅದು 28 ರಿಂದ 33 ಲಕ್ಷಕ್ಕೆ ಏರಿಕೆಯಾಗಿದೆ. ಒಬ್ಬ ಸಂಸದನಿಗೆ ಇಷ್ಟು ದೊಡ್ಡ ಸಂಖ್ಯೆಯ ಮತದಾರರನ್ನು ತಲುಪುವುದು ಅಸಾಧ್ಯ. ಆದ್ದರಿಂದ ಮರುವಿಂಗಡಣೆ ಮಾಡಲೇಬೇಕಾದ ಅನಿವಾರ್ಯತೆ ಇದೆ ಎಂದು ಅಂಕಿ ಅಂಶಗಳ ಸಮೇತ ಕೋಟ ಶ್ರೀನಿವಾಸ ಪೂಜಾರಿ ವಿವರಿಸಿದರು.

ಬಿಜೆಪಿ ಸರ್ಕಾರದ ನಿರ್ಧಾರಗಳನ್ನು ವಿಪಕ್ಷಗಳು ವಿರೋಧಿಸುವುದು ಹೊಸದೇನಲ್ಲ ಎಂದ ಸಂಸದರು, ರಾಮಮಂದಿರ ನಿರ್ಮಾಣ, ಪೌರತ್ವ ಕಾಯ್ದೆ (ಅಂಂ) ತಿದ್ದುಪಡಿ ಹಾಗೂ ಭಯೋತ್ಪಾದನೆ ನಿಗ್ರಹಕ್ಕೆ ಪೂರಕವಾದ ಕಲಂ 370 ರದ್ದತಿಯನ್ನು ಅವರು ವಿರೋಧಿಸಿದ್ದು ನಿರೀಕ್ಷಿತವೇ ಆಗಿತ್ತು. ಏಕೆಂದರೆ ಅವರಿಗೆ ದೇಶದ ಹಿತಾಸಕ್ತಿಗಿಂತ ರಾಜಕೀಯವೇ ಮುಖ್ಯವಾಗಿತ್ತು. ಆದರೆ, ಮಹಿಳಾ ಸಬಲೀಕರಣಕ್ಕೆ ಪೂರಕವಾದ ಮೀಸಲಾತಿ ಮಸೂದೆಯನ್ನೂ ಅವರು ವಿರೋಧಿಸುತ್ತಾರೆ ಎಂದು ನಾವು ನಿರೀಕ್ಷಿಸಿರಲಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಪ್ರಮುಖ ನಾಯಕಿಯರಾದ ಸಂಧ್ಯಾ ರಮೇಶ್, ಶ್ಯಾಮಲಾ ಕುಂದರ್, ಗೀತಾಂಜಲಿ ಸುವರ್ಣ, ವೀಣಾ ಎಸ್. ಶೆಟ್ಟಿ, ಶಿಲ್ಪಾ ಸುವರ್ಣ, ಪ್ರಿಯದರ್ಶಿನಿ, ಅನಿತಾ ಹಾಗೂ ಮುಖಂಡ ದಿವಾಕರ ಶೆಟ್ಟಿ ಉಪಸ್ಥಿತರಿದ್ದರು.

ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರ ಚಾತುರ್ಮಾಸ್ಯ ವ್ರತಾಚರಣೆ
ಸಚಿವರ ನೇತೃತ್ವದಲ್ಲಿ ಪೂರ್ವಭಾವಿ ಸಭೆ

ಬೈಂದೂರು: ಜುಲೈ 28ರಿಂದ ಆರಂಭವಾಗಲಿರುವ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರ 48 ದಿನಗಳ ಚಾತುರ್ಮಾಸ್ಯ ವ್ರತಾಚರಣೆಗೆ ಸಂಬಂಧಿಸಿದಂತೆ ಬೈಂದೂರು ಕ್ಷೇತ್ರದ ಗೋಳಿಹೊಳೆ ಬಿಳಿಶಿಲೆ ಶ್ರೀ ವಿನಾಯಕ ದೇವಸ್ಥಾನದಲ್ಲಿ ಸಚಿವ ಮಾಂಕಾಳ್ ವೈದ್ಯ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.



ಶ್ರೀ ವಿನಾಯಕ ಶಕ್ತಿಯ ಸನ್ನಿಧಿಯಲ್ಲಿ ದಿನವೊಂದಕ್ಕೆ ಸಾವಿರಾರು ಭಕ್ತರ ಸಂಗಮವಾಗಬೇಕಿದೆ. ಈ 48 ದಿನಗಳ ಕಾಲ ಗೋಳಿಹೊಳೆಯ ಮಣ್ಣು ದೈವಿಕ ಕಂಪನದಿಂದ ಕೂಡಿರಲಿದೆ. ಇದು ಕೇವಲ ಒಂದು ಧಾರ್ಮಿಕ ಕಾರ್ಯಕ್ರಮವಲ್ಲ, ಜಿಲ್ಲೆಯ ಸಮಸ್ತ ಜನರ ಒಳಿತಿಗಾಗಿ ನಡೆಯುತ್ತಿರುವ ಶಕ್ತಿಯಜ್ಞ. ಪ್ರತಿದಿನ ಧಾರ್ಮಿಕ ವಿಧಿವಿಧಾನಗಳು, ವಿಶೇಷ ಪೂಜೆಗಳು ನೆರವೇರಲಿವೆ. ಯಕ್ಷಗಾನ, ವೈವಿಧ್ಯಮಯ ಭಜನಾ ಕಾರ್ಯಕ್ರಮಗಳು ಮತ್ತು ಸಾಂಸ್ಕೃತಿಕ ಸಭೆಗಳು ಮೇಳೈಸಲಿವೆ. ಯಾರು ಈ ಪುಣ್ಯ ಕಾರ್ಯದಲ್ಲಿ ಮನಸಾರೆ ಪಾಲ್ಗೊಳ್ಳುತ್ತಾರೋ, ಅವರಿಗೆ ಜೀವನದಲ್ಲಿ ಯಶಸ್ಸು ಮತ್ತು ಶಾಂತಿ ಲಭಿಸುವುದು ನಿಶ್ಚಿತ. ಈ ಚಾತುರ್ಮಾಸ್ಯವು ಬೈಂದೂರು ಕ್ಷೇತ್ರದ ಏಳಿಗೆಯ ಪಥದಲ್ಲಿ ಒಂದು ಮೈಲಿಗಲ್ಲಾಗಲಿದೆ ಎಂದು ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

> **ಧಾರ್ಮಿಕ ಹಬ್ಬ**
> **ಕುಂಭಮೇಳದ ಪಾವಿತ್ರ್ಯವನ್ನು ಸರಿಸುವಂತೆ ನಡೆಯಲಿರುವ ಈ 48 ದಿನಗಳ ಕಾಲಾವಧಿಯಲ್ಲಿ, ಪ್ರತಿದಿನ ಸಾವಿರಾರು ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಜನಮಾನಸದಲ್ಲಿ ಧಾರ್ಮಿಕ ಭಾವನೆಗಳನ್ನು ಜಾಗೃತಗೊಳಿಸಿ, ಕ್ಷೇತ್ರದ ಏಳಿಗೆಗೆ ಸಾಕ್ಷಿಯಾಗಲಿರುವ ಈ ಪುಣ್ಯ ಮಹೋತ್ಸವ ಇಡೀ ಜಿಲ್ಲೆಯ ಜನತೆಯ ಧಾರ್ಮಿಕ ಹಬ್ಬವಾಗಲಿದೆ.**
> ■ **ಗುರುರಾಜ ಗಂಟಿಹೊಳೆ,**
> **ಶಾಸಕರು, ಬೈಂದೂರು**


ಶಾಸಕ ಗುರುರಾಜ ಗಂಟಿಹೊಳೆ, ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ಜಿಪಂ ಮಾಜಿ ಅಧ್ಯಕ್ಷ ಎಸ್. ರಾಜು ಪೂಜಾರಿ, ಉದ್ಯಮಿ ಕೆ. ಆರ್. ನಾಯ್ಕ್, ಬೈಂದೂರು ಬಿಲ್ಲವ ಸಂಘದ ಅಧ್ಯಕ್ಷ ಗಣೇಶ್ ಪೂಜಾರಿ, ಶೇಖರ ಪೂಜಾರಿ, ಚಾತುರ್ಮಾಸ್ಯ ಸಂಚಾಲಕ ಶಿವರಾಜ ಪೂಜಾರಿ, ಅಶೋಕ್ ಪೂಜಾರಿ ಬೀಜಾಡಿ, ನರಸಿಂಹ ಪೂಜಾರಿ ಪಡುಕೋಣೆ, ಗಣೇಶ್ ಪೂಜಾರಿ ಕೆಂಚನೂರು, ಸಂತೋಷ್ ಪೂಜಾರಿ ಕರ್ಕುಂಜೆ, ಗೋವಿಂದ ಪೂಜಾರಿ, ಕಂಬಳ ಸಮಿತಿ ಅಧ್ಯಕ್ಷ ಮಂಜು ಪೂಜಾರಿ ನಸಿಹಿತ್ಲು ಮತ್ತಿತರರು ಉಪಸ್ಥಿತರಿದ್ದರು.

ಜೆಇಇ ಮೈನ್ಸ್ ಪರೀಕ್ಷೆ: ಎಕ್ಸ್‌ಪರ್ಟ್ ಪಿಯು ಕಾಲೇಜಿನ 19 ವಿದ್ಯಾರ್ಥಿಗಳ ಸಾಧನೆ

ಮಂಗಳೂರು: ಇಂಜಿನಿಯರಿಂಗ್ ವಿಭಾಗದಲ್ಲಿ ರಾಷ್ಟ್ರಮಟ್ಟದಲ್ಲಿ ನಡೆಸುವ ಜೆಇಇ ಮೈನ್ಸ್ ಪರೀಕ್ಷೆಯಲ್ಲಿ ಮಂಗಳೂರಿನ ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜಿನ ಒಟ್ಟು 19 ವಿದ್ಯಾರ್ಥಿಗಳು 99 ಪರ್ಸೆಂಟೈಲ್‌ಗಿಂತ ಅಧಿಕ ಅಂಕ ಪಡೆದಿದ್ದು, ಅಂಕಿತ್ ಅಶೋಕ್‌ದೊಡವಾಡ ಫಿಸಿಕ್ಸ್‌ನಲ್ಲಿ 100 ಪರ್ಸೆಂಟೈಲ್ ಪಡೆದಿದ್ದಾರೆ.

2026ರ ಮಾರ್ಚ್‌ನಲ್ಲಿ ನಡೆದ ಜೆಇಇ ಪರೀಕ್ಷೆಯಲ್ಲಿ ಕಾಲೇಜಿನ 57 ವಿದ್ಯಾರ್ಥಿಗಳು 98 ಪರ್ಸೆಂಟೈಲ್‌ಗಿಂತ ಅಧಿಕ, 93 ವಿದ್ಯಾರ್ಥಿಗಳು 97 ಪರ್ಸೆಂಟೈಲ್‌ಗಿಂತ ಅಧಿಕ, 130 ವಿದ್ಯಾರ್ಥಿಗಳು 96 ಪರ್ಸೆಂಟೈಲ್‌ಗಿಂತ ಅಧಿಕ, 166 ವಿದ್ಯಾರ್ಥಿಗಳು 95 ಪರ್ಸೆಂಟೈಲ್‌ಗಿಂತ ಅಧಿಕ ಹಾಗೂ 377 ವಿದ್ಯಾರ್ಥಿಗಳು 90 ಪರ್ಸೆಂಟೈಲ್‌ಗಿಂತ ಅಧಿಕ ಫಲಿತಾಂಶವನ್ನು ಗಳಿಸಿದ್ದಾರೆ. ಈ ಮೂಲಕ 448 ವಿದ್ಯಾರ್ಥಿಗಳು ಜೆಇಇಅಡ್ವಾನ್ಸ್ ಪರೀಕ್ಷೆ ಬರೆಯಲು ಅರ್ಹತೆ ಪಡೆದುಕೊಂಡಿದ್ದಾರೆ.

99.7084298 ಪರ್ಸೆಂಟೈಲ್ ಪಡೆದ ಸುಹಾಸ ಬಸನಗೌಡ ಬಾಳನಗೌಡರ್‌ಗೆ ಅಖಿಲ ಭಾರತ ಮಟ್ಟದ ಸಾಮಾನ್ಯ ವಿಭಾಗದಲ್ಲಿ 4758ನೇ ರ‍್ಯಾಂಕ್, 99.7084298 ಪರ್ಸೆಂಟೈಲ್ ಪಡೆದ ಅಂಕಿತ್‌ಅಶೋಕ್‌ದೊಡವಾಡ4773ನೇರ‍್ಯಾಂಕ್, 99.6272345 ಪರ್ಸೆಂಟೈಲ್ ಪಡೆದ ಕೃತಿಕಾ





ಮಲ್ಲಿಕಾರ್ಜುನ್ ಪಾಟೀಲ್‌ಗೆ 6076ನೇ ರ‍್ಯಾಂಕ್, 99.5991624 ಪರ್ಸೆಂಟೈಲ್ ಪಡೆದ ಉದ್ದಂಡಿ ಲಕ್ಷ್ಮೀ ಮೇಘನಾ 6508ನೇ ರ‍್ಯಾಂಕ್, 99.5031775 ಪರ್ಸೆಂಟೈಲ್ ಪಡೆದ ಸಮಯ ಎ.ಎಸ್. 8024ನೇ ರ‍್ಯಾಂಕ್, 99.4979736 ಪರ್ಸೆಂಟೈಲ್ ಪಡೆದ ಮಿಲನ್ ಮಾದೇಶ ಎಸ್. 8138ನೇ ರ‍್ಯಾಂಕ್, 99.4162842 ಪರ್ಸೆಂಟೈಲ್ ಪಡೆದ ಡಿ.ನವನೀತ್ ಎನ್. ಪೈ 8962ನೇ ರ‍್ಯಾಂಕ್, 99.4228625 ಪರ್ಸೆಂಟೈಲ್ ಪಡೆದ ಉಜ್ವಲ್ ಶಿವಾನಂದ್ ಬೂದಿಹಾಳ್ 9293ನೇ ರ‍್ಯಾಂಕ್, 99.4228625 ಪರ್ಸೆಂಟೈಲ್ ಪಡೆದ ಎಂ.ದೀಪಕ್ ಗೌಡ ಎಂ. 9291ನೇ ರ‍್ಯಾಂಕ್, 99.4130510 ಪರ್ಸೆಂಟೈಲ್ ಪಡೆದ ಸಾಯಿ ಶೋಬಿತ್ ಎಸ್. 9521ನೇ ರ‍್ಯಾಂಕ್, 99.4130510 ಪರ್ಸೆಂಟೈಲ್ ಪಡೆದ ಅಭಿಷೇಕ್ ಆರ್. ಹನಮಂತಗೌಡರ 9516ನೇ ರ‍್ಯಾಂಕ್ ಪಡೆದಿದ್ದಾರೆ.

ಅರಳಿ ವಿರೂಪಾಕ್ಷ (99.3650938 ಪರ್ಸೆಂಟೈಲ್), ನರೇನ್ ವಿ. (99.3416964), ನಿತೀಶ್ ಗೋಪಾಲ್ (99.3347760), ಯಶಸ್ ಎನ್. ಎಂ. (99.3303251), ಸಮರ್ಥ್ ಗೌಡ ಆರ್. (99.2905252),ರಿಷಿಕಾಕೆ.ಎಸ್.(99.2556385), ಚಂದನ್ ಎಚ್.ಆರ್. (99.1793285), ನಂದನ್ ನಾಯಕ್ (99.1756042) ಸಾಧನೆ ಮಾಡಿದ ವಿದ್ಯಾರ್ಥಿಗಳಾಗಿದ್ದಾರೆ.

ಮೊದಲ ಹಂತದ ಪರೀಕ್ಷೆ ಜನವರಿಯಲ್ಲಿ ನಡೆದಿದ್ದು, ಮಾರ್ಚ್ ತಿಂಗಳಿನಲ್ಲಿ ಎರಡನೇ ಪರೀಕ್ಷೆ ನಡೆದಿರುತ್ತದೆ. ಈ ಎರಡೂ ಪರೀಕ್ಷೆಯಲ್ಲಿ ಪಡೆದ ಉತ್ತಮ ಅಂಕವನ್ನು ಪರಿಗಣಿಸಿ, ಅಂತಿಮವಾಗಿ ಈ ಫಲಿತಾಂಶ ಹಾಗೂ ರ‍್ಯಾಂಕ್ ಘೋಷಿಸಲಾಗಿದೆ. ಐಐಟಿ, ಎನ್‌ಐಟಿ ಸೇರಿದಂತೆ ಪ್ರಮುಖ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಈ ಪರೀಕ್ಷೆಯನ್ನು ಅಖಿಲ ಭಾರತ ಮಟ್ಟದಲ್ಲಿ ನಡೆಸಲಾಗುತ್ತದೆ. ಈ ಎಲ್ಲಾ ವಿದ್ಯಾರ್ಥಿಗಳ ಶ್ರಮದ ಸಾಧನೆಯನ್ನು ಕಾಲೇಜಿನ ಹಾಗೂ ಆಡಳಿತ ಮಂಡಳಿಯ ಪರವಾಗಿ ಎಕ್ಸ್‌ಪರ್ಟ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರೊ. ನರೇಂದ್ರ ಎಲ್. ನಾಯಕ್ ಅಭಿನಂದಿಸಿದ್ದಾರೆ.

ಕೆರೆಗೆ ನೀರು ತುಂಬಿಸುವ ಕಾರ್ಯಕ್ಕೆ ಸಿಎಂ ಚಾಲನೆ

ಪುಟ ೧➡ ಆದರೆ ಜನರು ಇದರ ಸತ್ಯಾಸತ್ಯತೆ ಅರಿಯಬೇಕು. ಐದು ಗ್ಯಾರಂಟಿಗಳನ್ನು ನೀಡುವುದರ ಜತೆ ಅಭಿವೃದ್ಧಿಗೆ ಭರಪೂರ ಅನುದಾನ ನೀಡಲಾಗಿದೆ. ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಹೆಚ್ಚಿನ ಅಭಿವೃದ್ಧಿಯಾಗಿದೆ ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ಮೀಸಲಾತಿ ಮಸೂದೆ ಕುರಿತು ಸುಳ್ಳು ಪ್ರಚಾರ: ಪ್ರಸ್ತುತ ಮಹಿಳಾ ಮೀಸಲಾತಿ ಬಿಲ್ ಅನ್ನು ಕಾಂಗ್ರೆಸ್ ವಿರೋಧಿಸಿತು ಎಂದು ಬಿಜೆಪಿ ಸುಳ್ಳುಪ್ರಚಾರ ಮಾಡುತ್ತಿದೆ. ಆದರೆ ಕಾಂಗ್ರೆಸ್ ಎಂದಿಗೂ ಮಹಿಳಾ ಮೀಸಲಾತಿಯನ್ನು ವಿರೋಧಿಸಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತಂದಿದ್ದು ಕಾಂಗ್ರೆಸ್ ಸರ್ಕಾರ. ಹಿಂದೆ ಸಂವಿಧಾನದ ಕಲಂ 73,74 ತಿದ್ದುಪಡಿಯನ್ನು ಬಿಜೆಪಿಯವರು ವಿರೋಧಿಸಿದ್ದರು. ಪ್ರಧಾನಿ ಮೋದಿಯವರು ಮಹಿಳಾ ಮೀಸಲಾತಿಯನ್ನು ವಿರೋಧಿಸಿದವರನ್ನು ಮಹಿಳೆಯರು ಕ್ಷಮಿಸುವುದಿಲ್ಲ ಎಂದಿದ್ದಾರೆ. ಆದರೆ 2023ರಲ್ಲಿಯೇ ಮಹಿಳಾ ಮೀಸಲಾತಿ ಕಾಯ್ದೆ ತರಲಾಗಿದ್ದು, ಈ ಕಾಯ್ದೆಗೆ ಕಾಂಗ್ರೆಸ್ ವಿರೋಧಿಸದೇ ಸ್ವಾಗತಿಸಿದ್ದೆವು. ಆದರೆ ಸಹಮತ ಸೂಚಿಸಲಾಗಿದ್ದ ಮಹಿಳಾ ಮೀಸಲಾತಿಯನ್ನು 2028ರವರೆಗೆ ಜಾರಿಗೆ ತರಲು ಸಾಧ್ಯವಿಲ್ಲವೆಂದು ಬಿಜೆಪಿಯವರೇ ಹೇಳಿದರು. ಕಾಂಗ್ರೆಸ್ ಪಕ್ಷ ಎಂದಿಗೂ ಮಹಿಳಾ ಮೀಸಲಾತಿಯನ್ನು ಬೆಂಬಲಿಸುತ್ತದೆ. ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದು, ಅವರಿಗೆ ನ್ಯಾಯಯುತವಾದ ಮೀಸಲಾತಿ ದೊರೆಯಬೇಕಿರುವುದು ಅತ್ಯಗತ್ಯ ಎಂದರು.

ಡಿಲಿಮಿಟೇಷನ್ ಕಾಯ್ದೆಗೆ ಕಾಂಗ್ರೆಸ್ ವಿರೋಧ: ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿಗಳು, ನಗರಸಭೆ, ನಗರಪಾಲಿಕೆಗಳಲ್ಲಿ ಶೇ.50 ರಷ್ಟು ಮಹಿಳೆಯರಿದ್ದು, ಇದಕ್ಕೆ ಕಾಂಗ್ರೆಸ್ ಸರ್ಕಾರವೇ ಕಾರಣ. ಪ್ರಸ್ತುತ, ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿ ಕಾಯ್ದೆಯ ಜೊತೆಗೆ ಡೀಲಿಮಿಟೇಷನ್ ಕಾಯ್ದೆ ತರಲು ಪ್ರಯತ್ನಿಸಿದ್ದರಿಂದ ವಿರೋಧವನ್ನು ವ್ಯಕ್ತಪಡಿಸಲಾಗಿದೆ. ಕಾಂಗ್ರೆಸ್ ಡಿಲಿಮಿಟೇಷನ್ ಕಾಯ್ದೆಯನ್ನು ವಿರೋಧಿಸಿದೆಯೇ ಹೊರತು ಮಹಿಳಾ ಮೀಸಲಾತಿಯನ್ನು ವಿರೋಧಿಸಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ರಾಜ್ಯದ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿಯವರು ವಿರೋಧಿಸಿದರು. ಆದರೆ ನಮ್ಮ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿಯವರು ಹಲವು ರಾಜ್ಯಗಳಲ್ಲಿ ಅನುಸರಿಸುತ್ತಿದ್ದಾರೆ. ಗ್ಯಾರಂಟಿಗಳ ಜತೆಗೆ ಅಭಿವೃದ್ಧಿಯನ್ನು ಸಾಧಿಸುತ್ತಿರುವುದಕ್ಕೆ ಇಂದು ಗುಂಡ್ಲುಪೇಟೆಯಲ್ಲಿ ನಡೆದಿರುವ ಈ ಕಾರ್ಯಕ್ರಮವೇ ಸಾಕ್ಷಿ. ಕಾಂಗ್ರೆಸ್ ಸರ್ಕಾರ ಎಂದಿಗೂ ನುಡಿದಂತೆ ನಡೆಯುತ್ತದೆ ಎಂದರು. ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿ ಮೂರು ವರ್ಷಗಳಲ್ಲಿ 1 ಲಕ್ಷ 60 ಸಾವಿರ ಕೋಟಿ ವೆಚ್ಚದಲ್ಲಿ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಒಟ್ಟು 1 ಲಕ್ಷ 60 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ಬಿಜೆಪಿ ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ ಎಸ್‌ಸಿಎಸ್‌ಪಿ / ಟಿಎಸ್‌ಪಿ ಯೋಜನೆಯಲ್ಲಿ 1 ಲಕ್ಷ 10 ಸಾವಿರ ಕೋಟಿ ಮಾತ್ರ ವೆಚ್ಚ ಮಾಡಿದೆ ಎಂದರು. ಬಡವರ ಪರವಾಗಿ ಕೆಲಸ ಮಾಡುತ್ತಿದ್ದೇವೆ. ಕಾಂಗ್ರೆಸ್ ಎಂದಿಗೂ ಬಡವರ, ಅಲ್ಪಸಂಖ್ಯಾತರ, ದಲಿತರ ಪಕ್ಷ. ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಯಲ್ಲಿ ನಂಬಿಕೆ ಇಟ್ಟುಕೊಂಡಿದ್ದೇವೆ ಎಂದು ಸಿದ್ದರಾಮಯ್ಯ ತಿಳಿಸಿದರು. ಬಿಜೆಪಿ ಜಾತಿ ಧರ್ಮದ ಹೆಸರಿನಲ್ಲಿ ಸಮಾಜವನ್ನು ಒಡೆಯುತ್ತಿದೆ. ಅವರು ಎಂದಿಗೂ ಬಡವರ ಪರವಾಗಿಲ್ಲ ಹಾಗೂ ಸಂವಿಧಾನ ವಿರೋಧಿಗಳು ಎಂದರು.

ಎಲ್ಲಾ ಇಲಾಖೆಗಳ ಮೂಲಕ ಅಭಿವೃದ್ಧಿ: ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಇಂಧನ, ಕೃಷಿ ಸೇರಿದಂತೆ ಎಲ್ಲಾ ಇಲಾಖೆಗಳ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೇವೆ ಎಂದರು.

ಸಂತ್ರಸ್ತರ ಕುಟುಂಬದವರಿಗೆ ನೇಮಕ ಪತ್ರ ವಿತರಣೆ

ಗುಂಡ್ಲುಪೇಟೆ: ಕೊರೋನಾ ವೇಳೆ ಚಾಮರಾಜ ನಗರ ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ ಮೃತಪಟ್ಟ 36ಮೃತರ ಪೈಕಿ ಹಲವು ಕುಟುಂಬಸ್ಥರಿಗೆ ಚಾ.ನಗರ ಸಿಮ್ಸ್ ಆಸ್ಪತ್ರೆಯಲ್ಲಿ ವಿವಿಧ ಹುದ್ದೆ ನೀಡಿ ನೇಮಕಾತಿ ಪತ್ರವನ್ನು ಸಿಎಂ ಸಿದ್ದರಾಮಯ್ಯ ವಿತರಣೆ ಮಾಡಿದರು. ಅಲ್ಲದೆ, ವಿವಿಧ ನಿಗಮದ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಿದರು. ಗುಂಡ್ಲುಪೇಟೆ ಆಕ್ಸಿಜನ್ ಕೊಲೆಗೆ ನ್ಯಾಯ ಒದಗಿಸಿದ್ದೇವೆ. ವಿಶೇಷ ತೀರ್ಮಾನ ತೆಗೆದುಕೊಂಡು 25 ಕುಟುಂಬಗಳಿಗೆ ಅದೇ ಆಸ್ಪತ್ರೆಯಲ್ಲೇ ಉದ್ಯೋಗ ಕಲ್ಪಿಸಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಅರಾಫತ್ ಅಲಿಗೆ ಜೈಲು ಶಿಕ್ಷೆ ವಿಧಿಸಿ ತೀರ್ಪು

◆ **ಬೆಂಗಳೂರು:** ದೇಶಾದ್ಯಂತ ಸಂಚಲನ ಮೂಡಿಸಿದ್ದ 2022ರ ಶಿವಮೊಗ್ಗ ಐಸಿಸ್ ಭಯೋತ್ಪಾದನಾ ಪಿತೂರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಎನ್ಐಎ ವಿಶೇಷ ನ್ಯಾಯಾಲಯವು ಮೂರನೇ ಆರೋಪಿ ಅರಾಫತ್ ಅಲಿಗೆ 6 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಬೆಂಗಳೂರಿನ ಎನ್ಐಎ ವಿಶೇಷ ನ್ಯಾಯಾಲಯವು ಜೈಲು ಶಿಕ್ಷೆ ವಿಧಿಸಿದೆ. ಇದೇ ಪ್ರಕರಣದಲ್ಲಿ ಕಳೆದ ನವೆಂಬರ್ 2025 ರಲ್ಲಿ ಇತರ ಇಬ್ಬರು ಆರೋಪಿಗಳಿಗೂ ತಲಾ 6ವರ್ಷಗಳ ಶಿಕ್ಷೆ ವಿಧಿಸಲಾಗಿತ್ತು. ಈ ಮೂಲಕ ಪ್ರಕರಣದಲ್ಲಿ ಶಿಕ್ಷೆಗೊಳಗಾದವರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

ಅಪರಾಧದ ಹಿನ್ನೆಲೆ: ನಿಷೇಧಿತ ಭಯೋತ್ಪಾದನಾ ಸಂಘಟನೆ ಐಸಿಸ್‌ನ ಸಕ್ರಿಯ ಸದಸ್ಯನಾಗಿದ್ದ ಅರಾಫತ್ ಅಲಿ, ಭಾರತದಲ್ಲಿ ಭಯೋತ್ಪಾದಕ ಸಿದ್ಧಾಂತವನ್ನು ಹರಡಲು ಸಂಚು ರೂಪಿಸಿದ್ದನು. ಶಿವಮೊಗ್ಗ ಐಸಿಸ್ ಮಾಡ್ಯೂಲ್ ಮೂಲಕ ಯುವಕರನ್ನು ಉಗ್ರಗಾಮಿ ಸಿದ್ಧಾಂತಕ್ಕೆ ಪ್ರೇರೇಪಿಸಿ ನೇಮಕಾತಿ ಮಾಡಿಕೊಳ್ಳುತ್ತಿದ್ದ ಎನ್ನುವುದು ತನಿಖೆಯಿಂದ ದೃಢಪಟ್ಟಿದೆ. ಅಷ್ಟೇ ಅಲ್ಲದೆ, ಮಂಗಳೂರು ನಗರದಲ್ಲಿ ಐಸಿಸ್ ಮತ್ತು ಲಷ್ಕರ್-ಎ-ತೈಬಾ ಪರವಾಗಿ ವಿವಾದಾತ್ಮಕ ಗೋಡೆ ಬರಹಗಳನ್ನು ಬರೆಯಲು ಇತರ ಆರೋಪಿಗಳನ್ನು ಪ್ರೇರೇಪಿಸಿದ ಆರೋಪವೂ ಈತನ ಮೇಲಿದೆ. ಸಮಾಜದಲ್ಲಿ ಅಶಾಂತಿ ಹರಡುವುದು ಮತ್ತು ಧರ್ಮಗಳ ನಡುವೆ ದ್ವೇಷ ಮೂಡಿಸುವುದು ಈ ಸಂಚಿನ ಪ್ರಮುಖ ಉದ್ದೇಶವಾಗಿತ್ತು.

ತಲೆಮರೆಸಿಕೊಂಡಿದ್ದ ಆರೋಪಿ: 2020 ರಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬಂಧನದ ಭೀತಿಯಲ್ಲಿದ್ದ ಅರಾಫತ್, ದೇಶ ಬಿಟ್ಟು ಪರಾರಿಯಾಗಿದ್ದನು. ತನಿಖೆ ಮುಂದುವರಿಸಿದ್ದ ಎನ್ಐಎ ಅಧಿಕಾರಿಗಳು, ಸೆಪ್ಟೆಂಬರ್ 2023ರಲ್ಲಿ ದಿಲ್ಲಿಯ ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಈತ ಬಂದಿಳಿಯುತ್ತಿದ್ದಂತೆ ಬಂಧಿಸಿದ್ದರು.

ಕ್ರಿಪ್ಟೋ ಕರೆನ್ಸಿ ಮೂಲಕ ಹಣ ವರ್ಗಾವಣೆ: ಎನ್ಐಎ ತನಿಖೆಯ ವೇಳೆ ಮತ್ತೊಂದು ಸ್ಫೋಟಕ ಮಾಹಿತಿ ಬೆಳಕಿಗೆ ಬಂದಿದೆ. ಆರೋಪಿಯು ಆನ್‌ಲೈನ್ ಮೂಲಕ ಐಸಿಸ್ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕದಲ್ಲಿದ್ದನು. ಶಿವಮೊಗ್ಗ ಉಗ್ರ ಮಾಡ್ಯೂಲ್‌ಗೆ ಬೇಕಾದ ಹಣವನ್ನು ಕ್ರಿಪ್ಟೋ ಕರೆನ್ಸಿ ರೂಪದಲ್ಲಿ ಪಡೆದು, ಅದನ್ನು ಇತರ ಸಹಚರರಿಗೆ ಹಂಚುವ ಮೂಲಕ ಹಣಕಾಸಿನ ನೆರವು ನೀಡುತ್ತಿದ್ದನು ಎಂದು ಎನ್ಐಎ ತಿಳಿಸಿದೆ. ಆರಂಭದಲ್ಲಿ ಕರ್ನಾಟಕ ಪೊಲೀಸರು ದಾಖಲಿಸಿಕೊಂಡಿದ್ದ ಈ ಪ್ರಕರಣವನ್ನು ನಂತರ ಎನ್ಐಎ ಕೈಗೆತ್ತಿಕೊಂಡಿತ್ತು. ಪ್ರಕರಣದಲ್ಲಿ ಒಟ್ಟು 12 ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ.

ಕಿಡಿ ನುಡಿ

◆ ವಾಸುದೇವರಾವ್ ಕಕ್ಕೆನೇಜಿ

◈ ಯುದ್ಧವನ್ನು ಗೆದ್ದವರು ನಾವೇ – ಒಂದೆಡೆ ಇರಾನ್, ಇನ್ನೊಂದೆಡೆ ಅಮೇರಿಕಾ ಹೇಳಿಕೆ

– ಗೆದ್ದವರು ಯಾರು ಎನ್ನುವುದು ಚರ್ಚೆಯ ಸಂಗತಿ, ಆದರೆ ಸೋತವರು ಜಗತ್ತಿನ ಜನಸಾಮಾನ್ಯರು ಎಂಬುದು ಸತ್ಯ ಸಂಗತಿ. ಕೋಣನೆರಡುಂ ಹೋರೆ ಗಿಡಮಿಂಗೆ ಮೃತ್ಯು ಎಂಬಂತೆ!

ದಿನ ಭವಿಷ್ಯ

ಮೇಷ
ನೀವು ಮಾಡುವ ತಪ್ಪಿಗೆ ಇತರರನ್ನು ದೂರಬೇಡಿ. ಎಲ್ಲರ ಜತೆ ಸೌಹಾರ್ದದಿಂದ ವರ್ತಿಸಿದರೆ ಒಳಿತು. ಕೌಟುಂಬಿಕ ಅಶಾಂತಿ.

ವೃಷಭ
ವೃತ್ತಿಗೆ ಸಂಬಂಧಿಸಿ ಪ್ರಮುಖ ಬದಲಾವಣೆ ಉಂಟಾದೀತು. ಹಣದ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳಬೇಡಿ. ಸಂಬಂಧದಲ್ಲಿ ಒಡಕು ಸಂಭವ.

ಮಿಥುನ
ಕೆಲಸವೊಂದು ಅನಿರೀಕ್ಷಿತ ಫಲ ನೀಡಲಿದೆ. ಒತ್ತಡ ನಿವಾರಣೆ. ಬಂಧುಗಳ ಜತೆ ಆತ್ಮೀಯ ಕಾಲಕ್ಷೇಪ. ಮಕ್ಕಳ ಸಾಧನೆಯ ತೃಪ್ತಿ.

ಕಟಕ
ಕೆಲಸದ ಒತ್ತಡ ಅಧಿಕವಿದ್ದರೂ ನೀವು ವಿರಾಮ ಪಡೆಯಲು ಶಕ್ತರಾಗುವಿರಿ. ಖರ್ಚು ಅಧಿಕ ಮಾಡದಿರಿ. ಬಳಿಕ ಚಿಂತೆಗೆ ಕಾರಣವಾದೀತು.

ಸಿಂಹ
ಮನೆಯವರ ಹಿತಾಸಕ್ತಿಗೆ ಹೆಚ್ಚಿನ ಗಮನ ಕೊಡಿ. ನಿಮಗೆ ಅರಿವಿಲ್ಲದೇ ಬಿಕ್ಕಟ್ಟು ಬೆಳೆಯುತ್ತಿದೆ. ಎಲ್ಲರ ಜತೆ ಸಮಾಲೋಚನೆ ನಡೆಸಿ.

ಕನ್ಯಾ
ಸವಾಲುಗಳ ದಿನ. ನಿಭಾಯಿಸಲು ಸಮರ್ಥ. ಕೆಲವು ವಿಷಯಗಳಲ್ಲಿ ಸಮತೋಲನ ಸಾಧಿಸಿರಿ. ಏಕಪಕ್ಷೀಯ ಧೋರಣೆ ತಾಳದಿರಿ. ಧನವ್ಯಯ.

ತುಲಾ
ನಿಮ್ಮ ಒಳ್ಳೆ ಕೆಲಸ ಯಾರೂ ಗಮನಿಸುತ್ತಿಲ್ಲ ಎಂಬ ಕೊರಗು ಬಿಡಿ. ಸೂಕ್ತ ಪ್ರಶಂಸೆ ಸಿಕ್ಕೇ ಸಿಗುವುದು. ಮನೆಯಲ್ಲಿ ಸೌಹಾರ್ದ ಪರಿಸರ.

ವೃಶ್ಚಿಕ
ಕಷ್ಟವೆಂದುಕೊಂಡ ಕೆಲಸ ಸಕಾಲದಲ್ಲಿ ಮುಗಿಸುವಿರಿ. ಆತ್ಮವಿಶ್ವಾಸ ವೃದ್ಧಿ. ಮನೆಯಲ್ಲಿ ಅಸಹಕಾರ ಎದುರಿಸುವಿರಿ. ಸಹನೆಯಿಂದಿರಿ.

ಧನು
ನಿಮ್ಮ ನಿರ್ವಹಣೆ ಇಂದು ಸುಧಾರಿಸಲಿದೆ. ಅದೃಷ್ಟವೂ ಜತೆಗಿದೆ. ಕ್ಲಿಷ್ಟಕರ ಪರಿಸ್ಥಿತಿಯೊಂದು ಅಚಾನಕ್ ಪರಿಹಾರ ಕಾಣುವುದು.

ಮಕರ
ಇತ್ತೀಚೆಗೆ ಮೂಡಿದ್ದ ಕೆಲವು ಸಂಶಯಗಳಿಗೆ ಇಂದು ಪರಿಹಾರ ಸಿಗಲಿದೆ. ಮನಸ್ಸು ನಿರಾಳ. ಆರ್ಥಿಕ ಪರಿಸ್ಥಿತಿ ಉತ್ತಮ. ಖರ್ಚು ಹೆಚ್ಚಿದರೂ ಚಿಂತೆ ಕಾಡದು.

ಕುಂಭ
ಮನವನ್ನು ಕಾಡುತ್ತಿರುವ ವಿಷಯ ಸರಿಯಾಗಿ ಇತ್ಯರ್ಥ ಪಡಿಸಿ. ಅದನ್ನು ಹಾಗೇ ಬೆಳೆಯಲು ಬಿಡಬೇಡಿ. ಕೌಟುಂಬಿಕ ಸಹಕಾರ.

ಮೀನ
ನಿಮ್ಮ ಪಾಲಿಗೆ ಗುಣಾತ್ಮಕ ಬದಲಾವಣೆ ಉಂಟಾಗಲಿದೆ. ಮನೆಯವರ ಮಾತಿಗೆ ರೇಗದಿರಿ. ಸಮಾಧಾನದ ಪ್ರತಿಕ್ರಿಯೆ ನೀಡಿ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 3,8,1,5

ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಇಂಗಿತ

ಶೋಷಿತರ ಅಭಿವೃದ್ಧಿಯಾಗಲಿ

◆ **ವಿಜಯಪುರ:** ವಿದ್ಯಾರ್ಥಿಗಳು ಕನಸು ಕಂಡು, ಅದನ್ನು ನನಸಾಗಿಸಲು ಸಾಹಸ ಮಾಡುವುದರ ಜೊತೆಗೆ, ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತಂದು, ವೈಯಕ್ತಿಕ ಶ್ರೇಯೋಭಿವೃದ್ಧಿಯ ಜೊತೆಗೆ ಸಮಾಜದ ದುರ್ಬಲ ವರ್ಗ, ಶೋಷಿತ ವರ್ಗಗಳ ಕಲ್ಯಾಣಕ್ಕಾಗಿಯೂ ಯೋಗದಾನ ನೀಡಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ನಗರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 17ನೇ ಘಟಿಕೋತ್ಸವದಲ್ಲಿ ಮಹಿಳಾ ಸಾಧಕರಿಗೆ ಗೌರವ ಡಾಕ್ಟರೇಟ್, ಚಿನ್ನದ ಸಾಧಕರಿಗೆ ಚಿನ್ನದ ಪದಕ ಹಾಗೂ ಪಿಎಚ್‌ಡಿ ಪದವೀಧರರಿಗೆ ಸಂಶೋಧನಾ ಪ್ರಮಾಣಪತ್ರ ಪ್ರದಾನ ಮಾಡಿ ಅವರು ಮಾತನಾಡಿದರು.

ಇಂದಿನ ಆಧುನಿಕ ಯುಗದಲ್ಲಿ ಅನೇಕ ಸವಾಲುಗಳು ಎದುರಾಗುತ್ತವೆ. ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಜೊತೆ ಜೊತೆಗೆ ನೈತಿಕತೆ, ಸಂವೇದನೆಯನ್ನು ಮೈಗೂಡಿಸಿಕೊಂಡು ಮುನ್ನಡೆಯಬೇಕಿದೆ. ಆಧುನಿಕ ಭಾರತ ಡಿಜಿಟಲ್ ತಾಂತ್ರಿಕತೆಯಲ್ಲಿ ವೇಗವಾಗಿ ಮುನ್ನಡೆಯುತ್ತಿದ್ದು, ಈ ಪ್ರಗತಿಯಲ್ಲಿ ವಿದ್ಯಾರ್ಥಿಗಳ ಯೋಗದಾನ ಅತ್ಯಂತ ಮಹತ್ವದ್ದಾಗಿದೆ. ವ್ಯಕ್ತಿಗತ ಶ್ರೇಯೋಭಿವೃದ್ಧಿಯ ಜೊತೆಗೆ ಸಾಮಾಜಿಕ ಶ್ರೇಯೋಭಿವೃದ್ಧಿ, ನೈತಿಕ ಮೌಲ್ಯಗಳ ಸಾಕ್ಷೀಕರಣದೊಂದಿಗೆ ಸಾಧಕರ ಮಾರ್ಗದಲ್ಲಿ ಸ್ಫೂರ್ತಿಯ ದಾರಿಯಲ್ಲಿ ಸಾಗಬೇಕಿದೆ ಎಂದರು.

ಎಲ್ಲಿ ನಾರಿ ಪೂಜಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನೆಲೆಸುತ್ತಾಳೆ ಎಂಬುದು ನಮ್ಮ ಶಾಸ್ತ್ರಗಳ ಶ್ಲೋಕ, ಇದು ಕೇವಲ ಶ್ಲೋಕವಲ್ಲ ಇದು ಭಾರತೀಯ ಸಂಸ್ಕೃತಿಯ ಮೂಲ ದರ್ಶನವಾಗಿದೆ. ಮಹಿಳೆ ಶಿಕ್ಷಿತಳಾದರೆ ಇಡೀ ಸಮಾಜವನ್ನೇ ಶಿಕ್ಷಿತಳಾಗಿಸುತ್ತಾಳೆ. ಇಂದು ಮಹಿಳೆ ಅಗ್ರಣೀಯ ಶಕ್ತಿಯಾಗಿ ಮುನ್ನಡೆದಿದ್ದಾಳೆ. ರಾಷ್ಟ್ರೀಯ ಸೇವೆಯಲ್ಲಿ ಆಕೆಯ ಪಾತ್ರ ಅನನ್ಯ, ಅನೇಕ ಸಂಕಷ್ಟಗಳನ್ನು ಸಮರ್ಥವಾಗಿ ಎದುರಿಸಿ ಸಾಧನೆಯ ಹೆಜ್ಜೆ ಇರಿಸಿದ್ದಾಳೆ ಎಂದರು.

ವಿದ್ಯಾರ್ಥಿಗಳ ಈ ಉತ್ಸಾಹ ಜೀವನದ ಮಹತ್ವದಪೂರ್ಣ ಕ್ಷಣದ ಜೊತೆಗೆ ಇನ್ನೊಂದು ಜವಾಬ್ದಾರಿಯ ಆರಂಭವೂ ಹೌದು. ಇದು ನಿಮ್ಮ ಜ್ಞಾನದ ಪ್ರಮಾಣ ಅಷ್ಟೇ ಅಲ್ಲ ನಿಮ್ಮ ಪರಿಶ್ರಮದ ಸಂಕೇತವೂ ಹೌದು. ಸವಾಲಗಳು ಸಹ ಅಧಿಕ. ಅವುಗಳನ್ನು ಸಮರ್ಥವಾಗಿ ಎದುರಿಸಬೇಕು. ಖಗೋಳ, ವ್ಯವಸಾಯ, ಕ್ರೀಡೆ, ಗಣಿತ, ತಾಂತ್ರಿಕತೆ ಹಾಗೂ ಸೈನ್ಯದಲ್ಲಿ ಹಾಗೂ ಅಷ್ಟೇ ಅಲ್ಲದೇ ರಾಜಕೀಯದಲ್ಲಿಯೂ ಮುಂದಾಳತ್ವ ವಹಿಸಿದ್ದಾಳೆ ಎಂದರು.

ಕನ್ನಡದಲ್ಲಿಯೇ ಮಾತು ಆರಂಭಿಸಿದ ರಾಜ್ಯಪಾಲರು ಎಲ್ಲರಿಗೂ ನಮಸ್ಕಾರ, ನಿಮ್ಮನ್ನೂ ಹಾರ್ದಿಕವಾಗಿ ಸ್ವಾಗತಿಸುತ್ತೇನೆ ಎಂದು ಕನ್ನಡದಲ್ಲಿಯೇ ಭಾಷಣ ಆರಂಭಿಸಿದರು. ಇಡೀ ಸಭಿಕರಿಂದ ಕರತಾಡನ ಮುಗಿಲು ಮುಟ್ಟಿತ್ತು. ಮಹಿಳಾ ವಿವಿ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಇತರರು ಇದ್ದರು.



ವಿದ್ಯಾರ್ಥಿಗಳ ಆತ್ಮಬಲ ಹೆಚ್ಚಲಿ
ಅಕ್ಕಮಹಾದೇವಿ ಹೆಸರಿನಲ್ಲಿ ಆರಂಭವಾಗಿರುವ ಮಹಿಳಾ ವಿವಿ ಅಧ್ಯಾತ್ಮಿಕ ಹಾಗೂ ಜ್ಞಾನ ಚೈತನ್ಯದ ಪ್ರತೀಕವಾಗಿದೆ. ಸತ್ಯಜ್ಞಾನ ಎಂಬುದು ಆತ್ಮ ನಿರ್ಭರವನ್ನಗಿಸುತ್ತದೆ ಎನ್ನುವುದು ಅಕ್ಕಮಹಾದೇವಿ ಚಿಂತನೆ, ಜ್ಞಾನ ಎಂಬುದು ಆತ್ಮಬಲ ಹಾಗೂ ಸೇವೆಯ ಮಾರ್ಗ ಎಂಬುದು ಅಕ್ಕಮಹಾದೇವಿ ದಿವ್ಯ ಚಿಂತನೆಯಾಗಿತ್ತು. ಈ ಚಿಂತನೆಯ ಬಲದೊಂದಿಗೆ ವಿದ್ಯಾರ್ಥಿಗಳು ಮುನ್ನಡೆಯಬೇಕು ಎಂದರು.

ಕೈ ಪಾಳೆಯಕ್ಕೆ ಮುಸ್ಲಿಮರ ಎಚ್ಚರಿಕೆ

ಪುಟ ೧➡ ಮುಸ್ಲಿಂ ಮೌಲ್ವಿಗಳು ಹಾಗೂ ನಾಯಕರು ಪತ್ರ ಬರೆದ ಬೆನ್ನಲ್ಲೇ ಎಚ್ಚೆತ್ತಿರುವ ಸಚಿವ ಜಮೀರ್ ಅಹ್ಮದ್ ಡ್ಯಾಮೇಜ್‌ಗೆ ತೇಪೆ ಹಚ್ಚುವ ಕೆಲಸಕ್ಕೆ ಮುಂದಾಗಿದ್ದಾರೆ. ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿ, ನಾನು ಮಾಧ್ಯಮಗಳಲ್ಲಿ ಪತ್ರವನ್ನು ನೋಡಿದ್ದೇನೆ. 16 ಜನ ಗುರುಗಳು ರಾಹುಲ್ ಗಾಂಧಿಗೆ ಪತ್ರ ಬರೆದಿರುವುದನ್ನು ಗಮನಿಸಿದ್ದೇನೆ. ಅವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಆದರೆ, ಕಾಂಗ್ರೆಸ್‌ನಲ್ಲಿ ಯಾವುದೇ ತಾರತಮ್ಯ ಆಗಿಲ್ಲ. ಎಲ್ಲರನ್ನೂ ಸಮಾನವಾಗಿ ತೆಗೆದುಕೊಂಡು ಹೋಗಲಾಗುತ್ತಿದೆ. ಒಬ್ಬೊಬ್ಬರು ಒಬ್ಬೊಬ್ಬರ ಪರ ಮಾತ ನಾಡುತ್ತಿದ್ದಾರೆ. ಒಬ್ಬರು ನನ್ನ ಪರ ಮಾತನಾಡುತ್ತಾರೆ, ಇನ್ನೊಬ್ಬರು ಮತ್ತೊಬ್ಬರ ಪರ ಮಾತನಾಡುತ್ತಾರೆ ಅದನ್ನೆಲ್ಲ ಪರಿಗಣಿಸಬೇಕಾಗಿಲ್ಲ ಎಂದು ಸಚಿವ ಜಮೀರ್ ತಿಳಿಸಿದರು.

ಡಿಕೆಶಿಗೆ ಜಮೀರ್ ಪರೋಕ್ಷ ಗುದ್ದು: ಸದ್ಯದ ಪರಸ್ಥಿತಿಯಲ್ಲಿ ಎಲ್ಲರ ಅಭಿಪ್ರಾಯ ನಜೀರ್ ಅಹಮದ್ ಪಕ್ಷದಲ್ಲಿ ಹಿರಿಯರಿದ್ದಾರೆ. ಅವರು ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದರೆ ಕ್ರಮ ಕೈಗೊಳ್ಳಲು ಅದಕ್ಕೆ ಒಂದು ಮಾನದಂಡವಿದೆ. ಕ್ರಮಕ್ಕೂ ಮೊದಲು ನೋಟಿಸ್ ಕೊಡಬೇಕಿತ್ತು, ಅವರ ಅಭಿಪ್ರಾಯ ಪಡೆದುಕೊಳ್ಳಬೇಕಾಗಿತ್ತು. ಬಳಿಕ ಕ್ರಮ ಕೈಗೊಳ್ಳಬೇಕಾಗಿತ್ತು ಎನ್ನುವ ಅಭಿಪ್ರಾಯ ಇದೆ. ಅವರು ಪಕ್ಷ ವಿರೋಧಿ ಕೆಲಸ ಮಾಡಿದ್ರೆ ತೆಗೆದಿದ್ದು ತಪ್ಪು ಎಂದು ನಾನು ಹೇಳಲ್ಲ. ಪಕ್ಷ ಏನಾದ್ರೂ ತೀರ್ಮಾನ ಮಾಡಿದ್ರೆ ಯೋಚನೆ ಮಾಡಿ ಮಾಡಿರುತ್ತೆ ಎನ್ನುವ ನಂಬಿಕೆಯಿದೆ ಎಂದು ಡಿಕೆಶಿಗೆ ಜಮೀರ್ ತಿರುಗೇಟು ನೀಡಿದರು.

ಸ್ವಪಕ್ಷದವರ ವಿರುದ್ಧವೇ ಹರಿಹಾಯ್ದ ಜಮೀರ್: ದಾವಣಗೆರೆ ಉಪ ಚುನಾವಣೆ ಬಳಿಕ ಪತ್ರಿಕಾಗೋಷ್ಠಿ ನಡೆಸಿದ್ದ ಕೆಲವು ಮುಸ್ಲಿಂ ಶಾಸಕರ ವಿರುದ್ಧವೂ ಜಮೀರ್ ಹರಿಹಾಯ್ದಿದ್ದಾರೆ. ಪತ್ರಿಕಾಗೋಷ್ಠಿ ನಡೆಸಿದವರ ಬಳಿ ಯಾರದ್ದಾದರೂ ದಾಖಲೆ ಇದ್ದರೆ ಕೊಡಲಿ. ಯಾರು ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆ ಎನ್ನುವುದನ್ನು ಬಹಿರಂಗಪಡಿಸಲಿ. ನನ್ನ ಹೆಸರು ಹೇಳಿದ್ರೆ ನಾನು ಉತ್ತರ ಕೊಡುತ್ತಿದ್ದೆ ಎಂದು ತಿರುಗೇಟು ನೀಡಿದರು.

ಮುಸ್ಲಿಂ ಮುಖಂಡರ ಸಸ್ಪೆಂಡ್ ರದ್ದು ಸಾಧ್ಯತೆ: ಸತೀಶ್

◆ **ಮೈಸೂರು:** ದಾವಣಗೆರೆ ಉಪಚುನಾವಣೆ ಫಲಿತಾಂಶ ಹೊರಬಂದ ಬಳಿಕ, ಅಲ್ಲಿನ ಮುಸ್ಲಿಂ ಮುಖಂಡರ ಅಮಾನತು ಆದೇಶವನ್ನು ಪಕ್ಷದ ವರಿಷ್ಠರು ಹಿಂತೆಗೆದುಕೊಳ್ಳಬಹುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕು ಕ್ರೀಡಾಂಗಣದ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆ ಉಪಚುನಾವಣೆಯಲ್ಲಿ ಅಬ್ದುಲ್ ಜಬ್ಬಾರ್ ಸೇರಿದಂತೆ ಕೇವಲ ಅಲ್ಪಸಂಖ್ಯಾತ ನಾಯಕರ ಮೇಲಿನ ಕ್ರಮವು ಮುಸ್ಲಿಂ ಮತಗಳ ಮೇಲೆ ಖಂಡಿತ ಪರಿಣಾಮ ಬೀರಲಿದೆ. ಈ ಕಾರಣಕ್ಕೆ ನಾವೆಲ್ಲ ಮಧ್ಯಸ್ಥಿಕೆ ವಹಿಸಿದ್ದೇವೆ. ಸಸ್ಪೆಂಡ್ ಆಗಿದ್ದವರು ಪಕ್ಷಕ್ಕೆ ವಾಪಸ್ ಬಂದಿದ್ದಾರೆ. ಈ ಹಿಂದೆಯೂ ಹೀಗೆ ಸಸ್ಪೆಂಡ್ ಆಗಿದ್ದವರು ಪಕ್ಷಕ್ಕೆ ವಾಪಸ್ ಆಗಿದ್ದಾರೆ. ಜಬ್ಬಾರ್ ಕೂಡ ಮರಳಬಹುದು. ಸದ್ಯ ಅವರನ್ನು ಹೊರತುಪಡಿಸಿ ಉಳಿದ ಯಾರ ಮೇಲೂ ಕ್ರಮ ಕೈಗೊಂಡಿಲ್ಲ ಎಂದರು.

ಮೋದಿ ಟೆರರಿಸ್ಟ್ ಖರ್ಗೆ ವ್ಯಗ್ರೋಕ್ತಿ

ಪುಟ ೧➡ 'ಅವರು ಎಡಿಎಂಕೆ ಮೋದಿ ಜತೆ ಹೇಗೆ ತಾನೆ ಕೈಜೋಡಿಸುತ್ತಾರೆ? ಅವರು ಒಬ್ಬ ಭಯೋತ್ಪಾದಕ. ಅವರು ಸಮಾನತೆಯಲ್ಲಿ ನಂಬಿಕೆ ಹೊಂದಿಲ್ಲ. ಅವರು ಪ್ರಜಾತಂತ್ರವನ್ನು ದುರ್ಬಲಗೊಳಿಸುತ್ತಿದ್ದಾರೆ. ಅವರು ಅಣ್ಣಾದುರೈ, ಕಾಮರಾಜ್, ಪೆರಿಯಾರ್, ಕಲೈಗ್ನಾರ್, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತತ್ತ್ವಗಳನ್ನು ದುರ್ಬಲಗೊಳಿಸುತ್ತಿದ್ದಾರೆ...' ಎಂದೆಲ್ಲ ಆರೋಪಿಸಿದ್ದರು.

ಪ್ರಧಾನಿಯವರು 'ಬೆದರಿಕೆ'ಗಳನ್ನು ಒಡ್ಡುತ್ತಿರುತ್ತಾರೆ. ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡುತ್ತಿ ದ್ದಾರೆ... ನಾನು ಈ ಅರ್ಥದಲ್ಲಿ ಹೇಳಿದ್ದು... ಅವರು ಜನರನ್ನು, ರಾಜಕೀಯ ಪಕ್ಷಗಳನ್ನು ಹೆದರಿಸುತ್ತಾರೆ ಎಂದು ಖರ್ಗೆ ಸಮಜಾಯಿಷಿ ನೀಡಲೆತ್ನಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಅವರು, ಇದು ಕಾಂಗ್ರೆಸ್‌ನ ಇನ್ನೊಂದು ಕ್ರೂರ ಪ್ರದರ್ಶನವಾಗಿದ್ದು, 'ಖರ್ಗೆ ಸಾರ್ವಜನಿಕ ಚರ್ಚೆಯನ್ನು ಇಷ್ಟೊಂದು ಕೀಳು ಮಟ್ಟಕ್ಕೆ ಎಳೆದಿರುವುದು ಇದೇ ಮೊದಲಲ್ಲ. ಈ ಹೇಳಿಕೆಯೊಂದಿಗೆ ಅವರು ತಮ್ಮನ್ನು ತಾವು ಕುಗ್ಗಿಸಿಕೊಂಡಿಲ್ಲ. ಬದಲಿಗೆ ಕಾಂಗ್ರೆಸ್‌ನ ಒಂದು ನಿರ್ದಿಷ್ಟ ವಿಧಾನವನ್ನು ಬಹಿರಂಗಪಡಿಸಿದ್ದಾರೆ. ಅರ್ಥಪೂರ್ಣ ಚರ್ಚೆಯ ಬದಲು ಭಾರತದ ಅತ್ಯಂತ ಜನಪ್ರಿಯ ನಾಯಕನ ವಿರುದ್ಧ ನಿಂದನೆ ಮತ್ತು ದೂಷಣೆ ರಾಜಕೀಯವನ್ನು ಅವಮಾನಕ್ಕೆ ಇಳಿಸಿದಾಗ, ಅದು ಶಕ್ತಿಯನ್ನು ಪ್ರತಿಬಿಂಬಿಸುವುದಿಲ್ಲ, ಬದಲಿಗೆ ಆಳವಾದ ಹತಾಶೆ, ವಿಶ್ವಾಸಾರ್ಹ ಪರ್ಯಾಯಗಳ ಕೊರತೆಯನ್ನು ಪ್ರತಿಬಿಂಬಿಸುತ್ತದೆ' ಎಂದು ಪೋಸ್ಟ್ ಮಾಡಿದ್ದಾರೆ.

ತಮಿಳುನಾಡಿನಲ್ಲಿ ಎಡಿಎಂಕೆ- ಬಿಜೆಪಿ ಮೈತ್ರಿಕೂಟದ ಸ್ಪರ್ಧೆ ಡಿಎಂಕೆ-ಕಾಂಗ್ರೆಸ್ ಕೂಟಕ್ಕೆ ಆತಂಕ ತಂದೊಡ್ಡಿದೆ ಎಂಬ ವರದಿಗಳ ನಡುವೆಯೇ ಕಾಂಗ್ರೆಸ್ ನಾಯಕರು ಮೋದಿಯವರನ್ನು ಗುರಿ ಮಾಡಿ ದೂಷಿಸುತ್ತಿದ್ದಾರೆ. ರಾಹುಲ್ ಗಾಂಧಿ ಕೂಡ ಪ್ರಧಾನಿ ಮೋದಿ ಟ್ರಂಪ್‌ಗೆ ಹೆದರಿ ಅವರು ಹೇಳಿದಂತೆ ಕೇಳುತ್ತಿದ್ದಾರೆ. ಆರೆಸ್ಸೆಸ್ ದ್ರಾವಿಡರನ್ನು ಆಳಲು ಯತ್ನಿಸುತ್ತಿದೆ ಎಂದು ಆರೋಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಈ ನಡುವೆ ತೆಲಂಗಾಣ ಕಾಂಗ್ರೆಸ್ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಪ್ರಧಾನಿ ಮೋದಿಯವರನ್ನು ರಾಕ್ಷಸ ಮಾರೀಚನಿಗೆ ಹೋಲಿಸಿ ನಿಂದಿಸಿದ್ದಾರೆ. ರೇವಂತ್ ರೆಡ್ಡಿ ಹೇಳಿಕೆಯನ್ನು ಖಂಡಿಸಿದ ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಕಾಂಗ್ರೆಸ್‌ನೊಳಗಿನ ಒಂದು ಮೂಲ ತಿಳಿಸಿರುವಂತೆ, ವಿರೋಧ ಪಕ್ಷದ ಎಲ್ಲಾ ನಾಯಕರಿಗೂ, ಪಕ್ಷದ ಅಧ್ಯಕ್ಷರಿಗಿಂತಲೂ 'ಮೇಲಿರುವ' ಹೈಕಮಾಂಡ್‌ನಿಂದ ಮೋದಿಯನ್ನು ಗುರಿಯಾಗಿಸಲು ಸೂಚನೆ ನೀಡಲಾಗಿದೆ ಎಂದಿದ್ದಾರೆ. ಕಾಂಗ್ರೆಸ್ ಸಿಎಂ ದ್ವೇಷದ ರಾಜಕೀಯವನ್ನು ಹರಡುತ್ತಿದ್ದಾರೆ ಎಂದು ಆರೋಪಿಸಿದ ಪೂನಾವಾಲಾ, ಪ್ರಧಾನಿ ಮೋದಿ ಅವರ ಬಗ್ಗೆ ಅವಹೇಳನಕಾರಿ ಭಾಷೆ ಬಳಸಿ ರೇವಂತ್ ರೆಡ್ಡಿ ಪ್ರಧಾನಿಯ ಸಂವಿಧಾನಿಕ ಹುದ್ದೆಗೆ ಅವಮಾನ ಮಾಡಿದ್ದಾರೆ ಎಂದು ವಿಡಿಯೋ ಸಂದೇಶವೊಂದರಲ್ಲಿ ತಿಳಿಸಿದ್ದಾರೆ.

ಪ್ರಧಾನಿ ವೈಯಕ್ತಿಕ ನಿಂದನೆ ಮಾಡಿಲ್ಲ: ಖರ್ಗೆ ಸ್ಪಷ್ಟನೆ

◆ **ಕಲಬುರಗಿ:** ಪ್ರಧಾನಿ ನರೇಂದ್ರ ಮೋದಿ ಅವರನ್ನು ವೈಯಕ್ತಿಕವಾಗಿ ಭಯೋತ್ಪಾದಕ ಎಂದು ಕರೆದಿಲ್ಲ. ಆದರೆ, ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳ ಮೂಲಕ ಜನರ ಮೇಲೆ ನಡೆಸುತ್ತಿರುವ ದೌರ್ಜನ್ಯವು ಭಯೋತ್ಪಾದನೆಯ ಸಂಕೇತವಾಗಿದೆ ಎಂದಷ್ಟೇ ಹೇಳಿದ್ದೇನೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟನೆ ನೀಡಿದರು.



ನಗರದಲ್ಲಿ ಮಂಗಳವಾರ ಸಂಜೆ ಕಲಬುರಗಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದರು. ಪ್ರಸ್ತುತ ಕೇಂದ್ರ ಸರ್ಕಾರವು ವಿರೋಧ ಪಕ್ಷದ ರಾಜಕಾರಣಿಗಳನ್ನು ಮತ್ತು ಅಭ್ಯರ್ಥಿಗಳನ್ನು ಗುರಿಯಾಗಿಸಿಕೊಂಡು ಭಯಪಡಿಸುವ ತಂತ್ರ ಅನುಸರಿಸುತ್ತಿದೆ. ದೇಶದಲ್ಲಿ ಜಾರಿ ನಿರ್ದೇಶನಾಲಯ (ಇಡಿ), ಆದಾಯ ತೆರಿಗೆ ಇಲಾಖೆ (ಐಟಿ) ಹಾಗೂ ಸಿಬಿಐ ದಾಳಿಗಳ ಮೂಲಕ ತೆರಿಗೆ ಭಯೋತ್ಪಾದನೆ ನಡೆಸಲಾಗುತ್ತಿದೆ. ಇಂತಹ ಬೆದರಿಕೆಯ ವಾತಾವರಣಕ್ಕೆ ಪ್ರಧಾನಿಯವರೇ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಚುನಾವಣಾ ಸಂದರ್ಭದಲ್ಲಿ ಜನರ ಧ್ವನಿಯನ್ನು ಅಡಗಿಸಲು ಮತ್ತು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಇಂತಹ ಮಾರ್ಗಗಳನ್ನು ಬಳಸಲಾಗುತ್ತಿದೆ. ದಾಳಿಗಳ ಮೂಲಕ ಅಭ್ಯರ್ಥಿಗಳಲ್ಲಿ ಆತಂಕ ಮೂಡಿಸಿ ಚುನಾವಣೆಯಲ್ಲಿ ಗೆಲ್ಲುವ ಪ್ರಯತ್ನ ನಡೆಯುತ್ತಿದೆ. ಜನರನ್ನು ಭಯಪಡಿಸುವ ಈ ಪದ್ಧತಿಯನ್ನು ನಾನು ಟೀಕಿಸಿದ್ದೇನೆಯೇ ಹೊರತು ವೈಯಕ್ತಿಕ ನಿಂದನೆ ಮಾಡಿಲ್ಲ ಎಂದರು.

ಸಿಎಂ ಜತೆ ಚರ್ಚಿಸಿ ಅಂತಿಮ ನಿರ್ಧಾರ: ಮಧು ಬಂಗಾರಪ್ಪ

ಪುಟ ೧➡ **ವಿದ್ಯಾರ್ಥಿಗಳಿಗೆ ಭರವಸೆ:** ಈ ಬೆಳವಣಿಗೆಯಿಂದ ವಿದ್ಯಾರ್ಥಿಗಳು ಆತಂಕಗೊಳ್ಳಬಾರದು ಎಂದು ಸಚಿವ ಮಧು ಬಂಗಾರಪ್ಪ ಮನವಿ ಮಾಡಿದರು. ಯಾವುದೇ ಕಾರಣಕ್ಕೂ ಮಕ್ಕಳು ಗಾಬರಿಯಾಗಬಾರದು. ಆದೇಶ ಈಗಷ್ಟೇ ಬಂದಿದೆ. ಅದರ ಪ್ರತಿ ನಮಗೆ ಸಿಗಬೇಕು. ನಂತರ ಸಂಪೂರ್ಣ ಪರಿಶೀಲನೆ ಮಾಡಿ ಸೂಕ್ತ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಮಧು ಬಂಗಾರಪ್ಪ ಹೇಳಿದರು.

> ನ್ಯಾಯಾಲಯವು 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ತೃತೀಯ ಭಾಷೆಗಳ ಅಂಕಗಳಿಗೆ ಸಂಬಂಧಿಸಿದಂತೆ ಮೊದಲು ಇದ್ದಂತೆ ಅಂಕಗಳನ್ನು ನೀಡಲು, ಅಂಕಪಟ್ಟಿಯಲ್ಲಿ ಅಂಕಗಳನ್ನು ನಮೂದಿಸಿ ಫಲಿತಾಂಶ ಘೋಷಣೆ ಮಾಡಲು ಸರಕಾರಕ್ಕೆ ಸೂಚಿಸಿರುವ ಆದೇಶ ಸ್ವಾಗತಿಸುತ್ತೇವೆ.
> ■ **ಚಿದಾನಂದ ಪಾಟೀಲ್**, ರಾಜ್ಯ ಉಪಾಧ್ಯಕ್ಷರು, ದೇಶೀಯ ಭಾಷೆ ಹಿತರಕ್ಷಣಾ ಒಕ್ಕೂಟ

ಏ.25ರಂದು ರಾಜ್ಯಾದ್ಯಂತ ಬಿಜೆಪಿ ಆಕ್ರೋಶ ಯಾತ್ರೆ

ಪುಟ ೧➡ ಅಲ್ಲದೆ, ಬೆಂಗಳೂರು, ಹುಬ್ಬಳ್ಳಿಯಲ್ಲಿ ಬೃಹತ್ ರ‍್ಯಾಲಿ ಸಂಘಟಿಸುವ ಕುರಿತು ಚರ್ಚೆ ನಡೆಯುತ್ತಿದೆ ಎಂದರು. ಈ ಸಂಬಂಧ ಕೇಂದ್ರ ಸಚಿವರು, ಸಂಸದರು ವಿಭಾಗ ಕೇಂದ್ರಗಳಲ್ಲಿ ಪತ್ರಿಕಾಗೋಷ್ಠಿ ನಡೆಸಲಿದ್ದಾರೆ. ಮಂಗಳವಾರ (ಏ.21) ಶಿವಮೊಗ್ಗದಲ್ಲಿ ಸಂಸದ ಬಿ.ವೈ.ರಾಘವೇಂದ್ರ, ಮಂಗಳೂರಿನಲ್ಲಿ ಸಂಸದ ಬೃಜೇಶ್ ಚೌಟ ಪತ್ರಿಕಾಗೋಷ್ಠಿ ನಡೆಸಿದ್ದಾರೆ. ಬುಧವಾರ ಹಾಗೂ ಗುರುವಾರ ಸಂಸದರಾದ ಜಗದೀಶ ಶೆಟ್ಟರ್- ಬೆಳಗಾವಿ, ಬಸವರಾಜ ಬೊಮ್ಮಾಯಿ ಅವರು ಹಾವೇರಿಯಲ್ಲಿ, ಕೇಂದ್ರ ಸಚಿವ ಸೋಮಣ್ಣ ಅವರು ಏ.23ರಂದು ಮೈಸೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಕಾಂಗ್ರೆಸ್, ಅವರ ಮಿತ್ರಪಕ್ಷಗಳ ಮಹಿಳಾ ವಿರೋಧಿ ನೀತಿಯ ಕುರಿತು ತಿಳಿಸಲಿದ್ದಾರೆ ಎಂದು ವಿವರ ನೀಡಿದರು. ಕಾಂಗ್ರೆಸ್ ಪಕ್ಷವು ಇತಿಹಾಸದ ಉದ್ದಕ್ಕೂ ತನ್ನ ಮಹಿಳಾ ವಿರೋಧಿ ಧೋರಣೆ ಪ್ರದರ್ಶನ ಮಾಡಿದ ಕುರಿತು ತಿಳಿಸಲಿದ್ದಾರೆ ಎಂದರು. ಇಂದಿರಾ ಗಾಂಧಿ, ಸೋನಿಯಾಗಾಂಧಿ, ಪ್ರಿಯಾಂಕಾ ಗಾಂಧಿ ಅವರು ಮಾತ್ರ ಮಹಿಳೆಯರು ಎಂದು ಕಾಂಗ್ರೆಸ್ ಭಾವಿಸಿದಂತಿದೆ.

4 ವಿವಾಹಗಳಿಗೆ ಅಂತ್ಯ ಖಚಿತ: ಅಮಿತ್ ಶಾ

ಪುಟ ೧➡ ನಿರ್ದಿಷ್ಟ ಸಮುದಾಯದಲ್ಲಿ ಚಾಲ್ತಿಯಲ್ಲಿರುವ ನಾಲ್ಕು ಮದುವೆಗಳ ಪದ್ಧತಿಗೆ ಅಂತ್ಯ ಹಾಡಲಿದೆ ಎಂದು ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ. ಸಮಾನತೆಗಾಗಿ ಏನಾಸಂ ಅಗತ್ಯವೆಂದು ಪ್ರತಿಪಾದಿಸಿದ ಸಚಿವ ಶಾ, ಪ್ರಸಕ್ತ ಊರ್ಜಿತದಲ್ಲಿರೋ ಧರ್ಮಾಧಾರಿತ ವೈಯಕ್ತಿಕ ಕಾನೂನುಗಳ ಔಚಿತ್ಯವನ್ನು ಪ್ರಶ್ನಿಸಿದರು. ಪ್ರಸಕ್ತ ಸಮಾಜದಲ್ಲಿ ಕೆಲವರಿಗೆ ಹಲವು ಬಾರಿ ಮದುವೆಯಾಗಲು ಅವಕಾಶವಿದೆ ಮತ್ತು ಇತರರಿಗೆ ಒಂದೇ ವಿವಾಹವಾಗುವಂತೆ ಕಾನೂನು ನಿರ್ಬಂಧಿಸುತ್ತದೆ. ಇದ್ಯಾವ ನ್ಯಾಯ ಎಂದು ಪ್ರಶ್ನಿಸಿದ ಸಚಿವ ಶಾ, ಪ.ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಯುಸಿಸಿ ಜಾರಿ ಮುಖೇನ 4 ಬಾರಿ ವಿವಾಹವಾಗುವುದನ್ನು ನಿಷೇಧಿಸಲಿದೆ ಎಂದರು. ಈ ವೇಳೆ ಅಲ್ಲಿದ್ದ ಜನಸ್ತೋಮ ಚಪ್ಪಾಳೆ ಮುಖೇನ ಸಚಿವರ ಭರವಸೆಯನ್ನು ಸ್ವಾಗತಿಸಿತು. ಗುಜರಾತ್ ಸರಕಾರ ಏನಾಸಂ ಮಸೂದೆ ಮಂಜೂರು ಮಾಡಿರುವುದು ಮೈಲಿಗಲ್ಲಿನ ಹೆಜ್ಜೆ ಎಂದು ಸಚಿವರು ಹೇಳಿದರು. ಕುಲ್ಟಿಯಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಸಚಿವ ಶಾ ಮಾತನಾಡಿದರು.

ಗೂರ್ಖಾ ಸಮಸ್ಯೆಗೆ 6 ತಿಂಗಳಲ್ಲಿ ಪರಿಹಾರ: ಗುಡ್ಡಗಾಡು ಪ್ರದೇಶ ಕುರ್ಸೆಯೊಂಗ್‌ನಲ್ಲಿ ರ‍್ಯಾಲಿ ಉದ್ದೇಶಿಸಿ, ಬಿಜೆಪಿ ಸರಕಾರ ರಚನೆಯಾದಲ್ಲಿ ದೀರ್ಘಕಾಲೀನ ಗೂರ್ಖಾ ಸಮಸ್ಯೆಯನ್ನು ಆರು ತಿಂಗಳೊಳಗೆ ಬಗೆಹರಿಸುವುದಾಗಿ ಸಚಿವ ಶಾ ಭರವಸೆ ನೀಡಿದರು. ಗೂರ್ಖಾ ಸಮುದಾಯದ ಆಶೋತ್ತರಗಳಿಗೆ ಪೂರಕವಾಗಿ ಶಾಶ್ವತ ರಾಜಕೀಯ ಪರಿಹಾರ ಕಂಡುಕೊಳ್ಳಲು ತನ್ನ ಪಕ್ಷ ಶ್ರಮಿಸಲಿದೆ ಎಂದು ಭರವಸೆ ನೀಡಿದರು.

ಹ್ಯಾರಿಸ್ ಮನೆಯಲ್ಲಿದ್ದ ₹37 ಲಕ್ಷ ನಗದು ವಶ

◆ **ಬೆಂಗಳೂರು:** ಬಿಟ್‌ಕಾಯಿನ್ ಹಗರಣ ಸಂಬಂಧ ಶಾಸಕ ಎನ್.ಎ. ಹ್ಯಾರಿಸ್ ಹಾಗೂ ಮೊಹಮ್ಮದ್ ನಲಪಾಡ್, ಹ್ಯಾಕರ್ ಶ್ರೀಕಿ ಮನೆ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ದಾಳಿ ಮಂಗಳವಾರವೂ ಮುಂದುವರಿದಿತ್ತು. ಈ ವೇಳೆ ಹ್ಯಾರಿಸ್ ನಿವಾಸದಲ್ಲಿ ಸುಮಾರು 37 ಲಕ್ಷ ರೂ. ನಗದನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಇಡಿ ಅಧಿಕಾರಿಗಳು 24 ಗಂಟೆಗೂ ಹೆಚ್ಚು ಕಾಲ ಶಾಸಕ ಹ್ಯಾರಿಸ್, ಪುತ್ರರಾದ ಮೊಹಮ್ಮದ್ ನಲಪಾಡ್ ಮತ್ತು ಉಮರ್ ಹ್ಯಾರಿಸ್ ಮನೆ ಮತ್ತು ಕೇಂದ್ರ ಮಾಜಿ ಸಚಿವ ಕೆ.ರೆಹಮಾನ್ ಖಾನ್ ಮೊಮ್ಮಗ ಹಾಕೀಬ್ ಖಾನ್ ಮನೆ ಮೇಲೆ ಶೋಧ ನಡೆಸಿದ್ದಾರೆ. ಹ್ಯಾಕರ್ ಶ್ರೀಕಿ ಮನೆಯಲ್ಲಿ 38 ಗಂಟೆಗಳ ಕಾಲ ಶೋಧ ನಡೆಸಲಾಗಿದೆ. ಆದರೆ, ಇ.ಡಿ. ಅಧಿಕಾರಿಗಳಿಗೆ ಶ್ರೀಕಿ ಸಹಕಾರ ನೀಡಿಲ್ಲ ಎಂದು ತಿಳಿದುಬಂದಿದೆ. ಆತನ ಮನೆಯಲ್ಲಿ ಎರಡು ಲ್ಯಾಪ್‌ಟಾಪ್ ಸೇರಿದಂತೆ ಪ್ರಮುಖ ದಾಖಲೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಈ ಮಹತ್ವದ ಶೋಧದ ಸಂದರ್ಭದಲ್ಲಿ ಅಧಿಕಾರಿಗಳು ಹ್ಯಾರಿಸ್ ಅವರ ನಿವಾಸದಿಂದ ಸುಮಾರು 37 ಲಕ್ಷ ರೂ. ನಗದು ಸೇರಿದಂತೆ ವಿವಿಧ ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದ ದಾಖಲೆಗಳು, ಆಸ್ತಿ ಪತ್ರಗಳು ಮತ್ತು ವಿವಿಧ ಕಂಪನಿಗಳಲ್ಲಿನ ಹೂಡಿಕೆಗಳ ವಿವರಗಳನ್ನು ಒಳಗೊಂಡ ಕಡತಗಳನ್ನು ಅಧಿಕಾರಿಗಳು ತಮ್ಮ ವಶಕ್ಕೆ ಪಡೆದಿದ್ದಾರೆ.

ಅಲ್ಲದೆ, ಉದ್ಯಮಿ ರಾಯ್ ಎಂಬುವರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಕೆಲವು ವಿವರಗಳನ್ನೂ ತನಿಖಾ ತಂಡ ಕಲೆಹಾಕಿರುವುದು ಪ್ರಕರಣಕ್ಕೆ ಹೊಸ ತಿರುವು ನೀಡಿದೆ. ಈ ಇಡೀ ದಾಳಿಯ ಕೇಂದ್ರಬಿಂದು ಬಿಟ್ ಕಾಯಿನ್ ಹಗರಣದ ಕಿಂಗ್‌ಪಿನ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣ ಜೈಲಿನಿಂದ ಹೊರಬಂದ ನಂತರವೂ ಅತ್ಯಂತ ಐಷಾರಾಮಿ ಜೀವನ ನಡೆಸುತ್ತಿದ್ದು, ಆತನಿಗೆ ಹಣಕಾಸಿನ ನೆರವು ನೀಡುತ್ತಿರುವುದು ಯಾರು ಎಂಬ ನಿಟ್ಟಿನಲ್ಲಿ ಇಡಿ ತನಿಖೆ ಆರಂಭಿಸಿತ್ತು. ಶ್ರೀಕಿ ಮತ್ತು ನಲಪಾಡ್ ನಡುವೆ ಸುಮಾರು 4.65 ಕೋಟಿ ರೂ.ಗಳಿಗೂ ಅಧಿಕ ಹಣಕಾಸು ವ್ಯವಹಾರ ನಡೆದಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಈ ಹಿಂದೆ ಲಾವೆಲ್ಲೆ ರಸ್ತೆಯ ಶೋರೂಂನಲ್ಲಿ 57 ಲಕ್ಷ ರೂ. ನೀಡಿ ಪೋರ್ಷೆ ಕಾರು ಖರೀದಿಸಿದ ಪ್ರಕರಣ ಕೂಡ ಈಗ ತನಿಖೆಯ ವ್ಯಾಪ್ತಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ರಾಜಕೀಯ ದುರುದ್ದೇಶ: ಇಡಿ ದಾಳಿಯ ಕುರಿತು ಅಸಮಾಧಾನ ವ್ಯಕ್ತಪಡಿಸಿರುವ ಮೊಹಮ್ಮದ್ ನಲಪಾಡ್, ಇದು ರಾಜಕೀಯಪ್ರೇರಿತ ಸಂಚು. ತಮ್ಮ ತಂದೆ ಎನ್.ಎ. ಹ್ಯಾರಿಸ್ ಅವರಿಗೆ ಸಚಿವ ಸ್ಥಾನ ಸಿಗದಂತೆ ತಡೆಯಲು ಬಿಜೆಪಿಯವರು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಯೂತ್ ಕಾಂಗ್ರೆಸ್ ಅಧ್ಯಕ್ಷನಾಗಿ ತಾನು ಮಾಡುತ್ತಿರುವ ಕೆಲಸಗಳನ್ನು ಸಹಿಸಲಾರದೆ ಇಂತಹ ಕೇಸುಗಳ ಮೂಲಕ ತಮ್ಮನ್ನು ಕುಗ್ಗಿಸುವ ಪ್ರಯತ್ನ ನಡೆಯುತ್ತಿದೆ. ನನ್ನ ಮನೆಯಲ್ಲಿ ಯಾವುದೇ ನಗದು ಸಿಕ್ಕಿಲ್ಲ, ಅಧಿಕಾರಿಗಳು ಕೇವಲ ಎರಡು ಮೊಬೈಲ್ ಫೋನ್‌ಗಳನ್ನು ಮಾತ್ರ ತೆಗೆದುಕೊಂಡು ಹೋಗಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಬಿಟ್‌ಕಾಯಿನ್ ಹಗರಣ ರಚನೆಯಾಗಿತ್ತು! ಗೃಹ ಸಚಿವ ಡಾ. ಜಿ.ಪರಮೇಶ್ವರ ಇಡಿ ದಾಳಿ ಬಗ್ಗೆ ಪ್ರತಿಕ್ರಿಯೆ ನೀಡಿ, ಬಿಟ್‌ಕಾಯಿನ್ ಹಗರಣ ಕುರಿತಂತೆ ರಾಜ್ಯದಲ್ಲಿ ಎಸ್‌ಐಟಿ ರಚನೆ ಮಾಡಲಾಗಿತ್ತು. ತನಿಖೆ ಕೊನೆ ಹಂತದಲ್ಲಿದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಾಪ್ತಿ ಹೊಂದಿದೆ. ಅನೇಕ ವಿಚಾರಗಳಲ್ಲಿ ಮಾಹಿತಿಯನ್ನು ಕಲೆ ಹಾಕಿ ಅಂತಿಮ ವರದಿ ಕೊಡಬೇಕು. ಇದು ಅಂತಿಮ ಹಂತದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪರಿಹಾರ ತಾರತಮ್ಯಕ್ಕೆ ಜೆಡಿಎಸ್ ಶಾಸಕ ಅತೃಪ್ತಿ

ಪುಟ ೧➡ ನಮ್ಮ ಗಮನಕ್ಕೆ ಬಂದರೆ ಪರಿಹಾರ ನೀಡುತ್ತೇವೆ. ಶಾಸಕರು ಕೇಳಿದರೂ ಖಂಡಿತ ಕೊಡುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನಲ್ಲಿ ಸಂಭವಿಸಿದ್ದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಮೃತರಾದವರ ಕುಟುಂಬಗಳಿಗೆ ಮುಖ್ಯಮಂತ್ರಿಗಳು ಪರಿಹಾರ ಘೋಷಣೆ ಮಾಡಿಲ್ಲ, ಆದರೆ ಏ.19 ರಂದು ಮೈಸೂರಿನ ಕೆ.ಆರ್. ನಗರದಲ್ಲಿ ಈಜಾಡಲು ಹೋಗಿ ಮೃತಪಟ್ಟ 6 ಜನರ ಕುಟುಂಬಗಳಿಗೆ ಸಾಂತ್ವನ ಹೇಳಿ, ಕೂಡಲೇ 5 ಲಕ್ಷ ಪರಿಹಾರಧನ ಘೋಷಣೆ ಮಾಡಿದ್ದೀರಿ.

ನೀವು ಕರ್ನಾಟಕದ ಮುಖ್ಯಮಂತ್ರಿಗಳೋ ಅಥವಾ ಮೈಸೂರು ಜಿಲ್ಲೆಗೆ ಮಾತ್ರ ಮುಖ್ಯಮಂತ್ರಿಗಳೋ ಎನ್ನುವ ಅನುಮಾನವನ್ನು ಈ ನಮ್ಮ ಕಲ್ಯಾಣ ಕರ್ನಾಟಕದ ಜನ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ ಎಂದು ಶಾಸಕ ಶರಣಗೌಡ ಕಂದಕೂರ್ ಸಿಎಂಗೆ ಪತ್ರ ಬರೆದಿದ್ದರು.

ಮಾ.29ರಂದು ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ನಗನೂರು ಗ್ರಾಮದ ರೈತನ ಕೃಷಿ ಹೊಂಡದಲ್ಲಿ ತಿಳಿಯದೇ ಬಿಸಿಲಿನ ತಾಪದಿಂದ ಈಜಾಡಲು ಹೋಗಿ ಒಂದೇ ಕುಟುಂಬದ ನಾಲ್ವರು ದಲಿತ ಮಕ್ಕಳು (ಪರಿಶಿಷ್ಟ ಪಂಗಡ) ಮೃತಪಟ್ಟಿದ್ದು, ಏ.17ರಂದು ಅದೇ ಸುರಪೂರ ತಾಲೂಕಿನ ಗೋಪಾಲಸ್ವಾಮಿ ದೇವಸ್ಥಾನದ ದರ್ಶನಕ್ಕೆ ಸಿರವಾರ ಗ್ರಾಮದ ಒಂದೇ ಕುಟುಂಬದ 9 ಜನರು ರಸ್ತೆ ಅಪಘಾತದಲ್ಲಿ ಸಜೀವ ದಹನಗೊಂಡರು. ಈ ಘಟನೆಗಳು ಸಂಭವಿಸಿ ಹಲವು ದಿನ ಕಳೆದರೂ ಮೃತ ಕುಟುಂಬಗಳಿಗೆ ಪರಿಹಾರಧನ ಘೋಷಣೆ ಮಾಡುವುದಾಗಲಿ ಅಥವಾ ಕನಿಷ್ಠ ಸಾಂತ್ವನ ತಿಳಿಸುವುದಾಗಲಿ ಇಲ್ಲಿಯವರೆಗೆ ಆಗಿಲ್ಲ ಎಂದು ಕಂದಕೂರ್ ಪತ್ರ ಬರೆಯುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದರು.

ಸಾಮಾಜಿಕ ಜಾಲತಾಣದಲ್ಲಿಯೂ ಆಕ್ರೋಶ: ಪರಿಹಾರ ಘೋಷಣೆ ವಿಚಾರವಾಗಿ ಸಾಮಾಜಿಕ ಜಾಲತಾಣದಲ್ಲಿಯೂ ಆಕ್ರೋಶ ವ್ಯಕ್ತವಾಗಿದೆ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಸತ್ತರೆ ಪರಿಹಾರ ಸಿಗುವುದಿಲ್ಲ. ಮೈಸೂರು ಭಾಗದವರಿಗೆ ಮಾತ್ರ ಪರಿಹಾರ ಸಿಗುತ್ತದೆ. ಈ ಭಾಗದವರ ಜೀವ ಜೀವವಲ್ಲ ಎಂದು ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದ.ಕ.ದಲ್ಲಿ ಕಾನೂನು ಸುವ್ಯವಸ್ಥೆ ಉತ್ತಮ: ಡಿಜಿಪಿ ಸಲೀಂ ಶ್ಲಾಘನೆ

• **ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಿಂದ ಕಾನೂನು ಮತ್ತು ಸುವ್ಯವಸ್ಥೆ ಅತ್ಯಂತ ಉತ್ತಮವಾಗಿದೆ. ಇದೇ ರೀತಿ ಶಾಂತಿಯ ವಾತಾವರಣ ಕಾಪಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ತಿಳಿಸಿದ್ದಾರೆ.



ಮಂಗಳೂರಿನಲ್ಲಿ ಮಂಗಳವಾರ ನಡೆದ ಪಶ್ಚಿಮ ವಲಯ ಪೊಲೀಸ್ ಇಲಾಖೆ ಅಧಿಕಾರಿಗಳ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರು ವಿಶೇಷ ಒತ್ತು ನೀಡುತ್ತಿದ್ದಾರೆ. ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಇರಿಸಿಕೊಳ್ಳುವಂತೆ ಪೊಲೀಸರಿಗೆ ನಿರ್ದೇಶನ ನೀಡಲಾಗಿದೆ. ಎಂದರು.

ಉತ್ತರ ಕರ್ನಾಟಕ ಭಾಗದ ಹಲವು ಮಂದಿ ಪೊಲೀಸ್ ಸಿಬ್ಬಂದಿಗಳು ಹಾಗೂ ಅವರ ಕುಟುಂಬದವರು ವರ್ಗಾವಣೆ ಕೋರಿ ಮನವಿ ಸಲ್ಲಿಸಿದ್ದಾರೆ. ಈ ಬಗ್ಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಗಿದೆ. ಹಂತ ಹಂತವಾಗಿ ಅವರ ವರ್ಗಾವಣೆಗೆ ಅಗತ್ಯ ಕ್ರಮ ಕೈ ಗೊಳ್ಳಲಾಗುವುದು ಎಂದು ಡಿಜಿಪಿ ತಿಳಿಸಿದರು.

ದೂರಿಗಾಗಿ ಕಾದರು: ಮಂಗಳೂರಿನಲ್ಲಿ ಪಶ್ಚಿಮ ವಲಯ ಪೊಲೀಸ್ ಇಲಾಖೆ ಅಧಿಕಾರಿಗಳ ಸಭೆಗೆ ಮಂಗಳವಾರ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ಆಗಮಿಸಿದ ವೇಳೆ ಕಳೆದ ಮೂರು ತಿಂಗಳಿಂದ ವರ್ಗಾವಣೆ ಆದೇಶ ಪತ್ರ ಬಂದರೂ ನಗರ ಪೊಲೀಸ್ ಕಮಿಷನರ್ ಕರ್ತವ್ಯದಿಂದ ಬಿಡುಗಡೆಗೊಳಿಸಿಲ್ಲ ಎಂದು ಆರೋಪಿಸಿ ವರ್ಗಾವಣೆ ಆದೇಶ ಪಡೆದ ಪೊಲೀಸರ ಕುಟುಂಬಸ್ಥರು ಅಸಮಾಧಾನ ವ್ಯಕ್ತಪಡಿಸಿ ಅಹವಾಲು ಸಲ್ಲಿಸಿದ ವಿದ್ಯಮಾನ ನಡೆಯಿತು. ವರ್ಗಾವಣೆ ಆದೇಶ ಬಂದು ಮೂರು ತಿಂಗಳು ಕಳೆದಿದೆ. ಇನ್ನೂ ನಿಯುಕ್ತಿ ಮಾಡಿಲ್ಲ. ಒಮ್ಮೆ ವರ್ಗಾವಣೆ ಆದೇಶ ಕಾರ್ಯಗತಗೊಳಿಸಿ ಎಂದು ವರ್ಗಾವಣೆಗೊಂಡ ಪೊಲೀಸ್ ಕುಟುಂಬಸ್ಥರು ಡಿಜಿಪಿ ಬಳಿ ಆಗ್ರಹಿಸಿದರು.

ಪದವಿ ಪ್ರದಾನ



ವಿಜಯಪುರದಲ್ಲಿ ಮಂಗಳವಾರ ನಡೆದ ಅಕ್ಕಮಹಾದೇವಿ ಮಹಿಳಾ ವಿವಿ 17ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

ಇಂದಿನಿಂದ ಸಿಇಟಿ ಪರೀಕ್ಷೆ

• **ಬೆಂಗಳೂರು:** ಇಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಏ.22ರಿಂದ 24ರವರೆಗೆ ಸುಮಾರು 745 ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ನಡೆಯಲಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ, ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ ಏ.22ರಂದು ಕನ್ನಡ ಭಾಷಾ ಪರೀಕ್ಷೆಯು ನಡೆಯಲಿದೆ. ಏ.23ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ಹಾಗೂ ಏ.24ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆಗಳು ನಡೆಯಲಿದೆ ಎಂದು ತಿಳಿಸಿದ್ದಾರೆ.

ಎಲ್ಲ 745 ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಿದ್ದು, ಕಟ್ಟೆಚ್ಚರವಹಿಸಲಾಗಿದೆ. ಬೆಂಗಳೂರಿನ 163 ಕೇಂದ್ರಗಳಲ್ಲಿ ಅತಿ ಹೆಚ್ಚು ಅಂದರೆ ಒಟ್ಟು 77,604 ಅಭ್ಯರ್ಥಿಗಳು ಪರೀಕ್ಷೆ ಬರೆಯು ತ್ತಿದ್ದು, ಇದರ ಕಮಾಂಡ್ ಸೆಂಟರ್ ಕೆಇಎ ಕಚೇರಿಯಲ್ಲಿ ಸ್ಥಾಪಿಸಲಾಗಿದೆ. ಒಟ್ಟು 970 ವಿಶೇಷ ಚೇತನ ಮಕ್ಕಳು ಸಿಇಟಿ ಬರೆ ಯುತ್ತಿದ್ದು, ಅವರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಶ್ರವಣ ಸಾಧನ ಬಳಸಿಕೊಂಡು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಬೇಕಾಗಿರುವ ಕಾರಣ ಅಂತಹವರು ಎರಡು ಗಂಟೆ ಮುಂಚಿತವಾಗಿ ಕೇಂದ್ರಕ್ಕೆ ಬರಬೇಕೆಂದು ಸಲಹೆ ನೀಡಿದ್ದಾರೆ.

ಎರಡು ಗಂಟೆ ಮುಂಚೆ ಬನ್ನಿ: ಅಭ್ಯರ್ಥಿಗಳನ್ನು ತೀವ್ರ ತಪಾಸಣೆ ಮಾಡಿಯೇ ಪರೀಕ್ಷಾ ಕೇಂದ್ರದೊಳಗೆ ಬಿಡುವ ಕಾರಣಕ್ಕೆ ಕನಿಷ್ಠ ಎರಡು ಗಂಟೆ ಮುಂಚಿತ ವಾಗಿ ಅವರು ಪರೀಕ್ಷಾ ಕೇಂದ್ರಕ್ಕೆ ಹೋಗಬೇಕು. ಅಭ್ಯರ್ಥಿಯ ಮುಖ ಚಹರೆ ಮತ್ತು ಕ್ಯೂಆರ್ ಕೋಡ್ ವ್ಯವಸ್ಥೆ ಮೂಲಕ ಅಭ್ಯರ್ಥಿಯ ನೈಜತೆ ಪರಿಶೀಲನೆ ಮಾಡಲಾಗುತ್ತದೆ. ಯಾರದ್ದೊ ಪರೀಕ್ಷೆಯನ್ನು ಇನ್ಯಾರೊ ಬರೆಯುವು ದನ್ನು ತಡೆಯುವ ಉದ್ದೇಶದಿಂದ ಈ ವ್ಯವಸ್ಥೆ ಜಾರಿ ಮಾಡಿದ್ದು, ಸೀಟು ಹಂಚಿಕೆಯಾಗಿ ಕಾಲೇಜುಗಳಿಗೆ ಪ್ರವೇಶ ಆಗುವ ಸಂದರ್ಭದಲ್ಲಿ ಕೂಡ ಅಭ್ಯರ್ಥಿಯ ಭಾವಚಿತ್ರವನ್ನು ಹೋಲಿಕೆ ಮಾಡಿಯೇ ಪ್ರವೇಶ ನೀಡುವ ವ್ಯವಸ್ಥೆ ಮಾಡಿದ್ದು, ನಕಲಿ ಅಭ್ಯರ್ಥಿಗಳಿಗೆ ಸಂಪೂರ್ಣ ಕಡಿವಾಣ ಹಾಕಲಾಗಿದೆ ಎಂದು ತಿಳಿಸಿದ್ದಾರೆ.

ಕಿರುಸುದ್ದಿ

ಬಿಜೆಪಿ ಮುಖಂಡರ ಹೇಳಿಕೆಗೆ ಕಿಮ್ಮನೆ ಖಂಡನೆ

• **ಶಿವಮೊಗ್ಗ:** ಬಿಜೆಪಿ ಮುಖಂಡರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿರುವುದು ಖಂಡನೀಯ ಎಂದು ಮಾಜಿ ಕಿಮ್ಮನೆ ರತ್ನಾಕರ ಆಕ್ರೋಶ ವ್ಯಕ್ತಪಡಿಸಿದರು. ಮಂಗಳ ವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆ ಅವರು ಆರ್‌ಎಸ್‌ಎಸ್ ವಿಷಜಂತುಗಳು, ಅವರನ್ನು ಕೊಲ್ಲಬೇಕು ಎಂದಿರುವುದು ಸೈದ್ಧಾಂತಿಕ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತ್ರ. ಹಾಗಂತ ಮನುಷ್ಯರನ್ನು ಕೊಲ್ಲು ಎಂದು ಅರ್ಥವಲ್ಲ. ಖರ್ಗೆಯವರ ಹೇಳಿಕೆಯನ್ನು ನಾನು ಕೂಡ ಸಮರ್ಥಿಸುತ್ತೇನೆ. ವಿಷಜಂತು ಎಂದು ಕರೆದಿರುವುದರಲ್ಲಿ ತಪ್ಪೇನು ಇಲ್ಲ ಎಂದು ಸಮರ್ಥಿಸಿಕೊಂಡರು. ಹಿಂದೂಗಳಲ್ಲಿ ದಲಿತರು ಹಿಂದುಗಳಲ್ಲವೇ? ಅವರನ್ನು ಎಷ್ಟು ಶತಮಾನಗಳ ಕಾಲ ಇನ್ನೂ ಅಸ್ಪೃಶ್ಯವಾಗಿ ನೋಡುತ್ತೀರಾ? ವರ್ಣಬೇಧವನ್ನು ಇನ್ನೆಷ್ಟು ಶತಮಾನಗಳ ಕಾಲ ಮುಂದುವರಿಸುತ್ತೀರಾ? ಹಾಗಾಗಿ ಖರ್ಗೆಯವರ ಹೇಳಿಕೆ ಸರಿಯಾಗಿಯೇ ಇದೆ. ಅದನ್ನು ವಾಸ್ತವಕ್ಕೆ ಪದಶಃವಾಗಿ ಕಲ್ಪಿಸಿಕೊಳ್ಳುವ ಅವಶ್ಯಕತೆ ಇಲ್ಲ. ಕೊಲ್ಲುವುದು ಎಂದರೆ ಸಿದ್ಧಾಂತಗಳನ್ನೇ ಹೊರತು, ಮನುಷ್ಯರನ್ನಲ್ಲ ಎಂದರು.

ಹಿಂದಿ ಅಂಕ: ಸರ್ಕಾರಕ್ಕೆ ಮುಖಭಂಗ: ರವಿಕುಮಾರ್

• **ಬೆಂಗಳೂರು:** ಹಿಂದಿ ಭಾಷೆಗೆ ಅಂಕ ನೀಡಬೇಕೆಂದು ರಾಜ್ಯ ಹೈಕೋರ್ಟ್ ತೀರ್ಪು ಕೊಟ್ಟಿದ್ದು, ಇದರಿಂದ ರಾಜ್ಯ ಸರ್ಕಾರ, ಶಿಕ್ಷಣ ಸಚಿವರಿಗೆ ಹಾಗೂ ಶಿಕ್ಷಣ ಇಲಾಖೆಗೆ ದೊಡ್ಡ ಮುಖಭಂಗ ಆಗಿದೆ ಎಂದು ವಿಧಾನಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದ್ದಾರೆ.



ಮಂಗಳವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ವಿದ್ಯಾರ್ಥಿಗಳು ಗಂಭೀರವಾಗಿ ಓದಿರುತ್ತಾರೆ, ಅಧ್ಯಯನ ಮಾಡಿರುತ್ತಾರೆ. ಅವರಿಗೆ ಅಪಮಾನ ಮಾಡಬಾರದು. ಆದ್ದರಿಂದ ಗ್ರೇಡಿಂಗ್ ಬದಲು ಅಂಕ ನೀಡಬೇಕೆಂದು ಕೋರ್ಟ್ ತಿಳಿಸಿದೆ. ಸರ್ಕಾರದ ನಿರ್ಧಾರವನ್ನು ಕಡೆಗಣಿಸಿ, ವಿರೋಧಿಸಿ ಹೈಕೋರ್ಟ್ ತೀರ್ಪು ಕೊಟ್ಟಿದೆ ಎಂದು ವಿವರಿಸಿದರು. ಸರ್ಕಾರದ ಅಪ್ರಬುದ್ಧ ನಿರ್ಧಾರವನ್ನು ಹೈಕೋರ್ಟ್ ವಿರೋಧಿಸಿದೆ. ಹೈಕೋರ್ಟಿನ ಈ ನಿರ್ಧಾರವನ್ನು ಬಿಜೆಪಿ ಸ್ವಾಗತಿಸುತ್ತದೆ. ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಇದರಿಂದ ಬಹಳಷ್ಟು ಸಂತಸವಾಗಿದೆ. ಇಂಥ ಅಪ್ರಬುದ್ಧ ನಿರ್ಧಾರ ಮಾಡುವುದನ್ನು ಸರ್ಕಾರ ಈಗಲಾದರೂ ಕೈಬಿಡಬೇಕೆಂದು ಅವರು ಆಗ್ರಹಿಸಿದರು.

ಏ.30ರಂದೇ ಸಾರಿಗೆ ನೌಕರರಿಗೆ ವೇತನ

• **ಬೆಂಗಳೂರು:** ಕೆಎಸ್‌ಆರ್‌ಟಿಸಿ ಎಲ್ಲಾ ಅಧಿಕಾರಿ/ನೌಕರರ ವೇತನವನ್ನು ಈ ಬಾರಿ ಮೇ1ರ ಬದಲಿಗೆ ಏ.30ಕ್ಕೆ ಬ್ಯಾಂಕ್ ಖಾತೆಗೆ ಜಮೆಗೊಳಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಆದೇಶ ಹೊರಡಿಸಿದ್ದಾರೆ. ಪ್ರತಿ ತಿಂಗಳು ಕೆಎಸ್‌ಆರ್ ಟಿಸಿ ಎಲ್ಲಾ ಅಧಿಕಾರಿ/ನೌಕರರ ಮೇ 1ರಂದು ವೇತನ ನೀಡಲಾಗುತ್ತಿತ್ತು. ಆದರೆ ಎಪ್ರಿಲ್ ತಿಂಗಳ ಮೇ1ರಂದು ಬ್ಯಾಂಕ್ ರಜೆ ಹಾಗೂ ಕಾರ್ಮಿಕ ದಿನಾಚರಣೆ ಪ್ರಯುಕ್ತ ನಿಗಮದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಏಪ್ರಿಲ್ –2026 ರ ಮಾಹೆಯ ವೇತನವನ್ನು ಏ.30 ರಂದು ಪಾವತಿಸಲು ನಿರ್ಧರಿಸಲಾಗಿದ್ದು, ಹಾಗಾಗಿ ಏ.30ರಂದು ನೌಕರರ ಬ್ಯಾಂಕ್ ಖಾತೆಗೆ ಜಮೆಗೊಳಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಸುಪ್ರೀಂನಲ್ಲೂ ಕರ್ನಾಟಕಕ್ಕೆ ಜಯ: ಡಿಸಿಎಂ ಶಿವಕುಮಾರ್

ಮೇಕೆದಾಟಿಗೆ ಡಿಪಿಆರ್ ಸಿದ್ಧ

• **ಪಿರಿಯಾಪಟ್ಟಣ:** ಮೇಕೆದಾಟು ಯೋಜನೆ ವಿಚಾರದಲ್ಲಿ ಕಾಂಗ್ರೆಸ್ ಹೋರಾಟಕ್ಕೆ ಜಯ ಸಿಕ್ಕಿದ್ದು, ಹತ್ತು ದಿನದೊಳಗೆ ಕೇಂದ್ರಕ್ಕೆ ಯೋಜನೆಯ ಡಿಪಿಆರ್ ಸಲ್ಲಿಸಲಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಿಳಿಸಿದರು.



ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಮಂಗಳವಾರ ಜಿಲ್ಲೆಯ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ನಡೆಯುವ 419.78 ಕೋಟಿ ರೂಗಳ ವಿವಿಧ ಇಲಾಖೆಗಳಲ್ಲಿನ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.ಮೇಕೆದಾಟು ಯೋಜನೆ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನಲ್ಲೂ ಕರ್ನಾಟಕಕ್ಕೆ ಜಯ ಸಿಕ್ಕಿದೆ. ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು ಮತ್ತು ಸಂಸದರಿಗೆ ಶಕ್ತಿ ಇದ್ದರೆ ಯೋಜನೆ ಅನುಷ್ಠಾನಕ್ಕೆ ಸಹಕಾರಿಸಲಿ ಎಂದರು.

ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳ ಜತೆಗೆ ಆರನೇ ಗ್ಯಾರಂಟಿಯಾಗಿ ಭೂ ದಾಖಲೆಗಳನ್ನು ಕಂದಾಯ ಇಲಾಖೆಯಿಂದ ಒದಗಿಸುವ ಕೆಲಸ ಮಾಡುತ್ತಿದೆ' ಎಂದರು. 1.11 ಕೋಟಿ ಜನರಿಗೆ ಅವರ ಭೂದಾಖಲೆಗಳನ್ನು ಒದಗಿಸಲಾಗಿದೆ. ಇಂತಹ ಒಂದು ಕಾರ್ಯಕ್ರಮ ಬಿಜೆಪಿ–ಜೆಡಿಎಸ್ ಮಾಡಿಲ್ಲ ಎಂದು ಟಾಂಗ್ ನೀಡಿದರು. ತಮಿಳುನಾಡಿನಲ್ಲೂ ಮಹಿಳೆಯರಿಗೆ 2 ಸಾವಿರ ಘೋಷಣೆ ಮಾಡಿದ್ದೇವೆ. ನಮ್ಮ ಗ್ಯಾರಂಟಿ ಕಾರ್ಯಕ್ರಮ ಇಡೀ ದೇಶಕ್ಕೆ ಮಾದರಿ ಆಗಿದೆ ಎಂದರು.

ಅಭಿವೃದ್ಧಿ ಪಥದಲ್ಲಿ ಸರ್ಕಾರ: ನಮ್ಮದು ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿರುವ ಸರ್ಕಾರ, ಇದಕ್ಕೆ ಸಾಕ್ಷಿ ಇಂದಿನ ಅಭಿವೃದ್ಧಿ ಕಾಮಗಾರಿಗಳು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಮ್ಮದು ನುಡಿದಂತೆ ನಡೆವ ಸರ್ಕಾರ. 2014ರಲ್ಲಿ 168 ಭರವಸೆಗಳನ್ನು ನೀಡಿದ್ದೆವು ಇದರಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೆವು. ಅಲ್ಲದೆ ಹೊಸ 20 ಯೋಜನೆಗಳನ್ನು ಜಾರಿಗೆ ತಂದೆವು. ಈ ಬಾರಿ ಭರವಸೆ ನೀಡಿದ್ದ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವುದು ಅಸಾಧ್ಯ. ಇವನ್ನು ಜಾರಿಗೆ ತಂದರೆ ರಾಜ್ಯದ ಖಜಾನೆ ಖಾಲಿಯಾಗುತ್ತದೆ ಎಂದು ಟೀಕಿಸಿದ್ದರು. ಆದರೆ, ಇತರೆ ರಾಜ್ಯಗಳಲ್ಲಿ ನಮ್ಮ ಗ್ಯಾರಂಟಿ ಯೋಜನೆಗಳನ್ನು ಕಾಪಿ ಮಾಡುತ್ತಿದ್ದಾರೆ ಎಂದರು. ನಾವು 4,48,004 ಕೋಟಿ ವೆಚ್ಚದ ಬಜೆಟನ್ನು ಮಂಡಿಸಿದ್ದೇವೆ. ನಮ್ಮ ಸರ್ಕಾರ ಆರ್ಥಿಕವಾಗಿ ಸದೃಢವಾಗಿದೆ. ಜನರು ನಮ್ಮ ಪರ ಇದ್ದಾರೆ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಪಿರಿಯಾಪಟ್ಟಣ ತಾಲೂಕಿನ ಅಂತರ್ಜಲ ಅಭಿವೃದ್ಧಿ ಪಡಿಸಲು ಕೆರೆ ತುಂಬಿಸುವ ಯೋಜನೆಯನ್ನು ಜಾರಿಗೆ ತಂದಿದ್ದೆವು. ಇದರಿಂದ ಜಿಲ್ಲೆಯ ಅಂತರ್ಜಲ ಮಟ್ಟ ಹೆಚ್ಚಳ ಆಗಿದೆ. 50 –60 ವರ್ಷಗಳಿಂದ ಪೋಡಿ ಆಗದ, ಪೌತಿ ಖಾತೆ ಆಗದ ಜಾಮೀನನ್ನು ಪೌತಿ ಖಾತೆ ಮಾಡಿ ಕೊಡಲಾಗುತ್ತಿದೆ. ರಸ್ತೆಗಳಿಗೆ ಹೊಸ ರೂಪವನ್ನು ಕೊಟ್ಟು ಗುಣಮಟ್ಟದ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ ಎಂದರು.

63 ಮೆಗಾ ವ್ಯಾಟ್ ಉತ್ಪಾದನೆ

ಕೃಷಿ ಇಲಾಖೆಯಿಂದ 3 ಸಾವಿರ ಕೋಟಿ ವೆಚ್ಚದಲ್ಲಿ ರಾಜ್ಯದಾದ್ಯಂತ ರೈತರಿಗೆ ಕೃಷಿ ಉಪಕರಣಗಳನ್ನು ವಿತರಣೆ ಮಾಡಲಾಗುತ್ತಿದೆ. ಇಡೀ ರಾಜ್ಯದಲ್ಲಿ ಪಂಪ್ ಸೆಟ್‌ಗೆ 7 ಗಂಟೆಗಳ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಇದರ ಅವಲಂಬನೆಯನ್ನು ಕಡಿಮೆ ಮಾಡಲು ಸೋಲಾರ್ ಪಂಪ್ ಅಳವಡಿಸಲು ಸಹಾಯಧನ ನೀಡಲಾಗುತ್ತಿದೆ. ತಾಲೂಕಿನಲ್ಲಿ 63 ಮೆಗಾ ವ್ಯಾಟ್ ಉತ್ಪಾದನೆಯ ಸೋಲಾರ್ ಯೋಜನೆಯನ್ನು ಎರಡು ಕಡೆ ಜಾರಿಗೆ ತರಲಾಗಿದೆ. ಮೇಕೆದಾಟು ಯೋಜನೆಗೆ ಅಗತ್ಯ ಭೂಮಿ ನೀಡಿ, ಡಿಪಿಆರ್ ತಯಾರಿಸಲಾಗಿದೆ. ನಮ್ಮ ಗ್ಯಾರಂಟಿ ಯೋಜನೆಗಳು ದೇಶಕ್ಕೆ ಮಾದರಿಯಾಗಿವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ಷೇಪ

ದೇಶದ ಜನರಿಗೆ ಖರ್ಗೆ ಅಪಮಾನ: ಆಕ್ರೋಶ

• **ಬೆಂಗಳೂರು:** ಪ್ರಧಾನ ಮಂತ್ರಿ ನರೇಂದ್ರ ಮೋದಿ ಅರವರನ್ನು ಟೀಕಿಸುವ ಭರದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ದೇಶದ 140 ಕೋಟಿ ಜನರನ್ನು ಹಾಗೂ ನಮ್ಮ ಪ್ರಜಾಪ್ರಭುತ್ವದ ಘನತೆಯನ್ನು ಅಪ ಮಾನಿಸಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ಷೇಪಿಸಿದ್ದಾರೆ.



ವಿಶ್ವದ 32ಕ್ಕೂ ಹೆಚ್ಚು ದೇಶಗಳ ಅತ್ಯು ನ್ನತ ಗೌರವಗಳಿಗೆ ಪಾತ್ರರಾಗಿ, ಭಾರತದ ಕೀರ್ತಿಯನ್ನು ಜಗತ್ತಿನ ಶಿಖರಕ್ಕೇರಿಸಿದ ಕೋಟ್ಯಂತರ ಭಾರತೀಯರ ಹೆಮ್ಮೆಯ ನಾಯಕನ ಬಗ್ಗೆ ಇಂತಹ ನಂಜಿನ, ವಿಷಕಾರಿ ಮಾತುಗಳು, ನಿಮ್ಮ ವಿಕೃತ ಮನಸ್ಥಿತಿಯನ್ನು, ನಿಮ್ಮ ರಾಜಕೀಯ ದ್ವೇಷವನ್ನು, ನಿಮ್ಮ ಹತಾಶೆಯನ್ನು ಬಿಂಬಿಸುತ್ತವೆಯೇ ಹೊರತು, ಮೋದಿ ಅವರ ವ್ಯಕ್ತಿತ್ವಕ್ಕೆ ಭಂಗವುಂಟು ಮಾಡುವುದು ಸಾಧ್ಯವಿಲ್ಲ ಎಂದು ತಿಳಿಸಿದರು.

ಸರ್ಜಿಕಲ್ ಸ್ಟ್ರೈಕ್, ಬಾಲಕೋಟ್ ಏರ್ ಸ್ಟ್ರೈಕ್ ಮತ್ತು ಇತ್ತೀಚಿನ ಆಪರೇಷನ್ ಸಿಂದೂರ್ ಮೂಲಕ ಭಯೋತ್ಪಾದಕರ ಹೆಡೆಮುರಿ ಕಟ್ಟಿದ ಧೀಮಂತ ನಾಯಕನ ಬಗ್ಗೆ, ನಕ್ಸಲಿಸಂ ಅನ್ನು ನಿರ್ನಾಮ ಮಾಡಿದ ಅದ್ವಿತೀಯ ನೇತಾರನ ಬಗ್ಗೆ, ಶತ್ರು ರಾಷ್ಟ್ರದ ಒಳಗೆ ನುಗ್ಗಿ ಹೊಡೆಯುವ ದಿಟ್ಟತನದ ಪ್ರಧಾನಿಗಳ ಬಗ್ಗೆ, ತಾಯಂದಿರ ಸೌಭಾಗ್ಯವನ್ನು ಅಳಿಸಲು ಬಂದವರ ವಿರುದ್ಧ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಡೆಸಿ, ಅವರ ಅಡಗುದಾಣಗಳನ್ನೇ ಧೂಳೀಪಟ ಮಾಡಿದ ಮೋದಿ ಅವರ ನಿಮ್ಮ ಅವಹೇಳನ, ನಿಮ್ಮ ನೈಜ ಮುಖವನ್ನು ಬಯಲು ಮಾಡಿದೆ ಎಂದಿದ್ದಾರೆ.

ಕೈ ಕಾರುತ್ತಿರುವ ವೈಷಮ್ಯ

ನರೇಂದ್ರ ಮೋದಿ ಅವರ ವಿರುದ್ಧ ಕಾಂಗ್ರೆಸ್ ಕಾರುತ್ತಿರುವ ವೈಷಮ್ಯ, ದ್ವೇಷ, ಅಸೂಯೆಗಳು ಹೊಸದೇನಲ್ಲ. ಈ ಮನಸ್ಥಿತಿಯಿಂದಲೇ ದೇಶದ ಹಾಗೂ ಪ್ರಧಾನಿ ಹುದ್ದೆಯ ಘನತೆಯನ್ನು ಕುಗ್ಗಿಸುವ ಮಟ್ಟಕ್ಕೆ ಕಾಂಗ್ರೆಸ್ ಕುಸಿದಿರುವುದನ್ನೂ ಕೂಡ ದೇಶದ ಜನ ಕಂಡಿದ್ದಾರೆ. ಮೋದಿ ಅವರನ್ನು ವಿರೋಧಿಸುವ ಭರದಲ್ಲಿ ನೀವು ಭಾರತದ ಗೌರವವನ್ನು ಕುಗ್ಗಿಸುತ್ತಿದ್ದೀರಿ. ಈ ಹಿಂದೆ ಮೌತ್ ಕಾ ಸೌದಾಗರ್ ಎಂದವರನ್ನು, ಚಾಯ್ ವಾಲಾ ಎಂದವರನ್ನು ಜನತೆ ಹೇಗೆ ಮೂಲೆಗುಂಪು ಮಾಡಿದ್ದಾರೆ ಎನ್ನುವುದು ನಿಮಗೆ ನೆನಪಿರಲಿ ಎಂದು ತಿಳಿಸಿದ್ದಾರೆ.

7 ಎಕರೆ ಭೂಮಿಯಲ್ಲಿ 100 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣ: ಎಸ್.ನರೇಶ್

ಬೆಳಗಾವಿಯಲ್ಲಿ ತಿರುಪತಿ ಮಾದರಿ ದೇವಸ್ಥಾನ

• **ಬೆಳಗಾವಿ:** ಇಲ್ಲಿನ ಸದಾಶಿವನಗರದ ರೆಡ್ಡಿ ಭವನದಲ್ಲಿ ಬೆಳಗಾವಿ ರೆಡ್ಡಿ ಸಂಘ ಬೆಳಗಾವಿ ನಗರದ ಹೊರವಲಯದಲ್ಲಿ ಏಳು ಎಕರೆ ಪ್ರದೇಶದಲ್ಲಿ ಬೃಹತ್ ವೆಂಕಟೇಶ್ವರ ದೇವಸ್ಥಾನ ಕಟ್ಟಲು ಆಂಧ್ರಪ್ರದೇಶದ ತಿರುಮಲ ತಿರುಪತಿ ದೇವಸ್ಥಾನ ಆಡಳಿತ ಮಂಡಳಿ(ಟಿಟಿಡಿ) ಭೂಮಿ ಹಸ್ತಾಂತರ ಕಾರ್ಯಕ್ರಮ ನಡೆಯಿತು.



ಮಂಗಳವಾರ ನಗರದ ಸದಾಶಿವ ನಗರದ ರೆಡ್ಡಿ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಆಡಳಿತ ಮಂಡಳಿಗೆ ಭೂಮಿ ಹಸ್ತಾಂತರ, ದೇವಸ್ಥಾನ ನಿರ್ಮಾಣ ಕುರಿತು ಮಹತ್ವದ ಮಾಹಿತಿ ಹಂಚಿಕೊಳ್ಳಲಾಯಿತು. ಟಿಟಿಡಿ ಆಡಳಿತ ಮಂಡಳಿಯ ಸದಸ್ಯರಾದ ಎಸ್.ನರೇಶ್ ಕುಮಾರ್ ಮಾತನಾಡಿ, ದೇವಸ್ಥಾನ ನಿರ್ಮಾಣಕ್ಕಾಗಿ ಬೆಳಗಾವಿರೆಡ್ಡಿ ಸಂಘವು ಸದಭಿಪ್ರಾಯದಿಂದ 7 ಎಕರೆ ಭೂಮಿಯನ್ನು ಹಸ್ತಾಂತರ ಮಾಡಿರುವುದು ಶ್ಲಾಘನೀಯ ಕ್ರಮವಾಗಿದೆ ಎಂದರು.

ಮುಂದಿನ ಎರಡು ವರ್ಷಗಳಲ್ಲಿ ಸುಮಾರು ರೂ.100 ಕೋಟಿ ವೆಚ್ಚದಲ್ಲಿ ದೇವಸ್ಥಾನ ನಿರ್ಮಾಣಗೊಳ್ಳಲಿದ್ದು, ಇದರಲ್ಲಿ ಶೇ.80ರಷ್ಟು ಅನುದಾನವನ್ನು ಟಿಟಿಡಿ ಒದಗಿಸಲಿದ್ದು, ಶೇ.10 ರಷ್ಟು ರೆಡ್ಡಿ ಸಂಘ ಹಾಗೂ ಉಳಿದ ಶೇ.10ರಷ್ಟು ದಾನಿಗಳಿಂದ ಸಂಗ್ರಹಿಸಲಾಗುವುದು ಎಂದು ವಿವರಿಸಿದರು. ಕರ್ನಾಟಕದ ದಾನಿಗಳ ಸಹಕಾರದಿಂದಲೇ ದೇವಸ್ಥಾನ ನಿರ್ಮಾಣ ಮಾಡುವ ಸಂಕಲ್ಪ ಕೈಗೊಂಡಿರುವುದಾಗಿ ಎಂದು ತಿಳಿಸಿದ ಅವರು, ಮೂರು ರಾಜ್ಯಗಳ ಕೇಂದ್ರ ಸ್ಥಾನವಾಗಿರುವ ಬೆಳಗಾವಿ ನಗರದ ಹೊರವಲಯದಲ್ಲಿ ತಿರುಮಲ ವೆಂಕಟರಮಣ ದೇವಸ್ಥಾನ ನಿರ್ಮಾಣವಾಗುವುದರಿಂದ ಭಕ್ತರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ ಎಂದು ಹೇಳಿದರು.

ಮಹಾರಾಷ್ಟ್ರದ ಕೊಲ್ಲಾಪುರದಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರಿಗೆ ಕೂಡ ಈ ದೇವಸ್ಥಾನದಿಂದ ಹೆಚ್ಚಿನ ಸೌಲಭ್ಯ ದೊರೆಯಲಿದೆ. ತಿರುಪತಿಯಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳನ್ನು ಇದೇ ಮಾದರಿಯಲ್ಲಿ ಇಲ್ಲಿ ಸಹ ಆಯೋಜಿಸಲಾಗುವುದು ಎಂದರು.

9,000 ಕೋಟಿ ಮೀಸಲು

ಟಿಟಿಡಿ ಸಂಸ್ಥೆ ದೇವಸ್ಥಾನಗಳ ನಿರ್ಮಾಣ ಮತ್ತು ಪುನರುಜ್ಜೀವನಕ್ಕಾಗಿ ಸುಮಾರು ರೂ.9,000 ಕೋಟಿ ಮೊತ್ತವನ್ನು ಮೀಸಲಿಟ್ಟಿದ್ದು, ದೇಶದ ಆರು ಕಡೆಗಳಲ್ಲಿ ಟಿಟಿಡಿ ದೇವಸ್ಥಾನಗಳು ಕಾರ್ಯನಿರ್ವಹಿಸುತ್ತಿವೆ ಎಂದು ಮಾಹಿತಿ ನೀಡಿದರು. ಕರ್ನಾಟಕ ರಾಜ್ಯ ರಡ್ಡಿ ಜನಸಂಘ ಅಧ್ಯಕ್ಷ ಲಕ್ಷ್ಮಣ ರೆಡ್ಡಿ ಮಾತನಾಡಿ, ಬೆಳಗಾವಿಯಲ್ಲಿ ಟಿಟಿಡಿ ವತಿಯಿಂದ ದೇವಸ್ಥಾನ ನಿರ್ಮಾಣ ಆಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇದಕ್ಕೆ ಬೆಳಗಾವಿ ರಡ್ಡಿ ಸಂಘದ ಸಹಕಾರ ಬಹಳ ದೊಡ್ಡದಾಗಿದೆ. ನಿಮ್ಮ ಸಹಕಾರ ಹೀಗೆ ಮುಂದುವರಿಯಬೇಕು ಎಂದು ವಿನಂತಿಸಿದರು.

ಕುಮಾರಸ್ವಾಮಿ ಹೇಳಿಕೆಗೆ ಡಿಸಿಎಂ ಶಿವಕುಮಾರ್ ತಿರುಗೇಟು

ಮರುವಿಂಗಡಣೆಗೆ ಎಲ್ಲರ ಒಪ್ಪಿಗೆ

• **ಬೆಂಗಳೂರು:** ಪ್ರಜಾಪ್ರಭುತ್ವ ವ್ಯವಸ್ಥೆಗೆ ಅನುಗುಣವಾಗಿ ವಿರೋಧ ಪಕ್ಷದ ಶಾಸಕರು, ಸಾರ್ವಜನಿಕರನ್ನು ವಿಶ್ವಾಸಕ್ಕೆ ಪಡೆದು ಜಿಬಿಎ ಪಾಲಿಕೆಗಳು ಹಾಗೂ ವಾರ್ಡ್ ಗಳ ಮರು ವಿಂಗಡಣೆ ಮಾಡಲಾಗಿದೆ. ಆದರೆ ಈ ಬಗ್ಗೆ ಕುಮಾರಸ್ವಾಮಿ ಅವರಿಗೆ ಅರಿವಿಲ್ಲ. ಬೇಕಿದ್ದರೆ ಅವರ ಶಾಸಕರನ್ನೇ ಕೇಳಿ ತಿಳಿದುಕೊಳ್ಳಲಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿರುಗೇಟು ನೀಡಿದ್ದಾರೆ.



ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳೊಂದಿಗೆ ಮಂಗಳವಾರ ಮಾತನಾಡಿ, ಬೆಂಗಳೂರು ವಾರ್ಡ್‌ಗಳ ಮರುವಿಂಗಡನೆ ಕುರಿತು ಕೇಂದ್ರ ಸಚಿವ ಕುಮಾರಸ್ವಾಮಿ ವರ ಹೇಳಿಕೆ ಪ್ರತಿಕ್ರಿಯೆ ನೀಡಿದ ಅವರು, ಬೆಂಗಳೂರು ವಾರ್ಡ್ ಗಳ ಮರುವಿಂಗಡಣೆ ವೇಳೆ ಎಲ್ಲಾ ಪಕ್ಷದ ಶಾಸಕರನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. ಅವರ ಪಕ್ಷದ ಶಾಸಕರು ಸಮಿತಿಯ ಭಾಗವಾಗಿದ್ದರು. ಜೆಡಿಎಸ್ ಹಾಗೂ ಬಿಜೆಪಿ ಶಾಸಕರ ಜತೆ ಚರ್ಚೆ ಮಾಡಿ, ಅವರೆಲ್ಲರ ಅಭಿಪ್ರಾಯ ಪಡೆದ ನಂತರವೇ ಅಂತಿಮ ತೀರ್ಮಾನ ಮಾಡಲಾಗಿದೆ ಎಂದರು.

ಕುಮಾರಸ್ವಾಮಿ ಅವರು ದೊಡ್ಡ ವ್ಯಕ್ತಿ ಇರಬಹುದು. ನನಗೂ ಸಣ್ಣ ಅನುಭವವಿದೆ. ಈ ಅನುಭವದ ಮೇಲೆ ಹೇಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ಶಾಸಕರು, ನಾಯಕರನ್ನು ಹೇಗೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂಬುದು ನನಗೂ ಗೊತ್ತಿದೆ. ನಾನು ಅವರ ಶಾಸಕರ ಜತೆ ಎಷ್ಟು ಗಂಟೆಗಳ ಕಾಲ ಚರ್ಚೆ ಮಾಡಿದ್ದೇನೆ, ಎಷ್ಟು ಗಂಟೆಗಳ ಕಾಲ ಸಾರ್ವಜನಿಕರೊಂದಿಗೆ ಸಂವಾದ ಮಾಡಲಾಗಿದೆ ಎಂದು ಕುಮಾರಸ್ವಾಮಿ ಅವರು ತಿಳಿದುಕೊಂಡು ಮಾತನಾಡು ವುದು ಸೂಕ್ತ ಎಂದರು. ಜಿಬಿಎ ಪಾಲಿಕೆಗಳ ಚುನಾವಣೆ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ನಾವು ಚುನಾವಣೆಗೆ ಸಿದ್ಧವಿರುವುದಾಗಿ ತಿಳಿಸಿದ್ದೇವೆ ಎಂದರು.

ಮುಸಲ್ಮಾನರ ಬಗ್ಗೆ ಹಗೆ ಸುಳ್ಳು ಆರೋಪ

ಮುಸಲ್ಮಾನ ಸಮುದಾಯದ ಮುಖಂಡರು ಹೈಕಮಾಂಡ್ ನಾಯಕರಿಗೆ ಪತ್ರ ಬರೆದಿರುವ ಬಗ್ಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಅದೆಲ್ಲ ಸುಳ್ಳು. ಯಾರೂ ಹಗೆ ಸಾಧಿಸುತ್ತಿಲ್ಲ. ಪಕ್ಷವು ಶಿಸ್ತು ಪಾಲನೆಗೆ ಆದ್ಯತೆ ನೀಡುತ್ತಿದೆ. ಎಲ್ಲರೂ ಶಿಸ್ತು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಬೇಸಿಗೆ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ನಿರ್ವಹಣೆ ವಿಚಾರವಾಗಿ ಈಗಾಗಲೇ ಬಿಡಬ್ಲ್ಯೂಎಸ್ ಎಸ್‌ಬಿ ಅಧಿಕಾರಿಗಳ ಜತೆ ಚರ್ಚೆ ನಡೆಸಲಾಗಿದೆ. ಅಂತರ್ಜಲ ಹೆಚ್ಚಳದ ಬಗ್ಗೆ ಮಾತನಾಡಿದ್ದು, ಏನೇ ಸಮಸ್ಯೆ ಬಂದರೂ ನಾವು ಅದನ್ನು ಸಮರ್ಥವಾಗಿ ನಿಭಾಯಿಸುತ್ತೇವೆ ಎಂದು ತಿಳಿಸಿದರು.

ಸಚಿವರ ವಿರುದ್ಧ ದೂರು ದಾಖಲಿಸಿ

• **ಬೆಂಗಳೂರು/ತುಮಕೂರು:** ಕಬಡ್ಡಿ ಪಂದ್ಯಾವಳಿಯ ವೇಳೆ ಬಹಿರಂಗವಾಗಿ ಬೆಟ್ಟಿಂಗ್ ಕಟ್ಟಿದ್ದಾಗಿ ಹೇಳಿಕೆ ನೀಡಿದ್ದ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರಿಗೆ ಕಾನೂನು ಸಂಕಷ್ಟ ಎದುರಾಗಿದೆ.



ಈ ಕುರಿತ ಖಾಸಗಿ ದೂರಿನ ವಿಚಾರಣೆ ನಡೆಸಿದ ನ್ಯಾಯಾಲಯವು, ಸಚಿವರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚನೆ ನೀಡಿದೆ. ಸಚಿವರ ಈ ನಡೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿತ್ತು. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಾದ ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರೇ ಬೆಟ್ಟಿಂಗ್‌ನಂತಹ ಕಾನೂನುಬಾಹಿರ ಚಟುವಟಿಕೆಯನ್ನು ಒಪ್ಪಿಕೊಂಡಿರುವುದು ತಪ್ಪು ಎಂದು ಆರೋಪಿಸಿ ಎಚ್.ಆರ್. ನಾಗಭೂಷಣ್ ಎಂಬವರು ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಕೆ.ಎನ್. ಶಿವಕುಮಾರ್ ಅವರು, ಸಚಿವರ ವಿರುದ್ಧ ಎಫ್ ಐಆರ್ ದಾಖಲಿಸಿ ಸಮಗ್ರ ತನಿಖೆ ನಡೆಸುವಂತೆ ತುಮಕೂರಿನ ಕೊಡಿಗೇಹಳ್ಳಿ ಪೊಲೀಸರಿಗೆ ಆದೇಶಿಸಿದ್ದಾರೆ.

ಸಮಗ್ರ ತನಿಖೆ ನಡೆಸಿ ವರದಿ ನೀಡಿ: ಪರಂ

• **ಬೆಂಗಳೂರು:** ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳ ವಿರುದ್ಧ ಕೇಳಿಬಂದಿರುವ ಕಿರುಕುಳದ ಆರೋಪ ಹಾಗೂ ಮಂಗಳೂರು ನಗರ ಪೊಲೀಸ್ ಕಮಿಷನರ್ ವಿರುದ್ಧ ಎಸ್ಪಿಯೊಬ್ಬರು ಪತ್ರ ಬರೆದಿರುವ ಪ್ರಕರಣಗಳ ಕುರಿತು ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿರುವುದಾಗಿ ಗೃಹ ಸಚಿವ ಡಾ. ಜಿ. ಪರಮೇಶ್ವರ ತಿಳಿಸಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಡಿಸಿಆರ್‌ಇ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಎಂಬವರು ಮೇಲಧಿಕಾರಿಗಳ ವಿರುದ್ಧ ಗಂಭೀರವಾದ ಕಿರುಕುಳದ ಆರೋಪಗಳನ್ನು ಮಾಡಿದ್ದಾರೆ. ಇದರೊಂದಿಗೆ ಮಂಗಳೂರು ನಗರ ಪೊಲೀಸ್ ಕಮಿಷನರ್ ವಿರುದ್ಧ ಎಸ್ಪಿ ಕಾಶಿನಾಥ್ ಅವರು ಡಿಜಿಪಿಯವರಿಗೆ ಪತ್ರ ಬರೆದಿರುವುದು ಗಮನಕ್ಕೆ ಬಂದಿದೆ ಎಂದು ಹೇಳಿದರು.

ಸತ್ಯಾಸತ್ಯತೆ ಆಧಾರದ ಮೇಲೆ ಕ್ರಮ: ಪೊಲೀಸ್ ಇಲಾಖೆಯಂತಹ ಶಿಸ್ತಿನ ಪಡೆಯಲ್ಲಿ ಇಂತಹ ಬೆಳವಣಿಗೆಗಳು ನಡೆಯುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ. ಈ ಹಿನ್ನೆಲೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳ ಕುರಿತು ವರದಿ ಸಲ್ಲಿಸುವಂತೆ ಡಿಜಿಪಿಯವರಿಗೆ ಸೂಚಿಸಲಾಗಿದೆ.

ವರದಿ ಕೈ ಸೇರಿದ ನಂತರ ಅದರಲ್ಲಿನ ಅಂಶಗಳನ್ನು ಪರಿಶೀಲಿಸಿ, ಸತ್ಯಾಸತ್ಯತೆಯ ಆಧಾರದ ಮೇಲೆ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಬೈಕ್ ಟ್ಯಾಕ್ಸಿ ಸೇವೆಗೆ ನಿರ್ದೇಶನ: ಸಿಎಂ

• **ಬೆಂಗಳೂರು:** ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳ ಕಾರ್ಯಾಚರಣೆಯನ್ನು ಸಕ್ರಿಯಗೊಳಿಸಲು ಸಮಗ್ರ ಮತ್ತು ಕಾನೂನುಬದ್ಧವಾಗಿ ಉತ್ತಮ ಚೌಕಟ್ಟನ್ನು ರೂಪಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಈಗಾಗಲೇ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು, ಬೈಕ್ ಟ್ಯಾಕ್ಸಿಗಳನ್ನು ಕಾರ್ಯಗತಗೊಳಿಸಲು ಸಮರ್ಪಕ ಮತ್ತು ರಚಿತ ಚೌಕಟ್ಟು ರೂಪಿಸಬೇಕೆನ್ನುವ ಬೈಕ್ ಟ್ಯಾಕ್ಸಿ ವೆಲ್ಫೇರ್ ಅಸೋಸಿಯೇಷನ್ ಮನವಿಯನ್ನು ಪರಿಗಣಿಸಿ ಎಂದು ತಿಳಿಸಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಕರ್ನಾಟಕದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳ ಕಾರ್ಯಾಚರಣೆಯನ್ನು ಸಕ್ರಿಯಗೊಳಿಸಲು ಸಮಗ್ರ ಮತ್ತು ಕಾನೂನುಬದ್ಧವಾಗಿ ಉತ್ತಮ ಚೌಕಟ್ಟನ್ನು ರೂಪಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಈಗಾಗಲೇ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದೇನೆ ಎಂದು ಹೇಳಿದ್ದಾರೆ.

ನಾಗರಿಕರಿಗೆ ಉತ್ತಮ ಸೇವೆಗೆ ಒತ್ತು

ಕರ್ನಾಟಕದಾದ್ಯಂತ ಕುಟುಂಬಗಳಿಗೆ ಬೈಕ್ ಟ್ಯಾಕ್ಸಿಗಳು ಪ್ರಮುಖ ಜೀವನೋಪಾಯದ ಮೂಲಗಳು ಮತ್ತು ನಾಗರಿಕರಿಗೆ ಸುರಕ್ಷಿತ, ಅಗ್ಗದ ಹಾಗೂ ಪರಿಣಾಮಕಾರಿ ಲಾಸ್ಟ್ ಮೇಲ್ ಪ್ರಯಾಣದ ಆಯ್ಕೆಯನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ನ್ಯಾಯಸಮ್ಮತ ಮತ್ತು ಸಮರ್ಪಕವಾಗಿ ನಿಯಂತ್ರಿತ ಸಾರಿಗೆ ಪರಿಸರವನ್ನು ಖಚಿತಪಡಿಸಲು ನಾವು ಎಲ್ಲಾ ಹಿತಾಸಕ್ತಿಪಕ್ಷಗಳೊಂದಿಗೆ ರಚನಾತ್ಮಕವಾಗಿ ಕೆಲಸ ಮಾಡಲು ಬದ್ಧರಾಗಿದ್ದೇವೆ ಎಂದು ಬೈಕ್ ಟ್ಯಾಕ್ಸಿ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಆದಿ ನಾರಾಯಣ್ ಹೇಳಿದ್ದಾರೆ.

ಮುಖ್ಯಮಂತ್ರಿಗೆ ಮಾಟ ಮಾಡಿಸಿದ್ದಾರೆ: ರಾಜಣ್ಣ

• **ಬೆಂಗಳೂರು:** ಸಿಎಂ ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ಪುನರುಚ್ಚರಿಸಿದ್ದು, ಜತೆಗೆ ಯಾರಾದರೂ ಮಾಟ ಮಂತ್ರ ಮಾಡಿಸಿದ್ದಾರೆ ಎಂದು ಹೇಳಿರುವುದು ಚರ್ಚೆಗೆ ಗ್ರಾಸವಾಗಿದೆ.



ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇಷ್ಟು ಅಸಹಾಯಕರಾತಿದ್ದಾರೆ ಅಂತ ನೋಡಿದಾಗ ಯಾರಾದ್ರೂ ಮಾಟ ಮಂತ್ರ ಮಾಡಿಸಿದ್ದಾರೇನೋ ಅಂತ ನಾನು ವಿಚಾರ ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ. ಆಸ್ತಿಕ ಅಥವಾ ನಾಸ್ತಿಕ ಅಂತ ಇಲ್ಲ, ಬರುವಂತ ತೊಂದರೆ ಯಾರನ್ನು ಬಿಡುವುದಿಲ್ಲ. ನಾನು ಮಾಟ ಮಂತ್ರದಲ್ಲಿ ನಂಬಿಕೆ ಇಲ್ಲದೆ ಇರುವವನು, ಆದರೆ ಮಾಡಿರಬಹುದು ಏನೋ, ಮಾಡಿದ್ದಾರೋ ಇಲ್ವೋ ಅನ್ನೋದನ್ನ ನಾನು ತನಿಖೆ ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ.

ಸಂಪಾದಕೀಯ

ಎಂದೂ ಮರೆಯಲಾಗದ ಪಹಲ್ಗಾಮ್ ಹತ್ಯಾಕಾಂಡ

ಅದೊಂದು ಚಿತ್ರ ಭಾರತೀಯರು ಎಂದೂ ಮರೆಯಲಾರದಂತಹುದು. ಪಹಲ್ಗಾಮ್‌ನಲ್ಲಿ ಭಯೋತ್ಪಾದಕರಿಂದ ಹತ್ಯೆಗೀಡಾದ ಪತಿಯ ಪಕ್ಕದಲ್ಲಿ ಕೂತು ರೋಧಿಸುತ್ತಿರುವ ಪತ್ನಿಯ ಚಿತ್ರವದು. ಆ ಚಿತ್ರವು ಇಡೀ ದೇಶದ ಮನ ಕಲಕಿತ್ತು. ಪ್ರತಿಯೊಬ್ಬರ ಮನದಲ್ಲೂ ಕ್ರೋಧವನ್ನೂ ಉಕ್ಕಿಸಿತ್ತು. ಅದು ಭಯೋತ್ಪಾದಕರ ಪೈಶಾಚಿಕತೆಯನ್ನು ಬಿಂಬಿಸಿದಂತೆಯೇ, ಭಯೋತ್ಪಾದನೆಯ ವಿರುದ್ಧದ ಭಾರತದ ಹೋರಾಟವು ನೂತನ ಆಯಾಮವನ್ನು ಪಡೆದುದನ್ನೂ ಸಂಕೇತಿಸಿತ್ತು. ನಿಜ, ಇಂದಿಗೆ ಪಹಲ್ಗಾಮ್ ಹತ್ಯಾಕಾಂಡ ನಡೆದು ಒಂದು ವರ್ಷ ತುಂಬುತ್ತದೆ. ಕಳೆದ ವರ್ಷ ಏಪ್ರಿಲ್ 22ರಂದು ಭಯೋತ್ಪಾದಕರು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರ ಮೇಲೆರಗಿ 26 ಮಂದಿಯನ್ನು ಹತ್ಯೆಗೈದಿದ್ದರು.



ಈ ಹತ್ಯಾಕಾಂಡವು ಪಾಕಿಸ್ತಾನದ ಚಿತಾವಣೆಯಿಂದ ನಡೆದುದು ಎಂಬುದಕ್ಕೆ ಬೇರೆ ಪುರಾವೆ ಬೇಕಿರಲಿಲ್ಲ. ಆದರ ಬಳಿಕ ನಡೆದುದು ಹೊಸ ಇತಿಹಾಸ. ಭಾರತವು ಪಾಕಿಸ್ತಾನದ ಭಯೋತ್ಪಾದಕ ನೆಲೆಗಳ ಮೇಲೆರಗಿ ಅವುಗಳನ್ನು ನಾಶಪಡಿಸಿತ್ತಷ್ಟೇ ಅಲ್ಲದೆ, ಅದಕ್ಕೆ ಪ್ರತಿರೋಧ ತೋರಿದ ಪಾಕಿಸ್ತಾನದ ಮೇಲೂ ಸಮರ ಸಾರಿತ್ತು. ಕೆಲವೇ ದಿನಗಳ ಸಮರದಲ್ಲಿ ಪಾಕಿಸ್ತಾನವನ್ನು ಸಂಪೂರ್ಣ ಮಣಿಸಿತ್ತು. 'ಆಪರೇಷನ್ ಸಿಂದೂರ'ದ ವಿಜಯವನ್ನು ಪಹಲ್ಗಾಮ್‌ನಲ್ಲಿ ಮಡಿದ ಜೀವಗಳಿಗೆ ಅರ್ಪಿಸಿತ್ತು.

ಆದರೆ ಈ ಘಟನೆಯು ಭಾರತದ ನೀತಿಯಲ್ಲಿ ಒಂದು ಆಮೂಲಾಗ್ರ ಬದಲಾವಣೆ ತಂದುದೂ ಅಷ್ಟೇ ಸತ್ಯ. ಆವರೆಗೆ ಪಾಕಿಸ್ತಾನ ಪ್ರೇರಿತ ಭಯೋತ್ಪಾದನೆಗೆ ರಕ್ಷಣಾತ್ಮಕವಾಗಿಯಷ್ಟೆ ಪ್ರತಿಕ್ರಿಯಿಸುತ್ತಿದ್ದ ಹಾಗೂ ದೇಶೀಯವಾಗಿಯಷ್ಟೆ ಭಯೋತ್ಪಾದಕರನ್ನು ದಮನಿಸಲು ಯತ್ನಿಸುತ್ತಿದ್ದ ಭಾರತವು ಆ ದಿನದ ಬಳಿಕ ತನ್ನ ನೀತಿಯನ್ನು ಬದಲಿಸಿತು. ಭಾರತದ ನೆಲದಲ್ಲಿ ನಡೆಯುವ ಯಾವುದೇ ಒಂದು ಭಯೋತ್ಪಾದಕ ಕೃತ್ಯವೂ ದೇಶದ ಮೇಲೆ ಸಾರಿದ ಯುದ್ಧಕ್ಕೆ ಸಮಾನ ಎಂದು ಪರಿಗಣಿಸಲಾರಂಭಿಸಿತು. ಸಂಭವನೀಯ ಭಯೋತ್ಪಾದನೆಯನ್ನು ತಡೆಯುವ ಸಲುವಾಗಿ ಭಯೋತ್ಪಾದಕರನ್ನು ವಿದೇಶಿ ನೆಲದಲ್ಲಿಯೇ 'ಇಲ್ಲ'ವಾಗಿಸುವ ಯೋಜನೆಯನ್ನು ಜಾರಿಗೆ ತಂದಿತು. ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಭಾರತವು ಕಟಿಬದ್ಧವಾಗಿದೆ ಹಾಗೂ ಈ ನಿಟ್ಟಿನಲ್ಲಿ ಪಾಕಿಸ್ತಾನದ 'ಪರಮಾಣು ಬ್ಲಾಕ್‌ಮೇಲ್'ನ್ನು ಕೂಡಾ ಲೆಕ್ಕಿಸುವುದಿಲ್ಲ ಎಂಬ ಸಂದೇಶವನ್ನೂ ಭಾರತವು ಸಾರಿತು. ಸಿಂಧೂ ನದಿ ಒಪ್ಪಂದವನ್ನು ರದ್ದುಪಡಿಸಿ ಭಯೋತ್ಪಾದಕ ರಾಷ್ಟ್ರದೊಂದಿಗೆ ಯಾವುದೇ ಒಪ್ಪಂದಗಳೂ ಮಾನ್ಯವಲ್ಲ ಎಂದು ಘೋಷಿಸಿತು.

'ಆಪರೇಷನ್ ಸಿಂದೂರ್ ನ್ಯಾಯದಾನದ ಹೊಸ ವರಸೆ' ಎಂಬುದಾಗಿ ಪ್ರಧಾನಿ ಮೋದಿಯವರು ಅಂದು ಬಣ್ಣಿಸಿದ್ದರು. ಪಹಲ್ಗಾಮ್ ಘಟನೆಯು ಭಾರತಕ್ಕೆ ಮರೆಯಲಾಗದ ಘಟನೆಯಾಗಿರುವಂತೆಯೆ, ಭಾರತವು ಪಾಕಿಸ್ತಾನಕ್ಕೆ ಮರೆಯಲಾಗದ ಪಾಠ ಕಲಿಸಿರುವುದೂ ಅಷ್ಟೇ ಸತ್ಯ.

ಮಾಡುವ ಕೆಲಸ ಎಂತಿರಬೇಕು

ಯತ್ ಕೃತ್ವಾ ನ ಭವೇತ್ ಧರ್ಮೋ ನ ಕೀರ್ತಿರ್ನ ಯಶೋ ಧ್ರುವಮ್।
ಶರೀರಸ್ಯ ಭವೇತ್ ಖೇದಃ ಕಸ್ತತ್ಕರ್ಮ ಸಮಾಚರೇತ್॥ -ರಾಮಾಯಣ

ಏನು ಮಾಡಿದರೆ ಧರ್ಮವಾಗಲೀ, ಕೀರ್ತಿಯಾಗಲೀ, ಶಾಶ್ವತವಾದ ಯಶಸ್ಸಾಗಲೀ ಉಂಟಾಗದೇ ಶರೀರಕ್ಕೆ ಖೇದ ಮಾತ್ರ ಉಂಟಾಗುತ್ತದೆಯೋ ಅಂಥ ಕೆಲಸವನ್ನು ಯಾವನು ತಾನೇ ಮಾಡುತ್ತಾನೆ – ಎಂಬುದು ಶ್ಲೋಕಾರ್ಥ.

'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ' ಕರ್ತವ್ಯಗಳನ್ನು ಮಾಡುತ್ತಾ ನೂರು ವರ್ಷ ಬಾಳಬೇಕು ಎಂಬುದು ಸೂಕ್ತಿಯ ಆಶಯ. 'ನಿಯತಂ ಕುರು ಕರ್ಮತ್ವಂ' ನಿರಂತರ ಕೆಲಸ ಮಾಡುತ್ತಿರು ಎಂಬುದು ಗೀತೋಪದೇಶ.

ಮಾಡುವುದೆಲ್ಲವೂ ಕೆಲಸವೇ. ಆದರೆ ಯಾವ ಕೆಲಸವನ್ನು ಮಾಡಬೇಕು, ಯಾವ ಕೆಲಸವನ್ನು ಮಾಡಬಾರದು ಎಂಬುದು ಪ್ರಶ್ನೆ. ಇದಕ್ಕೆ ಉತ್ತರರೂಪವಾಗಿ ಈ ಶ್ಲೋಕ ಹೊರಟಿದೆ. ಒಳ್ಳೆಯ ಕೆಲಸಗಳನ್ನೇ ಮಾಡಬೇಕು ಎಂಬುದು ಕಥನದ ತಾತ್ಪರ್ಯ.



ಮಾಡುವ ಕೆಲಸ ಧರ್ಮ ಸಮ್ಮತವಾಗಿರಬೇಕು. ಲೋಕಹಿತದಿಂದ ಕೂಡಿರಬೇಕು. ಹತ್ತಾರು ಜನರಿಗಾದರೂ ಸಂತೋಷ ಕೊಡಬೇಕು.

ಕೈಗೊಂಡ ಕೆಲಸವು ಕೀರ್ತಿಯನ್ನು ತಂದುಕೊಡಬೇಕು. ಇತರರು ಮೆಚ್ಚುವ ಸಾಧನೆಯಾಗಿರಬೇಕು. ಯಾವತ್ತೂ ಅಪಕೀರ್ತಿಗೆ ಕಾರಣವಾದ ಕೆಲಸವನ್ನು ಮಾಡಬಾರದು.

ಯಾವುದೇ ಕೆಲಸವನ್ನು ಆಯ್ದುಕೊಂಡರೂ ಅದು ಶಾಶ್ವತ ಯಶಸ್ಸನ್ನು ತಂದುಕೊಡಬೇಕು. ಅಂತಹ ಕೆಲಸವನ್ನೇ ಆಯ್ದುಕೊಂಡು ಮುಂದುವರಿಯಬೇಕು. ಮಧ್ಯದಲ್ಲಿ ಅಪಯಶಸ್ಸನ್ನು ತಂದುಕೊಡುವಂತಿದ್ದರೆ ಆದರಿಂದ ಎಲ್ಲವೂ ವ್ಯರ್ಥವಾಗಿಬಿಡುತ್ತದೆ. ಯೋಚಿಸಿ ವಿಮರ್ಶಿಸಿ, ಅಳೆದು, ತೂಗಿ ಶಾಶ್ವತ ಕೀರ್ತಿ ತಂದುಕೊಡುವ ಕೆಲಸವನ್ನು ಆಯ್ದುಕೊಳ್ಳಬೇಕು.

ಈ ಎಚ್ಚರವಿಲ್ಲದಿದ್ದರೆ ಖೇದಕ್ಕೆ ಕಾರಣವಾಗುತ್ತದೆ. ಶಾರೀರಿಕ ಶ್ರಮ ವ್ಯರ್ಥವಾಗುತ್ತದೆ. ಬೌದ್ಧಿಕ ಮಟ್ಟ ಸೋಲುತ್ತದೆ. ಸಂಪತ್ತಿನ ವ್ಯರ್ಥ ವ್ಯಯವಾಗುತ್ತದೆ. ಕೆಲಸ ಕೆಟ್ಟ ಮೇಲೆ ವ್ಯಥೆಪಟ್ಟರೆ, ದುಃಖಿಸಿದರೆ ಪ್ರಯೋಜನವಾಗದು. ಬುದ್ಧಿವಂತನಾದವನು ಶರೀರಕ್ಕೆ ಖೇದವನ್ನುಂಟು ಮಾಡುವ ಕೆಲಸಗಳಿಗೆಂದೂ ಮನಸ್ಸು ಮಾಡಬಾರದು. ಆಲೋಚಿಸಿಯೇ ಕಾರ್ಯವೆಸಗಬೇಕು.

ಯಾವುದೇ ಕೆಲಸ ಮಾಡುವಾಗಲೂ ಸಾಕಷ್ಟು ಯೋಚಿಸಬೇಕು. ಒಮ್ಮೆ ತಪ್ಪಾದರೆ ಸರಿಪಡಿಸುವುದು ಕಷ್ಟ. ನಷ್ಟವಾದರೆ ಭರಿಸುವುದು ಕಷ್ಟ. ಸೋತಾಗ ಯಾರೂ ಸಮೀಪ ಸುಳಿಯುವುದಿಲ್ಲ. ವಿಶ್ವಾಸ ತುಂಬುವುದಿಲ್ಲ. ಸರಿಪಡಿಸಲು ಮುಂದಾಗುವುದಿಲ್ಲ. 'ನಗುವಾಗ ಇರುವವರು ಅಳುವಾಗ ಇರುವುದಿಲ್ಲ'

ಬುದ್ಧಿವಂತನಾದವನು ಇಂತಹ ಕೆಲಸವನ್ನು ಮಾಡುವುದಿಲ್ಲ. ಆದ್ದರಿಂದ ಕೆಲಸಕ್ಕೆ ಮುಂದಾಗುವಾಗಲೇ ಎಚ್ಚರವಹಿಸಬೇಕು. ನೋಡಿ ಹೆಜ್ಜೆಯಿಡಬೇಕು. ವಿಮರ್ಶಿಸಿ ತೊಡಗಿಕೊಳ್ಳಬೇಕು. ಸಾಧ್ಯವಾದುದನ್ನು ಮಾತ್ರ ಮಾಡಲು ಮುಂದಾಗಬೇಕು.

ಹಿಂದಿ ದ್ವೇಷಕ್ಕೆ ವಿದ್ಯಾರ್ಥಿಗಳು ಬಲಿಯಾದರೇ?

ಖಾರಾ ಬಾತ್
ವಿನಾಯಕ ಭಟ್ಟ ಮೂರೂರು
vakradanta@gmail.com



ಹಿಂದಿ ಬಗ್ಗೆ ನಮ್ಮಲ್ಲಿ ಕೆಲವರಿಗೆ ಅನಗತ್ಯ ದ್ವೇಷ. ಯಾವುದೇ ಭಾಷೆಯನ್ನು ನಾವು ಜ್ಞಾನದ ಮಾರ್ಗವಾಗಿ ನೋಡಬೇಕೇ ಹೊರತು ಅದನ್ನು ವೈರಿಯಂತೆ ಕಂಡರೆ ಆದರಿಂದ ನಮಗೇ ಅನ್ಯಾಯವಾಗುತ್ತದೆಯೇ ಹೊರತು ಹಿಂದಿ ಮಾತನಾಡುವ ಅಥವಾ ಹಿಂದಿ ನಾಡಿನ ಜನರಿಗಲ್ಲ. ಇಂಗ್ಲಿಷ್ ಬಗ್ಗೆ ಇಲ್ಲದ ತಕರಾರು ನಮ್ಮದೇ ಭಾರತೀಯ ಭಾಷೆಯಾದ ಹಿಂದಿ ಬಗ್ಗೆ ಇದೆ. ಹಿಂದಿ ಹೇರಿಕೆ ಎಂದೇ ಮಾತನಾಡಲು ಆರಂಭಿಸುತ್ತಾರೆ.

ಈ ಹಿಂದಿ ದ್ವೇಷ ಈಗ ಯಾವ ಮಟ್ಟಕ್ಕೆ ತಲುಪಿದೆ ಎಂದರೆ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯುತ್ತಿದ್ದ ಸಮಯದಲ್ಲಿಯೇ ಪತ್ರಿಕಾಗೋಷ್ಠಿ ಕರೆದ ನಮ್ಮ ಶಿಕ್ಷಣ ಸಚಿವರು, ತೃತೀಯ ಭಾಷೆ ಹಿಂದಿಯ ಅಂಕಗಳನ್ನು ನಾವು ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶಕ್ಕೆ ಪರಿಗಣಿಸುವುದಿಲ್ಲ. ಬದಲಾಗಿ ತೃತೀಯ ಭಾಷೆಗೆ ನಾವು ಗ್ರೇಡ್ ನೀಡುತ್ತೇವೆ.

ಹಾಗಾಗಿ ಎಸ್ಸೆಸ್ಸೆಲ್ಸಿ ಒಟ್ಟು ಅಂಕಗಳು 525ಕ್ಕೆ ಫಲಿತಾಂಶ ಪ್ರಕಟಿಸಲಿದ್ದೇವೆ ಎಂದುಬಿಟ್ಟರು. ಕೆಲವು ಕನ್ನಡ ಹೋರಾಟಗಾರರು ದಿಢೀರನೆ ಹೋಗಿ ಸಚಿವರನ್ನು ಹಾರ ಹಾಕಿ ಸನ್ಮಾನವನ್ನೂ ಮಾಡಿಬಿಟ್ಟರು.

ಹೇಗೂ ಲೆಕ್ಕಕ್ಕಿಲ್ಲ ಅಂದಾದ ಮೇಲೆ ಸಹಜವಾಗಿ ಆ ಪರೀಕ್ಷೆಯನ್ನು ಅಷ್ಟು ಗಂಭೀರವಾಗಿ ಪರಿಗಣಿಸಿರುವುದಿಲ್ಲ. ಹಾಗೆ ಎಷ್ಟೋ ವಿದ್ಯಾರ್ಥಿಗಳು ಹೆಚ್ಚು ಗಮನ ಕೊಡದೆ ಬರೆದಿರಲೂ ಸಾಕು. ವಿಶೇಷವೆಂದರೆ ಸಚಿವರ ಮಾತಿನ ಪ್ರಭಾವವೊ ಏನೊ ಹಿಂದಿ ಪರೀಕ್ಷೆಗೆ 13,226 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಅವರು ಪರೀಕ್ಷೆ ಬರೆಯುವ ಗೋಜಿಗೇ ಹೋಗಿಲ್ಲ. ಆದರೆ ಈಗ ಎಲ್ಲವೂ ಉಲ್ಟಾ ಹೊಡೆದಿದೆ.

ಸರ್ಕಾರದ ಈ ನಿರ್ಧಾರ ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ಈಗ ತೃತೀಯ ಭಾಷೆಗೆ ಮೊದಲು ಘೋಷಿಸಿದಂತೆ ಅಂಕವನ್ನೇ ನೀಡಬೇಕು ಎಂದು ಹೇಳಿದೆ. ಏಪ್ರಿಲ್ 24ಕ್ಕೆ ಎಸ್ಸೆಸ್ಸೆಲ್ಸಿ ಫಲಿತಾಂಶ ನೀಡಲು ಸಿದ್ಧವಾಗಿದ್ದ ಶಿಕ್ಷಣ ಇಲಾಖೆ ಈಗ ತಡಬಡಾಯಿಸುತ್ತಿದೆ. ಮೌಲ್ಯಮಾಪನದಲ್ಲಿ ಹೇಗೂ ಅಂಕಗಳನ್ನೇ ಹಾಕಲಾಗಿದೆ. ಅಂಕಪಟ್ಟಿಯಲ್ಲಿ ಮಾತ್ರ ಗ್ರೇಡ್ ನೀಡಬೇಕಿತ್ತು. ಈಗಾಗಲೇ ತೃತೀಯ ಭಾಷೆಗೆ ಗ್ರೇಡ್ ನೀಡುವ ಲೆಕ್ಕದಲ್ಲಿ, ಮಕ್ಕಳ ಅಂಕಪಟ್ಟಿ, ಅವರ ಪರ್ಸಂಟೇಜ್, ರ್‍ಯಾಂಕ್ ಎಲ್ಲವೂ ಸಿದ್ಧವಾಗಿರುತ್ತದೆ. ಈಗ ತೃತೀಯ ಭಾಷೆಯ ಅಂಕಗಳನ್ನು ಸೇರಿಸಿ ಹೊಸದಾಗಿ ಲೆಕ್ಕ ಮಾಡಿ, ಪರ್ಸಂಟೇಜ್ ತೆಗೆದು ಎಲ್ಲ ಮಾಡಬೇಕು. ಅದಕ್ಕೆ ಸಾಫ್ಟ್‌ವೇರ್ ಇದೆ. ಅದಲ್ಲದೆ ಹೇಗೂ ಇಲಾಖೆಯೇ ಮಾಡಿಕೊಂಡ ಅಧ್ವಾನ, ಹಾಗಾಗಿ ಅವರು ಮಾಡುತ್ತಾರೆ ಅಂದುಕೊಳ್ಳೋಣ.

ಆದರೆ ಮಕ್ಕಳ ಕತೆ?

ಹೇಗೂ ಸರ್ಕಾರ ಘೋಷಣೆ ಮಾಡಿದೆ ಎಂದು ತೃತೀಯ ಭಾಷೆ ಪರೀಕ್ಷೆಯನ್ನು ಸರಿಯಾಗಿ ಬರೆಯದ ಅಥವಾ ಗಂಭೀರವಾಗಿ ಪರಿಗಣಿಸದ ವಿದ್ಯಾರ್ಥಿಗಳ ಫಲಿತಾಂಶ ಈಗ ಏರುಪೇರಾಗುತ್ತದೆ. ಅವರ ಒಟ್ಟಾರೆ ಪರ್ಸಂಟೇಜ್ ಕಡಿಮೆಯಾಗುತ್ತದೆ. ಇಲಾಖೆ ಅಂಕ ಅಥವಾ ಗ್ರೇಡ್ ಎರಡಕ್ಕೂ ಸಿದ್ಧತೆ ಮಾಡಿಕೊಂಡಿತ್ತು. ಆದರೆ ವಿದ್ಯಾರ್ಥಿಗಳು? ಅವರಿಗೆಲ್ಲಿ ಈ ರೀತಿಯ ಅವಕಾಶವಿತ್ತು? ಸರ್ಕಾರಿ ಅಧಿಕಾರಿಗಳಿಗೆ ಇದೆಲ್ಲ ಹೊಸ ವಿಷಯಗಳಲ್ಲ, ಯಾರೋ ನ್ಯಾಯಾಲಯದ ಮೊರೆ ಹೋಗಬಹುದು, ಆಗ ಇದೆಲ್ಲ ಬದಲಾಗಬಹುದು ಎಂಬ ಎಚ್ಚರಿಕೆ ಅವರಿಗೆ ಇದ್ದೇ ಇರುತ್ತದೆ.

> ಈ ವರ್ಷ ಶೈಕ್ಷಣಿಕ ವರ್ಷದ ನಡುವೆ ಅಲ್ಲ, ಮುಕ್ಕಾಲು ಭಾಗದಲ್ಲೂ ಅಲ್ಲ, ಬದಲಾಗಿ ಪರೀಕ್ಷೆ ನಡೆಯುತ್ತಿರುವಾಗ, ತೃತೀಯ ಭಾಷೆ ಪರೀಕ್ಷೆಯ ಒಂದೆರಡು ದಿನಗಳ ಹಿಂದೆ ದಿಢೀರನೆ ಈ ರೀತಿಯ ನಿರ್ಧಾರ ಘೋಷಿಸಲಾಗಿದೆ. ಇದು ಯಾವ ರೀತಿಯ ಹುಚ್ಚಾಟವೋ ಆ ದೇವರೆ ಬಲ್ಲ. ಈಗ ಮತ್ತೆ ನ್ಯಾಯಾಲಯದಲ್ಲಿ ನಿರ್ಧಾರಕ್ಕೆ ತಡೆಬಿದ್ದಿದೆ. ಇನ್ನು ಮುಂದಾದರೂ ಶಿಕ್ಷಣ ಇಲಾಖೆ ಹಾಗೂ ಸಚಿವರು ಶೈಕ್ಷಣಿಕ ವರ್ಷದ ಕೊನೆಯ ಹಂತದಲ್ಲಿ ಈ ರೀತಿಯ ನಿರ್ಧಾರಗಳನ್ನು ತೆಗೆದುಕೊಂಡು, ವಿದ್ಯಾರ್ಥಿಗಳ ಜತೆ ಚೆಲ್ಲಾಟವಾಡುವುದನ್ನು ಇನ್ನಾದರೂ ನಿಲ್ಲಿಸಲಿ.

ಅದಕ್ಕೆ ತಕ್ಕ ಸಿದ್ಧತೆಯನ್ನೂ ಅವರು ಮಾಡಿಕೊಂಡಿರುತ್ತಾರೆ. ಆದರೆ ವಿದ್ಯಾರ್ಥಿಗಳಿಗೆ ಇದು ಹೊಸದು.

ಈಗ ಅಕಸ್ಮಾತ್ ಯಾವುದೋ ವಿದ್ಯಾರ್ಥಿ ಅಥವಾ ಪೋಷಕರು ಬಂದು, ಪರೀಕ್ಷೆ ಸಂದರ್ಭದಲ್ಲಿ ಸಚಿವರು ಘೋಷಿಸಿದರು ಎಂಬ ಕಾರಣಕ್ಕೆ ತೃತೀಯ ಭಾಷೆ ಪರೀಕ್ಷೆಯನ್ನು ನಾವು ಸರಿಯಾಗಿ ಬರೆದಿಲ್ಲ. ಈಗ ಅಂಕಗಳನ್ನು ನೀಡುವಂತೆ ನ್ಯಾಯಾಲಯ ಹೇಳಿರುವುದರಿಂದ, ಅದರಿಂದಾಗಿ ಪರ್ಸಂಟೇಜ್ ಕಡಿಮೆಯಾಗಿ ತಮಗೆ ಅನ್ಯಾಯವಾಗುತ್ತದೆ. ರ್‍ಯಾಂಕ್‌ಗಳು ಕೂಡ ತಪ್ಪುವ ಸಾಧ್ಯತೆ ಇರುತ್ತದೆ. ಒಂದೆರಡು ಪರ್ಸಂಟೇಜ್‌ನಲ್ಲಿ ಕಾಲೇಜು ಸೀಟುಗಳು ಕೈತಪ್ಪುವ ಸಾಧ್ಯತೆಗಳು ಕೂಡ ಇವೆ. ಹಾಗಾಗಿ ಇನ್ನೊಮ್ಮೆ ಹಿಂದಿ ಪರೀಕ್ಷೆ ಮಾಡಿಸಬೇಕು ಎಂದು ಅರ್ಜಿ ಹಾಕಿದರೆ? ಆವಾಗ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಣೆಯ ಕತೆ ಏನಾಗಬೇಕು?

ಹಿಂದಿ ದ್ವೇಷಕ್ಕಾಗಿ ಸರ್ಕಾರ ಇಲ್ಲದ ಸಮಸ್ಯೆಯೊಂದನ್ನು ಹೊಸದಾಗಿ ಸೃಷ್ಟಿಸಿತು. ಈ ವರ್ಷ ಒಟ್ಟು 8,18,487 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದಾರೆ. ಅಷ್ಟು ವಿದ್ಯಾರ್ಥಿಗಳು ಹಾಗೂ ಅವರ ಪಾಲಕರಲ್ಲಿ ಅನಗತ್ಯ ಗೊಂದಲ, ಒತ್ತಡ ಸೃಷ್ಟಿಸಿದೆ. ವಿದ್ಯಾರ್ಥಿಗಳ ಜೀವನದಲ್ಲಿ ಎಸ್ಸೆಸ್ಸೆಲ್ಸಿ ಅತ್ಯಂತ ಪ್ರಮುಖ ಘಟ್ಟ. ಅಂತಹ ಹಂತದಲ್ಲಿ ಈ ರೀತಿಯ ಗೊಂದಲಗಳು, ಸಮಸ್ಯೆಗಳು ಅವರ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಹೆಚ್ಚು. ಇದು ಅವರ ಜೀವನದಲ್ಲಿ ಕಾಯಂ ಆಗಿ



ಅಂಕಪಟ್ಟಿಯಲ್ಲಿ ದಾಖಲಾಗಿಬಿಡುತ್ತದೆ. ಯಾವಾಗೆಲ್ಲ ಅವರು ಎಸ್ಸೆಸ್ಸೆಲ್ಸಿ ಪರೀಕ್ಷೆಯ ಅಂಕಪಟ್ಟಿ ನೋಡುತ್ತಾರೊ ಆವಾಗೆಲ್ಲ ಸರ್ಕಾರದ ಎಡವಟ್ಟು ಅವರಿಗೆ ನೆನಪಾಗದೆ ಇರುವುದಿಲ್ಲ.

ಇನ್ನೂ ಬೇಸರದ ಸಂಗತಿಯೇನೆಂದರೆ, ಶಿಕ್ಷಣ ಇಲಾಖೆ ಹೀಗೆ ಮಾಡುತ್ತಿರುವುದು ಇದೇ ಮೊದಲೇನೂ ಅಲ್ಲ. ಡಿಸೆಂಬರ್, ಜನವರಿಯಲ್ಲಿ ಇದ್ದಕ್ಕಿದ್ದಂತೆ ಶಿಕ್ಷಣ ಇಲಾಖೆ ಜ್ಞಾನೋದಯವಾದಂತೆ ಹೊಸ ಹೊಸ ಆದೇಶಗಳನ್ನು ಮಾಡುತ್ತಿದೆ. ಮೂರು ಪರೀಕ್ಷೆ ಎಂಬ ಅದ್ಭುತ ಕಲ್ಪನೆ ಹೊರಟಿದ್ದು ಕೂಡ ಶೈಕ್ಷಣಿಕ ವರ್ಷದ ಮುಕ್ಕಾಲು ಭಾಗದ ಸಮಯದಲ್ಲಿಯೆ. ಈ ಹಿಂದೆ 7ನೇ ತರಗತಿಗೆ ಪಬ್ಲಿಕ್ ಪರೀಕ್ಷೆ ಮಾಡಬೇಕೆಂದು ಜ್ಞಾನೋದಯವಾಗಿದ್ದು ಕೂಡ ಜನವರಿಯಲ್ಲಿ. ಕೊನೆಗೆ ಅದು ಸುಪ್ರೀಂ ಕೋರ್ಟ್‌ತನಕ ಹೋಗಿ ರದ್ದಾಯಿತು. ಹಾಗೆ ಪಬ್ಲಿಕ್ ಪರೀಕ್ಷೆಯನ್ನು ರದ್ದು ಮಾಡುವ ಸಮಯದಲ್ಲಿ ಸುಪ್ರೀಂ ಕೋರ್ಟ್, ಈ ರೀತಿ ಯಾವುದೇ ನಿಯಮ, ಹೊಸ ಸಂಗತಿಗಳನ್ನು ಜಾರಿ ಮಾಡುವುದಾದರೆ ಅದನ್ನು ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಮಾಡಿ. ಯಾವ ಯಾವಾಗಲೋ ಈ ರೀತಿ ಬದಲಾವಣೆ ಮಾಡಿ ವಿದ್ಯಾರ್ಥಿಗಳಲ್ಲಿ ಗೊಂದಲ, ಸಮಸ್ಯೆ ಸೃಷ್ಟಿಸಬೇಡಿ. ಆ ಕಾರಣಕ್ಕಾಗಿಯೇ ಪಬ್ಲಿಕ್ ಪರೀಕ್ಷೆ ರದ್ದುಪಡಿಸುತ್ತಿದ್ದೇನೆ ಎಂದು ಸ್ಪಷ್ಟವಾಗಿ ಹೇಳಿತ್ತು.

ಅಷ್ಟೆಲ್ಲ ಆದ ನಂತರವೂ ಇಲಾಖೆ ಪಾಠ ಕಲಿತಂತಿಲ್ಲ. ಬದಲಾಗಿ ಹಳೇ ಚಾಳಿಯನ್ನೇ ಮತ್ತೆ ಮುಂದುವರಿಸಿ, ಈ ವರ್ಷ ಶೈಕ್ಷಣಿಕ ವರ್ಷದ ನಡುವೆ ಅಲ್ಲ, ಮುಕ್ಕಾಲು ಭಾಗದಲ್ಲೂ ಅಲ್ಲ, ಬದಲಾಗಿ ಪರೀಕ್ಷೆ ನಡೆಯುತ್ತಿರುವಾಗ, ತೃತೀಯ ಭಾಷೆ ಪರೀಕ್ಷೆಯ ಒಂದೆರಡು ದಿನಗಳ ಹಿಂದೆ ದಿಢೀರನೆ ಈ ರೀತಿಯ ನಿರ್ಧಾರ ಘೋಷಿಸಲಾಗಿದೆ. ಇದು ಯಾವ ರೀತಿಯ ಹುಚ್ಚಾಟವೋ ಆ ದೇವರೆ ಬಲ್ಲ. ಈಗ ಮತ್ತೆ ನ್ಯಾಯಾಲಯದಲ್ಲಿ ನಿರ್ಧಾರಕ್ಕೆ ತಡೆಬಿದ್ದಿದೆ. ಇನ್ನು ಮುಂದಾದರೂ ಶಿಕ್ಷಣ ಇಲಾಖೆ ಹಾಗೂ ಸಚಿವರು ಶೈಕ್ಷಣಿಕ ವರ್ಷದ ಕೊನೆಯ ಹಂತದಲ್ಲಿ ಈ ರೀತಿಯ ನಿರ್ಧಾರಗಳನ್ನು ತೆಗೆದುಕೊಂಡು, ವಿದ್ಯಾರ್ಥಿಗಳ ಜತೆ ಚೆಲ್ಲಾಟವಾಡುವುದನ್ನು ಇನ್ನಾದರೂ ನಿಲ್ಲಿಸಲಿ.

ಮಹಿಳಾ ಮೀಸಲಾತಿ: ನಿರೀಕ್ಷೆ ಇನ್ನೂ ಜೀವಂತ?

ಡಾ. ಮೈತ್ರಿ ಭಟ್, ವಿಟ್ಲ



ಕೇವಲ ಅಡುಗೆ ಮನೆಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾಗಿದ್ದ ಸ್ತ್ರೀಯು ಇಂದು ಬಾನೆತ್ತರಕೆ ಚಿಮ್ಮುವಷ್ಟು ವಿಶಾಲವಾಗಿ, ವೈವಿಧ್ಯಮಯವಾಗಿ ಬೆಳೆದಿದ್ದಾಳೆ. ಇಂತಹ ಮಹಿಳೆ ಭಾರತೀಯ ಪ್ರಜಾಪ್ರಭುತ್ವದ ಅಭಿವೃದ್ಧಿಯ ಪಯಣದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರೂ ಮಹಿಳೆಯರ ಪ್ರಾತಿನಿಧಿತ್ವ ಎಂಬ ಪ್ರಶ್ನೆ ದೀರ್ಘಕಾಲದಿಂದಲೂ ಚರ್ಚೆಯ ವಿಷಯವಾಗಿದೆ. ಈ ಅಸಮಾನತೆಯನ್ನು ಸರಿಪಡಿಸುವಲ್ಲಿ ಮಹಿಳಾ ಮೀಸಲಾತಿ ಒಂದು ಐತಿಹಾಸಿಕ ಹೆಜ್ಜೆಯಾಗಿದ್ದರೂ ಆ ಮಸೂದೆಯೀಗ ಸೋಲು ಕಂಡಿದೆ.

ಮಹಿಳೆಯರು ತಮ್ಮ ಸಾಮರ್ಥ್ಯದಿಂದಲೇ ಸ್ಥಾನ ಗಳಿಸಬೇಕು, ಮೀಸಲಾತಿಯ ಅವಲಂಬನೆ ಬೇಡ ಎಂಬ ಮಾತು, ವಾದ ಒಂದೆಡೆಯಿದ್ದರೂ ಮಹಿಳಾ ಮೀಸಲಾತಿಯ ಮೂಲ ಉದ್ದೇಶವೇ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದು. ಅದರಲ್ಲೂ ಮಹಿಳೆಯರು ಸಮಾಜದಲ್ಲಿನ ಸಾಂಸ್ಕೃತಿಕ, ಆರ್ಥಿಕ, ಮತ್ತು ಶೈಕ್ಷಣಿಕ ಅಡೆತಡೆಗಳ ಪರಿಣಾಮವಾಗಿ ರಾಜಕೀಯ ಕ್ಷೇತ್ರದಲ್ಲಿ ಮುಂದುವರಿಯುವುದು ಸುಲಭವಲ್ಲ. ಆದುದರಿಂದ ಮೀಸಲಾತಿಯ ಮೂಲಕ ಸಮಾನತೆ ತರುವ ಪ್ರಯತ್ನವಿದು. ಪಂಚಾಯತ್ ಮಟ್ಟದಲ್ಲಿ ಮಹಿಳಾ ಮೀಸಲಾತಿ ಜಾರಿಗೆ ಬಂದ ನಂತರ ಅನೇಕ ಮಹಿಳೆಯರು ನಾಯಕತ್ವವನ್ನು ಸ್ವೀಕರಿಸಿದ್ದು ಇದು ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ ಸಾಮಾಜಿಕ ಬದಲಾವಣೆಗೆ ದಾರಿ ಮಾಡಿಕೊಟ್ಟಿದೆ. ಹೀಗಿದ್ದೂ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಮಾತ್ರ ಇನ್ನೂ ಕಡಿಮೆಯೇ ಇದೆ.

ಕಳೆದ ಕೆಲವು ದಶಕಗಳಿಂದ ನಡೆಯುತ್ತಿರುವ ಈ ಚರ್ಚೆಯ ಮಧ್ಯೆ ಮಹಿಳಾ ಮೀಸಲಾತಿ ಮಸೂದೆ ಒಂದು ವೇಳೆ ಸಂಸತ್ತಿನಲ್ಲಿ ಅಂಗೀಕಾರವಾಗುತ್ತಿದ್ದರೆ ದೇಶದಲ್ಲಿಯೇ ಈ ನಿರ್ಣಯ ಒಂದು ಮಹತ್ವದ ಹೆಜ್ಜೆಯಾಗಬೇಕಾಗಿತ್ತು. ಮಹಿಳೆಯರಿಗೆ 33% ಮೀಸಲಾತಿ ನೀಡುವ ಉದ್ದೇಶದಿಂದ ರೂಪುಗೊಂಡ ಈ ಮಸೂದೆ ಮಹಿಳೆಯರಿಗೆ ರಾಜಕೀಯವಾಗಿಯೂ ಅವಕಾಶಗಳನ್ನು ವಿಸ್ತರಿಸುವ ದಿಕ್ಕಿನಲ್ಲಿ ಕ್ರಾಂತಿಕಾರಿಯಾಗಬಹುದಿತ್ತು. ಆದರೆ ಈ ಮಸೂದೆಗೆ ಉಂಟಾದ ಸೋಲು ಕೇವಲ ಕಾನೂನಿನ ವಿಫಲತೆ ಮಾತ್ರವಾಗಿರದೆ ಸಮಾಜದ ಮನೋಭಾವ, ರಾಜಕೀಯ ಉದ್ದೇಶಗಳು ಮತ್ತು ಲಿಂಗ ಸಮಾನತೆಯ ವಿಚಾರಗಳನ್ನೇ ಪ್ರಶ್ನೆಗೊಳಪಡಿಸುತ್ತದೆ.

ಮೊದಲನೆಯದಾಗಿ ಇದು ರಾಜಕೀಯ ಪಕ್ಷಗಳ ದ್ವಂದ್ವ ನಿಲುವನ್ನು ಸೂಚಿಸುತ್ತದೆ. ಮಹಿಳಾ ಸಬಲೀಕರಣದ ಬಗ್ಗೆ ಸದಾ ಘೋಷಣೆಗಳನ್ನು ಕೂಗುತ್ತಾ ಬೊಬ್ಬಿರಿಯುವ ಪಕ್ಷಗಳು ಕಾರ್ಯರೂಪಕ್ಕೆ ಬರುವ ಕ್ಷಣದಲ್ಲಿ ಹಿಂದೇಟು ಹಾಕಿರುವುದರಿಂದ ದ್ವಂದ್ವ ನಿಲುವು ಸ್ಪಷ್ಟವಾಗಿದೆ. ಜೊತೆಗೆ ಸಮಾಜದಲ್ಲಿ ಹಿಂದಿನಿಂದಲೂ ಬೇರು ಬಿಟ್ಟಿರುವ, ಸದ್ದಿಲ್ಲದೇ ಮನದೊಳಗೆ ಅಡಗಿರುವ ಪಿತೃತ್ವ ಮನೋಭಾವದ ಬಗೆಗೂ ಮತ್ತೆ ಯೋಚಿಸುವಂತೆ ಮಾಡಿ ಮಹಿಳೆಯರು ಆಡಳಿತ ಚುಕ್ಕಾಣಿ ಹಿಡಿಯಲು ಇನ್ನೂ ಅಡ್ಡಿಗಳಿವೆ ಎಂಬುದನ್ನು ಈ ಘಟನೆ ಮತ್ತೊಮ್ಮೆ ಸಾಬೀತುಪಡಿಸಿದೆ. ಸೂಕ್ಷ್ಮವಾಗಿ ಗಮನಿಸಿದರೆ ಮಹಿಳೆಯರ ಸಾಮರ್ಥ್ಯವನ್ನು ಪ್ರಶ್ನಿಸುವ ಧೋರಣೆ,



ಮಹಿಳೆಯರೇ ಸಿದ್ಧರಿಲ್ಲ ಎಂಬ ನೆಪದಲ್ಲಿ ಅವರಿಗೆ ಅವಕಾಶಗಳನ್ನು ನಿರಾಕರಿಸುವುದು ಇವೆಲ್ಲವೂ ಪ್ರಗತಿಗೆ ಅಡ್ಡಿಯಾಗಿವೆ.

ಮಸೂದೆ ಜಾರಿಯನ್ನು ಜನಗಣತಿ ಮತ್ತು ಕ್ಷೇತ್ರ ಪುನರ್ವಿಂಗಡಣೆ ನಂತರಕ್ಕೆ ಮುಂದೂಡಿದ್ದರೂ, ಈ ಸೋಲಿನಿಂದ ನಾವೊಂದು ಪ್ರಮುಖ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ನಿಜವಾಗಿಯೂ ನಾವು ಲಿಂಗ ಸಮಾನತೆಯ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿದ್ದೇವೆಯೇ? ಇದನ್ನು ಮತ್ತೊಂದು ದೃಷ್ಟಿಕೋನದಿಂದ ನೋಡಿದರೆ ಈ ಸೋಲು ಮತ್ತೊಂದು ಅವಕಾಶವೂ ಹೌದು. ಇದು ಚರ್ಚೆಯನ್ನು ಮತ್ತೆ ಜೀವಂತಗೊಳಿಸಿ ಮಹಿಳಾ ಸಂಘಟನೆಗಳು, ನಾಗರಿಕ ಸಮಾಜ ಮತ್ತು ಯುವಜನತೆ ಈ ವಿಷಯವನ್ನು ಮತ್ತಷ್ಟು ಗಂಭೀರವಾಗಿ ಯೋಚಿಸುವಂತೆ ಮಾಡಿದೆ. ಸಾಮಾನ್ಯವಾಗಿ ಒಂದು ಸಮಾಜದ ಒತ್ತಡಕ್ಕೆ ರಾಜಕೀಯ ನಿರ್ಧಾರಗಳನ್ನು ಬದಲಾಯಿಸುವ ಶಕ್ತಿಯಿದೆ.

ಕೇವಲ ಸಂಖ್ಯೆಯ ವಿಷಯವಲ್ಲ

ಹಾಗೆಂದು ಮಹಿಳೆಯರ ರಾಜಕೀಯ ಪ್ರತಿನಿಧಿತ್ವವು ಕೇವಲ ಸಂಖ್ಯೆಯ ವಿಷಯವಲ್ಲ; ಅದು ನೀತಿ ರೂಪಿಸುವ ಪ್ರಕ್ರಿಯೆಯ ಗುಣಮಟ್ಟವನ್ನು ಕೂಡಾ ನಿರ್ಧರಿಸುತ್ತದೆ. ಮಹಿಳೆಯರು ಆಡಳಿತದಲ್ಲಿ ಹೆಚ್ಚು ಭಾಗವಹಿಸಿದಾಗ ಆರೋಗ್ಯ, ಶಿಕ್ಷಣ, ಮಕ್ಕಳ ಕಲ್ಯಾಣ ಮತ್ತು ಸಾಮಾಜಿಕ ನ್ಯಾಯದ ವಿಷಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಸಿಗುತ್ತದೆ ಎಂಬುದು ಅಧ್ಯಯನಗಳಿಂದ ಸಾಬೀತಾಗಿದೆ. ಹೀಗಾಗಿ ಮಹಿಳೆಯರ ಪ್ರತಿನಿಧಿತ್ವ ಹೆಚ್ಚಾದರೆ ಸಮಾಜದ ಸಮಗ್ರ ಅಭಿವೃದ್ಧಿಗೆ ಸಹಕಾರಿ ಆಗಬಹುದು.

ಹಾಗೆಂದು ಮಹಿಳೆಯರಿಗೆ ಮೀಸಲಾತಿ ಸಿಗುವುದರಿಂದಲೇ ಸಮಾನತೆ ಸಾಧ್ಯವಾಗುವುದಿಲ್ಲ. ರಾಜಕೀಯ ಪಕ್ಷಗಳು ಕೂಡಾ ಮಹಿಳಾ ಅಭ್ಯರ್ಥಿಗಳನ್ನು ನಾಯಕತ್ವಕ್ಕೆ ಉತ್ತೇಜಿಸುವ ಮನೋಭಾವ ಬೆಳೆಸಿಕೊಳ್ಳಬೇಕಿದೆ. ಇಲ್ಲವಾದರೆ ಪ್ರಾಕ್ಸಿ ರಾಜಕೀಯ ಹೆಚ್ಚಾಗುವ ಸಾಧ್ಯತೆ ಇದೆ. ಅಂದರೆ ಮಹಿಳೆಯರು ಅಧಿಕಾರದಲ್ಲಿದ್ದರೂ ನಿರ್ಧಾರಗಳನ್ನು ಪುರುಷರು ತೆಗೆದುಕೊಳ್ಳುವ ಸ್ಥಿತಿ ಕೆಲವೆಡೆ ಕಂಡುಬರುತ್ತದೆ. ಇದು ಮೀಸಲಾತಿಯ ಮೂಲ ಉದ್ದೇಶವನ್ನೇ ಹಾಳುಗೆಡಹುತ್ತದೆ. ಮಹಿಳೆಯರ ಸ್ವತಂತ್ರ ನಾಯಕತ್ವ ಬೆಳೆಯಬೇಕಾದರೆ ಅವರಿಗೆ ಶಿಕ್ಷಣ, ಜಾಗೃತಿ ಮತ್ತು ಆರ್ಥಿಕ ಸ್ವಾವಲಂಬನೆ ಅಗತ್ಯ.

> ಮಹಿಳೆಯರ ರಾಜಕೀಯ ಪ್ರತಿನಿಧಿತ್ವವು ಕೇವಲ ಸಂಖ್ಯೆಯ ವಿಷಯವಲ್ಲ; ಅದು ನೀತಿ ರೂಪಿಸುವ ಪ್ರಕ್ರಿಯೆಯ ಗುಣಮಟ್ಟವನ್ನು ಕೂಡಾ ನಿರ್ಧರಿಸುತ್ತದೆ.

ಸಾಮಾನ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಪ್ರಭಾವ ಹೊಂದಿರುವ ಕುಟುಂಬಗಳ ಮಹಿಳೆಯರು ಮೀಸಲಾತಿಯಿಂದ ಹೆಚ್ಚಿನ ಪ್ರಯೋಜನ ಪಡೆಯುತ್ತಾರೆ ಎಂಬ ಟೀಕೆ ಇದೆ. ಹೀಗಾಗಿ ಮೀಸಲಾತಿಯ ಲಾಭವು ಸಮಾನವಾಗಿ ಹಂಚಿಕೆಯಾಗುವುದಿಲ್ಲ ಎಂಬ ಆತಂಕವೂ ಇದೆ. ಮಾತ್ರವಲ್ಲ, ಇಂದಿನ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ವಿಷಯವು ಚುನಾವಣೆ ಸಮಯದಲ್ಲಿ ಮಹಿಳೆಯರ ಮತಗಳನ್ನು ಆಕರ್ಷಿಸಲು ರಾಜಕೀಯ ಲಾಭಕ್ಕಾಗಿ ಬಳಸಲ್ಪಡುತ್ತದೆ ಎಂಬ ಆರೋಪವೂ ಇದೆ. ಜೊತೆಗೆ ಮಹಿಳೆಯರು ಕೇವಲ ಸಂಖ್ಯೆಯಲ್ಲಿ ಪ್ರತಿನಿಧಿಸಿದರೆ ಸಾಲದು. ಅವರಿಗೆ ಪರಿಣಾಮಕಾರಿ ನಾಯಕತ್ವಕ್ಕಾಗಿ ತರಬೇತಿ, ಮಾರ್ಗದರ್ಶನ ಮತ್ತು ರಾಜಕೀಯ ಜ್ಞಾನ ಅಗತ್ಯ ಹಾಗೂ ಅದು ಕೇವಲ ಕಾಗದದಲ್ಲಿನ ಸುಧಾರಣೆಯಾಗಿ ಮಾತ್ರವೇ ಆಗಿರದೆ ಮಸೂದೆ ಜಾರಿ, ಸಮಗ್ರ ಒಳಮೀಸಲಾತಿ ಮತ್ತು ಮಹಿಳೆಯರ ನೈಜ ಸಬಲೀಕರಣವನ್ನು ಒಳಗೊಂಡಾಗ ಮಾತ್ರ ಮಸೂದೆಯ ಉದ್ದೇಶ ಈಡೇರಲು ಸಾಧ್ಯ.

ಪುಟ್ಟ ವಿರಾಮ ಮಾತ್ರ

ಈ ಸಂದರ್ಭದಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಸೋಲು ಎಂಬುದು ಒಂದು ಪುಟ್ಟ ವಿರಾಮ ಮಾತ್ರ. ಏಕೆಂದರೆ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹೆಚ್ಚಿಸಬೇಕೆಂಬುದು ಕೇವಲ ಘೋಷಣೆಯಲ್ಲ, ಅದು ಕಾರ್ಯರೂಪಕ್ಕೆ ಬರಬೇಕಾದ ಅಗತ್ಯವಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ನೀಡಲಾದ ಮೀಸಲಾತಿಯು ಹಲವಾರು ಉತ್ತಮ ಫಲಿತಾಂಶಗಳನ್ನು ನೀಡಿರುವುದು ನಮ್ಮ ಕಣ್ಣ ಮುಂದಿದೆ. ಅದೇ ಮಾದರಿಯನ್ನು ರಾಷ್ಟ್ರಕ್ಕೂ ವಿಸ್ತರಿಸುವುದು ಉಚಿತವೂ ಹೌದು. ಅಷ್ಟಾದರೆ ಸಾಲದು, ಸಾಮಾಜಿಕ ಮನೋಭಾವದಲ್ಲಿ ಬದಲಾವಣೆ ಅಗತ್ಯವಾಗಿದ್ದು, ಮಹಿಳೆಯರನ್ನು ಸಮಾನವಾಗಿ ಕಾಣುವ ಸಂಸ್ಕೃತಿ ಬೆಳೆಯಬೇಕು. ಮನೆಯಿಂದಲೇ ಲಿಂಗ ಸಮಾನತೆಯ ಮೌಲ್ಯಗಳನ್ನು ಬೆಳೆಸಬೇಕು ಹಾಗೂ ಮಹಿಳೆಯರು ಸಮಾಜದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಸ್ಥಿತಿಗೆ ಬಂದಾಗ ಮಾತ್ರ ನಿಜವಾದ ಸಮಾನತೆ ಸಾಧ್ಯ. ಇಲ್ಲಿ ಮಹಿಳೆಯರಿಗೆ ಅವಕಾಶ ನೀಡುವುದು ಎಂದರೆ ಅದು ಕೃಪೆಯಲ್ಲ. ಅದು ಅವರ ಹಕ್ಕು. ಆದುದರಿಂದ ಆ ಹಕ್ಕನ್ನು ಒದಗಿಸಲು ವಿಫಲವಾದರೆ ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಯೇ ಅಪೂರ್ಣವಾಗುತ್ತದೆ.

ಒಟ್ಟಿನಲ್ಲಿ ಇದರ ಯಶಸ್ಸು ಕೇವಲ ಕಾನೂನುಬದ್ಧ ವ್ಯವಸ್ಥೆಯ ಮೇಲೆ ಮಾತ್ರ ಅವಲಂಬಿತವಾಗಿಲ್ಲ; ಅದು ಸಾಮಾಜಿಕ ಬದಲಾವಣೆ, ರಾಜಕೀಯ ಇಚ್ಛಾಶಕ್ತಿ ಮತ್ತು ಮಹಿಳೆಯರ ಸಕ್ರೀಯ ಭಾಗವಹಿಸುವಿಕೆಯ ಮೇಲೆ ಅವಲಂಬಿತವಾಗಿದೆ. ಹೀಗಿರುವಾಗ ಈ ಕಾಯ್ದೆಯನ್ನು ಕೇವಲ ರಾಜಕೀಯ ಸಾಧನವಾಗಿ ಬಳಸದೇ ನಿಜ ಸಬಲೀಕರಣದ ಮಾಧ್ಯಮವಾಗಿ ರೂಪಿಸುವುದು ಎಲ್ಲರ ಜವಾಬ್ದಾರಿಯಾಗಿದೆ.

ಲಾಲೂ ಜಂಗಲ್‌ರಾಜ್‌ಗಿಂತ ಕೆಟ್ಟದು 'ಮಮತಾ ಜಂಗಲ್‌ರಾಜ್'

ಮಜುಂದಾರ್

ಬಿಹಾರದಲ್ಲಿ ಲಾಲೂಪ್ರಸಾದ್ ಅವರ ಆಡಳಿತ ಕಾಲವನ್ನು ದೇಶದ ಅತ್ಯಂತ ದುರಾಡಳಿತದ ಅವಧಿ ಎಂಬುದಾಗಿ ಪರಿಗಣಿಸಲಾಗುತ್ತದೆ. ಯಾವುದೇ ಕೆಟ್ಟ ಆಡಳಿತವನ್ನು ಅದರೊಂದಿಗೆ ಹೋಲಿಸಲಾಗುತ್ತದೆ. 1990ರಿಂದ 2000 ಇಸವಿಯವರೆಗೆ ಬಿಹಾರದಲ್ಲಿ ಅಪರಾಧಗಳು, ಜಾತಿ ಸಂಘರ್ಷ, ಅಪಹರಣ, ಕೊಲೆ, ಅತ್ಯಾಚಾರ, ಆರ್ಥಿಕ ದುಃಸ್ಥಿತಿ ಮುಂತಾದವೆಲ್ಲ ದೈನಂದಿನ ವ್ಯವಹಾರದಂತಿದ್ದವು. ಲಾಲೂ ಪ್ರಸಾದ್ ಆಡಳಿತವನ್ನು ಜಂಗಲ್‌ರಾಜ್ ಎಂದೇ ಕರೆಯಲಾಗುತ್ತಿತ್ತು. ಅವರ ಬಳಿಕ ಅಧಿಕಾರಕ್ಕೇರಿದ ಪತ್ನಿ ರಾಬ್ಡಿ ದೇವಿ ಆಡಳಿತಾವಧಿ ಕೂಡಾ ಅದಕ್ಕಿಂತ ಭಿನ್ನಾಗಿರಲಿಲ್ಲ. ಏಕೆಂದರೆ ಅಧಿಕಾರದ ಸೂತ್ರ ಲಾಲೂ ಪ್ರಸಾದ್‌ರ ಕೈಯಲ್ಲೇ ಇತ್ತು. ಲಾಲೂ ಪ್ರಸಾದ್‌ರ ಜಂಗಲ್‌ರಾಜ್‌ನ್ನು ಮೀರಿಸುವ ದುರಾಡಳಿತ ಇನ್ನಾವುದೂ ಇಲ್ಲ ಎನ್ನಲಾಗುತ್ತಿತ್ತು.

ಈಗ ನೋಡಿದರೆ ಪ.ಬಂಗಾಳದ ಮಮತಾ ಬ್ಯಾನರ್ಜಿ ಆಡಳಿತವು ಬಿಹಾರದ ಜಂಗಲ್‌ರಾಜ್‌ನ್ನೂ ಮೀರಿಸುವ ಮಟ್ಟಿಗೆ ಕುಪ್ರಸಿದ್ಧಿ ಪಡೆಯುತ್ತಿದೆ. ಮಮತಾ ಆಡಳಿತವು ಪ.ಬಂಗಾಳವಷ್ಟೇ ಅಲ್ಲದೇ ಇಡೀ ದೇಶದ ಪಾಲಿಗೆ ಅಪಾಯಕಾರಿಯಾಗಿ ಪರಿಣಮಿಸುತ್ತಿದೆ.

ನರೇಂದ್ರ ಮೋದಿಯವರು ಟಿಎಂಸಿ ಅಧಿಕಾರವನ್ನು 'ಮಹಾ ಜಂಗಲ್‌ರಾಜ್' ಎಂಬುದಾಗಿ ಇತ್ತೀಚೆಗೆ ಬಣ್ಣಿಸಿದ್ದು ಅತಿಶಯೋಕ್ತಿಯಾಗಿ ಕಂಡುಬರುವುದಿಲ್ಲ. ಮಮತಾ ದುರಾಡಳಿತವು ರಾಜ್ಯದ ವ್ಯವಸ್ಥೆಯನ್ನೇ ಹದಗೆಡಿಸಿದ್ದು, ರಾಜ್ಯದಲ್ಲಿ ಅಪರಾಧ, ಗೂಂಡಾ ಪ್ರವೃತ್ತಿ ಹೆಚ್ಚುವಂತಾಗಿದೆ. ಅದರ ಜತೆಗೇ ರಾಷ್ಟ್ರ ವಿರೋಧಿ ಶಕ್ತಿಗಳೂ ಹೆಚ್ಚೆಚ್ಚು ಸಕ್ರಿಯವಾಗಿದ್ದು, ಇದು ಇಡೀ ದೇಶದ ಮೇಲೆಯೇ ದೀರ್ಘಾವಧಿ ದುಷ್ಪರಿಣಾಮ ಬೀರುವಂತಾದ್ದಾಗಿದೆ.

ಪ.ಬಂಗಾಳದಲ್ಲಿ ರಾಜಕೀಯ ಹಿಂಸಾಚಾರವು ದೈನಂದಿನ ವ್ಯವಹಾರದಂತಾಗಿದೆ. ಮಮತಾ ಪಕ್ಷವು ರಾಜಕೀಯ ಹಿಂಸೆಯನ್ನು ಸಾಂಸ್ಥಿಕಗೊಳಿಸಿದೆ. ಅದೀಗ ಸಿಂಡಿಕೇಟ್ ರಾಜ್‌ನಂತಾಗಿದೆ. ಗೋವು ಸಾಗಣೆ, ಕಲ್ಲಿದ್ದಲು ಸಾಗಣೆ, ಮರಳು ಸಾಗಣೆ, ರಿಯಲ್ ಎಸ್ಟೇಟ್, ಶಿಕ್ಷಣ, ಆರೋಗ್ಯ, ಮೂಲಸೌಲಭ್ಯ ಮತ್ತು ಪ್ರಕೃತಿ ವಿಕೋಪ ಪರಿಹಾರ ಮೊದಲಾದವುಗಳೆಲ್ಲಾ ಮಾಫಿಯಾ ಕೈಗೆ ಒಪ್ಪಿಸಲ್ಪಟ್ಟಿದೆ. ರಾಜಕೀಯ ಬೆದರಿಕೆ ಮತ್ತು ಕೊಲೆಗಳು ಲಾಲೂ ಜಂಗಲ್‌ರಾಜ್‌ನಲ್ಲಿ ಕಂಡುಬಂದುದಕ್ಕಿಂತಲೂ ಅಧಿಕವಾಗಿದೆ.

ಆರ್ಥಿಕ ಮಾನದಂಡದಲ್ಲಿ ಮಮತಾ ಸರಕಾರವು ಲಾಲೂ ಸರಕಾರಕ್ಕಿಂತ ತುಸು ಮೇಲಿದೆ ನಿಜ. ಒಟ್ಟು ಜಿಡಿಪಿ ಲಾಲೂ ಆಡಳಿತಾವಧಿಯಲ್ಲಿ ಶೇ. 2–4 ಇದ್ದರೆ, ಮಮತಾ ಅವಧಿಯಲ್ಲಿ ಶೇ. 6–7 ಇದೆ. ಬಿಹಾರವು ಸದಾ ಬಡತನದ ಪರಿಸ್ಥಿತಿಯಲ್ಲೇ ಇದ್ದರೆ ಪಂ.ಬಂಗಾಳವು ಅದಕ್ಕಿಂತ ತುಸು ಮೇಲ್ಮಟ್ಟದಲ್ಲಿದೆ.



ಆದರೆ ಮಮತಾ ಆಡಳಿತಾವಧಿಯಲ್ಲಿ ಕೈಗಾರಿಕೆಗಳು ಮತ್ತು ಹೂಡಿಕೆಯು ಅಧೋಗತಿ ಕಾಣುತ್ತಿದೆ. ಕಂಪೆನಿಗಳೆಲ್ಲಾ ಪ.ಬಂಗಾಳದಿಂದ ಗುಳೇ ಏಳುತ್ತಿವೆ. 2011ರಿಂದ 2025ರ ಅವಧಿಯಲ್ಲಿ 6688 ಕಂಪನಿಗಳು ಪ.ಬಂಗಾಳದಿಂದ ಬೇರೆ ರಾಜ್ಯಕ್ಕೆ ತೆರಳಿವೆ. ಮಮತಾ ಆಡಳಿತಾವಧಿಯಲ್ಲಿ ರಾಜ್ಯದ ಸಾಲವು ರೂ. 7 ಲಕ್ಷ ಕೋಟಿ ತಲುಪಿದೆ. ಒಂದು ಕಾಲದಲ್ಲಿ ಪ.ಬಂಗಾಳದ ಶಿಕ್ಷಣ ವ್ಯವಸ್ಥೆಯು ಪ್ರಖ್ಯಾತವಾಗಿತ್ತು. ಆದರೆ ಈಗ ಅದು ಕುಸಿಯತೊಡಗಿದೆ. ಕಾಲೇಜು ಕ್ಯಾಂಪಸ್‌ಗಳು ರಾಜಕೀಯ ಮತ್ತು ಹಿಂಸೆಯ ಅಡ್ಡೆಗಳಾಗಿವೆ.

ಎಡಪಂಥೀಯರ ಆಳ್ವಿಕೆಯಿಂದಲೇ ರಾಜ್ಯದ ಈ ಅವನತಿ ಆರಂಭವಾಗಿದ್ದು ಮಮತಾ ಅವಧಿಯಲ್ಲಿ ಇನ್ನೂ ಪತನ ಕಂಡಿದೆ. ಕಾನೂನು ವ್ಯವಸ್ಥೆಯಂತೂ ಲಾಲೂ ಅವಧಿಯ ಬಿಹಾರಕ್ಕಿಂತಲೂ ಕುಸಿದಿದೆ. 2011ರಿಂದ 2020ರ ಅವಧಿಯಲ್ಲಿ ಪ.ಬಂಗಾಳದಲ್ಲಿ 114 ರಾಜಕೀಯ ಕೊಲೆಗಳು ಸಂಭವಿಸಿವೆ. 2019ರ ಲೋಕಸಭಾ ಚುನಾವಣೆಯ ಬಳಿಕ ಬಿಜೆಪಿಯ ನೂರಾರು ಮಂದಿ ಸದಸ್ಯರನ್ನು ಕೊಲ್ಲಲಾಗಿದೆ ಎಂದು ಪಕ್ಷವು ಆರೋಪಿಸುತ್ತಿದೆ. 2021ರ ಚುನಾವಣೆ ನಂತರ ನಡೆದ ಹಿಂಸಾಚಾರದಲ್ಲಿ ಬಹಳಷ್ಟು ಬಿಜೆಪಿ ಕಾರ್ಯಕರ್ತರು ಸಾವಿಗೀಡಾಗಿದ್ದರು.

> ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಆಡಳಿತವು ಬಿಹಾರದ ಲಾಲೂ ಆಡಳಿತಕ್ಕಿಂತ ಹೆಚ್ಚು ದುರಾಡಳಿತ ಹೊಂದಿದೆ. ಜತೆಗೇ ಇದು ದೇಶದ ಪಾಲಿಗೂ ಅಪಾಯಕಾರಿಯಾಗಿದೆ.

90ರ ದಶಕದ ಬಿಹಾರವು ಅಪರಾಧ ಕೃತ್ಯದಲ್ಲಿ ಅಗ್ರಸ್ಥಾನದಲ್ಲಿದ್ದರೆ (ಡಕಾಯಿತಿ, ಅಪಹರಣ, ಕೊಲೆ, ಜಾತಿ ಆಧಾರಿತ ಹಿಂಸಾಚಾರ) ಈಗ ಪ.ಬಂಗಾಳವು ಆ ಸ್ಥಾನವನ್ನು ಕಸಿದಿದೆ. ಮಹಿಳೆಯ ವಿರುದ್ಧ ಹಿಂಸಾಚಾರ ಮತ್ತು ದೌರ್ಜನ್ಯ ಮೇರೆ ಮೀರಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಪ.ಬಂಗಾಳವು ಆತಂಕಕಾರಿಯಾಗಿ ಕಂಡುಬರುತ್ತಿರುವುದು ಅಲ್ಲಿನ ಜನಸಂಖ್ಯಾ ಬದಲಾವಣೆ ಕಾರಣಕ್ಕಾಗಿ. ಅಕ್ರಮ ವಲಸಿಗರು ರಾಜ್ಯವನ್ನು ನಿರಂತರವಾಗಿ ತುಂಬುತ್ತಿದ್ದಾರೆ. ಇದು ಇಡೀ ದೇಶದ ಭದ್ರತೆಗೇ ಅಪಾಯಕಾರಿಯಾಗಿ ಪರಿಣಮಿಸಿದೆ. ಭಯೋತ್ಪಾದಕ ಸಂಘಟನೆಗಳು ಹೆಚ್ಚುತ್ತಿದ್ದು, ದೇಶವಿರೋಧಿ ಚಟುವಟಿಕೆಗಳೂ ಹೆಚ್ಚುತ್ತಿವೆ. ಗಡಿಯಾಚೆಗಿನ ಭಾರತ ವಿರೋಧಿ ಶಕ್ತಿಗಳೊಂದಿಗೆ ಇಲ್ಲಿನ ಜನರ ಸಂಪರ್ಕ ಹೆಚ್ಚುತ್ತಿದೆ.

ಮಾಲ್ಡಾ, ಮುರ್ಶಿದಾಬಾದ್, ದಕ್ಷಿಣ ದಿನಾಜ್‌ಪುರ, ದಕ್ಷಿಣ 24 ಪರಗಣ ಜಿಲ್ಲೆಗಳಲ್ಲಿ ಬಾಂಗ್ಲಾದೇಶೀ ಅತಿಕ್ರಮಣಕಾರರ ಸಂಖ್ಯೆ ವಿಪರೀತ ಹೆಚ್ಚಿದೆ. ವಲಸಿಗರಿಂದ ನಡೆಯುತ್ತಿರುವ ಅಪರಾಧ ಕೃತ್ಯಗಳೂ ಹೆಚ್ಚಿವೆ. ಇವೆಲ್ಲಾ ದೇಶದ ಭದ್ರತೆಗೆ ಅಪಾಯಕಾರಿ ಬೆಳವಣಿಗೆಗಳು. ವಿಪರ್ಯಾಸವೆಂದರೆ ಗಡಿಯಲ್ಲಿ ಬೇಲಿ ಹಾಕುವುದಕ್ಕೂ ಟಿಎಂಸಿ ವಿರೋಧ ವ್ಯಕ್ತಪಡಿಸುತ್ತಿದೆ. ಆ ಮೂಲಕ ಜಿಹಾದಿ ಶಕ್ತಿಗಳಿಗೆ ಪರೋಕ್ಷ ಬೆಂಬಲ ನೀಡುತ್ತಿದೆ. ಇದಕ್ಕೆ ಹೋಲಿಸಿದರೆ, ಬಿಹಾರದಲ್ಲಿ ಇಸ್ಲಾಮಿಕ್ ಭಯೋತ್ಪಾದಕರಿಗೆ ಈ ಬಗೆಯ ಬೆಂಬಲ ಸಿಗುತ್ತಿರಲಿಲ್ಲ ಎಂಬುದನ್ನು ಗಮನಿಸಬೇಕು.

ಒಟ್ಟಿನಲ್ಲಿ ಮಮತಾ ಬ್ಯಾನರ್ಜಿಯವರ ಪ.ಬಂಗಾಳವು ದೇಶದ ಭದ್ರತೆಗೆ ದೊಡ್ಡ ಸವಾಲನ್ನು ಒಡ್ಡುತ್ತಿದೆ. ಲಾಲೂ ಪ್ರಸಾದರ ಬಿಹಾರಕ್ಕಿಂತಲೂ ಈ ಸವಾಲು ದೊಡ್ಡದು. ಹಾಗಾಗಿ ಪ.ಬಂಗಾಳದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯು ಆ ರಾಜ್ಯಕ್ಕಷ್ಟೇ ಅಲ್ಲದೆ ಇಡೀ ದೇಶದ ಪಾಲಿಗೆ ನಿರ್ಣಾಯಕವಾಗಿದೆ.

ಇರಾನ್ ಒಪ್ಪಂದ ಮಾಡಿಕೊಳ್ಳದಿದ್ದರೆ ದಾಳಿ
ಶಾಂತಿ ಸಭೆಗೂ ಮುನ್ನ ಟ್ರಂಪ್ ಹೊಸ ಬೆದರಿಕೆ

ಒಪ್ಪಂದ ಆಗದಿದ್ದರೆ ಇರಾನ್‌ಗೆ ಬಾಂಬ್?



ವಾಷಿಂಗ್ಟನ್: ತಾತ್ಕಾಲಿಕ ಕದನ ವಿರಾಮವನ್ನು ವಿಸ್ತರಿಸುವ ಯಾವುದೇ ಇಚ್ಛೆಯಿಲ್ಲ. ಬುಧವಾರದೊಳಗೆ ಒಪ್ಪಂದ ಮಾಡಿಕೊಳ್ಳಲು ಇರಾನ್ ಒಪ್ಪಿಕೊಳ್ಳದಿದ್ದರೆ, ಇರಾನ್ ಮೇಲೆ ಬಾಂಬ್ ದಾಳಿ ಆರಂಭಿಸುತ್ತೇನೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೊಸ ಬೆದರಿಕೆಯೊಡ್ಡಿದ್ದಾರೆ.

ಅಮೆರಿಕ-ಇರಾನ್ ನಡುವಿನ ತಾತ್ಕಾಲಿಕ ಕದನ ವಿರಾಮವು ಬುಧವಾರ (ಏ.22) ಕೊನೆಗೊಳ್ಳಲಿದೆ. ಇರಾನ್‌ನೊಂದಿಗಿನ ಕದನ ವಿರಾಮ ವಿಸ್ತರಿಸುವ ಮೂಲಕ ಶಾಂತಿ ಮಾತುಕತೆಗೆ ಇನ್ನಷ್ಟು ಸಮಯ ನೀಡುವಿರಾ ಎಂಬ ಸುದ್ದಿಗಾರರ ಪ್ರಶ್ನೆಗೆ ಅಧ್ಯಕ್ಷ ಟ್ರಂಪ್, ಕದನ ವಿರಾಮವನ್ನು ವಿಸ್ತರಿಸಲು ನಾನು ಬಯಸುವುದಿಲ್ಲ. ಅಷ್ಟೊಂದು ಸಮಯ ನಮ್ಮ ಬಳಿಯಿಲ್ಲ ಎಂದು ಉತ್ತರಿಸಿದ್ದಾರೆ.



ಒಪ್ಪಂದ ಮಾಡಿಕೊಂಡರೆ, ಬಲಿಷ್ಠವಾಗಲಿದೆ ಇರಾನ್: ಒಪ್ಪಂದ ಮಾಡಿಕೊಳ್ಳಲು ಇರಾನ್ ಮಾತುಕತೆ ನಡೆಸಿದರೆ, ಉತ್ತಮ ನೆಲೆ ಕಾಣಬಹುದು. ನಮ್ಮ ಜತೆ ಒಪ್ಪಂದ ಮಾಡಿಕೊಂಡರೆ ಇರಾನ್ ಮತ್ತೆ ಬಲಿಷ್ಠ ರಾಷ್ಟ್ರವಾಗಲಿದೆ. ಇರಾನ್ ಮತ್ತೆ ಅದ್ಭುತ ರಾಷ್ಟ್ರವಾಗಲಿದೆ ಎಂದು ಹೇಳಿದ್ದಾರೆ.

ಇರಾನ್ ಬಳಿ ಬೇರೆ ಆಯ್ಕೆಗಳಿಲ್ಲ: ಇರಾನ್‌ನೊಂದಿಗಿನ ಎರಡನೇ ಸುತ್ತಿನ ಶಾಂತಿ ಮಾತುಕತೆ ಬಗ್ಗೆ ನಿಮ್ಮ ನಿರೀಕ್ಷೆ ಏನಿದೆಯೆಂಬ ಪ್ರಶ್ನೆಗೆ ಉತ್ತರಿಸಿದ ಟ್ರಂಪ್, ಇರಾನ್‌ಗೆ ನಮ್ಮ ಜತೆ ಒಪ್ಪಂದ ಮಾಡಿಕೊಳ್ಳದೆ ಬೇರೆ ಆಯ್ಕೆಗಳಿಲ್ಲ. ಅವರ ನೌಕಾಪಡೆ ನಾಶ ಮಾಡಿದ್ದೇವೆ. ಅವರ ವಾಯುಪಡೆ ನಾಶ ಮಾಡಿದ್ದೇವೆ ಮತ್ತು ಇರಾನ್ ನಾಯಕರನ್ನು ಸದೆಬಡಿದಿದ್ದೇವೆ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅವರ ಹಳೆಯ ನಾಯಕರನ್ನು ಸದೆಬಡಿದಿದ್ದು, ಒಂದು ರೀತಿಯಲ್ಲಿ ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದ್ದ ನಿಜ. ಹಳೆಯ ನಾಯಕರಿಗಿಂತ ಹೊಸ ನಾಯಕರು ಬಹಳ ಹೊಸ ಚಿಂತನಾಶಕ್ತಿ ಉಳ್ಳವರಾಗಿದ್ದಾರೆ. ಇರಾನ್‌ನಲ್ಲಿ ಆಡಳಿತದ ಬದಲಾವಣೆ ಆಗಿದೆ ಎಂಬುದು ಸತ್ಯ. ಅದು ಪರೋಕ್ಷವಾಗಿ ನನ್ನಿಂದಲೇ ಆಗಿದೆ ಎಂದು ಅಧ್ಯಕ್ಷ ಟ್ರಂಪ್ ಹೇಳಿಕೊಂಡಿದ್ದಾರೆ. ಏ.11 ಮತ್ತು 12ರಂದು ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ನಡೆದಿದ್ದ ಅಮೆರಿಕ- ಇರಾನ್ ನಡುವಿನ ಮೊದಲ ಹಂತದ ಶಾಂತಿ ಮಾತುಕತೆ ಒಪ್ಪಂದ ಅಂತಿಮಗೊಳ್ಳದೆ ಕೊನೆಗೊಂಡಿತ್ತು. ಎರಡನೇ ಸುತ್ತಿನ ಮಾತುಕತೆಯ ಸುತ್ತಲೂ ಹಲವು ಅನಿಶ್ಚಿತತೆಗಳು ಆವರಿಸಿಕೊಂಡಿವೆ.

ರೋರಿಂಗ್ ಲಯನ್‌ನಲ್ಲಿ ಮೊಸಾದ್ ಏಜೆಂಟ್ ಬಲಿ

ಜೆರುಸಲೇಮ್: ಯೋಮ್ ಹಾಜಿಕರೋನ್- ರಾಷ್ಟ್ರೀಯ ಸ್ಮಾರಕ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಇಸ್ರೇಲಿ ಗುಪ್ತಚರ ಸಂಸ್ಥೆ ಮೊಸಾದ್ ನಿರ್ದೇಶಕ ಡೇವಿಡ್ ಬಾರ್ನಿಯಾ, ಇರಾನ್ ವಿರುದ್ಧದ ಆಪರೇಷನ್ ರೋರಿಂಗ್ ಲಯನ್‌ನಲ್ಲಿ ಒಬ್ಬ ಮೊಸಾದ್ ಏಜೆಂಟ್ ವಿದೇಶದಲ್ಲಿಯೇ ಹುತಾತ್ಮರಾಗಿದ್ದಾರೆ ಎಂಬ ರಹಸ್ಯ ಮಾಹಿತಿಯನ್ನು ಬಹಿರಂಗಪಡಿಸಿದ್ದಾರೆ. ಹುತಾತ್ಮರಿಗೆ ನಮನ ಸಲ್ಲಿಸಲು ಇಸ್ರೇಲ್, ಜೆರುಸಲೇಮ್‌ನಲ್ಲಿ ಇರುವ ಯಹೂದಿಗಳ ಪವಿತ್ರ ಗೋಡೆಯ ಮುಂದೆ ರಾಷ್ಟ್ರೀಯ ಸ್ಮಾರಕ ದಿನ ಆಚರಿಸುತ್ತದೆ. ಇರಾನ್ ವಿರುದ್ಧದ ಕಾರ್ಯಾಚರಣೆ ವೇಳೆ ಎಂ ಹೆಸರಿನಿಂದ ಗುರುತಿಸಲ್ಪಟ್ಟಿದ್ದ ಮೊಸಾದ್ ಏಜೆಂಟ್ ವಿದೇಶದಲ್ಲೇ ಹುತಾತ್ಮರಾಗಿದ್ದಾರೆ. ಕಾರ್ಯಾಚರಣಾ ಚತುರ, ತಂತ್ರಜ್ಞಾನ ಪರಿಣತ ಮತ್ತು ಇರಾನ್ ವಿರುದ್ಧ ಅಭೂತಪೂರ್ವ ಯಶಸ್ಸು ಸಾಧಿಸಿದ್ದ ಎಂ ಅವರಿಗೆ ನನ್ನ ಹೃದಯಾಂತರಾಳದ ಗೌರವ ನಮನ ಸಲ್ಲಿಸುತ್ತೇನೆ ಎಂದು ಡೇವಿಡ್ ಕಂಬನಿ ನುಡಿದರು.

ಪಾಕ್‌ಗೆ ವ್ಯಾನ್ಸ್ ನೇತೃತ್ವದ ನಿಯೋಗ

ಇರಾನ್‌ನೊಂದಿಗೆ ಎರಡನೇ ಹಂತದ ಶಾಂತಿ ಮಾತುಕತೆಗೆ ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ನಿಯೋಗ ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ಭೇಟಿ ನೀಡುವ ಸಾಧ್ಯತೆಯಿದೆ. ವ್ಯಾನ್ಸ್ ಜತೆ ಟ್ರಂಪ್ ಆಪ್ತ ಸ್ಟೀವ್ ವಿಟ್ಕಾಫ್ ಮತ್ತು ಅಳಿಯ ಜರೇಡ್ ಕುಶ್ನರ್ ಇರಲಿದ್ದಾರೆ.

ಬಾಂಬ್ ದಾಳಿ ಉತ್ತಮ ಆಯ್ಕೆ



ಬುಧವಾರದೊಳಗೆ ಇರಾನ್‌ನೊಂದಿಗೆ ಒಪ್ಪಂದ ಅಂತಿಮಗೊಳ್ಳದಿದ್ದರೆ ನಾನು ಬಾಂಬ್ ದಾಳಿ ಪುನರಾರಂಭಿಸುವ ಸಾಧ್ಯತೆಯಿದೆ. ಬಾಂಬ್ ದಾಳಿ ನಡೆಸುವುದೇ ಉತ್ತಮವೆಂದು ಭಾವಿಸುತ್ತಿದ್ದೇನೆ ಎಂದು ಅಧ್ಯಕ್ಷ ಟ್ರಂಪ್, ಇರಾನ್ ಮೇಲೆ ದಾಳಿ ಪುನರಾರಂಭಿಸುವ ಪೂರ್ವಸಿದ್ಧತೆ ನಡೆಸುತ್ತಿರುವ ಸುಳಿವು ನೀಡಿದ್ದಾರೆ. ಒಪ್ಪಂದ ಮಾಡಿಕೊಳ್ಳದಿದ್ದರೆ ಬಾಂಬ್ ದಾಳಿ ಆರಂಭಿಸುವುದಾಗಿ ಟ್ರಂಪ್ ಇರಾನ್ ನಿಯೋಗಕ್ಕೆ ಬೆದರಿಕೆಯೊಡ್ಡಿದ್ದಾರೆ.

8 ವನಿತೆಯರ ಬಿಡುಗಡೆಗೆ ಮನವಿ

ಇರಾನ್‌ನಲ್ಲಿ 8 ವನಿತೆಯರನ್ನು ಗಲ್ಲಿಗೇರಿಸಲಿದ್ದಾರೆಂಬ ಸುದ್ದಿಗೆ ಪ್ರತಿಕ್ರಿಯಿಸಿದ ಅಧ್ಯಕ್ಷ ಟ್ರಂಪ್, ವನಿತೆಯರನ್ನು ಶೀಘ್ರ ಬಿಡುಗಡೆಗೊಳಿಸಬೇಕು. ಅವರಿಗೆ ಯಾವುದೇ ತೊಂದರೆ ಆಗಬಾರದು. ಇದು ನಮ್ಮ ಒಪ್ಪಂದ ಮಾಡಿಕೊಳ್ಳಲು ಉತ್ತಮ ಆರಂಭವಾಗಲಿದೆ ಎಂದು ಇರಾನ್ ನಾಯಕರಿಗೆ ಮನವಿ ಮಾಡಿದ್ದಾರೆ.

ಬಲಿಷ್ಠ ಸ್ಥಾನದಲ್ಲಿ ಅಮೆರಿಕ: ಟ್ರಂಪ್

ಇರಾನ್‌ನೊಂದಿಗೆ ಒಪ್ಪಂದ ಮಾತುಕತೆಯಲ್ಲಿ ಅಮೆರಿಕ ಬಲಿಷ್ಠ ಸ್ಥಾನದಲ್ಲಿದೆ. ನಾವು ಶ್ರೇಷ್ಠ ಒಪ್ಪಂದ ಮಾಡಿಕೊಳ್ಳಲಿದ್ದೇವೆ. ನಮ್ಮ ಷರತ್ತಿನ ಮೇಲೆ ಒಪ್ಪಂದ ಮಾಡಿಕೊಳ್ಳದೆ ಇರಾನ್ ಮುಂದೆ ಬೇರೆ ಆಯ್ಕೆಗಳಿಲ್ಲ ಎಂದು ಟ್ರಂಪ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಭೆಗೆ ಭಾಗವಹಿಸಲು ಪಾಕ್ ಬೇಡಿಕೆ

ಶಾಂತಿ ಮಾತುಕತೆಯಲ್ಲಿ ಅಮೆರಿಕ-ಇರಾನ್ ನಿಯೋಗಗಳೆರಡೂ ಭಾಗವಹಿಸಲು ಪಾಕಿಸ್ತಾನ ಎರಡೂ ರಾಷ್ಟ್ರಗಳಿಗೆ ಮನವಿ ಮಾಡಿಕೊಂಡಿದೆ. ಅದರಲ್ಲೂ ವಿಶೇಷವಾಗಿ ಅಮೆರಿಕ ಜತೆ ಮಾತುಕತೆಗೆ ಹಿಂದೇಟು ಹಾಕುತ್ತಿರುವ ಇರಾನ್‌ಗೆ ಭಾಗವಹಿಸುವಂತೆ ಪಾಕ್ ಅಕ್ಷರಶಃ ಬೇಡಿಕೊಂಡಿದೆ. ಶಾಂತಿ ಮಾತುಕತೆ ನಡೆಯಬೇಕಾದರೆ ಇರಾನ್ ನಿರ್ಧಾರವೇ ನಿರ್ಣಾಯಕ, ಇರಾನ್ ಇನ್ನೂ ತನ್ನ ನಿರ್ಧಾರ ಪ್ರಕಟಿಸಿಲ್ಲ ಎಂದು ಪಾಕ್ ಮೂಲಗಳು ಹೇಳಿವೆ.

ಕದನ ವಿರಾಮ ವಿಸ್ತರಣೆಗೆ ಪಾಕ್ ಮನವಿ!

ಅಮೆರಿಕ-ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮ ಬುಧವಾರ ಕೊನೆಗೊಳ್ಳುವ ಹಿನ್ನೆಲೆ, ಕದನ ವಿರಾಮವನ್ನು ವಿಸ್ತರಿಸುವಂತೆ ಅಮೆರಿಕ ಮತ್ತು ಇರಾನ್ ಎರಡೂ ರಾಷ್ಟ್ರಗಳಿಗೆ ಪಾಕಿಸ್ತಾನ ಸರ್ಕಾರ ಮನವಿ ಮಾಡಿದೆ.

ಹಾರ್ಮುಜ್ ದಿಗ್ಬಂಧನ

ಒಪ್ಪಂದ ಅಂತಿಮಗೊಳ್ಳುವವರೆಗೆ ಹಾರ್ಮುಜ್ ಜಲಸಂಧಿ ಹಾಗೂ ಇರಾನ್ ಕರಾವಳಿ ಪ್ರದೇಶಗಳು, ಬಂದರುಗಳ ಮೇಲಿನ ಅಮೆರಿಕ ಸೇನೆಯ ದಿಗ್ಬಂಧನ ಮುಂದುವರಿಯಲಿದೆ. ದಿಗ್ಬಂಧನದ ಪರಿಣಾಮ ಪ್ರತಿ ದಿನ ಇರಾನ್‌ಗೆ 500 ದಶಲಕ್ಷ ಡಾಲರ್ ನಷ್ಟವಾಗುತ್ತಿದೆ ಎಂದು ಟ್ರಂಪ್ ಹೇಳಿದ್ದಾರೆ.

ಮಾತುಕತೆ ಅನಿಶ್ಚಿತತೆ

ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವಿನ ಅಸ್ತಿತ್ವದಲ್ಲಿರುವ ಕದನ ವಿರಾಮ ಇಂದಿಗೆ (ಬುಧವಾರ) ಮುಕ್ತಾಯಗೊಳ್ಳಲಿದ್ದು, ಪಾಕಿಸ್ತಾನದಲ್ಲಿ ಎರಡನೇ ಸುತ್ತಿನ ಶಾಂತಿ ಮಾತುಕತೆ ನಡೆಸುವ ಜಾಗತಿಕ ರಾಜತಾಂತ್ರಿಕ ಪ್ರಯತ್ನಗಳು ತೀವ್ರ ಅನಿಶ್ಚಿತತೆ ಎದುರಿಸುತ್ತಿವೆ.

ಪಾಕಿಸ್ತಾನ ರಾಜತಾಂತ್ರಿಕ ಬಿಕ್ಕಟ್ಟು: ಇರಾನ್‌ನ ಮುಖ್ಯ ಸಂಧಾನಕಾರ ಮೊಹಮ್ಮದ್ ಬಾಘರ್ ಘಾಲಿಬಾಫ್ ಮಂಗಳವಾರ ಮಾತನಾಡಿ, ಬೆದರಿಕೆಗಳ ನಡುವೆ ಇರಾನ್ ಮಾತುಕತೆ ನಡೆಸುವುದಿಲ್ಲ ಮತ್ತು ಇಸ್ಲಾಮಿಕ್ ಗಣರಾಜ್ಯ ಹೊಸ ಮಿಲಿಟರಿ ಆಯ್ಕೆಗಳನ್ನು ಬಹಿರಂಗಪಡಿಸಲು ಸಿದ್ಧವಾಗಿದೆ ಎಂದಿದ್ದಾರೆ. ಅಮೆರಿಕ ಅಧ್ಯಕ್ಷರು, ಉಪಾಧ್ಯಕ್ಷ ಜೆಡಿ ವ್ಯಾನ್ಸ್ ನೇತೃತ್ವದ ತಂಡವನ್ನು ಇಸ್ಲಾಮಾಬಾದ್‌ಗೆ ಕಳುಹಿಸುವ ನಿರೀಕ್ಷೆಯಿದೆ. ಆದರೆ ಕದನ ವಿರಾಮವನ್ನು ನವೀಕರಿಸುವ ಸಾಧ್ಯತೆ ಕಡಿಮೆ. ಸಂಘರ್ಷ ಕೊನೆಗೊಳಿಸಲು ತಮಗೆ ಯಾವುದೇ ಆವಸರವಿಲ್ಲ, ಎಂದೂ ಘಾಲಿಬಾಫ್ ತೀಕ್ಷ್ಣವಾಗಿ ಹೇಳಿದ್ದಾರೆ.

ಪ್ರಾಣಹಾನಿ ಮತ್ತು ಪ್ರಾದೇಶಿಕ ಪರಿಣಾಮ: ಯುದ್ಧ ಪ್ರಾರಂಭವಾದಾಗಿನಿಂದ ಇರಾನ್‌ನಲ್ಲಿ 3,375, ಲೆಬನಾನ್‌ನಲ್ಲಿ 2,290, ಇಸ್ರೇಲ್‌ನಲ್ಲಿ 23 ಮತ್ತು ಗಲ್ಫ್ ಅರಬ್ ರಾಷ್ಟ್ರಗಳಲ್ಲಿ 12 ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಮೃತರಲ್ಲಿ ಲೆಬನಾನ್‌ನಲ್ಲಿ 15 ಇಸ್ರೇಲಿ ಸೈನಿಕರು ಮತ್ತು ಇರಾನ್ ಜತೆಗಿನ ಘರ್ಷಣೆಯಲ್ಲಿ13 ಮಂದಿ ಅಮೆರಿಕನ್ನರೂ ಸೇರಿದ್ದಾರೆ. ಮತ್ತೊಂದು ಕಡೆ, ಗಾಜಾದಲ್ಲಿ ಮಂಗಳವಾರ ನಡೆದ ಇಸ್ರೇಲಿ ದಾಳಿಯಲ್ಲಿ ಖಾನ್ ಯೂನಿಸ್‌ನ ನಾಲ್ವರು ಪುರುಷರು ಮತ್ತು ಬೀತ್ ಲಾಹಿಯಾದ ಒಬ್ಬ ಮಹಿಳೆ ಸೇರಿದಂತೆ ಐವರು ಮೃತಪಟ್ಟಿದ್ದಾರೆ.

ಇರಾನ್‌ನ ಆಂತರಿಕ ಸಮಾಲೋಚನೆ: ಇರಾನ್ ಸರ್ಕಾರಿ ದೂರದರ್ಶನ ಮಂಗಳವಾರ ವರದಿ ಮಾಡಿರುವಂತೆ, ಇದುವರೆಗೆ ಯಾವುದೇ ನಿಯೋಗ ಇಸ್ಲಾಮಾಬಾದ್‌ಗೆ ಭೇಟಿ ನೀಡಿಲ್ಲ. ಯುಎಸ್ ನೌಕಾಪಡೆ ಇರಾನ್‌ನ ಕಂಟೇನರ್ ಹಡಗನ್ನು ವಶಪಡಿಸಿಕೊಂಡ ನಂತರ ಈ ಬೆಳವಣಿಗೆ ನಡೆದಿದೆ. ಯುಎಸ್ ಅಧಿಕಾರಿಗಳು ಸಿದ್ಧವಾಗಿದ್ದರೂ, ಇರಾನ್ ಈ ಸುತ್ತಿನ ಮಾತುಕತೆಗೆ ತನ್ನ ಮುಖ್ಯ ಸಂಧಾನಕಾರನನ್ನು ಇನ್ನೂ ಹೆಸರಿಸಿಲ್ಲ. ಇರಾನ್ ಮಂಗಳವಾರ ತಡರಾತ್ರಿ ತನ್ನ ನಿಯೋಗವನ್ನು ಕಳುಹಿಸಲಿದೆ ಎಂದು ಪಾಕಿಸ್ತಾನದ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದರೂ, ಇರಾನ್ ಪ್ರತಿಕ್ರಿಯಿಸಿಲ್ಲ.

ಅಂತಾರಾಷ್ಟ್ರೀಯ ಸಂಧಾನ ಪ್ರಯತ್ನಗಳು: ಚೀನಾದ ವಿದೇಶಾಂಗ ಸಚಿವಾಲಯ, ಎಲ್ಲಾ ಪಕ್ಷಗಳು ಮಾತುಕತೆ ಮುಂದುವರಿಸಬೇಕೆಂದು ಒತ್ತಾಯಿಸಿದೆ. ಪ್ರಸ್ತುತ ಪರಿಸ್ಥಿತಿಯನ್ನು ಯುದ್ಧ ಮತ್ತು ಶಾಂತಿಯ ನಡುವಿನ ನಿರ್ಣಾಯಕ ಹಂತ ಎಂದು ಅದು ಬಣ್ಣಿಸಿದೆ. ಚೀನಾದ ರಾಯಭಾರಿ ಜಿಯಾಂಗ್ ಜೈಡಾಂಗ್, ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಅವರನ್ನು ಭೇಟಿ ಮಾಡಿ, ಮಾತುಕತೆಗೆ ಅನುಕೂಲ ಮಾಡಿಕೊಡುವಲ್ಲಿ ಪಾಕಿಸ್ತಾನದ ಪಾತ್ರಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಪಾಕ್- ಈಜಿಪ್ಟ್ ಮಾತುಕತೆ: ಅಮೆರಿಕ ಮತ್ತು ಇರಾನ್ ನಡುವೆ ನಡೆಯಲಿರುವ ಸಂಭವನೀಯ ಎರಡನೇ ಸುತ್ತಿನ ಮಾತುಕತೆಗೆ ಸಂಬಂಧಿಸಿದ ರಾಜತಾಂತ್ರಿಕ ಪ್ರಯತ್ನಗಳ ಭಾಗವಾಗಿ, ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಮಂಗಳವಾರ, ತಮ್ಮ ಈಜಿಪ್ಟ್ ಸಹವರ್ತಿ ಬದ್ರ್ ಅಬ್ದೆಲಾಟ್ಟಿ ಅವರೊಂದಿಗೆ ಪ್ರಾದೇಶಿಕ ಬೆಳವಣಿಗೆಗಳ ಕುರಿತು ಚರ್ಚಿಸಿದರು.

ವರ್ಚುವಲ್‌ನಲ್ಲಿ ಟ್ರಂಪ್ ಭಾಗಿ?

ಅಮೆರಿಕ, ಇರಾನ್ ಶಾಂತಿ ಮಾತುಕತೆಗಳು ಪಾಕಿಸ್ತಾನದಲ್ಲಿ ಪುನರಾರಂಭಗೊಳ್ಳಲು ವೇದಿಕೆ ಸಿದ್ಧವಾಗುತ್ತಿದ್ದು, ಬುಧವಾರ ಮಾತುಕತೆ ಗಳು ಮತ್ತೆ ಶುರುವಾಗುವ ಲಕ್ಷಣ ಕಂಡುಬರುತ್ತಿವೆ.

ಉನ್ನತ ಮಟ್ಟದ ಮಾತುಕತೆ?: ಒಂದು ವೇಳೆ ಒಪ್ಪಂದಕ್ಕೆ ಸಹಿ ಹಾಕುವ ಹಂತ ತಲುಪಿದರೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಖುದ್ದಾಗಿ ಅಥವಾ ವರ್ಚುವಲ್ ಆಗಿ ಭಾಗವಹಿಸುವ ಸಾಧ್ಯತೆಯಿದೆ ಎಂದು ಪಾಕಿಸ್ತಾನದ ಮೂಲಗಳು ತಿಳಿಸಿವೆ. ಹಗೆತನ ಕೊನೆಗಾಣಿಸುವ ನಿಟ್ಟಿನಲ್ಲಿ ಮಾತುಕತೆಗಳು ಮುಂದುವರಿಯುವ ಬಗ್ಗೆ ಅಮೆರಿಕ ವಿಶ್ವಾಸ ವ್ಯಕ್ತಪಡಿಸಿದೆ. ಈ ಹಿಂದೆ ಪ್ರಕ್ರಿಯೆಯಿಂದ ಹೊರಗುಳಿಯುವುದಾಗಿ ಹೇಳಿದ್ದ ಇರಾನ್, ಈಗ ಸಂಧಾನದಲ್ಲಿ ಭಾಗವಹಿಸುವ ಬಗ್ಗೆ ಸಕಾರಾತ್ಮಕವಾಗಿ ಪರಿಗಣಿಸುತ್ತಿದೆ ಎಂದು ಹಿರಿಯ ಇರಾನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಯಕಟ್ಟಿನ ಉದ್ದೇಶ, ಬೇಡಿಕೆಗಳು: ತೈಲ ಬೆಲೆ ಮತ್ತು ಹಣಕಾಸು ಮಾರುಕಟ್ಟೆಗಳಲ್ಲಿನ ಅಸ್ಥಿರತೆ ತಡೆಯಲು ವಾಷಿಂಗ್ಟನ್ ಒಪ್ಪಂದದ ಮೊರೆ ಹೋಗಿದೆ. ಇರಾನ್ ಯಾವುದೇ ಕಾರಣಕ್ಕೂ ಪರಮಾಣು ಶಸ್ತ್ರಾಸ್ತ್ರ ಸಾಮರ್ಥ್ಯ ಹೊಂದಬಾರದು ಎಂಬುದು ಟ್ರಂಪ್ ನಿಲುವಾಗಿದೆ. ಮತ್ತೊಂದೆಡೆ, ಇರಾನ್ ತನ್ನ ಪರಮಾಣು ಕಾರ್ಯಕ್ರಮಕ್ಕೆ ಇರುವ ಅಡ್ಡಿಗಳಿಂದ ಮುಕ್ತಿ ಪಡೆಯಲು ಹಾರ್ಮುಜ್ ಜಲಸಂಧಿಯ ಮೇಲಿನ ತನ್ನ ನಿಯಂತ್ರಣವನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದೆ. ಹಿಂದಿನ ಸುತ್ತಿನ ಮಾತುಕತೆಗಳು ಫಲಿತಾಂಶ ನೀಡದ ಕಾರಣ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಏರಿಳಿತ ಮುಂದುವರಿದಿದೆ.

ಉದ್ವಿಗ್ನತೆ ಮತ್ತು ಹಿನ್ನೆಲೆ: ಕಳೆದ ವಾರಾಂತ್ಯದಲ್ಲಿ ಇರಾನ್‌ನ ವಾಣಿಜ್ಯ ಹಡಗು 'ತೌಸ್ಕಾ'ವನ್ನು ಅಮೆರಿಕ ವಶಪಡಿಸಿಕೊಂಡಿರುವುದು ಉದ್ವಿಗ್ನತೆಯನ್ನು ಹೆಚ್ಚಿಸಿದೆ. ಈ ಹಡಗು ಮಿಲಿಟರಿ ಉದ್ದೇಶಗಳಿಗೆ ಬಳಸಬಹುದಾದ ವಸ್ತುಗಳನ್ನು ಸಾಗಿಸುತ್ತಿತ್ತು ಎಂದು ಅಮೆರಿಕ ಶಂಕಿಸಿದ್ದು, ಇರಾನ್ ತನ್ನ ಹಡಗು ಮತ್ತು ಸಿಬ್ಬಂದಿಯ ಬಿಡುಗಡೆಗೆ ಒತ್ತಾಯಿಸಿದೆ. ಫೆಬ್ರವರಿ 28 ರಂದು ಪ್ರಾರಂಭವಾದ ಈ ಸಂಘರ್ಷ, ಇರಾನ್‌ನ ಪ್ರಮುಖ ನಾಯಕರೂ ಸೇರಿದಂತೆ, ಸಾವಿರಾರು ಜನರ ಸಾವಿಗೆ ಕಾರಣವಾಗಿದೆ ಮತ್ತು ಜಾಗತಿಕ ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟುಮಾಡಿದೆ. ಹಾರ್ಮುಜ್ ಜಲಸಂಧಿ ವಿಶ್ವದ ತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯ ಐದನೇ ಒಂದು ಭಾಗವನ್ನು ನಿರ್ವಹಿಸುತ್ತದೆ.

ಕಿರುಸುದ್ದಿ

ಮಾನವೀಯತೆ ಗಡಿ ಮೀರಿ ಹೋದರೆ ತೀಕ್ಷ್ಣ ಪ್ರತಿಕ್ರಿಯೆ

ಹೊಸದಿಲ್ಲಿ: ಪಹಲ್ಗಾಮ್ ಉಗ್ರ ದಾಳಿ ಒಂದು ವರ್ಷ ಕಳೆದ ಹಿನ್ನೆಲೆ ಭಾರತೀಯ ಸೇನೆ ಮಂಗಳವಾರ ಉಗ್ರವಾದ ವಿರುದ್ಧ ಹೋರಾಡುವ ತನ್ನ ಸಂಕಲ್ಪವನ್ನು ಪುನರುಚ್ಚರಿಸಿದ್ದು, ಮಾನವೀಯತೆಯ ಗಡಿಗಳನ್ನು ಮೀರಿ ಹೋದಾಗ ಖಾರ ಪ್ರತಿಕ್ರಿಯೆ ನೀಡುವುದಾಗಿ ಸ್ಪಷ್ಟಪಡಿಸಿದೆ. ಕಳೆದ ವರ್ಷ ಏ.22ರಂದು ದಕ್ಷಿಣ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮೂವರು ಪಾಕಿಸ್ತಾನಿ ಉಗ್ರರು 26 ಜನರನ್ನು ಗುಂಡಿಟ್ಟು ಹತ್ಯೆಗೈದಿದ್ದರು. ಪ್ರತಿಯಾಗಿ, ಭಾರತ ಮೇ 7ರ ಮುಂಜಾನೆ ಸೈನಿಕ ಕಾರ್ಯಾಚರಣೆ ಆರಂಭಿಸಿ, ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಪ್ರದೇಶಗಳಲ್ಲಿ ಉಗ್ರ ಅಡಗುದಾಣಗಳನ್ನು ಧ್ವಂಸಗೊಳಿಸಿತ್ತು. ಇದೇ ವೇಳೆ ಜೈಶ್-ಎ-ಮೊಹಮ್ಮದ್ (ಜೆಇಎಂ) ಉಗ್ರ ಸಂಘಟನೆ ಸ್ಥಾಪಕ ಮಸೂದ್ ಅಜರ್ ಕುಟುಂಬ ಸದಸ್ಯರ ಸಹಿತ 100ಕ್ಕೂ ಹೆಚ್ಚು ಉಗ್ರರು ದಾಳಿಗೆ ಬಲಿಯಾಗಿದ್ದರು. ಭಾರತೀಯ ಸೇನೆ ತನ್ನ ಎಕ್ಸ್ ಖಾತೆಯಲ್ಲಿ, ಮಾನವೀಯತೆಯ ಗಡಿಗಳನ್ನು ಮೀರಿದಾಗ ನಿರ್ಣಾಯಕ ಪ್ರತಿಕ್ರಿಯೆ ನೀಡುತ್ತೇವೆ, ನ್ಯಾಯ ಒದಗಿಸುತ್ತೇವೆ. ಭಾರತ ಒಂದಾಗಿ ನಿಂತಿದೆ ಎಂಬ ಸಂದೇಶ ಹಂಚಿಕೊಂಡಿದೆ.

ಪ್ರಧಾನಿ ಮೋದಿ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ ಸಲ್ಲಿಕೆ

ಹೊಸದಿಲ್ಲಿ: ಕಾಂಗ್ರೆಸ್ ಸಂಸದ ಕೆ.ಸಿ. ವೇಣುಗೋಪಾಲ್, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಬಳಿ ಹಕ್ಕುಚ್ಯುತಿ ಸಲ್ಲಿಸಿದ್ದು, ಮಹಿಳಾ ಮೀಸಲಾತಿ ಕಾಯ್ದೆಯನ್ನು ಅಂಗೀಕರಿಸಲು ಸಾಧ್ಯವಾಗದ ಹಿನ್ನೆಲೆ ಪ್ರಧಾನಿ ತಮ್ಮ ಅಧಿಕಾರದ ದುರುಪಯೋಗ ಮಾಡಿಕೊಂಡು ವಿರೋಧ ಪಕ್ಷವನ್ನು ಟೀಕಿಸುವುದು ಸದನದ ಹಕ್ಕುಚ್ಯುತಿ ಹಾಗೂ ಮಾದರಿ ನೀತಿ ಸಂಹಿತೆಯ ಗಂಭೀರ ಉಲ್ಲಂಘನೆ ಎಂದು ವೇಣುಗೋಪಾಲ್ ಆರೋಪಿಸಿದ್ದಾರೆ.

ಕೇಂದ್ರ ಸರ್ಕಾರದ ಮಹಿಳಾ ಮೀಸಲಾತಿ ಕಾಯ್ದೆಯನ್ನು ಅಂಗೀಕರಿಸಲು ಸಂಸತ್ತಿನಲ್ಲಿ ಅವಶ್ಯಕ ಬಹುಮತ ಸಿಗದ ಹಿನ್ನೆಲೆ ಏ.18ರಂದು ದೇಶವನ್ನುದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿ ತಮ್ಮ ಅಧಿಕಾರದ ದುರುಪಯೋಗ ಮಾಡಿದ್ದಾರೆ ಎಂದು ಕೆ.ಸಿ. ವೇಣುಗೋಪಾಲ್ ಆರೋಪ ಮಾಡಿದ್ದಾರೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ವೇಣುಗೋಪಾಲ್ ಸಲ್ಲಿಸಿದ ನೋಟಿಸ್‌ನಲ್ಲಿ, ಸಂಸತ್ತಿನಲ್ಲಿ ಸೋಲಿನ ಹಿನ್ನೆಲೆ ವಿರೋಧ ಪಕ್ಷಗಳನ್ನು ಟೀಕಿಸಲು ವೇದಿಕೆಯನ್ನು ಬಳಸಿರುವುದು ಅನೈತಿಕ, ಸದನದ ಘನತೆಗೆ ಚ್ಯುತಿ ತರುವಂತದ್ದು ಮತ್ತು ಅವಮಾನಕರ ಎಂದು ಕಾಂಗ್ರೆಸ್ ನಾಯಕ ಉಲ್ಲೇಖಿಸಿದ್ದಾರೆ.

ಇಂತಹ ಹೇಳಿಕೆಗಳು ಸದನದ ಗೌರವ ಮತ್ತು ಅಧಿಕಾರವನ್ನು ಕುಗ್ಗಿಸುತ್ತವೆ ಹಾಗೂ ಸದಸ್ಯರು ತಮ್ಮ ಕರ್ತವ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸುವುದಕ್ಕೆ ಅಡ್ಡಿಯಾಗುತ್ತವೆ. ಆದ್ದರಿಂದ, ಪ್ರಧಾನಿ ಭಾಷಣದಿಂದ ಸ್ಪಷ್ಟ ಮತ್ತು ಗಂಭೀರ ಹಕ್ಕುಚ್ಯುತಿಯಾಗಿದೆ ಎಂದು ಅವರು ಹಕ್ಕುಚ್ಯುತಿಯಲ್ಲಿ ಉಲ್ಲೇಖಿಸಿದ್ದಾರೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 13 ಮಂದಿ ಸಾವು

ತ್ರಿಶೂರ್: ಮುಂಡತ್ತಿಕೋಡ್‌ನಲ್ಲಿರುವ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಮಂಗಳವಾರ ಮಧ್ಯಾಹ್ನ ಸಂಭವಿಸಿದ ಭೀಕರ ಸ್ಫೋಟದಲ್ಲಿ ಕನಿಷ್ಠ 13 ಜನರು ಮೃತಪಟ್ಟಿದ್ದು, 40 ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಒಣಗಿದ ಭತ್ತದ ಗದ್ದೆಯಲ್ಲಿದ್ದ ಘಟಕದಲ್ಲಿ ಮಧ್ಯಾಹ್ನ 3:35ಕ್ಕೆ ಈ ಸ್ಫೋಟ ಸಂಭವಿಸಿದೆ. ಐವರು ಗಾಯಾಳುಗಳ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ. ವಡಕ್ಕಾಂಚೇರಿ, ಕುನ್ನಂಕುಳಂ ಮತ್ತು ತ್ರಿಶೂರ್‌ನ ರಕ್ಷಣಾ ತಂಡಗಳು ಸಮನ್ವಯದೊಂದಿಗೆ ಕಾರ್ಯಾಚರಣೆ ನಡೆಸುತ್ತಿವೆ. ಗಾಯಾಳುಗಳಿಗೆ ತ್ರಿಶೂರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಪಾಲಕ್ಕಾಡ್‌ನಿಂದ ಹೆಚ್ಚುವರಿ ವೈದ್ಯಕೀಯ ತಂಡಗಳು ಆಗಮಿಸಿವೆ.

ಸರ್ಕಾರದ ಕ್ರಮ: ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಅಗತ್ಯ ವೈದ್ಯಕೀಯ ನೆರವು ನೀಡುವಂತೆ ಸರ್ಕಾರಿ ವ್ಯವಸ್ಥೆಗಳಿಗೆ ಸೂಚನೆ ನೀಡಿದ್ದಾರೆ ಮತ್ತು ಅಗತ್ಯವಿದ್ದಲ್ಲಿ ಹೊರರಾಜ್ಯಗಳ ತಜ್ಞ ವೈದ್ಯರ ಸೇವೆಯನ್ನು ಬಳಸಿಕೊಳ್ಳಲಾಗುವುದು, ಎಂದು ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ದುರಂತಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

ಸ್ಥಳದ ಸುರಕ್ಷತಾ ಆತಂಕಗಳು: ಬೇಸಿಗೆಯ ತೀವ್ರ ಶಾಖ ಈ ಘಟನೆಗೆ ಕಾರಣವಾಗಿರಬಹುದು ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ. ಸಂಗ್ರಹಿಸಿಟ್ಟಿರುವ ಸ್ಫೋಟಕ ವಸ್ತುಗಳಿಂದ ಹೆಚ್ಚಿನ ಸ್ಫೋಟಗಳು ಸಂಭವಿಸುವ ಭೀತಿಯಿರುವುದರಿಂದ ಅಧಿಕಾರಿಗಳಿಗೆ ಘಟಕದ ನಿಖರವಾದ ಕೇಂದ್ರಭಾಗ ತಲುಪುವುದು ಸವಾಲಾಗಿ ಪರಿಣಮಿಸಿತು.

ಗ್ರೆನೇಡ್ ದಾಳಿ ಸಂಚು: ಭಟ್ಟಿ ಸಹಚರರಿಬ್ಬರ ಸೆರೆ

ಹೊಸದಿಲ್ಲಿ: ರಾಷ್ಟ್ರ ರಾಜಧಾನಿಯಲ್ಲಿ ಗ್ರೆನೇಡ್ ದಾಳಿ ಮತ್ತು ಗುರಿ ಹತ್ಯೆಗಳನ್ನು ನಡೆಸಲು ಪಾಕಿಸ್ತಾನಿ ಗ್ಯಾಂಗ್‌ಸ್ಟರ್‌ನ ಇಬ್ಬರು ಸಹಚರರು ರೂಪಿಸಿದ್ದ ಸಂಚನ್ನು ದಿಲ್ಲಿ ಪೊಲೀಸರು ಭೇದಿಸಿದ್ದಾರೆ. ಪಾಕ್ ಐಎಸ್‌ಐ ಗ್ಯಾಂಗ್‌ಸ್ಟರ್ ಶಹಜಾದ್ ಭಟ್ಟಿ ಸಂಪರ್ಕದಲ್ಲಿದ್ದ ರಾಜ್‌ವೀರ್ (21) ಮತ್ತು ವಿವೇಕ್ ಬಂಜಾರ (19) ಎಂಬ ವ್ಯಕ್ತಿಗಳನ್ನು ದಿಲ್ಲಿ ಪೊಲೀಸರು ಬಂಧಿಸಿದ್ದಾರೆ. ಇವರು ಮಧ್ಯಪ್ರದೇಶದ ಗ್ವಾಲಿಯರ್ ಜಿಲ್ಲೆಯ ನಿವಾಸಿಗಳಾಗಿದ್ದಾರೆ.

ಇವರಿಬ್ಬರ ಬಂಧನದಿಂದಾಗಿ ರಾಷ್ಟ್ರ ರಾಜಧಾನಿಯಲ್ಲಿ ನಡೆಯಲಿದ್ದ ದೊಡ್ಡ ದಾಳಿಗಳು ಸ್ವಲ್ಪದರಲ್ಲೇ ತಪ್ಪಿಹೋಗಿವೆ. ಇವರ ಬಂಧನದಿಂದ ಪಾಕ್ ಏಜೆಂಟ್ ಭಟ್ಟಿ ಮತ್ತು ಇತರ ಐಎಸ್‌ಐ ಹ್ಯಾಂಡ್ಲರ್‌ಗಳು ಜತೆಗೂಡಿ ಭಾರತ ವಿರೋಧಿ ಸಂಚುಗಳನ್ನು ರೂಪಿಸುತ್ತಿರುವ ಕುರಿತು ಸುಳಿವುಗಳು ದಿಲ್ಲಿ ಪೊಲೀಸರಿಗೆ ಲಭ್ಯವಾಗಿವೆ.

ರಾಜ್ ವೀರ್ ಗ್ಯಾಂಗ್‌ಸ್ಟರ್ ಭಟ್ಟಿಯ ನಿರ್ದೇಶನದ ಮೇರೆಗೆ ದಿಲ್ಲಿ-ಎನ್‌ಸಿಆರ್ ನ ಪ್ರಮುಖ ಹೋಟೆಲ್ ಅನ್ನು ಗುರಿಯಾಗಿಸಲು ತಯಾರಿ ನಡೆಸುತ್ತಿದ್ದ ಎಂಬ ಮಾಹಿತಿ ಬಹಿರಂಗಗೊಂಡ ಬೆನ್ನಲ್ಲೇ ಆತನನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಆತನಿಂದ ಒಂದು ಪಿಸ್ತೂಲ್ ಮತ್ತು ಆರು ಜೀವಂತ ಕಾರ್ಟ್ರಿಜ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ.

ಜಾಲತಾಣವೇ ಅಸ್ತ್ರ: ಶಹಜಾದ್ ಭಟ್ಟಿ ಸೇರಿ ಹೆಚ್ಚಿನ ಪಾಕ್ ಹ್ಯಾಂಡ್ಲರ್‌ಗಳು ಸಾಮಾಜಿಕ ಜಾಲತಾಣಗಳ ಮೂಲಕವೇ ಭಾರತೀಯ ಯುವಕರನ್ನು ತಮ್ಮ ಗ್ಯಾಂಗ್‌ಗಳಿಗೆ ನೇಮಕಾತಿ ಮಾಡುತ್ತಿದ್ದಾರೆ. ಆ ಮೂಲಕ ದಿಲ್ಲಿ ನಗರದಲ್ಲಿ ಹಿಂಸಾಚಾರ, ಭಯೋತ್ಪಾದನೆ ನಡೆಸಲು ಕುಮ್ಮಕ್ಕು ನೀಡುತ್ತಿದ್ದಾರೆ.

ಭಾರತ-ಬ್ರಿಟನ್ ರಕ್ಷಣಾ ಸಹಕಾರ ಬಲಕ್ಕೆ ಒತ್ತು

ಲಂಡನ್: ಸಂಘರ್ಷಗಳ ಬದಲಾಗುತ್ತಿರುವ ಸ್ವರೂಪ ಮತ್ತು ಇಂಡೋ-ಪೆಸಿಫಿಕ್ ಭದ್ರತಾ ಸವಾಲುಗಳನ್ನು ಎದುರಿಸುವ ಕುರಿತು ಚರ್ಚಿಸಲು, ಭಾರತದ ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಈ ವಾರ ಲಂಡನ್‌ನಲ್ಲಿ ಉನ್ನತ ಮಟ್ಟದ ಮಾತುಕತೆ ನಡೆಸಿದ್ದಾರೆ. ಜನರಲ್ ಚೌಹಾಣ್, ಬ್ರಿಟನ್ ಸಚಿವ ರಾದ ಲ್ಯೂಕ್ ಪೋಲಾರ್ಡ್ ಮತ್ತು ಸೀಮಾ ಮಲ್ಹೋತ್ರಾರನ್ನು ಭೇಟಿ ಮಾಡಿ, ಡಿಫೆನ್ಸ್ ಇಂಡಸ್ಟ್ರಿಯಲ್ ರೋಡ್‌ಮ್ಯಾಪ್ ಮತ್ತು ವಿಷನ್ 2035 ಒಪ್ಪಂದವನ್ನು ಮುಂದುವರಿಸುವ ಬಗ್ಗೆ ಚರ್ಚಿಸಿದರು. ಸೈಬರ್ ಗುಪ್ತಚರ ಮತ್ತು ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಸಹಕಾರ ಹೆಚ್ಚಿಸುವತ್ತ ಈ ಮಾತುಕತೆಗಳು ಗಮನಹರಿಸಿದ್ದವು. ಏರ್ ಚೀಫ್ ಮಾರ್ಷಲ್ ಸರ್ ರಿಚರ್ಡ್ ನೈಟನ್ ಅವರಿಂದ ಔಪಚಾರಿಕ ಸ್ವಾಗತ ಸ್ವೀಕರಿಸಿದ ನಂತರ, ಜ. ಚೌಹಾಣ್, ಕಿಂಗ್ಸ್ ಕಾಲೇಜ್ ಲಂಡನ್‌ನಲ್ಲಿ ಮಿಲಿಟರಿ ಕುರಿತಾದ ಸಭೆಯಲ್ಲಿ ಭಾಗವಹಿಸಿದರು.

ಜಗತ್ತಿಗಿಂದು ಬದುಕಿನ ಬಗ್ಗೆ ಭಾರತ ಹೊಂದಿರುವ ದೃಷ್ಟಿಕೋನದ ಅಗತ್ಯವಿದೆ: ಭಾಗ್ವತ್

ಸತ್ಯ ಸಾಬೀತುಪಡಿಸುವ ತಾಕತ್ತು ಮುಖ್ಯ

ಹೊಸದಿಲ್ಲಿ: ಸತ್ಯವಂತರಾದರೆ ಸಾಲದು, ಸತ್ಯವನ್ನು ಸಾಬೀತುಪಡಿಸುವ ತಾಕತ್ತು ಕೂಡ ಮುಖ್ಯ. ಜ್ಞಾನ ವೆಂದರೆ ಬರೀ ಭಾಷಣವಲ್ಲ, ತಿಳುವಳಿಕೆ ಅಥವಾ ಅರ್ಥ ಮಾಡಿಕೊಳ್ಳುವುದೇ ಜ್ಞಾನ. ಸುಮಾರು 2ಸಾವಿರ ವರ್ಷಗಳವರೆಗೆ ಇಡೀ ಜಗತ್ತು ವಿಜ್ಞಾನದಿಂದ ಸಮಾಜ ವಾದವರೆಗೆ ಹಲವು ಸಿದ್ಧಾಂತಗಳ ಅನುಭವಧಾರೆ ಪಡೆಯಿತು. ಪ್ರಸಕ್ತ ಜಗತ್ತಿಗಿಂದು ಬದುಕಿನ ಬಗ್ಗೆ ಭಾರತ ಹೊಂದಿರುವ ದೃಷ್ಟಿಕೋನದ ಅಗತ್ಯವಿದೆ ಎಂಬುದನ್ನು ಇಡೀ ಜಗತ್ತು ಅರ್ಥೈಸಿಕೊಂಡಿದೆ .ಜಗತ್ತಿಂದು ಭಾರತದತ್ತ ನೋಡುತ್ತಿರುವುದು ಕೂಡ ಇದೇ ಕಾರಣಕ್ಕೆ ಎಂದು ಆರೆಸ್ಸೆಸ್ ಸರಸಂಘಚಾಲಕ್ ಮೋಹನ್ ಭಾಗ್ವತ್ ನುಡಿದರು.



ಪಶ್ಚಿಮ ತ್ರಿಪುರಾ ಜಿಲ್ಲೆಯ ಮೋಹನ್‌ಪುರ ಸಬ್ ಡಿವಿಜನ್ ವ್ಯಾಪ್ತಿಯ ಫಕೀರ್‌ಮುರಾ ಗ್ರಾಮದಲ್ಲಿ, ಆದಿ ಶಂಕರಾಚಾರ್ಯರ ಜಯಂತಿಯಂದೇ ಮಂಗಳವಾರ, ಮಾ ತ್ರಿಪುರೇಶ್ವರಿ ಮಾತೆಗೆ ಸಮರ್ಪಿತ ಮಾ ಸೌಂದರ್ಯ ಚಿನ್ಮಯಿ ಮಂದಿರವನ್ನು ಲೋಕಾರ್ಪಣೆ ಮಾಡಿ ಭಾಗ್ವತ್ ಈ ರೀತಿ ವಿಶ್ಲೇಷಿಸಿದರು. ಸಂಪೂರ್ಣವಾಗಿ ಉಚಿತ ಶಿಕ್ಷಣ ನೀಡುವ ಚಿನ್ಮಯ ಹರಿಹರ ವಿದ್ಯಾಲಯದ ಧ್ಯೇಯೋದ್ದೇಶವನ್ನು ಸಮಾರಂಭದ ಮುಖ್ಯ ಅತಿಥಿಯೂ ಆಗಿದ್ದ ಭಾಗ್ವತ್ ಮುಕ್ತ ಕಂಠದಿಂದ ಕೊಂಡಾಡಿದರು. ಪವಿತ್ರ ವಾದ ಗರಿಯಾ ಪೂಜಾ ದಿನದಂದು ಅಪಾರ ಸಂಖ್ಯೆಯಲ್ಲಿ ನೆರೆದ ಜನಸ್ತೋಮದ ಧರ್ಮನಿಷ್ಠೆಯನ್ನು ಭಾಗ್ವತ್ ಶ್ಲಾಘಿಸಿದರು.

ಜಗತ್ತಿಗೆ ಸೂಕ್ತ ಪಥ ತೋರುವ ಸನಾತನ ಧರ್ಮ: ಸನಾತನ ಧರ್ಮವು ಇಡೀ ಜಗತ್ತಿಗೆ ಸೂಕ್ತ ಪಥವನ್ನು ತೋರಿಸುತ್ತಿದೆ. ದೇವಾಲಯಗಳು ಭಾರತೀಯ ಸಾಮಾಜಿಕ ಬದುಕಿನ ಕೇಂದ್ರಗಳಾಗಿವೆ. ಇಂದಿನ ಜಗತ್ತಿನಲ್ಲಿ ಶಕ್ತಿಸಾಮರ್ಥ್ಯ ಜತೆ ಭಕ್ತಿ ಕೂಡ ಅಗತ್ಯ. ಪ್ರತಿಯೋರ್ವರ ಜತೆ ಬೆರೆತು ಜನಸೇವೆ ಮಾಡುವ ಗುಣವಿರುವವರನ್ನು ಸಮಾಜವು ಸದಾ ಸ್ಮರಿಸುತ್ತಿರುತ್ತದೆ ಮತ್ತು ಇದೇ ಭಾರತೀಯ ಸಂಸ್ಕೃತಿ ಎಂದು ಭಾಗ್ವತ್ ಬಣ್ಣಿಸಿದರು.

ನಾಲ್ಕು ರಾಜ್ಯಗಳಿಂದ ನಿರಂತರ ಸೇವಾಕಾರ್ಯ: ದಕ್ಷಿಣದ 4 ರಾಜ್ಯಗಳು ತುಂಬ ಸೇವಾಕಾರ್ಯಗಳಲ್ಲಿ ನಿರತವಾಗಿವೆ. ಸುದೀರ್ಘ ಕಾಲದಿಂದ ನಮ್ಮಲ್ಲಿ ವೈವಿಧ್ಯತೆ ಯಿದೆಯಾದರೂ ನಾವೆಲ್ಲರು ಒಗ್ಗಟ್ಟಾಗಿದ್ದೇವೆ. ವಿವಿಧತೆ ಯಲ್ಲಿ ಏಕತೆಯೇ ನಮ್ಮ ಬಲ. ನಮ್ಮ ಉನ್ನತಿಯನ್ನು ತಡೆಯುವುದಕ್ಕಾಗಿ ವಿದೇಶಿ ಶಕ್ತಿಗಳು ನಮ್ಮೊಳಗೆ ಒಡಕು ಮೂಡಿಸಲು ಶತಾಯಗತಾಯ ಶ್ರಮಿಸುತ್ತಿವೆ ಮತ್ತು ಈ ಬಗ್ಗೆ ನಾವು ಸದಾ ಎಚ್ಚರದಿಂದಿರಬೇಕು ಎಂದು ಕರೆ ನೀಡಿದರು.

ಇಂಧನ ಭದ್ರತೆಗೆ ವೇಗ ಮಾತ್ರವಲ್ಲ ರೈತರಿಗೂ ನೇರ ಪ್ರಯೋಜನ

ಎಥೆನಾಲ್ ಮಿಶ್ರಣಕ್ಕೆ ಮುನ್ನುಡಿ

ಹೊಸದಿಲ್ಲಿ: ಪೆಟ್ರೋಲ್‌ಗೆ ಶೇ.100 ಎಥೆನಾಲ್ ಮಿಶ್ರಣದ ಮಹತ್ವದ ಸ್ಥಿತ್ಯಂತರಕ್ಕೆ ಭಾರತ ಮುನ್ನುಡಿ ಬರೆಯಲಿದೆ. ತೈಲಕ್ಕಾಗಿ ಅನ್ಯದೇಶವನ್ನು ಅವಲಂಬಿಸಿರುವ ಭಾರತದ ಪಾಲಿಗೆ ಇದೊಂದು ಗೇಮ್‌ಚೇಂಜರ್ ಆಗುವ ಸಾಧ್ಯತೆಗಳಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಇಂಡಿಯನ್ ಫೆಡರೇಶನ್ ಆಫ್ ಗ್ರೀನ್ ಎನರ್ಜಿ ಮಂಗಳವಾರ ಆಯೋಜಿಸಿದ ಹಸಿರು ಸಾರಿಗೆ ಸಮಾವೇಶದಲ್ಲಿ ಪಾಲ್ಗೊಂಡ ಸಚಿವ ಗಡ್ಕರಿ, ಸಂಪೂರ್ಣ ಇಂಧನ ಸ್ವಾವಲಂಬನೆಯು ಬರೇ ಪರಿಸರಾತ್ಮಕ ಗುರಿಯಾಗುಳಿದಿಲ್ಲ. ಬದಲಾಗಿ ರಾಷ್ಟ್ರೀಯ ಭದ್ರತಾ ಆವಶ್ಯಕತೆಯಾಗಿದೆ ಎಂದಿದ್ದಾರೆ. ಪ.ಏಷ್ಯಾ ಸಂಘರ್ಷದಿಂದಾಗಿ ಜಾಗತಿಕ ಇಂಧನ ಮಾರುಕಟ್ಟೆಗಳು ಸಂಕಷ್ಟಕ್ಕೀಡಾಗಿರುವುದು, ಸಾಂಪ್ರದಾಯಿಕ ತೈಲ ಪೂರೈಕೆ ಕೊಂಡಿಗಳು ಅಸ್ತವ್ಯಸ್ತಗೊಂಡಿರುವುದು ಮತ್ತು ಆಮದು ಬಿಲ್‌ಗಳು ಗಗನಕ್ಕೇರಿರುವ ಅತ್ಯಂತ ಸಂಕಷ್ಟದ ಸನ್ನಿವೇಶದಲ್ಲೇ ಸಚಿವ ಗಡ್ಕರಿ ಪ್ರಸ್ತುತ ಹೇಳಿಕೆ ನೀಡಿದ್ದಾರೆ.

ಭಾರತವು ಪಳೆಯುಳಿಕೆ ಇಂಧನಗಳ ಆಮದನ್ನು ಅವಲಂಬಿಸಿರುವ ಹಿನ್ನೆಲೆಯಲ್ಲಿ, ಪೆಟ್ರೋಲ್‌ಗೆ ಶೇ. 100 ಎಥೆನಾಲ್ ಮಿಶ್ರಣದ ಮಹತ್ವದ ಟಾರ್ಗೆಟ್ ಹೊಂದಲಾಗಿದೆ. ರಾಷ್ಟ್ರದ ಶೇ.87ರಷ್ಟು ತೈಲ ಆವಶ್ಯಕತೆಗಳು ಈಡೇರುವುದು ಆಮದುಗಳ ಮುಖೇನ.



ಅಂದರೆ ತೈಲ ಆಮದುಗಳಿಗಾಗಿ ಸರಕಾರದ ಬೊಕ್ಕಸಕ್ಕೆ ಬೀಳುವ ಹೊರೆ ವಾರ್ಷಿಕ 22ಲಕ್ಷ ಕೋಟಿ ರೂಗಳಷ್ಟು. ಈ ಆಮದು ವ್ಯವಸ್ಥೆಯ ದೌರ್ಬಲ್ಯವನ್ನು ಪ.ಏಷ್ಯಾ ಸಂಘರ್ಷ ಬಯಲಾಗಿಸಿದೆ. ತನ್ಮೂಲಕ ತನ್ನ ಸಾರಿಗೆ ರಂಗವನ್ನು ಅಂತಾರಾಷ್ಟ್ರೀಯ ಕಚ್ಚಾತೈಲ ದರದುಬ್ಬರಗಳಿಂದ ಪಾರು ಮಾಡುವುದು ಭಾರತಕ್ಕೆ ಅತ್ಯವಶ್ಯವಾಗಿದೆ ಎಂದು ಗಡ್ಕರಿ ಹೇಳಿದ್ದಾರೆ.

ಇಂಧನ ಪೂರೈಕೆದಾರ ರೈತ: ಶೇ.100 ಎಥೆನಾಲ್ ಮಾದರಿಯೆಡೆಗೆ ಹೆಜ್ಜೆ ಹಾಕುವುದರಿಂದ ಇಂಧನ ಭದ್ರತೆಗೆ ವೇಗ ಸಿಗುವುದು ಮಾತ್ರವಲ್ಲ ರೈತರಿಗೂ ನೇರ ಆರ್ಥಿಕ ಪ್ರಯೋಜನಗಳಾಗಲಿವೆ ಅಥವಾ ಅನ್ನದಾತರು ಇಂಧನ ಪೂರೈಕೆದಾರರಾಗಲಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಾರೆ.

3ನೇ ವರ್ಷದ ಶಂಕರಶ್ರೀ ವೇದಪಾಠಶಾಲೆ ಆರಂಭ

ಮಂಗಳೂರು: ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆಯಲ್ಲಿ ಶಂಕರಶ್ರೀ ವೇದಪಾಠಶಾಲೆ ಸಮಿತಿ, ಭಾರತೀ ಎಜುಕೇಶನ್ ಟ್ರಸ್ಟ್ ಮತ್ತು ಸಂಘ ಸಂಸ್ಥೆಗಳ ಸಹಯೋಗದಲ್ಲಿ 3ನೇ ವರ್ಷದ ಶಂಕರಶ್ರೀ ವೇದಪಾಠಶಾಲೆ ಮತ್ತು ಪರಂಪರಾ ಶಿಬಿರ ಆರಂಭಗೊಂಡಿತು.



ಮಕ್ಕಳ ಚಿಕಿತ್ಸೆ ತಜ್ಞರಾದ ಡಾ.ಸದಾಶಿವ ರಾವ್ ಶಿಬಿರ ಉದ್ಘಾಟಿಸಿ ಮಾತನಾಡಿ, ವೇದದ ಮಹತ್ವ, ನಮ್ಮ ಪರಂಪರೆಯ ಉಳಿಕೆ, ಕರ್ಮಪ್ರಧಾನ ಜೀವನದ ಆವಶ್ಯಕತೆ, ಫಲಾಪೇಕ್ಷೆ ಇಲ್ಲದೆ ಪರಂಪರೆಯ ಮುಂದುವರಿಕೆಯಾಗಬೇಕು. ಅಗತ್ಯವಾಗಿ ಅನುಷ್ಠಾನ ಮಾಡಬೇಕು ಎಂದರು.

ಮುಖ್ಯ ಅತಿಥಿ ಡಾ.ಮುರಲಿ ಮೋಹನ ಚೂಂತಾರು ಮಾತನಾಡಿ, ನ್ಯಾನೋ ಕುಟುಂಬ, ಸಂಬಂಧ ಕುಸಿತ ತಡೆಗಾಗಿ ಪರಂಪರಾ ಶಿಬಿರದ ಆವಶ್ಯಕತೆ ಸಮಯೋಚಿತ ಯೋಜನೆಯಾಗಿದೆ. ಇದರ ಪ್ರಯೋಜನ ಸಮಾಜಕ್ಕೆ ಸಿಗಲಿ ಎಂದರು.

ಕರ್ನಾಟಕ ಸಂಸ್ಕೃತ ವಿವಿಯ ಡಾ. ರಾಮಕೃಷ್ಣ ಭಟ್ ಕೂಟೇಲು ಅವರು ಮಾತನಾಡಿ, ಅನುಷ್ಠಾನ ವಿಮುಖತೆಯಾಗಕೂಡದು. ಮೌಢ್ಯ ಅಡ್ಡಿಯಾಗಬಾರದು. ಸಮಾಜ ಜಾಗೃತವಾಗುವುದು ಅಗತ್ಯ. ಶಿಬಿರದ ಪ್ರಯೋಜನ ಮನೆ ಮನೆಗಳಲ್ಲಿ ಅನುರಣಿಸಲಿ. ಅದಕ್ಕಾಗಿ ಸರ್ಕಾರದ ನಿಯಮಾನುಸಾರ ಮೂಲಕ ಪ್ರಮಾಣಪತ್ರ ಕೊಡುಗೆ ಅತ್ಯಂತ ಉಪಯುಕ್ತ ಎಂದರು.

ಶ್ರೀ ಭಾರತೀ ಸಮೂಹ ಸಂಸ್ಥೆಯ ಕಾರ್ಯಾಧ್ಯಕ್ಷ ಗಣೇಶಮೋಹನ ಕಾಶಿಮಠ ಅಧ್ಯಕ್ಷತೆ ವಹಿಸಿದ್ದರು.

ವಿದ್ವಾಂಸ ಡಾ.ವಿನಾಯಕ ಭಟ್ ಗಾಳಿಮನೆ ಅವರು ಮಾತನಾಡಿ, ಪರಂಪರಾ ಶಿಬಿರದ ಉದ್ದೇಶ, ಪಥ್ಯ, ಆವಶ್ಯಕತೆ, ಅನಿವಾರ್ಯತೆ, ಸಂಧ್ಯಾವಂದನೆ ಮಹತ್ವ, ಕರ್ತವ್ಯ, ಪ್ರಯೋಜನ, ಜವಾಬ್ದಾರಿ ಬಗ್ಗೆ ಮಾಹಿತಿ ನೀಡಿದರು.

ದ ಕ ಕಾಸರಗೋಡು ಬ್ರಾಹ್ಮಣ ಮಹಾಜನಸಭಾ ಉಪಾಧ್ಯಕ್ಷ ಎಂ. ಟಿ. ಭಟ್, ನಿಡುಗಳ ಕೃಷ್ಣ ಭಟ್, ಮಂಗಳೂರು ಹವ್ಯಕ ಸಭಾ ಅಧ್ಯಕ್ಷೆ ಗೀತಾದೇವಿ ಸಿ., ಭಾರತೀ ಸಹಕಾರಿ ನಿರ್ದೇಶಕ ಕೆ. ಸುಬ್ರಹ್ಮಣ್ಯ ಶಾಸ್ತ್ರಿ, ರುದ್ರ ಸಮಿತಿಯ ಡಾ.ರಾಜೇಂದ್ರಪ್ರಸಾದ್, ವೇದಪಾಠಶಾಲೆ ಸಮಿತಿ ಸಂಚಾಲಕ ಸುಬ್ರಹ್ಮಣ್ಯ ಭಟ್ ಕಾಶೀಮಠ ಉಪಸ್ಥಿತರಿದ್ದರು.

ಮುಖ್ಯಗುರು ಅಮ್ಮೆ ಶಿವಪ್ರಸಾದ ಭಟ್ ಪ್ರಸ್ತಾಪಿಸಿದರು. ಭಾರತೀ ಎಜುಕೇಶನ್ ಟ್ರಸ್ಟ್ ಕಾರ್ಯದರ್ಶಿ ಶ್ರೀಕೃಷ್ಣ ನೀರಮೂಲೆ ಸ್ವಾಗತಿಸಿ, ಶಂಕರಶ್ರೀ ವೇದಪಾಠಶಾಲೆ ಸಮಿತಿ ಸಂಚಾಲಕ ಬಾಲಸುಬ್ರಹ್ಮಣ್ಯ ಕಬೆಕ್ಕೋಡು ವಂದಿಸಿದರು. ಕಾರ್ಯದರ್ಶಿ ಭಾಸ್ಕರ ಹೊಸಮನೆ ಕಾರ್ಯಕ್ರಮ ನಿರೂಪಿಸಿದರು.

ಗಣಪತಿ ಹವನ, ಭಗವಾನ್ ಸದ್ಗುರು ಶ್ರೀ ಶ್ರೀಧರ ಸ್ವಾಮಿಗೆ ಮಹಾಮಂಗಳಾರತಿ, ವೇದಘೋಷ ನಡೆಯಿತು. ಅಶೋಕೆಯ ವಿಷ್ಣುಗುಪ್ತ ವಿಶ್ವವಿದ್ಯಾಪೀಠ, ಮಂಗಳೂರು ಹವ್ಯಕ ಮಂಡಲ, ಹವ್ಯಕ ಸಭಾ, ದ.ಕ.ಕಾಸರಗೋಡು ಹವ್ಯಕಮಹಾಜನಸಭಾ, ಭಾರತೀ ಸೌಹಾರ್ದ ಸಹಕಾರಿ, ರುದ್ರ ಸಮಿತಿ, ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆಗಳು ಸಹಕಾರ ನೀಡಿದ್ದವು.

ರಕ್ತದಾನ ಸಾಮಾಜಿಕ ಜವಾಬ್ದಾರಿ

ವೀರಾಜಪೇಟೆ: ಪ್ರತಿಯೊಬ್ಬರೂ ರಕ್ತದಾನವನ್ನು ಸಾಮಾಜಿಕ ಜವಾಬ್ದಾರಿ ಎಂದು ಅರಿತುಕೊಳ್ಳಬೇಕು ಎಂದು ಮಡಿಕೇರಿಯ ಜಿಲ್ಲಾ ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ಮುಖ್ಯಸ್ಥ ಡಾ. ಕರುಂಬಯ್ಯ ಅವರು ಅಭಿಪ್ರಾಯಪಟ್ಟರು. ವೀರಾಜಪೇಟೆ ಪಟ್ಟಣದ ಸೆಂಟ್ ಆನ್ಸ್ ಪದವಿ ಕಾಲೇಜಿನಲ್ಲಿ ಕಾಲೇಜಿನ ಯುವ ರೆಡ್ ಕ್ರಾಸ್ ಘಟಕ, ಎನ್ ಎಸ್ ಎಸ್ ಘಟಕ, ರೆಡ್ ರಿಬ್ಬನ್ ಕ್ಲಬ್ ಹಾಗೂ ಮಡಿಕೇರಿಯ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜಿಲ್ಲಾಸ್ಪತ್ರೆ ಸಹಯೋಗದಲ್ಲಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸೆಂಟ್ ಆನ್ಸ್ ಪದವಿ ಕಾಲೇಜಿನ ಪ್ರಾಂಶುಪಾಲೆ ತೃಪ್ತಿ ಬೋಪಣ್ಣ ಅವರು ರಕ್ತದಾನದ ಮಹತ್ವದ ಕುರಿತು ಮಾತನಾಡಿದರು.

ಅಧ್ಯಕ್ಷತೆಯನ್ನು ಸೆಂಟ್ ಆನ್ಸ್ ಪದವಿ ಕಾಲೇಜಿನ ವ್ಯವಸ್ಥಾಪಕ ರೆ. ಫಾ.ಮದಲೈ ಮುತ್ತು ವಹಿಸಿದ್ದರು. ಕಾಲೇಜಿನ ಎನ್‌ಎಸ್‌ಎಸ್ ಘಟಕದ ಅಧಿಕಾರಿ ಬಿ. ಎನ್. ಶಾಂತಿಭೂಷಣ್, ಕಾಲೇಜಿನ ಐಕ್ಯೂಎಸಿ ಸಂಚಾಲಕಿ ಹೇಮಾ ಬಿ ಡಿ ಮತ್ತಿತರರು ಉಪಸ್ಥಿತರಿದ್ದರು. ರೆಡ್ ಕ್ರಾಸ್ ಘಟಕದ ಅಧಿಕಾರಿ ವಿಲೀನಾ ಗೋನ್ಸಾಲ್ವೆಸ್ ಸ್ವಾಗತಿಸಿದರೆ, ವಿದ್ಯಾರ್ಥಿನಿ ಪ್ರಕೃತಿ ನಿರೂಪಿಸಿದರು. ಅಮೃತಾ ರಾವ್ ವಂದಿಸಿದರು.

ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿ ಸೆರೆ

ಮುಲ್ಕಿ: ಕಳೆದ ನಾಲ್ಕು ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಮುಲ್ಕಿ ಪೊಲೀಸರು ಬಂಧಿಸಿ ಮೂಡಬಿದ್ರೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ಆರೋಪಿಯನ್ನು ಬಾದಾಮಿ ತಾಲೂಕು ತಿಮ್ಮಾಪುರ ಅನಿವಾಸಿ ಜಗ್ಗು ಯಾನೆ ಅಲಿಯಾಸ್ ಜಗದೀಶ್ (34) ಎಂದು ಗುರುತಿಸಲಾಗಿದೆ.



ಜಗದೀಶ್ ಮೇಲೆ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಹಲವಾರು ಬಾರಿ ಮೂಡಬಿದ್ರೆ ನ್ಯಾಯಾಲಯದಿಂದ ವಿಚಾರಣೆಗಾಗಿ ದಸ್ತಗಿರಿ ವಾರಂಟ್ ಜ್ಯಾರಿಯಾಗಿದ್ದರೂ ಸುಮಾರು 4 ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆ ಮರೆಸಿಕೊಂಡಿದ್ದ ಎನ್ನಲಾಗಿದೆ. ಆರೋಪಿ ಜಗದೀಶನನ್ನು ಸಹಾಯಕ ಪೊಲೀಸ್ ಆಯುಕ್ತರಾದ ಶ್ರೀಕಾಂತ್ ನಿರ್ದೇಶನದಂತೆ ಹಾಗೂ ಮುಲ್ಕಿ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರಾದ ಮಂಜುನಾಥ ಬಿ.ಎಸ್. ಮಾರ್ಗದರ್ಶನದಂತೆ ಠಾಣಾ ಪಿಎಸ್‌ಐ ರಾಘವೇಂದ್ರ ನಾಯ್ಕ್ ಮಾರ್ಗದರ್ಶನದಂತೆ ಠಾಣಾ ಹೆಚ್‌ಸಿ ಉದಯ್ ಹಾಗೂ ಸಿಪಿಸಿ ಅರುಣ್ ಕುಮಾರ್ ಬಾದಾಮಿ ತಾಲೂಕಿನ ಚಿಂಚನಹಳ್ಳಿ ಎಂಬಲ್ಲಿ ಆರೋಪಿಯನ್ನು ಪತ್ತೆ ಹಚ್ಚಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯವು ಆತನಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

IN THE COURT OF THE DEPUTY COMMISSIONER D.K. MANGALORE D.K.

Between: RAP No. 298/2025

Mr. Akshaya Kumar Agarwal ...Revision Petitioner

AND

Mr. Narayana Shetty and others ... Respondents

Suit Notice

To: Respondent No. 2:
Shankari, Adult, D/o. late Subba Rao,
R/at: 2-173, Punchame, Adyar,
Kotekar Village, Mangalore Taluk.

Please take notice that the Appellant has filed the above suit for mutation of his name in revenue entries in the suit schedule property against you and others. You are hereby summoned to appear in person or through an Advocate in this Court on **02/06/2026 at 3.00 p.m.** and on default the suit will be proceeded with in your absence.

Given under the hand and seal of this Court on this day of **24-03-2026.**

BY ORDER OF COURT
Sd/-, Sri. Guruprasad, Advocate, Vijayashree Chambers, Karangalpady, Mangalore.
Sd/-, Deputy Commissioner D.K.

ಕರಾವಳಿಯಲ್ಲಿ 'ಸಾಗರ ಕವಚ' ಅಣುಕು ಕಾರ್ಯಾಚರಣೆ

ಉಡುಪಿ: ಕರ್ನಾಟಕದ ಕರಾವಳಿ ತೀರದ ರಕ್ಷಣಾ ವ್ಯವಸ್ಥೆಯನ್ನು ಇನ್ನಷ್ಟು ಸದೃಢಗೊಳಿಸುವ ನಿಟ್ಟಿನಲ್ಲಿ 2026ನೇ ಸಾಲಿನ ಪ್ರಥಮ ಆವೃತ್ತಿಯ 'ಸಾಗರ ಕವಚ ಅಣುಕು ಕಾರ್ಯಾಚರಣೆಯು ಏ. 22 ರಿಂದ ಆರಂಭವಾಗಲಿದೆ. ಬೆಳಿಗ್ಗೆ 6 ಗಂಟೆಯಿಂದ ಆರಂಭವಾಗಿ, ಏ. 23ರ ಬೆಳಿಗ್ಗೆ 6 ಗಂಟೆಯವರೆಗೆ ಸತತ 36 ಗಂಟೆಗಳ ಕಾಲ ನಡೆಯಲಿದೆ. ಭಾರತೀಯ ತಟ ರಕ್ಷಣಾ ಪಡೆ (ಇಂಡಿಯನ್ ಕೋಸ್ಟ್ ಗಾರ್ಡ್) ಈ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದು, ಕರಾವಳಿ ಕಾವಲು ಪೊಲೀಸ್, ಭಾರತೀಯ ನೌಕಾಪಡೆ (ಇಂಡಿಯನ್ ನೇವಿ), ಕಸ್ಟಮ್ಸ್, ಸಿ.ಐ.ಎಸ್.ಎಫ್, ಮೀನುಗಾರಿಕೆ ಇಲಾಖೆ, ಬಂದರು ಇಲಾಖೆ ಹಾಗೂ ಜಿಲ್ಲಾ ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜಂಟಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಮಲ್ಪೆಯ ಕರಾವಳಿ ಕಾವಲು ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.24: ಬಂಟ್ವಾಳದಲ್ಲಿ ಮೆಸ್ಕಾಂ ಜನಸಂಪರ್ಕ ಸಭೆ

ಬಂಟ್ವಾಳ: ಮೆಸ್ಕಾಂ ಬಂಟ್ವಾಳ-1 ಮತ್ತು ಬಂಟ್ವಾಳ-2 ಉಪವಿಭಾಗಗಳಿಗೆ ಸಂಬಂಧಿಸಿದ ಜನ ಸಂಪರ್ಕ ಸಭೆಯು ಬಂಟ್ವಾಳ ವಿಭಾಗ ಕಚೇರಿಯಲ್ಲಿ ಏ.24ರಂದು ಸಮಯ ಬೆಳಿಗ್ಗೆ 11ರಿಂದ 12ರವರೆಗೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ದೂರವಾಣಿ ಕರೆಯ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾದ್ದು, ದೂರವಾಣಿ ಸಂಖ್ಯೆ: 08255-298760 ಅನ್ನು ಸಂಪರ್ಕಿಸುವಂತೆ ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

IN THE COURT OF PRINCIPAL SENIOR CIVIL JUDGE & J.M.F.C., BELTHANGADY
O.S.No.56/2025

Between:
Smt. Mallika & another ...Plaintiffs
AND
Mrs. Shaila & another ...Defendants

NOTICE

To
Smt. Shaila, Aged about 54 years,
D/o. Late M.A Narayana,
W/o Jayaprakasha
Kattathadka House,
Noojibalthila Village and Post,
Kadab Taluk. D.K-574221.

Take notice that the above named plaintiffs have filed a suit before this Hon'ble court. The said case is posted **15/06/2026.** to for your appearance. You are hereby called upon to appear before this Court on that day at **11-00 a.m.,** either personally or through pleader, failing which the matter will be decided in your absence, placing you ex-parte.

Given under my hand and seal of the court on 08th day of April 2026.

(BY ORDER OF THE COURT)
Sd/-Chief Ministerial Officer
Principal Senior Civil Judge & J.M.F.C, Belthangady
Sd/- (K.K.N.)
Advocate for Plaintiffs

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ
ತಾ:: ಹುಬ್ಬಳ್ಳಿ, ಜಿ: ಧಾರವಾಡ 580023.ಫೋನ್ : 0836-2315225 ಫ್ಯಾಕ್ಸ್ :2315226.
e-mail : knnl@knnlindia.com e-mail : eeknnl3byt@gmail.com Website: www.knnlindia.com

ಸಂ.ಕನೀನಿನಿ/ಮಬದವಿ-3/ಎ.ಇ-2/ಇ-ಟೆಂಡರ/2026-27/86
ದಿನಾಂಕ: 21-04-2026

ಟೆಂಡರ್

ಧಾರವಾಡ ತಾಲೂಕಿನ 9 ಕೆರೆಗಳಿಗೆ ತುಪ್ಪರಿ ಹಳ್ಳದಿಂದ ನೀರು ತುಂಬಿಸುವ ಯೋಜನೆಯ ಜಾಕ್‌ವೆಲ್ ಕಮ್ ಪಂಪ್‌ಹೌಸ್ ಮತ್ತು ಸೇವಾ ರಸ್ತೆಯ ನೇರ ಖರೀದಿ ಕುರಿತು.

ಧಾರವಾಡ ತಾಲೂಕಿನ ತುಪ್ಪರಿಹಳ್ಳದಿಂದ 9 ಕೆರೆ ತುಂಬಿಸುವ ಯೋಜನೆಗೆ ಸಂಬಂಧಿಸಿದಂತೆ ಹಂಗರ್ಕಿ ಗ್ರಾಮದಲ್ಲಿ ಬರುವ ಸ್ಕೀಮ್-2ರ ಜಾಕ್‌ವೆಲ್ ಕಮ್ ಪಂಪ್ ಹೌಸ್ ಮತ್ತು ಸೇವಾ ರಸ್ತೆ ನಿರ್ಮಿಸುವ ಸಲುವಾಗಿ ಖಾಸಗಿ ಜಮೀನುಗಳನ್ನು ನೇರ ಖರೀದಿ ಮೂಲಕ ಖರೀದಿಸಲು ದಿನಾಂಕ: 02-08-2022 ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ದರ ನಿರ್ಧಾರಣಾ ಸಮಿತಿ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಜರುಗಿದ **ಸಭೆಯಲ್ಲಿ ಪ್ರತಿ ಎಕರೆಗೆ ರೂ. 5,41,344.21 (ರೂ. ಐದು ಲಕ್ಷ ನಾಲ್ವತ್ತೊಂದು ಸಾವಿರ ಮೂರ ನೂರ ನಾಲ್ವತ್ತ ನಾಲ್ಕು ಮತ್ತು ಪೈಸೆ ಇಪತ್ತೊಂದು ಮಾತ್ರ)** ರಂತೆ ಮಾನ್ಯ ಜಿಲ್ಲಾಧಿಕಾರಿಗಳು ದರ ನಿಗದಿಪಡಿಸಿರುತ್ತಾರೆ. ಹಂಗರ್ಕಿ ಗ್ರಾಮದ ರಿ.ಸ.ನಂ: 121/3B, 121/3A, 121/6, 121/5, 121/4, 121/2 & 121/1 ರ ಒಟ್ಟು 1 ಎಕರೆ-20 ಗುಂಟೆ-12ಆಣೆ ಜಮೀನು ಅವಶ್ಯಕವಿರುತ್ತದೆ.

ಮುಂದುವರೆದು, ಹಳೆತೇಗೂರ ಗ್ರಾಮದಲ್ಲಿ ಬರುವ ಸ್ಕೀಮ್-1ರ ಜಾಕ್‌ವೆಲ್ ಕಮ್ ಪಂಪ್ ಹೌಸ್ ಮತ್ತು ಸೇವಾ ರಸ್ತೆ ನಿರ್ಮಿಸುವ ಸಲುವಾಗಿ ಖಾಸಗಿ ಜಮೀನುಗಳನ್ನು ನೇರ ಖರೀದಿ ಮೂಲಕ ಖರೀದಿಸಲು ದಿನಾಂಕ:02/03/2026 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಹಾಗೂ ಅಧ್ಯಕ್ಷರು, ಜಿಲ್ಲಾ ದರ ನಿರ್ಧಾರಣಾ ಸಮಿತಿ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಪ್ರತಿ ಎಕರೆಗೆ **ರೂ. 3,00,000.00 (ರೂ. ಮೂರು ಲಕ್ಷ ಮಾತ್ರ)** ರಂತೆ ಮಾನ್ಯ ಜಿಲ್ಲಾಧಿಕಾರಿಗಳು ದರ ನಿಗದಿಪಡಿಸಿರುತ್ತಾರೆ. ಹಳೆತೇಗೂರ ಗ್ರಾಮದ ರಿ.ಸ.ನಂ: 96/6, 96/8, 96/7 & 97 ರ ಒಟ್ಟು 17 ಗುಂಟೆ-13ಆಣೆ ಜಮೀನು ಅವಶ್ಯಕವಿರುತ್ತದೆ.

ಜಿಲ್ಲಾಧಿಕಾರಿಗಳ ದರ ನಿರ್ಧರಣಾ ಸಲಹಾ ಸಮಿತಿ ನಿರ್ಧರಿಸಿರುವ ದರದಂತೆ ಜಮೀನು ಖರೀದಿ ಮಾಡಲು ಆಕ್ಷೇಪಣೆಗಳಿದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು 30ದಿನಗಳ ಒಳಗಾಗಿ ಅಂದರೇ **22-05-2026** ರ ಒಳಗಾಗಿ ಲಿಖಿತ ರೂಪದಲ್ಲಿ ಈ ಕಚೇರಿಗೆ ಸಲ್ಲಿಸಲು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3
ಬ್ಯಾಹಟ್ಟಿ

ಡಿಐಪಿಆರ್/ಧಾರವಾಡ/74/ಮಣಿಪಾಲ್/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-516th) ಡ್ರಾ ಏಪ್ರಿಲ್ 21ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SB 285845 (THIRUR)
Cons Prize-Rs: 5000/-
SA 285845 SC 285845 SD 285845 SE 285845 SF 285845 SG 285845 SH 285845 SJ 285845 SK 285845 SL 285845 SM 285845
2nd Prize Rs: 30,00,000/- [30 Lakhs]
SE 786005 (PALAKKAD)
3d Prize Rs: 5,00,000/- [5 Lakhs]
SG 435068 (WAYANADU)

FOR THE TICKETS ENDING WITH THE FOLLOWING NUMBERS

4th Prize Rs.5,000/-
2180 2985 3002 4457 5161 5930 6204 6301 6715 6753 7199 7317 7339 7657 8060 8168 8280 8578 9313
5th Prize Rs.2,000/-
1801 3045 5366 7191 7507 9742
6th Prize Rs.1,000/-
0549 0746 0901 1367 2051 2067 2613 2937 3768 3859 4252 4270 4851 4899 4914 4960 5271 5535 5725 6049 6654 7185 8427 8461 9856
7th Prize Rs.500/-
0133 0186 0322 0372 0572 0679 0700 0823 1021 1156 1182 1351 1541 1553 2029 2037 2112 2147 2463 2645 2812 2860 2954 3330 3487 3828 3920 4028 4048 4211 4239 4276 4483 4559 4680 4687 4732 5242 5435 5525 5598 5758 5895 5965 6150 6476 6596 6653 7004 7076 7145 7328 7364 7432 7443 7722 8021 8050 8103 8181 8449 8629 8708 8821 8927 8987 9111 9204 9278 9440 9556 9737 9763 9888 9898 9962
8th Prize Rs.200/-
0107 0152 0209 0312 0313 0378 0951 0983 1100 1197 1375 1420 1433 1494 1552 1556 1721 1785 1867 1930 1968 2019 2024 2038 2440 2592 2627 2744 3066 3488 3495 3524 3610 3620 3774 4121 4177 4203 4308 4376 4396 4401 4418 4524 4577 4670 4678 4781 4794 4923 5024 5107 5232 5245 5381 5508 5510 5556 5677 5846 6069 6237 6442 6555 6629 6649 6699 7068 7123 7165 7544 7653 7863 7904 8048 8155 8297 8319 8527 8801 8900 8918 9304 9306 9341 9485 9701 9833 9945 9990
9th Prize Rs.100/-
0003 0170 0193 0210 0216 0271 0582 0647 0651 0671 0707 0722 0776 0828 0947 0959 1004 1018 1050 1058 1097 1185 1203 1216 1245 1357 1363 1461 1565 1667 1714 1783 1878 1957 1972 1974 2160 2192 2207 2208 2284 2306 2341 2437 2621 2690 2745 2839 2849 2858 2918 2992 3033 3070 3079 3101 3111 3390 3396 3466 3694 3719 3738 3785 3810 3837 3855 3945 4010 4104 4122 4129 4131 4380 4649 4753 4795 4838 4953 5076 5119 5132 5175 5189 5423 5514 5619 5910 5914 5957 5980 6012 6034 6061 6329 6451 6461 6465 6569 6725 6794 6854 6946 7030 7169 7213 7260 7382 7399 7413 7591 7654 7693 7729 7742 7752 7797 7861 7908 7933 8051 8056 8255 8259 8269 8374 8562 8733 8766 8820 8841 8867 8910 8928 9044 9094 9216 9228 9286 9447 9489 9559 9562 9565 9639 9678 9685 9687 9820 9875

ಪ್ರೇರಣಾ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಕಡಲಕೆರೆ ಮೂಡುಬಿದಿರೆ

ಲಕ್ಕಿ ಕೂಪನ್

ಪ್ರಥಮ	ದ್ವಿತೀಯ	ತೃತೀಯ
7709	3238	6902

ಸಮಾಧಾನಕರ ಬಹುಮಾನಗಳು
1) 0204 2) 5667 3) 4501
4) 7660 5) 5813 6) 0370
7) 1497 8) 1764 9) 2888
10) 0120

ಪುತ್ತೂರು ಮಾರುಕಟ್ಟೆ ಧಾರಣೆ
21-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	455 - 475
ಟೋಲ್ ಅಡಿಕೆ	525 - 550
ಡಬಲ್ ಟೋಲ್	525 - 550
ಹೊಸ ಪಟೋರ	350 - 400
ಹಳೆ ಪಟೋರ	375 - 405
ಹೊಸ ಉಳ್ಳಿ	120 - 290
ಹಳೆ ಉಳ್ಳಿ	110 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 310

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	229.50
ಆರ್‌ಎಸ್‌ಎಸ್ 2	196.00
ಸ್ಕ್ರಾಪ್ 1	141.00
ಸ್ಕ್ರಾಪ್ 2	125.00

IN THE COURT OF I ADDL. DISTRICT JUDGE AND COMMERCIAL COURT, AT MANGALORE, D.K
In Com O.S. 319/2025

Between:
Canara Bank, Lalbagh Branch ...Plaintiff
And
M/s Surya Swasahaya Sangha and others ...Defendants

NOTICE

To Defendant No.5 and 13
5 Mrs. Sefiya
Aged 62 years,
W/o Hussain
R/at: 6-63/18 Maripala Padi House, Pudu Village and Post, Bantwal, D.K-574143.
13 Ms. Mamthaz
Aged 46 years,
D/o Hussain
R/at: 6-15, Pudu Village & Post Sujeer Badi Gudde House, Farangipet, Bantwal, D.K-574143.

Please take notice that the plaintiff named above has filed the above suit against you. You are not available for service of suit notice so far. Hence, the Honourable court has ordered the plaintiff to cause suit notice through paper publication against you. Therefore you are hereby called upon to appear in person or through pleader before the above said Honourable Court at 11.00 A.M. on 16-06-2026. If you fail to appear the matter will be decided in your absence according the merits of the suit treating you ex-parte by the court.

Given under my hand and the seal of the court on this 21st day of April,2026.

Sd/- Chief Administrative Officer
Distric Court, D.K., Mangaluru
Sd/- (Ravichandra P.M.)
Advocate for plaintiff
Mangalore, D.K.
Date: 16-04-2026

IN THE COURT OF I ADDL. DISTRICT JUDGE AND COMMERCIAL COURT, AT MANGALORE, D.K
In Com O.S 322/2025

Between:
Canara Bank, Lalbagh Branch ...Plaintiff
And
M/s Adi Swasahaya Sangha and others ...Defendants

NOTICE

To Defendant No.4
4. Mrs. Ayishathul Mansooda
Aged about 23 years,
W/o. Abdul Khader,
R/at: 2-137, Dandemaru House, Bolanthuru,
Bantwal, D.K-574222.

Please take notice that the plaintiff named above has filed the above suit against you. You are not available for service of suit notice so far. Hence, the Honourable court has ordered the plaintiff to cause suit notice through paper publication against you. Therefore you are hereby called upon to appear in person or through pleader before the above said Honourable Court at 11.00 A.M. on **16-06-2026.** If you fail to appear the matter will be decided in your absence according the merits of the suit treating you ex-parte by the court.

Given under my hand and the seal of the court on this 21st day of April, 2026.

Sd/- Chief Administrative Officer
Distric Court, D.K., Mangaluru
Sd/- (Ravichandra P.M.)
Advocate for plaintiff
Mangalore, D.K.
Date: 16-04-2026

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಬೆಂಗಳೂರು, ಕಾವೇರಿ ಭವನ, ಸಿಬಿಎಬಿ ಕಾಂಪ್ಲೆಕ್ಸ್‌ನ 2026-27ನೇ ಸಾಲಿನ ವಿದ್ಯುತ್ ವಾರ್ಷಿಕ ನಿರ್ವಹಣೆ ಕಾಮಗಾರಿ. **Work Indent No. :** KHB/2026-27/OW/WORK INDENT 751 & IFT No.17/2026-27 Date: 17.04.2026. ಟೆಂಡರ್‌ಗಿಟ್ಟ ಮೊತ್ತ ರೂ.32,49,982/-.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **02.05.2026 ಸಂಜೆ 4.00 ಗಂಟೆಗೆ.** ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/276/ಅಕಾರ್/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ವಿಭಾಗ ಕಾರ್ಯಾಲಯ, ಹಬ್ಬುವಾಡಾ-ಕಾರವಾರ, ಉತ್ತರ ಕನ್ನಡ ಜಿಲ್ಲೆ-581301.
ದೂರವಾಣಿ: 08382-228935 ಫ್ಯಾಕ್ಸ್: 229735 E-mail: eerdwsd.uk@gmail.com
ಸಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/PMC/ಅಲ್ಪಾವಧಿ ಟೆಂಡರ ಪ್ರಕಟಣೆ/2026-27/83
ದಿನಾಂಕ: 18/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (KPP Portal ಮೂಲಕ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ನೀರಿನ ಗುಣಮಟ್ಟವನ್ನು ಪರಿಕ್ಷೀಸಲು ಜಿಲ್ಲಾ ಹಾಗೂ ತಾಲೂಕಾ ಪ್ರಯೋಗಾಲಯಕ್ಕೆ ಅಗತ್ಯ ಸಿಬ್ಬಂದಿಗಳನ್ನು, ತಾತ್ಕಾಲಿಕವಾಗಿ ಒಂದು ವರ್ಷದ (12 ತಿಂಗಳು) ಅವಧಿಗೆ ಹೊರಗುತ್ತಿಗೆ ಆಧಾರದ ಮೂಲಕ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ತೆ ಅಧಿನಿಯಮ-1999 ಹಾಗೂ ನಿಯಮ-2000 ರಂತೆ ತತ್ಸಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು KPP ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರ್‌ಗಳನ್ನು ಆಹ್ವಾನಿಸಿದೆ. ಗ್ರಾ.ಕು.ನೀ.&ನೈ. ಇಲಾಖೆಯಡಿ ನೋಂದಾಯಿತ/ಎಂಪಾನೆಲ್ಡ್ ತಾಂತ್ರಿಕ ಸಂಸ್ಥೆ/ಏಜೆನ್ಸಿಗಳು ಅಥವಾ ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಲ್ಪಟ್ಟ ಮಾನವ ಸಂಪನ್ಮೂಲ ಸಂಸ್ಥೆ/ಏಜನ್ಸಿಗಳಿಂದ ಟೆಂಡರ್ ನಿಯಮಾವಳಿಗಳಂತೆ https://kppp.karnataka.gov.in KPP ಪೋರ್ಟಲ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಮತ್ತು ಇನ್ನಿತರೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರನಲ್ಲಿ ಭಾಗವಹಿಸುವುದು. ವಿವರ ಈ ಕೆಳಗಿನಂತಿವೆ.

ವಿವರ: INDENT NUMBER: RWSSD/2026-27/SE0881

(1) ಟೆಂಡರ್ ದಾಖಲಾತಿಗಳನ್ನು KPP ಪೋರ್ಟಲ್ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ: 19/04/2026 ರಿಂದ 28/04/2026 ರ 16.30 ಗಂಟೆಯವರೆಗೆ (2) ಟೆಂಡರುಗಳನ್ನು KPP ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 28/04/2026 ರ 16.30 ಗಂಟೆಯವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ: 29/04/2026 ರಂದು 17.00 ಗಂಟೆಯ ನಂತರ. ಉಳಿದ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಗ್ರಾ. ಕು. ನೀ. ಮತ್ತು ನೈ. ವಿಭಾಗ, ಕಾರವಾರ (ಉ. ಕ. ಜಿಲ್ಲೆ)

DIPR/KWR/KSMCA/66/26-27 dt.18.04.2026

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂ:ಕಾಇಂ/ಲೋಇವಿ/ಮಧು/ಸಇಂ-1/ಟೆಂಡರ್/2026-27 ದಿ: 16.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2026-27
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-1,2&3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ, ಕೊರಟಗೆರೆ, ಮಧುಗಿರಿ ಹಾಗೂ ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137-283336.

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ: 80.57 ಲಕ್ಷಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 27-04-2026 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 28-04-2026 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 29-04-2026 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: : 22-04-2026 ಸಂಜೆ 4.00 ಗಂಟೆಗೆ ವರೆಗೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/26/KSMCA/2026-27

ಪುರಸಭಾ ಕಾರ್ಯಾಲಯ, ಬೇಲೂರು
E-mail: itstaff_ulb_belur@yahoo.co.in, townmunicipal.belur@gmail.com ದೂರವಾಣಿ: 08177-222221
ಸಂಖ್ಯೆ: ಮ.ಬೇ/ಜೆ.ಇ/ಟೆಂಡರ್-01/2026-27
ದಿನಾಂಕ:18.04.2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ 1)ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 08.05.2026 ಸಂಜೆ 5.30 ಗಂಟೆಗೆ 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 11.05.2026 ಬೆಳಿಗ್ಗೆ 11.30 ಗಂಟೆಗೆ 3)ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 14.05.2026 ಬೆಳಿಗ್ಗೆ 11.30 ಗಂಟೆಗೆ 4)ಕೆಲಸ ಮುಗಿಸಲು ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) (ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರ ಪಡಿಸಲಾಗುವುದು) ಕ್ರ.ಸಂ.ಕಾಮಗಾರಿ ವಿವರ 1.DMA/2025-26/BD/WORK_INDENT56566 ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) 21,01,369/- ಇ.ಎಂ.ಡಿ.ಮೊತ್ತ: 53,000/- 2.(DMA/2026-27/SE7728) ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) AS PER KPPE PORTAL ಇ.ಎಂ.ಡಿ.ಮೊತ್ತ: AS PER KPPE PORTAL ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕಾಮಗಾರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಮತ್ತು http://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-(ಉಷಾಸತೀಶ್. ಬಿ.ಎಸ್) ಪ್ರಭಾರ ಅಧ್ಯಕ್ಷರು, ಪುರಸಭೆ, ಬೇಲೂರು
ಸಹಿ/-(ಬಸವರಾಜು ಟಾಕಪ್ಪ ಶಿಗ್ಗಾಂವಿ) ಕೆ.ಎಂ.ಎ.ಎಸ್ ವೃ-ಶ್ರೇಣಿ-1 ಮುಖ್ಯಾಧಿಕಾರಿ, ಪುರಸಭೆ, ಬೇಲೂರು

ವಾಸಾಸಂಇ/ಹಿಸನಿ/ಹಾಸನ/54/ಕೆಎಸ್‌ಎಂಸಿಎ/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ-591302
ಸಂಖ್ಯೆ. ಕನೀನಿನಿ/ಕಯೋವಿ/ಖಾ/ಪಿವಿ/ಅ.ಟೆಂ.ಪ್ರ/2026-27/74-81 ದಿನಾಂಕ: 21.04.2026

"ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ"
(ಕೆಪಿಪಿ-ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ ಶೇಕಡಾವಾರು ಟೆಂಡರ್‌ಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆ
1	Providing Infrastructure facility to Kukadolli Village coming under the jurisdiction of Belagavi Rural Constituency under Bagewadi TFS in Belagavi Taluka. **(W.I. No. KNNL/2026-27/ RD/WORK_INDENT4335)**	254.15	ದರ್ಜೆ 2 ಮತ್ತು ಮೇಲ್ಪಟ್ಟು
2	Providing infrastructure facilities to Bakanur, Hangaraga and Rankunde villages coming under the jurisdiction of Belagavi Rural Constituency under Hangarag TFS in Belagavi Tulaka. **(W.I. No. KNNL/202627/RD/WORK_INDENT4336)**	422.72	ದರ್ಜೆ 2 ಮತ್ತು ಮೇಲ್ಪಟ್ಟು
3	Improvements of Roads in Navage, Nandihalli and Santibstwad Village Belagavi Taluka, Belagavi Dist. **(W.I. No. KNNL/2026-27/RD/WORK_INDENT4337)**	422.40	ದರ್ಜೆ 2 ಮತ್ತು ಮೇಲ್ಪಟ್ಟು
4	Providing infrastructure facilities to Karadiguddi, Marihal, Tumaraguddi, Siddanahalli, Karikatti and Balekundri KH villages coming under the jurisdiction of Belagavi Rural Constituency under Bagewadi TFS in Belagavi Taluka. **(W.I. No. KNNL/2026-27/RD/WORK_INDENT4338)**	207.40	ದರ್ಜೆ 2 ಮತ್ತು ಮೇಲ್ಪಟ್ಟು
5	Providing Infrastructure facility to Benakanhalli and Hindalaga Gram Panchayat Limits coming under Hangaraga TFS in Belagavi. (for the year 2025-26) **(W.I. No. KNNL/2026-27/RD/ WORK_INDENT4339)**	422.49	ದರ್ಜೆ 2 ಮತ್ತು ಮೇಲ್ಪಟ್ಟು
6	Improvements to road from Marihal to Marikatti road (up to Narasappa Bhimappa Karanachi Field) and from Marihal Sulebhavi Main (Chavvan House) to Hodma Nala, roads, at Balekundri KH, Kallehola and Yaddalbhavihatti villages in Belagavi Rural Constituency under Bagewadi TFS in Belagavi Taluka. **(W.I. No. KNNL/2026-27/RD/WORK_INDENT4340)**	422.69	ದರ್ಜೆ 2 ಮತ್ತು ಮೇಲ್ಪಟ್ಟು
7	Providing Infrastructure facility to Badas KH Village coming under the jurisdiction of Belagavi Rural Constituency under Bagewadi TFS in Belagavi Taluka. **(W.I. No. KNNL/2026-27/RD/WORK_INDENT4341)**	338.87	ದರ್ಜೆ 2 ಮತ್ತು ಮೇಲ್ಪಟ್ಟು
8	Providing Infrastructure facility to Halagimardi Village coming under the jurisdiction of Belagavi Rural Constituency under Bagewadi TFS in Belagavi Taluka. **(W.I. No. KNNL/2026-27/RD/WORK_INDENT4342)**	169.27	ದರ್ಜೆ 3 ಮತ್ತು ಮೇಲ್ಪಟ್ಟು

https://kppp.karnataka.gov.inನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 04.05.2026ರಂದು ಸಂಜೆ 4.00ಗಂಟೆ** ವರೆಗೆ ಸಲ್ಲಿಸಬಹುದು. ಪ್ರಿ-ಬಿಡ್ ಸಭೆಯನ್ನು **ದಿನಾಂಕ: 27.04.2026ರಂದು ಮುಂಜಾನೆ 11.00 ಗಂಟೆಗೆ** ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 05.05.2026 ಸಂಜೆ 4.30 ಗಂಟೆಗೆ.** ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ-ಪೋರ್ಟಲ್ ಮುಖಾಂತರ https://kppp.karnataka.gov.in ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ 08336-222163 ಸಂಪರ್ಕಿಸುವದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ,
ಖಾನಾಪೂರ, ಬೆಳಗಾವಿ

ವಾ.ಸಾ.ಇ/ಬೆಳಗಾವಿ/136/ದೇಶಪಾಂಡೆಪಬ್ಲಿಸಿಟಿ/2026-27

ರಾಜ್ಯ ಚುನಾವಣಾ ಆಯುಕ್ತರಿಗೆ ಪತ್ರ | ಜೆಡಿಎಸ್ ಕಾನೂನು ಘಟಕ ಕಳವಳ

ಚುನಾವಣೆ ನಡೆಸದೆ ಪ್ರಜಾಪ್ರಭುತ್ವ ಹತ್ತಿಕ್ಕಿದ ಜಿಬಿಎ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದಲ್ಲಿ ಕಳೆದ ಆರು ವರ್ಷದಿಂದ ಸ್ಥಳೀಯ ಪ್ರಜಾಪ್ರಭುತ್ವವನ್ನು ಹತ್ತಿಕ್ಕಲಾಗುತ್ತಿದೆ ಎಂದು ಆರೋಪಿಸಿರುವ ಜೆಡಿಎಸ್ ರಾಜ್ಯ ಕಾನೂನು ಘಟಕವು, ಕೂಡಲೇ ಚುನಾವಣೆ ನಡೆಸುವಂತೆ ಆಗ್ರಹಿಸಿ ರಾಜ್ಯ ಮುಖ್ಯ ಕಾರ್ಯದರ್ಶಿಗಳು ಹಾಗೂ ರಾಜ್ಯ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ.

ನಗರದ ನಾಗರಿಕ ಆಡಳಿತದಲ್ಲಿ ಉಂಟಾಗಿರುವ ಸಾಂವಿಧಾನಿಕ ಬಿಕ್ಕಟ್ಟಿನ ಕುರಿತು ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ಎ.ಪಿ. ರಂಗನಾಥ್ ಕಳವಳ ವ್ಯಕ್ತಪಡಿಸಿದ್ದಾರೆ. 2015– ಆಗಸ್ಟ್‌ನಲ್ಲಿ ನಡೆದ ಚುನಾವಣೆಯೇ ಬೆಂಗಳೂರಿನ ಕೊನೆಯ ಸ್ಥಳೀಯ ಸಂಸ್ಥೆ ಚುನಾವಣೆಯಾಗಿದೆ. ಅಂದಿನಿಂದ ಇಂದಿನವರೆಗೆ ಸತತವಾಗಿ ವಿವಿಧ ನೆಪಗಳನ್ನು ಒಡ್ಡುತ್ತಾ ಚುನಾವಣೆಗಳನ್ನು ಮುಂದೂಡಲಾಗುತ್ತಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಬೆಂಗಳೂರು ಸುಮಾರು 1.3 ಕೋಟಿ ಜನಸಂಖ್ಯೆಯನ್ನು ಹೊಂದಿದ್ದು, ಕರ್ನಾಟಕದ ಒಟ್ಟು ಜಿಡಿಪಿಯಲ್ಲಿ ಶೇ. 40ರಷ್ಟು ಪಾಲು ನೀಡುತ್ತಿದೆ. ಆದರೂ, 2020ರ ಸೆಪ್ಟೆಂಬರ್‌ನಿಂದ ನಗರಕ್ಕೆ ಒಬ್ಬರೇ ಒಬ್ಬ ಚುನಾಯಿತ ಪ್ರತಿನಿಧಿ ಇಲ್ಲದಿರುವುದು ಪ್ರಜಾಪ್ರಭುತ್ವದ ಅಣಕವಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಸುಪ್ರೀಂ ಕೋರ್ಟ್ ಈಗಾಗಲೇ ಜೂನ್ 30ರೊಳಗೆ ಚುನಾವಣೆ ನಡೆಸಬೇಕೆಂದು ಸ್ಪಷ್ಟ ನಿರ್ದೇಶನ ನೀಡಿದೆ.



ಕಾನೂನು ಹೋರಾಟ ಎಚ್ಚರಿಕೆ

ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎ) ಹೆಸರಿನಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವ ಬದಲು ರಾಜ್ಯ ಮಟ್ಟದಲ್ಲಿ ಕೇಂದ್ರೀಕರಿಸಲಾಗುತ್ತಿದೆ. ಒಂದು ವೇಳೆ ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಕಾಲಮಿತಿಯೊಳಗೆ ಚುನಾವಣೆ ನಡೆಸದಿದ್ದರೆ, ಮುಖ್ಯ ಕಾರ್ಯದರ್ಶಿಗಳು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ನ್ಯಾಯಾಲಯ ನಿಂದನೆ ಮೊಕದ್ದಮೆ ಹೂಡುವುದಾಗಿ ಜೆಡಿಎಸ್ ಕಾನೂನು ಘಟಕ ಚ್ಚರಿಕೆ ನೀಡಿದೆ


ಆದರೆ, ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಏಪ್ರಿಲ್ 15ರಂದು ಪತ್ರ ಬರೆದು, ಸೆಪ್ಟೆಂಬರ್ ವರೆಗೆ ಕಾಲಾವಕಾಶ ಕೋರಿರುವುದು ನ್ಯಾಯಾಲಯದ ನಿಂದನೆಯಾಗಿದೆ ಎಂದು ಪತ್ರದಲ್ಲಿ ಆಕ್ಷೇಪಿಸಲಾಗಿದೆ.

ಅನುದಾನಕ್ಕೆ ಕುತ್ತು: ಹಣಕಾಸು ಆಯೋಗವು ಕರ್ನಾಟಕಕ್ಕೆ ಸುಮಾರು 29,897 ಕೋಟಿ ರೂ. ಅನುದಾನ ನೀಡಲು ಒಪ್ಪಿದೆ. ಆದರೆ ಇದು ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದರೆ ಮಾತ್ರ ಲಭ್ಯವಾಗಲಿದೆ. ಸರ್ಕಾರದ ಹಠಮಾರಿತನದಿಂದ ಬೆಂಗಳೂರಿನ ಜನರಿಗೆ ಸೇರಬೇಕಾದ ಈ ಬೃಹತ್ ಮೊತ್ತ ಕೈತಪ್ಪುವ ಭೀತಿ ಎದುರಾಗಿದೆ ಎಂದು ರಂಗನಾಥ್ ತಿಳಿಸಿದ್ದಾರೆ.

ಅಧಿಕಾರಿಗಳ ದರ್ಬಾರು: ಚುನಾಯಿತ ಮೇಯರ್ ಅಥವಾ ಕಾರ್ಪೊರೇಟರ್‌ಗಳಿಲ್ಲದೆ ನಗರವು ಕೇವಲ ಕೆಲವೇ ಕೆಲವು ಅಧಿಕಾರಿಗಳ ಕೈಗೊಂಬೆಯಾಗಿದೆ.

ಇದು ಸಂವಿಧಾನದ 74ನೇ ತಿದ್ದುಪಡಿಯ ಆಶಯಕ್ಕೆ ವಿರುದ್ಧವಾಗಿದೆ. 2015ರ ಕಟಾರಿಯಾ ಸಮಿತಿ ವರದಿಯು ಹಿಂದಿನ ಬಿಬಿಎಂಪಿಯಲ್ಲಿರುವ ಭ್ರಷ್ಟಾಚಾರ ಮತ್ತು ಅಕ್ರಮಗಳನ್ನು ಎತ್ತಿ ತೋರಿಸಿತ್ತು. ಈಗ ಚುನಾವಣೆ ನಡೆಸದೆ ಇರುವುದು ಇಂತಹ ಅವ್ಯವಸ್ಥೆಗೆ ಆಸ್ಪದ ನೀಡಿದಂತಾಗಿದೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ದಿನಾಚರಣೆ



ಮಹಾಲಕ್ಷ್ಮೀಪುರ ಬ್ರಾಹ್ಮಣ ಸಭಾ ಹಾಗೂ ಮೈತ್ರೀ ಸಂಸ್ಕೃತ - ಸಂಸ್ಕೃತಿ ಪ್ರತಿಷ್ಠಾನಮ್ ಸಹಯೋಗದಲ್ಲಿ ಮಹಾಲಕ್ಷ್ಮೀಪುರಂ ಶ್ರೀ ಪ್ರಸನ್ನ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಆದಿಗುರು ಶಂಕರಾಚಾರ್ಯಜಯಂತಿ ಹಾಗೂ ತತ್ವಜ್ಞಾನಿಗಳ ದಿನ ಆಚರಿಸಲಾಯಿತು. ಶಾಸಕ ಕೆ.ಗೋಪಾಲಯ್ಯ, ಹೈಕೋರ್ಟ್ ನ್ಯಾ.ಶ್ರೀಶಾನಂದ ಉಪಸ್ಥಿತರಿದ್ದರು.

ಕಿರುಸುದ್ದಿ

ಸಾಂಸ್ಕೃತಿಕ ಚಟುವಟಿಕೆ ಶಿಕ್ಷಣದ ಭಾಗವಾಗಿರಲಿ



ಬೆಂಗಳೂರು: ಕಲೆ, ನೃತ್ಯ, ಸಂಗೀತ, ನಾಟಕ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳು ಶಿಕ್ಷಣದ ಪ್ರಮುಖ ಭಾಗವಾಗಬೇಕು ಎಂದು ಶಾಸಕ ಎಸ್.ಟಿ.ಸೋಮಶೇಖರ್ ತಿಳಿಸಿದರು. ರಾಜಾಜಿನಗರ 2ನೇ ಹಂತದಲ್ಲಿರುವ ಶಿವ ಶಕ್ತಿ ನೃತ್ಯ ಶಾಲೆಯ 26ನೇ ವಾರ್ಷಿಕೋತ್ಸವದ ಪ್ರಯುಕ್ತ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಲಾಗಿದ್ದ ಶಕ್ತಿ ಸ್ವರೂಪಿಣಿ ನೃತ್ಯ ರೂಪಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನೃತ್ಯ, ಸಂಗೀತ ಮುಂತಾದ ಕಲೆಗಳ ಕಲಿಕೆಯನ್ನು ಮಕ್ಕಳ ಬಾಲ್ಯ ಜೀವನಕ್ಕೆ ಸೀಮಿತಗೊಳಿಸದೆ ನಿರಂತರವಾಗಿ ಪ್ರೋತ್ಸಾಹಿಸುವಂತೆ ಪೋಷಕರಲ್ಲಿ ಮನವಿ ಮಾಡಿದರು. ಶಿವಶಕ್ತಿ ನೃತ್ಯ ಶಾಲೆಯ ಸಂಸ್ಥಾಪಕ ನಿರ್ದೇಶಕಿ ವಿದುಷಿ ಕೆ.ಆರ್.ಗುಣವತಿಯವರ ಮಾರ್ಗದರ್ಶನದಲ್ಲಿ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು, ಭಾರತದ ಪುರಾಣ ಪ್ರಸಿದ್ಧ ಶಕ್ತಿ ಪೀಠಗಳ ಐತಿಹ್ಯವನ್ನು ಆತ್ಯಾಕರ್ಷಕ ನೃತ್ಯ ರೂಪಕದ ಮೂಲಕ ಪ್ರಸ್ತುತಪಡಿಸಿದರು. ಮೃದಂಗ ವಿದ್ವಾನ್ ಎಚ್.ಎಸ್. ಸುಧೀಂದ್ರ, ಖ್ಯಾತ ಗಾಯಕಿ ಡಾ.ಪದ್ಮಿನಿ ಎಲ್. ಓಕ್, ನಾಟ್ಯಾಚಾರ್ಯ ಎಂ.ಸಿ. ಸುಚೇಂದ್ರ ಬಾಬು, ಕಲಾ ನಿರ್ದೇಶಕ ಪ್ರಕಾಶ್ ಎಸ್. ಅಯ್ಯರ್, ವಿದ್ವಾನ್ ಹರೀಶ್ ರಾಮನ್ ಹಾಗೂ ಶಾಸಕ ಎಸ್.ಆರ್.ವಿಶ್ವನಾಥ್ ಉಪಸ್ಥಿತರಿದ್ದರು.

ಶಂಕರಾಚಾರ್ಯರ ಆದರ್ಶವೇ ಮಾದರಿ



ಬೆಂಗಳೂರು: ಆದಿ ಶಂಕರಚಾರ್ಯರು ತಮ್ಮ 32ವಯಸ್ಸಿನಲ್ಲಿ ಅಪೂರ್ವ ಸಾಧನೆ ಮಾಡಿದ್ದರು. ಅವರ ಆದರ್ಶ ಜೀವನ ಮಾರ್ಗದರ್ಶನದಲ್ಲಿ ನಾವೆಲ್ಲ ಸಾಗೋಣ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ರವೀಂದ್ರ ಕಲಾಕ್ಷೇತ್ರಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಆಯೋಜಿಲಾಗಿದ್ದ ಆದಿ ಶಂಕರಚಾರ್ಯ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿ, ಶಂಕರಚಾರ್ಯರು ಚಿಕ್ಕವಯಸ್ಸಿನಲ್ಲಿ ಉತ್ತಮ ಮನಸ್ಸುವುಳ್ಳವರಾಗಿದ್ದು, ವೇದ, ಉಪನಿಷತ್‌ಗಳನ್ನು ಅರಿತಿದ್ದರು. ಕಾಲ್ನಿಡಿಗೆಯಲ್ಲಿ ದೇಶಾದ್ಯಂತ ಪ್ರವಾಸ ಮಾಡಿದ್ದರು. ಹಿಂದೂ ಧರ್ಮ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇಂದು ಸಮಾಜದಲ್ಲಿ ಸಂಕೀರಣ ವ್ಯವಸ್ಥೆಯಲ್ಲಿ ನಾವಿದ್ದೇವೆಂದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್. ರಘುನಾಥ್, ಹಿರಿಯ ಉಪಾಧ್ಯಕ್ಷ ಆರ್.ಲಕ್ಷ್ಮೀಕಾಂತ್, ಚಿಂತಕ ಪಾವಗಡ ಪ್ರಕಾಶ ರಾವ್, ಜ್ಯೋತಿಷಿ ದ್ವಾರಕನಾಥ ಗುರೂಜೀ, ಸಾಹಿತಿ ಗುರುರಾಜಕರ್ಜಗಿ, ಶೃಂಗೇರಿ ಮಠ ಮಾಜಿ ಆಡಳಿತಧಿಕಾರಿ ವಿ.ಆರ್.ಗೌರಿಶಂಕರ್, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಸೇರಿದಂತೆ ಇತರರಿದ್ದರು.

ವಿಸ್ತೃತ ಯೋಜನಾ ವರದಿ ಶೀಘ್ರವೇ ಸಿದ್ಧಪಡಿಸಿ | ಜಿಬಿಎ ಕೆಡಿಪಿ ಸಭೆಯಲ್ಲಿ ಆಯುಕ್ತರ ಸೂಚನೆ

ಇಬ್ಲೂರು ಜಂಕ್ಷನ್ ಬಳಿ ಹೆಚ್ಚುವರಿ ಮೇಲ್ಸೇತುವೆ

ಬೆಂಗಳೂರು: ಹೊರ ವರ್ತುಲ ರಸ್ತೆಯ ಇಬ್ಲೂರು ಜಂಕ್ಷನ್ ಬಳಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣಕ್ಕಾಗಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ಸುರಕ್ಷಾ-75 ಜಂಕ್ಷನ್‌ಗಳ ಅಭಿವೃದ್ಧಿ ಹಾಗೂ ವೈಟ್ ಟಾಪಿಂಗ್ ಕಾರ್ಯಗಳಿಗೆ ಸಂಬಂಧಿಸಿದಂತೆ ಜಿಬಿಎ ಕೇಂದ್ರ ಕಚೇರಿಯ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ನಗರದ ಹೊರ ವರ್ತುಲ ರಸ್ತೆಯ ಇಬ್ಲೂರು ಜಂಕ್ಷನ್ ಬಳಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣ ಮಾಡಿದಲ್ಲಿ ಸಂಚಾರ ದಟ್ಟಣೆ ಕಡಿಮೆಯಾಗಲಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಡಿಪಿಆರ್ ಸಿದ್ಧಪಡಿಸಿ, ತ್ವರಿತಗತಿಯಲ್ಲಿ ಮೇಲ್ಸೇತುವೆ ನಿರ್ಮಾಣ ಮಾಡಲು ಸಮಗ್ರ ಯೋಜನೆ ರೂಪಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸುರಕ್ಷಾ-75 ಯೋಜನೆಯಲ್ಲಿ ಇಬ್ಲೂರು ಜಂಕ್ಷನ್ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದ್ದು, ಸಂಚಾರಿ ಪೊಲೀಸ್ ವಿಭಾಗದೊಂದಿಗೆ ಸಮನ್ವಯ ಮಾಡಿಕೊಂಡು ತ್ವರಿತಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಜತೆಗೆ, ಜಂಕ್ಷನ್ ಬಳಿಯಿರುವ ಖಾಲಿ ಜಾಗವನ್ನು ಪಾಲಿಕೆ ವಶಕ್ಕೆ ಪಡೆದು ಸಂಚಾರ ದಟ್ಟಣೆ ನಿವಾರಣೆಗೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು.

ಸಮನ್ವಯ ಮಾಡಿಕೊಂಡು ಕೆಲಸ ಮಾಡಿ :

ಸುರಕ್ಷಾ-75 ಯೋಜನೆಯಡಿ 32 ಜಂಕ್ಷನ್‌ಗಳಿಗೆ ಸಂಬಂಧಿಸಿದಂತೆ ಸಂಚಾರಿ ಪೊಲೀಸ್ ವಿಭಾಗದೊಂದಿಗೆ ಸಮನ್ವಯ ಸಭೆ ನಡೆಸಿ ಜಿಎಫ್‌ಸಿಗಳನ್ನು ಅಂತಿಮಗೊಳಿಸಿ ಆಯಾ ನಗರ ಪಾಲಿಕೆಗಳಿಗೆ ನೀಡಲಾಗಿದೆ. ಈ ಪೈಕಿ 10 ಜಂಕ್ಷನ್‌ಗಳಲ್ಲಿ ಕೆಲಸ ಪ್ರಾರಂಭಿಸಲಾಗಿದ್ದು, ಶೀಘ್ರಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಅಧಿಕಾರಿಗಳಿಗೆ ತಿಳಿಸಿದರು.



ಕೂಡಲೇ ಅನುಮತಿ ಪಡೆದು ಕಾಮಗಾರಿಗಳಿಗೆ ವೇಗ ನೀಡಿ

ಮೆಟ್ರೋ ಮಾರ್ಗ ಇರುವ ಕಡೆಗಳಲ್ಲಿ ಪಾಲಿಕೆ, ಮೆಟ್ರೋ ಹಾಗೂ ಸಂಚಾರಿ ಪೊಲೀಸ್ ವಿಭಾಗದ ಅಧಿಕಾರಿಗಳು ಜಂಟಿ ಪರಿಶೀಲನೆ ನಡೆಸಿ ವಿನ್ಯಾಸಗಳನ್ನು ಅಂತಿಮಗೊಳಿಸಿಕೊಂಡು ತ್ವರಿತಗತಿಯಲ್ಲಿ ಕೆಲಸ ಪ್ರಾರಂಭಿಸಿ. ನಗರದಲ್ಲಿ ಹಲವಾರು ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಜಲಮಂಡಳಿ ಕಾಮಗಾರಿ ಹಾಗೂ ಸಂಚಾರಿ ಪೊಲೀಸ್ ವಿಭಾಗದಿಂದ ಅನುಮತಿ ಪಡೆಯಬೇಕಿರುವ ಕಾಮಗಾರಿಗಳಿಗೆ ಕೂಡಲೇ ಅನುಮತಿ ಪಡೆದು ಕಾಮಗಾರಿಗಳಿಗೆ ವೇಗ ನೀಡಿ, ಕಾಲಮಿತಿಯೊಳಗಾಗಿ ಕೆಲಸ ಪೂರ್ಣಗೊಳಿಸಲು ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯಲಹಂಕ ವ್ಯಾಪ್ತಿ: ಸುನೀಲ್ ಕುಮಾರ್ ಪರಿಶೀಲನೆ

ಬೆಂಗಳೂರು: ಉತ್ತರ ನಗರ ಪಾಲಿಕೆಯ ಆಯುಕ್ತ ಪಿ.ಸುನೀಲ್ ಕುಮಾರ್ ಯಲಹಂಕ ಪ್ರದೇಶದ ವ್ಯಾಪ್ತಿಯಲ್ಲಿ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಯಲಹಂಕದ ನ್ಯಾಯಾಂಗ ಬಡಾವಣೆಯ ರೈಲ್ವೆ ಅಂಡರ್‌ಪಾಸ್ ಆಳವನ್ನು ಹೆಚ್ಚಿಸಲು ರೈಲ್ವೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಯಲಹಂಕದ ಕಾಫಿ ಡೇ ಅಂಡರ್‌ಪಾಸ್ ಬಳಿ ಜಲಾವೃತ ಸಮಸ್ಯೆಯಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುವುದಲ್ಲದೆ, ಸಾರ್ವಜನಿಕರ ಸುರಕ್ಷತೆಗೂ ಧಕ್ಕೆಯಾಗುವ ಸಾಧ್ಯತೆ ಇರುವುದರಿಂದ, ಈ ಸಮಸ್ಯೆಯನ್ನು ತಕ್ಷಣ ಪರಿಹರಿಸಲು ಅಗತ್ಯ ತಾಂತ್ರಿಕ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ರಾತ್ರಿ 1ರ ವರೆಗೆ ಪೆಟ್ರೋಲಿಂಗ್ ನಡೆಸಿ

ಏರ್‌ಪೋರ್ಟ್ ರಾಷ್ಟ್ರೀಯ ಹೆದ್ದಾರಿ ಮಾರ್ಗದ ಸ್ವಚ್ಛತೆ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಆಯುಕ್ತರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರೊಂದಿಗೆ ಸಮನ್ವಯ ಮಾಡಿಕೊಂಡು, ಆ ಮಾರ್ಗದಲ್ಲಿ ನಿರಂತರ ಸ್ವಚ್ಛತಾ ಕಾರ್ಯಗಳನ್ನು ಕೈಗೊಳ್ಳುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.ಅಲ್ಲದೆ ಸಾರ್ವಜನಿಕ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ರಾತ್ರಿ ವೇಳೆ ಮಾರ್ಷಲ್‌ಗಳ ಮೂಲಕ ಪೆಟ್ರೋಲಿಂಗ್ ವ್ಯವಸ್ಥೆಯನ್ನು ಬಲಪಡಿಸಿ, ರಾತ್ರಿ ಒಂದು ಗಂಟೆಯವರೆಗೆ ಪರಿಶೀಲನೆ ನಡೆಸುವಂತೆ ತಿಳಿಸಿದ್ದಾರೆ.

ಮನೆಯಲ್ಲೇ ವೇಶ್ಯಾವಾಟಿಕೆ: ಬಂಧನ

ಬೆಂಗಳೂರು: ನಗರದ ವಿವಿಧೆಡೆ ಸ್ಪಾ ಮತ್ತು ಮನೆಗಳಲ್ಲಿ ಅಕ್ರಮವಾಗಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಜಾಲದ ಮೇಲೆ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ 3 ಮಹಿಳೆಯರು ಸೇರಿದಂತೆ ಒಟ್ಟು ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದ್ದು, 6 ಮಹಿಳೆಯರನ್ನು ರಕ್ಷಿಸಲಾಗಿದೆ.

ಸಿಸಿಬಿ ಪೊಲೀಸರಿಗೆ ದೊರೆತ ಖಚಿತ ಮಾಹಿತಿಯ ಮೇರೆಗೆ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ಮಾರತಹಳ್ಳಿ, ಬ್ಯಾಡರಹಳ್ಳಿ ಠಾಣಾ ವ್ಯಾಪ್ತಿಯ ಸುಂಕದಕಟ್ಟೆ ಬಳಿಯ ಸ್ಪಾ ಗಳು ಹಾಗೂ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಮಂಜುನಾಥ ನಗರದ ಮನೆಯೊಂದರ ಮೇಲೆ ವಿವಿಧ ದಿನಾಂಕಗಳಂದು ದಾಳಿ ನಡೆಸಲಾಗಿತ್ತು. ಈ ಸ್ಥಳಗಳಲ್ಲಿ ಮಹಿಳೆಯರನ್ನು ಇಟ್ಟುಕೊಂಡು ಕಾನೂನುಬಾಹಿರವಾಗಿ ವೇಶ್ಯಾವಾಟಿಕೆ ದಂಧೆ ನಡೆಸಲಾಗುತ್ತಿತ್ತು.

ಬಂಧಿತ ಆರೋಪಿಗಳು ಹಣದ ಆಸೆಗಾಗಿ ಮಹಿಳೆಯರನ್ನು ಈ ಕೃತ್ಯಕ್ಕೆ ದೂಡಿದ್ದರು. ವಿಚಾರಣೆಯ ವೇಳೆ, ತಾವು ಗ್ರಾಹಕರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಸ್ಪಾ ಮತ್ತು ಮನೆಗಳಿಗೆ ಬರಮಾಡಿಕೊಳ್ಳುತ್ತಿದ್ದುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ. ಪ್ರಸ್ತುತ ಆರೋಪಿಗಳ ವಿರುದ್ಧ ಎಚ್‌ಎಎಲ್, ಬ್ಯಾಡರಹಳ್ಳಿ ಮತ್ತು ಬಾಗಲಗುಂಟೆ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ನ್ಯಾಯಾಲಯವು ನಾಲ್ವರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.



ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ಅವರು ವಿಧಾನಸಭಾ ಕ್ಷೇತ್ರ ಹೆಬ್ಬಾಳದ ಗುಡ್ಡದಹಳ್ಳಿ ವೃತ್ತದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ಬಳ್ಳಾರಿ ರಸ್ತೆಯ ಬ್ಯಾಪ್ಟಿಸ್ಟ್ ಆಸ್ಪತ್ರೆ ಬಳಿ ಮತ್ತು ಗಂಗಾನಗರ ಸಿಬಿಐ ರಸ್ತೆಯಲ್ಲಿ ನೂತನ ಬಸ್ ನಿಲ್ದಾಣವನ್ನು ಉದ್ಘಾಟಿಸಿದರು. ಕ್ಷೇತ್ರದ ನಾಗರಿಕರು, ಜಿಬಿಎ ಅಧಿಕಾರಿಗಳು, ಹಿರಿಯ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಇದ್ದರು.

ಲ್ಯಾಂಬೊರ್ಗಿನಿ ಹುರಕಾನ್ ಕಾರಿಗೆ ನಕಲಿ ನಂಬರ್ ಪ್ಲೇಟ್ ಅಳವಡಿಕೆ ಪ್ರಕರಣ

ರಿಕ್ಕಿ ರೈ ವಿರುದ್ಧ ಆತುರದ ಕ್ರಮಕ್ಕೆ ಹೈ ತಡೆ

ಬೆಂಗಳೂರು: ಐಷಾರಾಮಿ ಲ್ಯಾಂಬೊರ್ಗಿನಿ ಹುರಕಾನ್ ಕಾರಿಗೆ ನಕಲಿ ಫ್ಯಾನ್ಸಿ ನಂಬರ್ ಪ್ಲೇಟ್ ಅಳವಡಿಸಿದ ಸಂಬಂಧ ದಾಖಲಾಗಿರುವ ಪ್ರಕರಣದಲ್ಲಿ ರಿಕ್ಕಿ ರೈ ವಿರುದ್ಧ ಆತುರ ಕ್ರಮಕೈಗೊಳ್ಳದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಬೆಂಗಳೂರಿನ ಕಬ್ಬನ್ ಪಾರ್ಕ್ ಠಾಣೆಯಲ್ಲಿ ದಾಖಲಾಗಿರುವ ದೂರು ಮತ್ತು ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ರಿಕ್ಕಿ ರೈ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ರಿಕ್ಕಿ ರೈ ಪ್ರತಿನಿಧಿಸಿದ್ದ ಹಿರಿಯ ವಕೀಲೆ ಲಕ್ಷ್ಮೀ ಐಯ್ಯಂಗಾರ್ ಅವರು ಸಾರಿಗೆ ಪ್ರಾಧಿಕಾರ ಫ್ಯಾನ್ಸಿ ನಂಬರ್ ನೀಡಿರುವುದು ಮತ್ತು ಅದಕ್ಕೆ ರಿಕ್ಕಿ ಹಣ ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ದಾಖಲೆ ಇದೆ. ಹೀಗಾಗಿ, ನಕಲಿ ಫ್ಯಾನ್ಸಿ ನಂಬರ್ ಪ್ಲೇಟ್ ಹಾಕಲಾಗಿದೆ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಫ್ಯಾನ್ಸಿ ನಂಬರ್‌ಗೆ ರಿಕ್ಕಿ ರೈ ನಾಲ್ಕು ಲಕ್ಷ ರೂ. ಪಾವತಿಸಿದ್ದಾರೆ. ಅರ್ಜಿದಾರರಿಗೆ ಅನ್ವಯಿಸಿರುವ ಸೆಕ್ಷನ್‌ಗಳು ಊರ್ಜಿತವಾಗಲ್ಲ ಎಂದರು.

ರಸ್ತೆಯಲ್ಲಿ ಲ್ಯಾಂಬೊರ್ಗಿನಿ ಸದ್ದು ಮಾಡಿ ಹೋಗುತ್ತಿರುವಾಗ ಕಿರಿಕಿರಿಗೆ ಒಳಗಾದ ವ್ಯಕ್ತಿಯೊಬ್ಬರು ವಿಡಿಯೋ ರೆಕಾರ್ಡ್ ಮಾಡಿದ್ದಾರೆ. ಮೋಟಾರ್ ವಾಹನ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದ್ದು, ನ್ಯಾಯಾಲಯಕ್ಕೆ ಹೋಗಿ ಅವರು ದಂಡ ಕಟ್ಟಲಿದ್ದಾರೆ. ಹೀಗಿರುವಾಗ ಎರಡನೇ ಎಫ್‌ಐಆರ್ ದಾಖಲಿಸುವ ಅವಶ್ಯಕತೆ ಏನಿತ್ತು ಎಂದರು.

ರಾಜ್ಯ ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು ಪ್ರಶ್ನಾರ್ಹವಾದ ಫ್ಯಾನ್ಸಿ ನಂಬರ್ ಅನ್ನು ರಿಕ್ಕಿ ಖರೀದಿಸಿರುವ ವಾಹನಕ್ಕೆ ಅಧಿಕೃತವಾಗಿ ಹಂಚಿಕೆ ಮಾಡಲಾಗಿಲ್ಲ. ದೆಹಲಿಯಲ್ಲಿ ವಾಹನ ಖರೀದಿಸಿದ ಬಳಿಕ ಪುನಾ ನೋಂದಣಿ ಪ್ರಕ್ರಿಯೆಯನ್ನು ರಿಕ್ಕಿ ಬೆಂಗಳೂರಿನಲ್ಲಿ ಮಾಡಿಲ್ಲ. ಇಂಥ ನಂಬರ್ ಪ್ಲೇಟ್‌ಗಳ ಬಳಕೆಯು ವಂಚನೆ ಮತ್ತು ದಾಖಲೆ ತಿರುಚಿದ ಆರೋಪದ ಪ್ರಕರಣವಾಗುತ್ತದೆ ಎಂದರು.

ಉಭಯ ಪಕ್ಷಕಾರರ ವಾದ ಆಲಿಸಿದ ಪೀಠವು ರಿಕ್ಕಿ ರೈ ತನಿಖೆಗೆ ಸಹಕರಿಸಬೇಕು ಎಂಬ ಷರತ್ತಿಗೆ ಒಳಪಟ್ಟು ತನಿಖೆಯ ನೆಪದಲ್ಲಿ ಪೊಲೀಸರು ರಿಕ್ಕಿ ರೈ ವಿರುದ್ಧ ಆತುರದ ಕ್ರಮಕೈಗೊಳ್ಳಬಾರದು ಎಂದು ಆದೇಶಿಸಿದೆ. ಅಲ್ಲದೇ, ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದ್ದು, ತನಿಖಾ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ನಿರ್ದೇಶಿಸಿ, ವಿಚಾರಣೆ ಮುಂದೂಡಿದೆ.

ಮೆಡಾಲ್ ಕ್ಲುಮ್ಯಾಕ್ಸ್ ಡಯಾಗ್ನೋಸ್ಟಿಕ್ಸ್‌ನ ಕೇಂದ್ರ ಉದ್ಘಾಟನೆ

ಬೆಂಗಳೂರು: ಇಂದಿರಾ ನಗರದ ನ್ಯೂತಿಪ್ಪಸಂದ್ರ ರಸ್ತೆಯಲ್ಲಿ ಮೆಡಾಲ್ ಕ್ಲುಮ್ಯಾಕ್ಸ್ ಡಯಾಗ್ನೋಸ್ಟಿಕ್ಸ್‌ನ ಕೇಂದ್ರ ಮರು ಉದ್ಘಾಟನೆಯಾಗಿದೆ.

ಕಾರ್ಯಕ್ರಮದಲ್ಲಿ ಇಂಟರ್‌ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ.ಆನಂದ್. ಆರ್ ಶೆಣೈ ಮಾತನಾಡಿ, ಇಂತಹ ಆಧುನಿಕ ಡಯಾಗ್ನೋಸ್ಟಿಕ್ ಕೇಂದ್ರಗಳು ಸಾರ್ವಜನಿಕ ಆರೋಗ್ಯದ ಗುಣಮಟ್ಟವನ್ನು ಹೆಚ್ಚಿಸಲು ಮಹತ್ವದ ಪಾತ್ರವಹಿಸುತ್ತವೆ ಎಂದು ಹೇಳಿದರು.

ಈ ಕೇಂದ್ರವು ಅತ್ಯಾಧುನಿಕ ಡಯಾಗ್ನೋಸ್ಟಿಕ್ ತಂತ್ರಜ್ಞಾನ ಮತ್ತು ಸುಧಾರಿತ ರೋಗಿ ಸೇವೆಗಳೊಂದಿಗೆ ಸಜ್ಜುಗೊಂಡಿದ್ದು, ನಗರದ ಜನತೆಗೆ ವಿಶ್ವಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುವ ಮಹತ್ವದ ಹೆಜ್ಜೆಯಾಗಿದೆ. ಮೆಡಾಲ್ ಕ್ಲುಮ್ಯಾಕ್ಸ್ ಡಯಾಗ್ನೋಸ್ಟಿಕ್ಸ್ ಭಾರತದಲ್ಲಿನ ಪ್ರಮುಖ ಡಯಾಗ್ನೋಸ್ಟಿಕ್ ಸಂಸ್ಥೆಯಾಗಿದ್ದು, ದೇಶಾದ್ಯಂತ 200ಕ್ಕೂ ಹೆಚ್ಚು ಶಾಖೆಗಳ ಮೂಲಕ ಜನರಿಗೆ ನಂಬಿಕಸ್ಥ ಸೇವೆ ನೀಡುತ್ತಿದೆ. ಕಾರ್ಯಕ್ರಮದಲ್ಲಿ ಮೆಡಾಲ್ ಕ್ಲುಮ್ಯಾಕ್ಸ್ ಡಯಾಗ್ನೋಸ್ಟಿಕ್ಸ್‌ನ ಮುಖ್ಯಸ್ಥ ಜೆ.ಬಾಲಕೃಷ್ಣನ್ ಸೇರಿದಂತೆ ಇತರರಿದ್ದರು.



ಖಾಸಗಿ ಕಂಪನಿ ಉದ್ಯೋಗಿ ನಾಪತ್ತೆ

ಬೆಂಗಳೂರು: ಆನ್‌ಲೈನ್ ಗೇಮ್ ಚಟಕ್ಕೆ ಬಿದ್ದು ಹಣಕಾಸಿನ ಸಂಕಷ್ಟಕ್ಕೆ ಸಿಲುಕಿದ್ದ ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರು ನಿಗೂಢವಾಗಿ ನಾಪತ್ತೆಯಾಗಿರುವ ಘಟನೆ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಆನ್‌ಲೈನ್ ಗೇಮ್ ಚಟದಿಂದ ಆರ್ಥಿಕ ಸಂಕಷ್ಟ

ಒಡಿಶಾ ಮೂಲದ ಬಿ.ಟೆಕ್ ಪದವೀಧರ ಚಿನ್ಮಯ್ ಪ್ರಸಾದ್ ಸಾಹೂ ಉದ್ಯೋಗ ಅರಸಿ ಬೆಂಗಳೂರಿಗೆ ಬಂದು ಖಾಸಗಿ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಅಕ್ಷಯ ನಗರದಲ್ಲಿ ವಾಸವಿದ್ದ ಇವರು, ತಮ್ಮ ಗೆಳತಿಯೊಂದಿಗೆ ಲಿವಿಂಗ್-ಟುಗೆದರ್ ಸಂಬಂಧದಲ್ಲಿದ್ದರು. ಚಿನ್ಮಯ್‌ಗೆ ಆನ್‌ಲೈನ್ ಗೇಮ್‌ಗಳ ವ್ಯಸನವಿದ್ದು, ಇದಕ್ಕಾಗಿ ಖಾಸಗಿ ಕಂಪನಿಗಳಲ್ಲಿ ಸಾಲ ಪಡೆದಿದ್ದರು. ಆದರೆ, ಸಾಲ ಮರುಪಾವತಿ ಮಾಡಲು ಸಾಧ್ಯವಾಗದಿದ್ದಾಗ ಸಾಲ ನೀಡಿದವರಿಂದ ಹಣ ವಾಪಸ್ ನೀಡುವಂತೆ ಒತ್ತಡ ಹೆಚ್ಚಾಗಿತ್ತು.

ಬೆದರಿಕೆ ಕರೆಗಳು: ಇತ್ತೀಚೆಗೆ ಚಿನ್ಮಯ್ ಅವರ ಮೊಬೈಲ್‌ಗೆ ಕೆಲವು ಖಾಸಗಿ ಫೋಟೋಗಳನ್ನು ಕಳುಹಿಸಿ ಸೈಬರ್ ವಂಚಕರು ಬೆದರಿಕೆ ಹಾಕುತ್ತಿದ್ದರು. ಕೇಳಿದಷ್ಟು ಹಣ ನೀಡದಿದ್ದರೆ ಈ ಫೋಟೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದಾಗಿ ಹೆದರಿಸುತ್ತಿದ್ದರು ಎಂಬ ಅಂಶವು ಬೆಳಕಿಗೆ ಬಂದಿದೆ.

ನಾಪತ್ತೆ ಪ್ರಕರಣ: ನಾಲ್ಕು ದಿನಗಳ ಹಿಂದೆ ಕಸ ಹಾಕಲು ಮನೆಯಿಂದ ಹೊರಗೆ ಹೋದ ಚಿನ್ಮಯ್ ಮತ್ತೆ ವಾಪಸ್ ಮನೆಗೆ ಬಂದಿಲ್ಲ. ಅವರು ಹೋಗುವಾಗ ತಮ್ಮ ಮೊಬೈಲ್, ಬ್ಯಾಗ್ ಮತ್ತು ಎಟಿಎಂ ಕಾರ್ಡ್ ಸೇರಿದಂತೆ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗದೆ ಮನೆಯಲ್ಲೇ ಬಿಟ್ಟು ಹೋಗಿದ್ದಾರೆ. ಇದು ಅಪಹರಣವೋ ಅಥವಾ ಸಾಲದ ಬಾಧೆಗೆ ಬೇಸತ್ತು ತಾವಾಗಿಯೇ ಮನೆ ಬಿಟ್ಟು ಹೋಗಿದ್ದಾರೋ ಎಂಬ ಅನುಮಾನ ವ್ಯಕ್ತವಾಗಿದೆ. ಈ ಕುರಿತು ಹುಳಿಮಾವು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನಾಪತ್ತೆಯಾದ ಯುವಕನಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಸಂಗಮೇಶ್ವರ ದೇಗುಲದಲ್ಲಿ ಬಸವ ಜಯಂತಿ

ವೈಚಾರಿಕ ಜ್ಞಾನದ ಜ್ಯೋತಿ ಬಸವಣ್ಣ

ಕೆಂಗೇರಿ: ವೈಚಾರಿಕ ಜ್ಞಾನದ ಜ್ಯೋತಿಯನ್ನು ಜಗತ್ತಿಗೆ ಬೆಳಗಿದ ಬಸವಣ್ಣನವರ ಕಾರ್ಯ ಶ್ಲಾಘನೀಯ ಎಂದು ತುಮಕೂರಿನ ಬೆಳ್ಳಾವೆ ಜಂಗಮ ಸುಕ್ಷೇತ್ರ ಶ್ರೀ ಕಾರದೇಶ್ವರ ಮಠದ ಪೀಠಾಧ್ಯಕ್ಷ ಕಾರದ ವೀರಬಸವ ಸ್ವಾಮೀಜಿ ಹೇಳಿದರು.

ರಾಜರಾಜೇಶ್ವರಿ ನಗರದ ಬಿಇಎಂಎಲ್ ಬಡಾವಣೆಯ ಸಂಗಮೇಶ್ವರ ದೇವಾಲಯದ ಆವರಣದಲ್ಲಿ ಶ್ರೀ ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ಸಂಘ ಆಯೋಜಿಸಿದ್ದ ಜಗದ್ಗುರು ಪಂಚಾಚಾರ್ಯರ ಯುಗ ಮಾನೋತ್ಸವ ಹಾಗೂ ಜಗಜ್ಯೋತಿ ಬಸವೇಶ್ವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವ ಮತ್ತು ಸಮಾನತೆ ಎಂಬುದರ ಸಮಾಜ ನಿರ್ಮಾಣಕ್ಕೆ ಬುನಾದಿ ಹಾಕಿದ ಕೀರ್ತಿ ಬಸವಣ್ಣನವರಿಗೆ ಸಲ್ಲಿಸಬೇಕಾಗಿದೆ. ವೈಚಾರಿಕ ವಿಚಾರ ಧಾರೆಗಳ ಜತೆಗೆ ಬುದ್ಧ, ಬಸವ, ಅಂಬೇಡ್ಕರ ಅವರ ವಿಚಾರಧಾರೆ ಯನ್ನು ಮೈಗೂಡಿಸಿಕೊಳ್ಳಬೇಕು ಎಂದರು. ಸಂಸದ ಡಾ. ಸಿ.ಎನ್. ಮಂಜುನಾಥ್ ಮಾತನಾಡಿ, ಮಹಿಳಾ ಮೀಸಲಾತಿಯನ್ನು ಮೊದಲ ಬಾರಿಗೆ ಮಸೂದೆ



ಜಾರಿಗೆ ತಂದವರು ಮಾಜಿ ಪ್ರಧಾನಿ ದೇವೇಗೌಡ ಅವರು. ಈಗ ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಸಚಿವ ಸಂಪುಟದಲ್ಲಿ ಮಹಿಳಾ ಮೀಸಲಾತಿಯನ್ನು ಮತ್ತೆ 2029ಕ್ಕೆ ಅನ್ವಯವಾಗುವಂತೆ ಜಾರಿಗೆ ತರಲಾಗಿದೆ ಎಂದು ತಿಳಿಸಿದರು. ಬಿಬಿಎಂಪಿ ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್, ಮಾಜಿ ಉಪ ಮೇಯರ್ ಪುಟ್ಟರಾಜು, ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಕೊ. ವಿಜಯ್ ಕುಮಾರ್, ಅಧ್ಯಕ್ಷ ಸೋಮಲಿಂಗಪ್ಪ ಉಡಚ್ಯಾಣ, ಖಜಾಂಚಿ ಚೇತನ್ ಕುಮಾರ್, ಪಟ್ಟಣಗೆರೆ ಜಯಣ್ಣ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಜಗದೀಶ್, ವಿನೂತ, ಹಾಸ್ಯ ಕಲಾವಿದೆ ಇಂದುಮತಿ ಮತ್ತಿತರರು ಉಪಸ್ಥಿತರಿದ್ದರು.

ಪಂಚಾಯತ್ ರಾಜ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಆಯ್ಕೆ

ಬೆಂಗಳೂರು: ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಮುಂದಿನ ಮೂರು ವರ್ಷದ ಅವಧಿಯ ಪದಾಧಿಕಾರಿಗಳ ಆಯ್ಕೆಗೆ ಏಪ್ರಿಲ್ 19ರಂದು ನಡೆದ ಚುನಾವಣೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ದಿಲೀಪ್ ಕುಮಾರ್ ಬಿ.ಎಂ. ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ರಿಯಾಜ್ ಕೆ. ಖಲೇಬ (ಸಾಮಾನ್ಯ ಸ್ಥಾನ) ಮತ್ತು ದೀಪಾ ಎನ್. (ಮಹಿಳಾ ಮೀಸಲು), ಸಾಮಾನ್ಯ ವಿಭಾಗದ ಉಪ ವಿಭಾಗವಾರು ಉಪಾಧ್ಯಕ್ಷರಾಗಿ ಅಂಜಿನಪ್ಪ ಆರ್. (ಬೆಂಗಳೂರು), ಚೇತನ್ ಎಚ್.ಎಂ. (ಮೈಸೂರು), ಬಸವರಾಜ ಎನ್. (ಕಲಬುರಗಿ), ಸಿದ್ಧಾರ್ಥ ಗೋಕೆ (ಬೆಳಗಾವಿ), ಮಹಿಳಾ ಮೀಸಲು ಕ್ಷೇತ್ರದ ಉಪ ವಿಭಾಗವಾರು ಉಪಾಧ್ಯಕ್ಷರಾಗಿ ಅನುಪಮಾ ಎಂ. (ಕಲಬುರಗಿ), ಕಾತ್ಯಾಯಿನಿ ಎಂ.ಕೆ. (ಬೆಂಗಳೂರು), ವಸಂತ ಎನ್. (ಮೈಸೂರು) ಮತ್ತು ಶಿವಲೀಲಾ ಅಂಗಡಿ (ಬೆಳಗಾವಿ) ಆಯ್ಕೆ ಯಾಗಿದ್ದಾರೆ.

ಉಪ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳಾಗಿ ನಿಂಗಪ್ಪ ಮೂಲಮನಿ (ಕಲಬುರಗಿ), ಮೌಲಾಸಾಬ ಮದರಸಾಬ ಯಲಮಣಿ (ಬೆಳಗಾವಿ), ವೆಂಕಟೇಶ ಡಿ.ವಿ. (ಬೆಂಗಳೂರು), ಸುರೇಶ್ (ಮೈಸೂರು), ಕ್ರೀಡಾ ವಿಭಾಗದ ಕಾರ್ಯದರ್ಶಿಯಾಗಿ ನಂಜುಂಡಸ್ವಾಮಿ ಡಿ., ಸಾಂಸ್ಕೃತಿಕ ವಿಭಾಗದ ಕಾರ್ಯದರ್ಶಿಯಾಗಿ ಚಿದಾನಂದ ಎಸ್. ಮತ್ತು ಖಜಾಂಚಿಯಾಗಿ ಶರತ್ ಕುಮಾರ್ ಅಭಿಮಾನ್ ಆಯ್ಕೆ ಯಾಗಿದ್ದಾರೆ. ಸಂಘದ ನಿಕಟಪೂರ್ವ ಅಧ್ಯಕ್ಷರಾದ ರಾಜು ವಾರದ, ಬೋರಯ್ಯ, ಉಪಾಧ್ಯಕ್ಷರಾದ ಖೂಬಾ ಸಿಂಗ್, ವಿವಿಧ ಜಿಲ್ಲಾ ಘಟಕಗಳ ಅಧ್ಯಕ್ಷರು, ರಾಜ್ಯ ಪರಿಷತ್ ಸದಸ್ಯರು ಮತ್ತು ಖಜಾಂಚಿಗಳು ಚುನಾವಣಾ ಪ್ರಕ್ರಿಯೆಯಲ್ಲಿ ಸಹಕರಿಸಿದರು.

ಚುನಾವಣಾಧಿಕಾರಿಯಾಗಿ ರಘು ಆರ್. ಕಾರ್ಯನಿರ್ವಹಿಸಿದರು. ಈ ಆಡಳಿತ ಮಂಡಳಿಯು ಸಂಘದ ಮುಂದಿನ ಮೂರು ವರ್ಷಗಳ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲಿದೆ.

ಬೀಳ್ಕೊಡುಗೆ

ಕಡಬ: ಕಡಬ ತಾಲೂಕು ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ವತಿಯಿಂದ ಕಡಬ ತಾಲೂಕಿನ ವಿವಿಧ ವಲಯಗಳಲ್ಲಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ವಲಯ ಮೇಲ್ವಿಚಾರಕರಿಗೆ ಬೀಳ್ಕೊಡುಗೆ ಕಡಬ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನ ಸಭಾಂಗಣದಲ್ಲಿ ನೆರವೇರಿತು.

ಸವಣೂರು ಮೇಲ್ವಿಚಾರಕಿ ವೀಣಾ ಕೆ., ಆಲಂಕಾರು ವಲಯ ಮೇಲ್ವಿಚಾರಕಿ ಸುಜಾತ ಕೆ., ನೆಲ್ಯಾಡಿ ಮೇಲ್ವಿಚಾರಕ ಆನಂದ ಡಿ.ಬಿ., ಗೋಳಿತೊಟ್ಟು ವಲಯ ಮೇಲ್ವಿಚಾರಕಿ ಜಯಶ್ರೀ, ಲೆಕ್ಕ ಪರಿಶೋಧಕಿ ಶೀಲಾವತಿ ಅವರನ್ನು ಸಮ್ಮಾನಿಸಿ ಬೀಳ್ಕೊಡಲಾಯಿತು. ವೇದಿಕೆಯ ಕಡಬ ತಾಲೂಕು ಅಧ್ಯಕ್ಷ ಮಹೇಶ್ ಕೆ. ಸವಣೂರು, ಕಡಬ ತಾಲೂಕು ಯೋಜನಾಧಿಕಾರಿ ಪ್ರಕಾಶ್ ಕುಮಾರ್ ಮೊದಲಾದವರಿದ್ದರು.

ಕಿರುಸುದ್ದಿ

ಏ.22-23: ಚೆನ್ನಾವರ ಪಟ್ಟೆ ಶ್ರೀ ಶಿರಾಡಿ ದೈವಸ್ಥಾನದ ಪುನರ್‌ನಿರ್ಮಾಣ ಪ್ರತಿಷ್ಠಾ ಮಹೋತ್ಸವ, ನೇಮೋತ್ಸವ

ಸವಣೂರು: ಪಾಲ್ತಾಡಿ ಗ್ರಾಮದ ಚೆನ್ನಾವರ ಪಟ್ಟೆ ಶ್ರೀ ಶಿರಾಡಿ ದೈವಸ್ಥಾನದ ಪುನರ್‌ನಿರ್ಮಾಣ ಪ್ರತಿಷ್ಠಾ ಮಹೋತ್ಸವ ಹಾಗೂ ನೇಮೋತ್ಸವವು ವೇದಮೂರ್ತಿ ಸಂದೀಪ್ ಕಾರಂತ ಅವರ ನೇತೃತ್ವದಲ್ಲಿ ಏ.22 ಮತ್ತು ಏ.23ರಂದು ನಡೆಯಲಿದೆ. ಏ.22ರಂದು ಸಂಜೆ 7ರಿಂದ ದೇವತಾ ಪ್ರಾರ್ಥನೆ, ಆಚಾರ್ಯ ವರಣ, ಪ್ರಾಸಾದ ಪರಿಗ್ರಹ, ಸಪ್ತಶುದ್ಧಿ, ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಬಲಿ, ದಿಕ್ಪಾಲಕ ಬಲಿ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಲಿದೆ. ಏ.23ರಂದು ಬೆಳಗ್ಗೆ 6ರಿಂದ ಶ್ರೀ ಮಹಾಗಣಪತಿ ಹೋಮ, ಕಲಶ ಪೂಜೆ, ಬೆಳಗ್ಗೆ ಗಂಟೆ 8.2ರ ಮುಹೂರ್ತದಲ್ಲಿ ದೈವ ಪ್ರತಿಷ್ಠೆ, ಕಲಶಾಭಿಷೇಕ ನಡೆದು ಬಳಿಕ ನೈಮಿತ್ತ ನಿರ್ಣಯ, ತಂಬಿಲ, ಮಹಾಪೂಜೆ, 10.30ರಿಂದ ಶಿರಾಡಿ ದೈವದ ನೇಮೋತ್ಸವ ನಡೆದು ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಲಿದೆ. ಭಕ್ತಾದಿಗಳು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಜೀರ್ಣೋದ್ಧಾರ ಹಾಗೂ ಪ್ರತಿಷ್ಠಾ ಮಹೋತ್ಸವ ಸಮಿತಿಯ ಗೌರವಾಧ್ಯಕ್ಷ ನಳಿನ್ ಕುಮಾರ್ ಕಟೀಲು, ಪದ್ಮನಾಭ ಶೆಟ್ಟಿ ಚೆನ್ನಾವರ, ಪಿ. ಮಂಜಪ್ಪ ರೈ ಕಾಪಿನಕಾಡು, ಅಧ್ಯಕ್ಷ ಪುನೀತ್ ರೈ ಸಿ.ಪಿ. ಚೆನ್ನಾವರ ಪಟ್ಟೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.25: ಕೊೖಲ ಪಶು ವೈದ್ಯಕೀಯ ಕಾಲೇಜಿನಲ್ಲಿ ರೇಬಿಸ್ ರೋಗದ ವಿರುದ್ಧ ಉಚಿತ ಲಸಿಕೆ ಶಿಬಿರ

ಕಡಬ: ವಿಶ್ವ ಪಶುವೈದ್ಯಕೀಯ ದಿನವಾದ ಏ.25ರಂದು ಕೊೖಲ ಪಶು ವೈದ್ಯಕೀಯ ಕಾಲೇಜಿನಲ್ಲಿ ನಾಯಿ, ಬೆಕ್ಕು ಮೊದಲಾದ ಸಾಕು ಪ್ರಾಣಿಗಳಿಗೆ ಉಚಿತವಾಗಿ ಹುಚ್ಚು ರೋಗದ ವಿರುದ್ಧ ಲಸಿಕಾ ಕಾರ್ಯಕ್ರಮ, ಜಂತು ನಾಶಕ ಔಷಧ ಹಾಗೂ ಜಾನುವಾರುಗಳಿಗೆ (ಹಾಲು ಕೊಡುವ ಹಸು/ಕರುಗಳಿಗೆ) ಖನಿಜ ಮಿಶ್ರಣ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಡೀನ್ ಡಾ.ಎಂ.ಸಿ. ಶಿವಕುಮಾರ್ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಪಶುವೈದ್ಯಕೀಯ ಕ್ಷೇತ್ರದ ಕೊಡುಗೆಗಳ ಕುರಿತು ಅರಿವು ಮೂಡಿಸುವುದು, ಪ್ರಾಣಿ ದಯೆ, ಆಹಾರ ಭದ್ರತೆ, ಪ್ರಾಣಿಜನ್ಯ ರೋಗ ಇತ್ಯಾದಿ ಬಗ್ಗೆಯೂ ಸಾರ್ವಜನಿಕರಿಗೆ ಮಾಹಿತಿ ಕಾರ್ಯಾಗಾರ ನಡೆಯಲಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂದೆ ದೇಗುಲದಲ್ಲಿ ಯಕ್ಷಗಾನ ಪ್ರದರ್ಶನ

ಕೋಟ: ಕೋಟದ ಹಂದೆ ಮಹಾವಿಷ್ಣು ಮತ್ತು ವಿನಾಯಕ ದೇವಸ್ಥಾನದ ವಾರ್ಷಿಕ ರಥೋತ್ಸವದ ಪ್ರಯುಕ್ತ ಯಕ್ಷದೇಗುಲ ಬೆಂಗಳೂರಿನ ಕೆ. ಮೋಹನ್ ನಿರ್ದೇಶನದ ಸುದರ್ಶನ ಉರಾಳ ಕೋಟ ಸಂಯೋಜನೆಯಲ್ಲಿ ಮುದ್ದಣ್ಣ ಕವಿ ವಿರಚಿತ ರತ್ನಾವತಿ ಕಲ್ಯಾಣ ಯಕ್ಷಗಾನ ಪ್ರಸಂಗ ಪ್ರದರ್ಶನಗೊಂಡಿತು. ಭಾಗವತರಾಗಿ ಹಾಲಾಡಿ ರಾಘವೇಂದ್ರ ಮಯ್ಯ, ಮದ್ದಲೆಯಲ್ಲಿ ರಾಘವೇಂದ್ರ ಹೆಗಡೆ ಯಲ್ಲಾಪುರ, ವಾಗ್ವಿಲಾಸ ಭಟ್, ಚಂಡೆಯಲ್ಲಿ ಸುದೀಪ ಉರಾಳ ಕೋಟ ಭಾಗವಹಿಸಿದ್ದರು. ಭದ್ರಸೇನ ನಾಗಿ ಹೆಚ್. ಸುಜಯೀಂದ್ರ ಹಂದೆ, ದೃಢವರ್ಮನಾಗಿ ತಮ್ಮಣ್ಣ ಗಾಂವ್ಕರ್, ಚಿತ್ರಧ್ವಜನಾಗಿ ಆದಿತ್ಯ ಹೆಗಡೆ, ಕಿರಾತನಾಗಿ ನರಸಿಂಹ ತುಂಗ, ವಿದ್ಯುಲ್ಲೋಚನವಾಗಿ ರಾಘವೇಂದ್ರ ತುಂಗ ಕೋಟ, ರತ್ನಾವತಿಯಾಗಿ ಸ್ಫೂರ್ತಿ ಭಟ್ ವತ್ಸಾಖ್ಯನಾಗಿ ದಿನೇಶ್ ಕನ್ನಾರು ಭಾಗವಹಿಸಿದರು.

ಏ. 24 : ಜಿಲ್ಲಾಧಿಕಾರಿ ನೇರ ಫೋನ್ ಇನ್

ಮಂಗಳೂರು: ಮಹಾನಗರಪಾಲಿಕೆಯ ಆಡಳಿತಾಧಿಕಾರಿಯಾಗಿರುವ ಜಿಲ್ಲಾಧಿಕಾರಿಗಳು ಏ. 24 ರಂದು ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಮಹಾನಗರಪಾಲಿಕೆಯ ಆಡಳಿತಾಧಿಕಾರಿಯವರ ಕೊಠಡಿಯಲ್ಲಿ ಸಾರ್ವಜನಿಕರೊಂದಿಗೆ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಮಾತನಾಡಲಿದ್ದಾರೆ. ಸಾರ್ವಜನಿಕರು ದೂರವಾಣಿ ಸಂಖ್ಯೆ 0824-2220301 ಅಥವಾ 0824-2220309 ಗೆ ಕರೆ ಮಾಡಿ ತಮ್ಮ ಅಹವಾಲುಗಳನ್ನು ತಿಳಿಸಬಹುದು ಎಂದು ಮಹಾನಗರಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಅತ್ತೂರುಗುತ್ತು ಕುಟುಂಬಿಕರು, ಅತ್ತೂರು, ಕೆಮ್ರಾಲ್, ವಯಾ ಹಳೆಯಂಗಡಿ.
2. ಬೆಳ್ಳೂರು ಪರಾರಿ ದಿ। ರಾಮ ರೈ ಮತ್ತು ದಿ। ಗುಲಾಬಿ ರಾಮ ರೈ ಸ್ಮರಣಾರ್ಥ ಮಕ್ಕಳು – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
3. ತಿಮ್ಮಯ್ಯ ಶೆಟ್ಟಿ, 'ಪಂಚದುರ್ಗಾ', ಪಡುಕೋಣಾಜೆ, ವಯಾ ಮೂಡುಬಿದ್ರಿ.
4. ವಾಸುದೇವ ಭಟ್, ಮುರತ್ತಕೋಡಿ, ಪುತ್ತಿಗೆ, ಬನ್ನಡ್ಕದಲ್ಲಿ ವಯಾ ಮೂಡುಬಿದ್ರಿ.
5. ತಾರನಾಥ ಪುತ್ರನ್ (ಪೋಲೀಸ್), 'ಗಂಗಾ ನಿಕೇತನ', ಸೈನ್ಸ್ಟಿಟ್, ಬೇಂಗ್ರೆ, ಮಂಗಳೂರು.
6. ಸದಾಶಿವ ಮೊಲ್ಯ, ಪಲ್ಲಿಪಾಡಿ ಹೌಸ್, ಕಂಡದಬೆಟ್ಟು, ಬಡಗ ಬೆಳ್ಳೂರು.
7. ಕೊಡೆತ್ತೂರುಗುತ್ತು ದಿ। ಮಹಾಬಲ ಭಂಡಾರಿ ಸ್ಮರಣಾರ್ಥ ಹಿತಾವತಿ ಎಂ. ಭಂಡಾರಿ, ಅವರಾಲು ಕಂಕಣಗುತ್ತು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ


ಶ್ರೀ ಧರ್ಮಸ್ಥಳ ಮೇಳ
ಬಿದ್ಕಲ್‌ಕಟ್ಟೆಯಲ್ಲಿ
ಶ್ರೀಮತಿ ಪವಿತ್ರ, ಶ್ರೀ ರಾಘವೇಂದ್ರ ಅಡಿಗ ಮತ್ತು ಮಕ್ಕಳು ನಾಗಲಕ್ಷ್ಮೀ ಸಭಾಗೃಹ

ಶ್ರೀ ಸಾಲಿಗ್ರಾಮ ಮೇಳ
ಕುಳ್ಕುಂಡೆಯಲ್ಲಿ ಬಯಲಾಟ -**ವಿಷ್ಣುವರ್ಧನ**

ಶ್ರೀ ಪೆರ್ಡೂರು ಮೇಳ
ಆರೂರು ಜಾತ್ರೆ ಪ್ರಯುಕ್ತ -**ಚದುರಂಗ**

ಶ್ರೀ ಹನುಮಗಿರಿ ಮೇಳ
ನಿಸ್ರಾಣಿಯಲ್ಲಿ

ಶ್ರೀ ಪಾವಂಜೆ ಮೇಳ
ನಡುಮನೆ ಶೆಟ್ಟಿ ಶೆಟ್ಟಿಬೆಟ್ಟುನಲ್ಲಿ- **ಶ್ರೀ ದೇವಿ ಮಹಾತ್ಮೆ**



ಬದಿಯಡ್ಕ ನೀರ್ಚಾಲು ಸಮೀಪದ ಬೇಳ ರತ್ನಗಿರಿ ಕುದುರೆಕ್ಕಾಳಿಯಮ್ಮ ಕ್ಷೇತ್ರದ ವತಿಯಿಂದ ಭಾನುವಾರ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವಕ್ಕೆ ಹಸಿರುವಾಣಿ ಹೊರೆಕಾಣಿಕೆ ಸಮರ್ಪಿಸಲಾಯಿತು.

ದೈನಂದಿನ ಕೆಲಸ ಕಾರ್ಯಗಳಿಗೆ ಹೋಗುವವರು ಹೈರಾಣು

ಪಂಚಗಂಗಾ ರೈಲು ವಿಳಂಬ: ಆಕ್ರೋಶ

ಕುಂದಾಪುರ : ಕರಾವಳಿ ಕರ್ನಾಟಕದ ಜೀವನಾಡಿ ಪಂಚಗಂಗಾ ರೈಲು ಇತ್ತೀಚೆಗೆ ಸತತವಾಗಿ ವಿಳಂಬವಾಗುತ್ತಿದ್ದು ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗುತ್ತಿದೆ.

ಕರಾವಳಿಯ ಮೂರೂ ಜಿಲ್ಲೆಗಳ ಕೊಂಕಣ ರೈಲ್ವೇ ಮಾರ್ಗದಲ್ಲಿ ಇರುವ ಏಕೈಕ ನೇರ ಮಾರ್ಗದ ರೈಲಾದ ಪಂಚಗಂಗಾ ಕಳೆದ ಮೂರು ತಿಂಗಳಿನಿಂದ ಈಚೆಗೆ ಬೆಂಗಳೂರು ತಲುಪುವಾಗ ಮತ್ತು ಸುರತ್ಕಲ್, ಉಡುಪಿ ಬರುವಾಗ ವಿಪರೀತ ವಿಳಂಬವಾಗುತ್ತಿದ್ದು, ದೈನಂದಿನ ಕೆಲಸ ಕಾರ್ಯಗಳಿಗೆ ಮತ್ತು ಕಚೇರಿ ಕೆಲಸಗಳಿಗೆ ಹೋಗುವವರು ಹೈರಾಣಾಗಿದ್ದಾರೆ.



ಬೆಂಗಳೂರಿಗೆ ಬೆಳಿಗ್ಗೆ 6.23 ಕ್ಕೆ ತಲುಪಬೇಕಾದ ರೈಲು ಏಳು ಗಂಟೆಯ ಬಳಿಕ ತಲುಪಿದರೆ, ಬೆಂಗಳೂರಿನ ರಸ್ತೆಗಳಲ್ಲಿ ಉಂಟಾಗುವ ವಿಪರೀತ ಟ್ರಾಫಿಕ್ ನಿಂದಾಗಿ ಮನೆಗಳನ್ನು ತಲುಪಲು ವಿಳಂಬವಾಗಿ ಕಚೇರಿ ಕೆಲಸಗಳಿಗೆ ಅರ್ಧ ದಿನ ರಜೆ ಹಾಕಬೇಕಾದ ಸಮಸ್ಯೆಗೆ ಸಿಲುಕುತ್ತಿದ್ದು, ಇದೇ ಪರಿಸ್ಥಿತಿ ಬೆಂಗಳೂರಿನಿಂದ ಕರಾವಳಿಗೆ ಬರುವ ರೈಲಿಗೂ ಉಂಟಾಗಿದೆ. ಸೋಮವಾರ ಹೊರಟ ಬೆಂಗಳೂರು ಉಡುಪಿ ಪಂಚಗಂಗಾ ರೈಲು ಮೂರು ಗಂಟೆ ವಿಳಂಬವಾಗಿದ್ದು ಕರಾವಳಿಯ ನಿಲ್ದಾಣಗಳಲ್ಲಿ ಪ್ರಯಾಣಿಕರು ತೀವ್ರ ಆಕ್ರೋಶ ಹೊರ ಹಾಕುತ್ತಿದ್ದುದು ಕಂಡು ಬಂದಿದೆ.

ಪಂಚಗಂಗಾ ರೈಲಿಗೆ ಹೊಸ ಕೋಚ್ ಹಾಕಿದ ಮೇಲೆ ಸಮಯಪಟ್ಟಿ ಪಾಲನೆ ಮಾಡಿಯೇ ಓಡುತಿದ್ದ ರೈಲು ಇತ್ತೀಚಿನ ಮೂರು ತಿಂಗಳಿನಿಂದ ಈಚೆಗೆ ತೀರಾ ವಿಳಂಬವಾಗಿ ಬೆಂಗಳೂರು ಹಾಗೂ ಕಾರವಾರ ತಲುಪುತ್ತಿದೆ. ಕರಾವಳಿಯ ಪ್ರಯಾಣಿಕರು ಘಾಟ್ ಪ್ರದೇಶ, ಮಂಗಳೂರು ಸೆಂಟ್ರಲ್ ಸುತ್ತು ಬಳಸಿ ಓಡುವ ರೈಲುಗಳಿಂದ ಈಗಾಗಲೇ ಹೈರಾಣಾಗಿದ್ದು, ಇನ್ನು ಇರುವ ಏಕೈಕ ನೇರ ಮಾರ್ಗದ ರೈಲಾದ ಪಂಚಗಂಗಾ ಕೂಡ ವಿಳಂಬವಾದರೆ ಅತಂತ್ರ ಸ್ಥಿತಿ ನಿರ್ಮಾಣವಾಗಲಿದೆ. ಈ ಬಗ್ಗೆ ತಕ್ಷಣವೇ ಕ್ರಮ ಕೈಗೊಳ್ಳುವಂತೆ ಕುಂದಾಪುರ ರೈಲ್ವೇ ಪ್ರಯಾಣಿಕರ ಹಿತರಕ್ಷಣಾ ಸಮಿತಿ ಮನವಿ ಮಾಡಿದೆ.

ವಿವೇಕಾನಂದ ಕಾಲೇಜಿನಲ್ಲಿ ಪದವಿ-ಸ್ನಾತಕೋತ್ತರ ಪದವಿ ಪ್ರದಾನ ಸಮಾರಂಭ 'ಸಪ್ತಪರ್ಣೋತ್ಸವ'

ಸಾಮಾಜಿಕ ಮೌಲ್ಯಗಳ ಅರಿವು ಅಗತ್ಯ

ಪುತ್ತೂರು: ನಮ್ಮ ಸುತ್ತಲಿನ ಪರಿಸರವನ್ನು ಸಂರಕ್ಷಿಸುವ ಪ್ರತಿಜ್ಞೆ ಕೈಗೊಳ್ಳುವ ಕಾರ್ಯ ಪ್ರತಿ ಘಟಿಕೋತ್ಸವಗಳಲ್ಲಿ ಆಗಬೇಕು. ನಮ್ಮ ವಾತಾವರಣ ಒಳ್ಳೆಯದಾಗಿದ್ದರೆ ಮಾತ್ರ ಮಿಕ್ಕುಳಿದ ವಿಷಯಗಳಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜ್‌ಗಳ ಪಠ್ಯ ವಿಷಯಗಳ ಜೊತೆಗೆ ಅವುಗಳಿಗಿಂತ ಭಿನ್ನವಾದ ಸಾಮಾಜಿಕ ಮೌಲ್ಯಗಳ ಅರಿವಿನ ಅಗತ್ಯ ಕೂಡಾ ಇದೆ. ಈ ಕಾಲಘಟ್ಟದಲ್ಲಿ ನಮ್ಮತನವನ್ನು ನಾವು ಉಳಿಸಿಕೊಳ್ಳಬೇಕಾದ್ದು ಅಗತ್ಯ ಎಂದು ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪಿ.ಎಲ್ ಧರ್ಮ ಹೇಳಿದರು.

ನಗರದ ವಿವೇಕಾನಂದ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜಿನಲ್ಲಿ (ಸ್ವಾಯತ್ತ) ನಡೆದ 2023-2024 ಹಾಗೂ 2024-25ನೇ ಶೈಕ್ಷಣಿಕ ವರ್ಷದ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭ 'ಸಪ್ತಪರ್ಣೋತ್ಸವ' ಉದ್ಘಾಟಿಸಿ ಮಾತನಾಡಿದ ಅವರು, ಈ ಸಪ್ತಪರ್ಣೋತ್ಸವದ ಕಾರಣದಿಂದ ಮೌಲ್ಯಗಳ ಉಳಿವು ಆಗಬೇಕು ಎಂದು ತಿಳಿಸಿದರು.

ವಿದ್ಯಾರ್ಥಿಗಳು ಪದವಿ ಪಡೆದು ಸಾಧನೆ ಮಾಡುವಲ್ಲಿ ಕಾರಣರಾದ ಅಧ್ಯಾಪಕರೂ ಅಭಿನಂದನಾರ್ಹರು. ಯಾವುದೇ ರೀತಿಯ ಭೇಧ ಮಾಡದೇ ವಿದ್ಯಾರ್ಥಿಗಳ ಬದುಕನ್ನು ರೂಪಿಸುವ ಕಾರ್ಯ ಗುರು ವೃಂದದಿಂದ ಆಗಬೇಕು. ಜನನದಿಂದ ಮರಣದ ತನಕವೂ ಗುರುವಿನ ಪ್ರಾಮುಖ್ಯತೆ ನಮ್ಮ ಬದುಕಿನಲ್ಲಿ ಇದೆ. ಕೌಶಲ್ಯಗಳು ಹಾಗೂ ಸಂಸ್ಕಾರಗಳು ಮನೆಯಿಂದಲೇ ನಮಗೆ ಲಭಿಸುತ್ತದೆ. ಸಮಾಜದೊಂದಿಗೆ ನಾವು ಬೆರೆತು ಸಂವಹನ ಕೌಶಲ್ಯ ಇತ್ಯಾದಿ ಕೌಶಲಗಳನ್ನು ಹೆಚ್ಚಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.



ಸನ್ಮಾನ-ಪ್ರಶಸ್ತಿ
ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪಿ.ಎಲ್. ಧರ್ಮ ಹಾಗೂ ಕಾಲೇಜಿನ ಪರಿಕ್ಷಾಂಗ ವಿಭಾಗದ ಕುಲಸಚಿವ ಡಾ.ಎಚ್.ಜಿ. ಶ್ರೀಧರ್ ಅವರನ್ನು ಸನ್ಮಾನಿಸಲಾಯಿತು. 2023-24 ಹಾಗೂ 2024-25ನೇ ಶೈಕ್ಷಣಿಕ ವರ್ಷದ ಪದವಿ ಹಾಗೂ ಸ್ನಾತಕೋತ್ತರ ಪದವಿಯ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವಿವಿಧ ದತ್ತಿನಿಧಿ ಪ್ರಶಸ್ತಿಗಳನ್ನು ನೀಡಲಾಯಿತು.

ಕಲಿಕೆ ಅಂತ್ಯವೆಂದಲ್ಲ

ಮುಖ್ಯ ಅತಿಥಿಯಾಗಿದ್ದ ಕಾಲೇಜ್ ಶಿಕ್ಷಣ ಇಲಾಖೆಯ ಮಂಗಳೂರು ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕಿ ಡಾ. ಕವಿತಾ ಕೆ.ಆರ್., ಪದವಿ ಪಡೆದ ತಕ್ಷಣ ಕಲಿಕೆ ಅಂತ್ಯವೆಂದಲ್ಲ.

> **ಸಮಾಜಮುಖಿ ಚಿಂತನೆ**
> **ಸಮಾಜಕ್ಕಾಗಿ ನಾವು ಕೊಡುಗೆ ನೀಡಬೇಕು. ಪದವಿಯೊಂದಿಗೆ ಸಮಾಜಮುಖಿ ಚಿಂತನೆಯೂ ಆಗತ್ಯ. ಪದವಿಯ ನಂತರ ವಿದ್ಯಾರ್ಥಿಗಳಿಗೆ ಪ್ರಬುದ್ಧತೆ ಬರುತ್ತದೆ. ಆಗ ನಮ್ಮ ಸಮಸ್ಯೆಗಳಿಗೆ ನಾವೇ ಪರಿಹಾರಗಳನ್ನು ಕಂಡುಕೊಳ್ಳಬೇಕು.**
> ■ **ಡಾ. ಕಲ್ಲಡ್ಕ ಪ್ರಭಾಕರ ಭಟ್,** ಅಧ್ಯಕ್ಷರು, ವಿವೇಕಾನಂದ ವಿದ್ಯಾವರ್ಧಕ ಸಂಘ

ಬದುಕಿನುದ್ದಕ್ಕೂ ನಾವು ಹೊಸತನ್ನು ಕಲಿಯುತ್ತಲೇ ಇರಬೇಕು. ಪರಿಸರದಿಂದ ನಾವು ಕಲಿಯುವುದು ಬಹಳಷ್ಟಿದೆ. ನಾವು ಜೀವನದಲ್ಲಿ ಅನೇಕ ವ್ಯಕ್ತಿಗಳನ್ನು ಭೇಟಿಯಾಗುತ್ತೇವೆ ಮತ್ತು ಬಹಳಷ್ಟು ಸ್ಥಳಗಳಿಗೂ ಹೋಗಿ ಅನುಭವ ಪಡೆಯುತ್ತೇವೆ. ಆದರೆ, ನಮ್ಮ ಜೀವನದ ಗುರಿ ಉತ್ತಮ ಮೌಲ್ಯಗಳ ಪ್ರಸಾರ ಮಾಡುವುದಾಗಿರಬೇಕು. ಜೀವನದಲ್ಲಿ ಸಮತೋಲನ ಬಹಳ ಮುಖ್ಯ ಎಂದರು.

ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಶ್ರೀಪತಿ ಕಲ್ಲೂರಾಯ ಶುಭಾಶಂಸನೆಗೈದರು. ಆಡಳಿತ ಮಂಡಳಿಯ ಸಂಚಾಲಕ ಮುರಳಿಕೃಷ್ಣ ಕೆ.ಎನ್. ಆಶಯದ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಸ್ವಾಗತಿಸಿ, ಕಾಲೇಜಿನ ಪರೀಕ್ಷಾಂಗ ಕುಲಸಚಿವ ಡಾ.ಎಚ್.ಜಿ. ಶ್ರೀಧರ್ ವಂದಿಸಿದರು. ಕಾಲೇಜಿನ ಆಡಳಿತ ವಿಭಾಗದ ವಿಶೇಷಾಧಿಕಾರಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಮನಮೋಹನ ಎಂ. ಹಾಗೂ ಸ್ನಾತಕೋತ್ತರ ವಿಭಾಗದ ಡೀನ್ ಡಾ. ವಿಜಯ ಸರಸ್ವತಿ ಬಿ. ಕಾರ್ಯಕ್ರಮ ನಿರ್ವಹಿಸಿದರು.

ದಾಸನಾಡಿ ಶ್ರೀ ವೆಂಕಟರಮಣ ದೇವಳ: ನೂತನ ರಾಜಗೋಪುರ ಲೋಕಾರ್ಪಣೆ

ಬೈಂದೂರು: ದಾಸಶ್ರೇಷ್ಠ ಪುರಂದರ ದಾಸರು ದಾಸನ ಮಾಡಿಕೊ ಎನ್ನ.. ಈ ಹಾಡನ್ನು ದಾಸನಾಡಿಯ ಧಾರ್ಮಿಕ ಪರಿಸರ ಹಾಗೂ ವೆಂಕಟರಮಣನ ಸನ್ನಿಧಾನ ನೋಡಿಯೇ ಹಾಡಿರಬೇಕು. ನಾವು ಗಮನಿಸಿದಂತೆ ಇಷ್ಟೊಂದು ಸುಂದರವಾದ ಹಾಗೂ ಸಂಪೂರ್ಣ ಶಿಲಾಮಯ ದೇವಸ್ಥಾನ ಅಯೋಧ್ಯೆ ಶ್ರೀರಾಮ ಮಂದಿರ ಬಿಟ್ಟರೆ ಶಿರೂರು ದಾಸನಾಡಿ ವೆಂಕಟರಮಣ ದೇವಸ್ಥಾನ ಮಾತ್ರ ಎಂದು ಶ್ರೀ ಅಧೋಕ್ಷಜ ಪೇಜಾವರ ಮಠಾಧೀಶ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಶಿರೂರು ದಾಸನಾಡಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಭಾನುವಾರ ನೂತನ ನಿರ್ಮಾಣದ ಶಿಲಾಮಯ ರಾಜಗೋಪುರವನ್ನು ಲೋಕಾರ್ಪಣೆಗೊಳಿಸಿ ಆಶೀರ್ವಚನ ನೀಡಿದರು. ಧಾರ್ಮಿಕ ಶ್ರದ್ಧೆಯಿಂದ ಮತ್ತು ಭಕ್ತರು ತಮ್ಮ ಭಾವನೆಗಳ ಮೂಲಕ ನಿರ್ಮಿಸಿದಂತಹ ದಾಸನಾಡಿ ಶ್ರೀ ವೆಂಕಟರಮಣ ದೇವಸ್ಥಾನದ ನೂತನ ಶಿಲಾಮಯ ಹೆಬ್ಬಾಗಿಲು ಮತ್ತು ಪೌಳಿಗಳು ವಿಶಿಷ್ಟ ಶಿಲಾಕೃತಿಗಳ ಕೆತ್ತನೆಯ ಮೂಲಕ ಅತ್ಯಂತ ಸುಂದರವಾಗಿ ಮೂಡಿಬಂದಿದ್ದು, ಪ್ರಸ್ತುತ ಶಿಲಾಮಯ ರಾಜಗೋಪುರವನ್ನೂ ಕೂಡ ನಿರ್ಮಿಸಿದ್ದಾಗಿದೆ. ಮುಂದಿನ ದಿನಗಳಲ್ಲಿ ದೇವಳದ ವತಿಯಿಂದ ಒಂದು ಸುಸಜ್ಜಿತ ಗೋಶಾಲೆ ನಿರ್ಮಾಣವಾದರೆ ಎಲ್ಲಾ ಕಾರ್ಯಗಳು ಪೂರ್ಣಗೊಂಡಂತೆ ಎಂದರು.



> **ಈಗಿನ ಜಾಗತಿಕ ವಿದ್ಯಮಾನದಲ್ಲಿ ಯಾವುದೇ ಸಮಸ್ಯೆ, ಅಡಚಣೆ ಆತಂಕಗಳು ಬಂದರೂ ಕೂಡ ದೇವಸ್ಥಾನ ನಿರ್ಮಾಣ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಆರ್ಥಿಕ ಕ್ರೋಢೀಕರಣ ಮತ್ತು ಸಾಂಘಿಕ ಪ್ರಯತ್ನದ ಮೂಲಕ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಈ ನೆಲದ ಹಿರಿಮೆಯಾಗಿದೆ. ಗ್ರಾಮೀಣ ಭಾಗದಲ್ಲಿ ಪ್ರಕೃತಿಯನ್ನು ಆರಾಧಿಸುವ ಮೂಲಕ ಪ್ರಕೃತಿಯೊಂದಿಗೆ ಬೆರೆತು ಬದುಕುವ ನಮ್ಮ ಸಂಸ್ಕೃತಿ, ಸಂಪ್ರದಾಯ ಇಂದಿಗೂ ಉಳಿದಿರುವುದು ಕಾಣಬಹುದಾಗಿದೆ**
> ■ **ಅರ್ಚಕ ವೇದವ್ಯಾಸ ಐತಾಳ ಸಗ್ರಿ**

ಆಡಳಿತ ಮೊಕ್ತಸರ ಎಸ್. ನಾಗಯ್ಯ ಶೆಟ್ಟಿ ಹೊಸ್ಮನೆ ಅಧ್ಯಕ್ಷತೆವಹಿಸಿದ್ದರು. ಸೇವಾಕರ್ತರನ್ನು ಗೌರವಿಸಲಾಯಿತು. ಅರ್ಚಕ ವೇದವ್ಯಾಸ ಐತಾಳ ಸಗ್ರಿ ಧಾರ್ಮಿಕ ಪ್ರವಚನ ನೀಡಿದರು. ಶಾಸಕ ಗುರುರಾಜ ಗಂಟಿಹೊಳೆ, ಕೊಲ್ಲೂರು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ, ವತ್ತಿನೆಣೆ ಕಿರು ಮಂತ್ರಾಲಯ ದೇವಳದ ಅಧ್ಯಕ್ಷ ಪಿ. ಸೂಲಿಯಣ್ಣ ಶೆಟ್ಟಿ, ವಿವಿಧ ಸಮಿತಿಯ ಪದಾಧಿಕಾರಿಗಳಾದ ಆರ್. ವಿ. ಶೆಟ್ಟಿ, ಡಾ. ಯು. ಮಾಧವ ಶೆಟ್ಟಿ, ಸಿಎ ಶ್ರೀನಿವಾಸ ಶೆಟ್ಟಿ, ಕೆ. ಅಶೋಕ ಶೆಟ್ಟಿ ಹೊಸ್ಮನೆ, ಅಶೋಕ್ ಜೆ. ಶೆಟ್ಟಿ, ಎಸ್. ಅಣ್ಣಪ್ಪ ಶೆಟ್ಟಿ, ಆರೋಗ್ಯ ಭಾರತಿ ತಾಲೂಕು ಅಧ್ಯಕ್ಷ ಡಾ. ಕೆ. ಪಿ. ನಂಬಿಯಾರ್ ಇದ್ದರು.

ಉತ್ಸವ ಸಮಿತಿ ಉಪಾಧ್ಯಕ್ಷ ಎಚ್. ಚಂದ್ರಶೇಖರ ಶೆಟ್ಟಿ ಪ್ರಾಸ್ತಾವಿಸಿದರು. ಸಿ. ಎನ್. ಬಿಲ್ಲವ ಸ್ವಾಗತಿಸಿ, ಶಂಕರ ಎನ್. ಬಿಲ್ಲವ ವಂದಿಸಿದರು. ಸುಬ್ರಹ್ಮಣ್ಯ ಜಿ. ನಿರೂಪಿಸಿದರು.

ಏ.22ರಿಂದ 25ರ ತನಕ ಕೋರಿಯಾನ ಶ್ರೀ ಬ್ರಹ್ಮ ಬೈದರ್ಕಳ ಗರಡಿ ಕ್ಷೇತ್ರದಲ್ಲಿ

ಪ್ರತಿಷ್ಠಾ ಕಲಶೋತ್ಸವ, ನೇಮೋತ್ಸವ

ಪುತ್ತೂರು: ಕಡಬ ತಾಲೂಕಿನ ಚಾರ್ವಾಕ ಕೋರಿಯಾನ ಶ್ರೀ ಬ್ರಹ್ಮ ಬೈದರ್ಕಳ ಗರಡಿ ಕ್ಷೇತ್ರದಲ್ಲಿ ನೂತನವಾಗಿ ನಿರ್ಮಿಸಿದ ನಾಗಬಿರ್ಮೆರ್, ಇಷ್ಟದೇವತೆ, ಮೈಸಂದಾಯ, ಕೊಡಮಣಿತ್ತಾಯ, ಪಂಜುರ್ಲಿ, ಗುಳಿಗ ಮತ್ತು ಶ್ರೀ ಬ್ರಹ್ಮಬೈದರ್ಕಳ ಪ್ರತಿಷ್ಠಾ ಕಲಶೋತ್ಸವ ಮತ್ತು ಶ್ರೀ ಬ್ರಹ್ಮಬೈದರ್ಕಳ ಹಾಗೂ ಪರಿವಾರ ದೈವಗಳ ನೇಮೋತ್ಸವ ಏ.22 ರಿಂದ ಏ.25ರ ತನಕ ನಡೆಯಲಿದೆ ಎಂದು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಿಜಯಕುಮಾರ್ ಸೊರಕೆ ತಿಳಿಸಿದ್ದಾರೆ.

ಪುತ್ತೂರಿನಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಏ.22ರಿಂದ ವಿವಿಧ ಕಾರ್ಯಕ್ರಮಗಳೊಂದಿಗೆ ಆರಂಭಗೊಂಡು ಏ.23ಕ್ಕೆ ಪ್ರತಿಷ್ಠೆ ಕಲಶಾಭಿಷೇಕ ನಡೆಯಲಿದೆ. ಒಟ್ಟು 4 ದಿನಗಳಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯಲಿದೆ ಎಂದರು.



ಶ್ರೀ ಬ್ರಹ್ಮಬೈದರ್ಕಳ ಗರಡಿ ಕೋರಿಯಾನ ಸೇವಾ ಟ್ರಸ್ಟ್‌ನ ಅಧ್ಯಕ್ಷ ಸತ್ಯನಾರಾಯಣ ಕಲ್ಲೂರಾಯ ಮಾತನಾಡಿ, ಕೋರಿಯಾನ ಕ್ಷೇತ್ರವು ನೂರಾರು ಶತಮಾನಗಳ ಇತಿಹಾಸ ಹೊಂದಿದೆ. ಕೋಟಿ ಚೆನ್ನಯರು ಪಡುಮಲೆಯನ್ನು ಬಿಟ್ಟು ಎಣ್ಣೂರು ಕ್ಷೇತ್ರಕ್ಕೆ ಹೋಗುವ ಸಂದರ್ಭ ಕೋರಿಯನ್ ಕ್ಷೇತ್ರದಲ್ಲಿ ರಾತ್ರಿ ತಂಗಿದಾಗ ಆ ಕ್ಷೇತ್ರದ ಉಳ್ಳಾಕುಲು ಇದು ನಮ್ಮ ಕ್ಷೇತ್ರ ಎನ್ನುವ ಸಂದರ್ಭ ಕಪಿಲೇಶ್ವರ ದೇವರು ಇಷ್ಟದೇವತೆಯಾಗಿ ಉಳ್ಳಾಕುಲುವಿಗೆ ಪೂರ್ವಭಾಗದಲ್ಲಿ, ಪಶ್ಚಿಮ ಭಾಗದಲ್ಲಿ ಕೋಟಿಚೆನ್ನಯರ ಗರಡಿ ನಿಲ್ಲುವಂತೆ ಉಲ್ಲೇಖ ಮಾಡಿದ್ದಾರೆಂಬ ಪ್ರತೀತಿ ಇದೆ. ಇದಕ್ಕೆ ಪೂರಕವಾಗಿ ಗರಡಿಯ ಅರ್ಧ ಕಿ.ಮೀ. ದೂರದಲ್ಲಿ ಎಣ್ಣೂರು ಎಂಬ ಸ್ಥಳವಿದೆ. 1992ರಲ್ಲಿ ಈ ಕ್ಷೇತ್ರ ಜೀರ್ಣೋದ್ಧಾರಗೊಂಡಿತ್ತು ಎಂದವರು ತಿಳಿಸಿದರು.

ಶ್ರೀ ಬ್ರಹ್ಮ ಬೈದರ್ಕಳ ಗರಡಿ ಕೋರಿಯಾನ ಸೇವಾ ಟ್ರಸ್ಟ್‌ನ ಉಪಾಧ್ಯಕ್ಷ ವಸಂತ ದಲಾರಿ ಮಾತನಾಡಿ, ಏ.22ಕ್ಕೆ ದೇವತಾ ಪ್ರಾರ್ಥನೆ, ಹಸಿರುವಾಣಿ ಹೊರೆಕಾಣಿಕೆ ಸಮರ್ಪಣೆ, ವಿವಿಧ ವೈದಿಕ ಕಾರ್ಯಕ್ರಮ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ, ಏ.23ರಂದು ಬೆಳಗ್ಗೆ 8.02ರ ವೃಷಭ ಲಗ್ನದಲ್ಲಿ ಧರ್ಮದೈವಗಳ ಮತ್ತು ಬ್ರಹ್ಮಬೈದರ್ಕಳ ಪ್ರತಿಷ್ಠೆ ಕಲಶಾಭಿಷೇಕ ನಡೆಯಲಿದೆ. ಅದೇ ದಿನ ಬೆಳಿಗ್ಗೆ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಸಂಜೆ ದೈವಗಳ ಭಂಡಾರ ತೆಗೆದು, ಇಷ್ಟದೇವತೆ, ಮೈಸಂದಾಯ, ಪಂಜುರ್ಲಿ ದೈವಗಳ ನೇಮ, ರಾತ್ರಿ ಅನ್ನಸಂತರ್ಪಣೆ ನಡೆಯಲಿದೆ.

ಏ.24 ರಂದು ಬೆಳಗ್ಗೆ ಕೊಡಂಣಿತ್ತಾಯ ದೈವದ ನೇಮ, ಮಧ್ಯಾಹ್ನ ಬಟ್ಟಲು ಕಾಣಿಕೆ, ಕೈಕಾಣಿಕೆ, ಪ್ರಸಾದ ವಿತರಣೆ ಬಳಿಕ ಸಾರ್ವಜನಿಕ ಅನ್ನಸಂತರ್ಪಣೆ, ಸಂಜೆ ಶ್ರೀ ಬ್ರಹ್ಮ ಬೈದರ್ಕಳ ಭಂಡಾರ ತೆಗೆಯುವುದು, ಇದೇ ಸಂದರ್ಭ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ರಾತ್ರಿ ಗರಡಿ ಇಳಿಯುವುದು ಸಹಿತ ನೇಮ ನಡೆಯಲಿದೆ.

ಏ.25ರಂದು ಬೆಳಗ್ಗೆ ಗಂಧ ಪ್ರಸಾದ ವಿತರಣೆ, ನಂತರ ಕಂಚಿಕಲ್ಲಿಗೆ ಕಾಯಿ ಒಡೆಯುವುದು, ಗುಳಿಗ ದೈವದ ನೇಮ, ಬಿಂದು ಸೇವೆ ನಡೆಯಲಿದೆ ಎಂದು ಅವರು ಹೇಳಿದರು.


ರಂಗ ಸ್ವರೂಪದ 'ರಂಗೋತ್ಸವ' ಮಕ್ಕಳ ಬೇಸಿಗೆ ಶಿಬಿರ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ

ಮಕ್ಕಳಿಗೆ ಕಲೆಗಳ ಮೂಲಕ ಸಂಸ್ಕಾರ ನೀಡುವುದು ಅತ್ಯಂತ ಅಗತ್ಯ

ಮಂಗಳೂರು: ನಗರದ ಕುಂಜತ್ತಬೈಲ್‌ನ ದ.ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಂಘಟನೆ ರಂಗ ಸ್ವರೂಪ ಆಶ್ರಯದಲ್ಲಿ ಮರಕಡದ ದ.ಕ. ಜಿಲ್ಲಾ ಪಂಚಾಯತ್ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 4 ದಿನಗಳ ಕಾಲ ನಡೆದ 'ರಂಗೋತ್ಸವ-2026' ಬೇಸಿಗೆ ಶಿಬಿರ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಉದ್ಯಮಿ ಇನಾಯತ್ ಅಲಿ ಅವರು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಇಂದಿನ ಮೊಬೈಲ್ ಯುಗದಲ್ಲಿ ಮಕ್ಕಳಿಗೆ ಇಂತಹ ರಂಗ ತರಬೇತಿ ಮತ್ತು ಕಲೆಗಳ ಮೂಲಕ ಸಂಸ್ಕಾರ ನೀಡುವುದು ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು.


ಈ ಸಂದರ್ಭ ಮರಕಡ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕಿ ಭವಾನಿ ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅಪಾರ ಸೇವೆಯನ್ನು ಗುರುತಿಸಿ 'ರಂಗೋತ್ಸವ-2026' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶಿಕ್ಷಕಿ ಭವಾನಿ, ನನ್ನ ವೃತ್ತಿ ಜೀವನದಲ್ಲಿ ಮಕ್ಕಳೊಂದಿಗೆ ಕಳೆದ ಕ್ಷಣಗಳೇ ಅತ್ಯಂತ ಅಮೂಲ್ಯ. ಇಂದು ರಂಗ ಸ್ವರೂಪ ಸಂಸ್ಥೆಯು ನನ್ನನ್ನು ಗುರುತಿಸಿ ಗೌರವಿಸಿರುವುದು ನನ್ನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ಮಕ್ಕಳಿಗೆ ಕಲೆಯ ಮೂಲಕ ಜೀವನದ ಪಾಠ ಕಲಿಸುವುದು ಅತೀ ಮುಖ್ಯ ಎಂದು ಹೇಳಿದರು.



ಅಧ್ಯಕ್ಷತೆವಹಿಸಿದ್ದ ಪರಿಸರವಾದಿ ದಿನೇಶ್ ಹೊಳ್ಳ, ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತರಲು ಇಂತಹ ಬೇಸಿಗೆ ಶಿಬಿರಗಳು ಉತ್ತಮ ವೇದಿಕೆಯಾಗಿವೆ. ಕೇವಲ ಪಠ್ಯ ಪುಸ್ತಕದ ಶಿಕ್ಷಣ ಮಾತ್ರವಲ್ಲದೆ, ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ರಂಗ ಸ್ವರೂಪ ಸಂಸ್ಥೆಯು ಹಮ್ಮಿಕೊಂಡಿರುವ ಈ ಕೆಲಸ ನಿಜಕ್ಕೂ ಅಭಿನಂದನೀಯ ಎಂದು ಹೇಳಿದರು.

ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಶರತ್ ಕುಮಾರ್, ಮರಕಡ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಶೋಭಾ ಅತಿಥಿಗಳಾಗಿದ್ದರು. ರಂಗ ಸ್ವರೂಪ ಸಂಸ್ಥೆಯ ಅಧ್ಯಕ್ಷ ರೆಹಮಾನ್ ಖಾನ್ ಕುಂಜತ್ತಬೈಲ್ ಪ್ರಾಸ್ತಾವಿಸಿದರು. ಝುಬೇರ್ ಖಾನ್ ಕುಡ್ಲ ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಕಾನರಗೋಡು ವಂದಿಸಿದರು. ಪ್ರೇಮನಾಥ್ ಮರ್ಣೆ ಮತ್ತು ತಸ್ಲೀಮಾ ಬಾನು ಹನೀಷಾ ಸವಾದ್ ಕಾರ್ಯಕ್ರಮ ನಿರ್ವಹಿಸಿದರು.

ಶಿಬಿರದ ಉದ್ಘಾಟನೆ
ಖ್ಯಾತ ಕಲಾವಿದ, ಪ್ರಶಸ್ತಿ ವಿಜೇತ ಶಿಕ್ಷಕ ಚೇತನ್ ಕೊಪ್ಪ ಅವರು 'ರಂಗೋತ್ಸವ-2026' ಶಿಬಿರವನ್ನು ಉದ್ಘಾಟಿಸಿ ಶುಭ ಕೋರಿದರು. ರಂಗ ಸ್ವರೂಪ ತಂಡದ ಉಪಾಧ್ಯಕ್ಷ ಹುಸೈನ್ ರಿಯಾಝ್ ಅಧ್ಯಕ್ಷತೆ ವಹಿಸಿದ್ದು, ಯುವ ಉದ್ಯಮಿ ಸಾಕ್ಷತ್ ಶೆಟ್ಟಿ ಕಾವೂರು, ಮರಕಡ ಶಾಲಾ ಮುಖ್ಯೋಪಾಧ್ಯಾಯ ಗಣೇಶ್ ಕುಮಾರ್, ರಂಗ ಸ್ವರೂಪ ಕಾರ್ಯದರ್ಶಿ ಝುಬೇರ್ ಖಾನ್ ಕುಡ್ಲ, ಕಲಾವಿದ ನವೀನ್ ಅಡ್ಕರ್, ಶಾಲಾ ಶಿಕ್ಷಕಿ ಶೋಭಾ, ರೈಹಾನ್ ಮತ್ತಿತರರು ಉಪಸ್ಥಿತರಿದ್ದರು. ರಂಗ ಸ್ವರೂಪ ತಂಡದ ಹನೀಸಾ ಸವಾದ್ ಸ್ವಾಗತಿಸಿ, ತಸ್ಲೀಮಾ ಬಾನು ವಂದಿಸಿದರು. ರೆಹಮಾನ್ ಖಾನ್ ಕುಂಜತ್ತಬೈಲ್ ಕಾರ್ಯಕ್ರಮ ನಿರ್ವಹಿಸಿದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	6	5	0	1	11	+1.420
ಆರ್‌ಸಿಬಿ	6	4	2	0	8	+1.171
ರಾಜಸ್ಥಾನ	6	4	2	0	8	+0.599
ಹೈದರಾಬಾದ್	6	3	3	0	6	+0.566
ದಿಲ್ಲಿ	5	3	2	0	6	+0.310
ಗುಜರಾತ್	6	3	3	0	6	-0.821
ಮುಂಬೈ	6	2	4	0	4	+0.067
ಚೆನ್ನೈ	6	2	4	0	4	-0.780
ಲಖನೌ	6	2	4	0	4	-1.173
ಕೆಕೆಆರ್	7	1	5	1	3	-0.879

ಎಸ್‌ಆರ್‌ಎಚ್ 242/2 | 135★ ರನ್ ಬಾರಿಸಿದ ಅಭಿಷೇಕ್ | ಕ್ಲಾಸೆನ್, ಹೆಡ್ ಅಬ್ಬರ

ಹೈದರಾಬಾದ್‌ನಲ್ಲಿ ದಾಖಲೆ ಅಭಿಷೇಕ

ಹೈದರಾಬಾದ್: ಒಂದೇ ಪಂದ್ಯದಲ್ಲಿ 10 ಬೌಂಡರಿ, 10 ಸಿಕ್ಸರ್ ಸಿಡಿಸಿದ ಅಭಿಷೇಕ್ ಶರ್ಮಾ, ದಾಖಲೆಗಳ ಸುರಿಮಳೆಗೈದಿದ್ದು, ಸನ್‌ರೈಸರ್ಸ್ ಹೈದರಾಬಾದ್ ದೊಡ್ಡ ಸ್ಕೋರ್ ನಿರ್ಮಿಸಿತು.

20 ಓವರ್‌ವರೆಗೂ ಬ್ಯಾಟಿಂಗ್ ಮಾಡಿದ ಅಭಿಷೇಕ್ ಶರ್ಮಾ, ಸುಮಾರು 11 ಓವರ್ ಬ್ಯಾಟಿಂಗ್ ಮಾಡಿ 135 ರನ್ ಬಾರಿಸಿದರು. ಅದಕ್ಕಿಷ್ಟು ಕಿಶನ್, ಹೆಡ್ ಮತ್ತು ಕ್ಲಾಸೆನ್ ಸಾಥ್ ಸಿಕ್ಕ ನಂತರ ಸನ್ ತಂಡ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 242 ರನ್ ಬಾರಿಸಿತು.

ಅಭಿಷೇಕ್ ಅಬ್ಬರ: ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಹೈದರಾಬಾದ್‌ಗೆ ಅಬ್ಬರದ ಆರಂಭ ಸಿಕ್ಕಿತು. ಕಳೆದ ಪಂದ್ಯದಲ್ಲಿ ಲಯಕ್ಕೆ ಮರಳಿರುವ ಅಭಿಷೇಕ್ ಶರ್ಮಾ ಸಿಕ್ಸರ್‌ಗಳ ಸುರಿಮಳೆಗೈಯಲು ಶುರು ಮಾಡಿದರು. ಟ್ರಾವಿಸ್ ಹೆಡ್ ಅವರಿಗೆ ಸಿಂಗಲ್‌ಗಳ ಮೂಲಕ ಸಾಥ್ ನೀಡುತ್ತಿದ್ದಂತೆ ಹೈದರಾಬಾದ್ ಹಳಿ ಹಿಡಿಯಿತು. ಅಭಿಷೇಕ್ ಸಿಕ್ಸರ್‌ಗಳ ಸುರಿಮಳೆಗೈದಿದ್ದಲ್ಲದೆ ಬೌಂಡರಿಗಳ ಅಬ್ಬರವನ್ನೂ ಪ್ರದರ್ಶಿಸಿದರು. ಪವರ್‌ಪ್ಲೇನಲ್ಲಿ ಅವರದ್ದೇ ಆಟ ನಡೆಯಿತು. ಮುಕ್ತಾಯಕ್ಕೆ 67 ರನ್ ಗಳಿಸಿತು. ಅಭಿಷೇಕ್ ಅರ್ಧಶತಕದತ್ತ ಸಾಗಿದರು.

ಮಧ್ಯಮ ಓವರ್‌ಗಳಲ್ಲಿ ಸೆಟ್ ಆಗಿದ್ದ ಅಭಿ ಅರ್ಧಶತಕ ಪೂರೈಸಿಕೊಂಡರು. ಮುಂದೆ ತೀರಾ ಭಯಂಕರ ಬ್ಯಾಟಿಂಗ್ ಶುರು ಮಾಡಿದರು. ಹೆಡ್ 37 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಇಶಾನ್ ಕಿಶನ್ ಕೂಡ ಕೈಜೋಡಿಸಿದರು. ಅಭಿ ಆಟಕ್ಕೆ ದಿಲ್ಲಿ ತತ್ತರಿಸಿತು.



ಯಾವುದೇ ಆಟಗಾರ ಕೂಡ ತಡೆಯಲಾಗಲೇ ಇಲ್ಲ. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸಿದರು. ಬಾನೆತ್ತರದ ಸಿಕ್ಸರ್, ನಿಲ್ಲಿಸಲಾಗದ ಬೌಂಡರಿಗಳನ್ನು ಬಾರಿಸಿದರು. ಅವರ ವೈಭವಕ್ಕೆ ಸರಿಸಾಟಿಯೇ ಇಲ್ಲದಂತೆ 47 ಬಾಲ್‌ಗಳಲ್ಲಿ ಶತಕ ಬಾರಿಸಿಬಿಟ್ಟರು. ಶತಕದ ಆಟಕ್ಕೆ ತಡೆಯೊಡ್ಡಲು ಯಾರಿಂದಲೂ ಸಾಧ್ಯವೇ ಆಗಲಿಲ್ಲ.

ಒಂದೇ ಓವರ್‌ನಲ್ಲಿ 23 ರನ್: 15ನೇ ಓವರ್ ಮಾಡಲು ನಿತಿಶ್ ರಾಣಾ ಬಂದರು. ಸೆಟ್ ಆಗಿದ್ದ ಅಭಿಷೇಕ್ ಶರ್ಮಾ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಮೊದಲಿನ ಎರಡು ಬಾಲ್‌ಗಳಲ್ಲಿ 2 ಸಿಕ್ಸರ್ ಚಚ್ಚಿದ ಅವರು, ಮೂರನೇ ಬಾಲ್‌ನಲ್ಲಿ ಬೌಂಡರಿ ಬಾರಿಸಿದರು. ನಾಲ್ಕನೇ ಬಾಲ್‌ನಲ್ಲಿ ಕಿಶನ್ ರನ್‌ಔಟ್ ಆದರು. ಕೊನೆಯ ಬಾಲ್‌ನಲ್ಲಿ ಮತ್ತೊಂದು ಸಿಕ್ಸರ್ ಬಾರಿಸಿದರು. ಅಭಿಷೇಕ್ ಡೆತ್ ಓವರ್‌ಗೆ ನುಗ್ಗಿದರು. ಅಲ್ಲಿಗೆ ಮಧ್ಯಮ ಓವರ್ ಮುಕ್ತಾಯಗೊಂಡವು, ಹೈದರಾಬಾದ್ 122 ರನ್ ಬಾರಿಸಿತು. ಇದರಲ್ಲಿ ಅಭಿಷೇಕ್ 80ಕ್ಕೂ ಹೆಚ್ಚು ರನ್ ಮಾಡಿದರು.

ಕ್ಲಾಸೆನ್ ಆರ್ಭಟ: ಡೆತ್ ಓವರ್‌ನಲ್ಲಿ ಕ್ಲಾಸೆನ್ ಅಬ್ಬರ ಶುರುವಾಯಿತು. ಕಿಶನ್ ಔಟಾದ ನಂತರ ಬ್ಯಾಟಿಂಗ್‌ಗಿಳಿದ ಅವರು, 13 ಬಾಲ್‌ಗಳಲ್ಲಿ ಔಟಾಗದೆ 37 ರನ್ ಗಳಿಸಿದರು. ಇತ್ತ ಅಭಿಷೇಕ್ ಕೂಡ ಬೌಂಡರಿಗಳನ್ನು ಬಾರಿಸಿ ಅಜೇಯರಾಗಿ ಉಳಿದರು. ಹೈದರಾಬಾದ್ ಡೆತ್ ಓವರ್‌ನಲ್ಲಿ 53 ರನ್ ಗಳಿಸಿತು.

ಅಭಿಷೇಕ್‌ಗೆ ಎರಡನೇ ಶತಕ

ಅಭಿಷೇಕ್ ಶರ್ಮಾ ಎರಡನೇ ಐಪಿಎಲ್ ಶತಕ ಬಾರಿಸಿದರು. 2025ರಲ್ಲಿ ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಐಪಿಎಲ್‌ನಲ್ಲಿ ಮೊದಲ ಶತಕ ಬಾರಿಸಿದ್ದ ಅವರು, ದಿಲ್ಲಿ ವಿರುದ್ಧ ಎರಡನೇ ಶತಕ ಬಾರಿಸಿದರು.

ಐದನೇ ಅತಿ ಹೆಚ್ಚು ರನ್

135★ ರನ್ ಬಾರಿಸಿರುವ ಅಭಿಷೇಕ್ ಶರ್ಮಾ ಐಪಿಎಲ್‌ನ ಐದನೇ ಅತಿ ಹೆಚ್ಚು ವೈಯಕ್ತಿಕ ಹೆಚ್ಚು ರನ್ ಬಾರಿಸಿದರು. 144 ರನ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿರುವ ಅವರು, ದಿಲ್ಲಿ ವಿರುದ್ಧ 135★ ರನ್‌ಗಳೊಂದಿಗೆ ಆರ್‌ಸಿಬಿಯ ಎಬಿಡಿ 133 ರನ್‌ಗಳ ಸ್ಕೋರ್ ಅನ್ನು ದಾಟಿದರು. ಇದು ನಾಲ್ಕನೇ ಅತಿ ಹೆಚ್ಚು ಸ್ಕೋರ್ ಆಗಿದೆ. ಮತ್ತು ತಮ್ಮ 2ನೇ ಅತಿ ಗರಿಷ್ಠ ಸ್ಕೋರ್ ಆಗಿದೆ.

100 ಸಿಕ್ಸರ್

ಅಭಿಷೇಕ್ ಶರ್ಮಾ ಹೈದರಾಬಾದ್ ಪರ ನೂರು ಸಿಕ್ಸರ್‌ಗಳನ್ನು ಬಾರಿಸಿದರು. 2017ರಲ್ಲಿ ಐಪಿಎಲ್ ಪದಾರ್ಪಣೆ ಮಾಡಿದ ಅವರು, ಡೆಲ್ಲಿ ಡೇರ್ ಡೆವಿಲ್ಸ್ ಪರ ಆಡುತ್ತಿದ್ದರು. 2019ರಿಂದ ಅಭಿಷೇಕ್ ಶರ್ಮಾ ಹೈದರಾಬಾದ್ ಪರ ಆಡುತ್ತಿದ್ದಾರೆ. ಅವರು ಇಲ್ಲಿಯವರೆಗೂ ಒಟ್ಟು 100 ಸಿಕ್ಸರ್‌ಗಳನ್ನು ಹೈದರಾಬಾದ್ ಪರ ಬಾರಿಸಿದ್ದಾರೆ.

ಬೌಂಡರಿಯಿಂದಲೇ 100 ರನ್

135 ರನ್‌ಗಳಲ್ಲಿ ಅಭಿಷೇಕ್ ಶರ್ಮಾ ಬೌಂಡರಿಯಿಂದಲೇ 100 ರನ್ ಬಾರಿಸಿದರು. ಒಟ್ಟು 68 ಎಸೆತ ಎದುರಿಸಿ, 10 ಬೌಂಡರಿ, 10 ಸಿಕ್ಸರ್ ಬಾರಿಸಿದರು.

ಕಿರುಸುದ್ದಿ

ಗಾಯದ ಸಮಸ್ಯೆ: ಫ್ರೆಂಚ್ ಓಪನ್‌ಗೆ ಅಲ್ಕರಾಜ್ ಅನುಮಾನ

ಹೊಸದಿಲ್ಲಿ: ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ತಮ್ಮ ಕೈಮಣಿಯ ಗಂಭೀರ ಗಾಯದ ಹಿನ್ನೆಲೆ, ಈ ಬಾರಿ ರೋಲಾಂ ಗ್ಯಾರೋಸ್(ಫ್ರೆಂಚ್ ಓಪನ್) ಪಂದ್ಯಾವಳಿಯಿಂದ ಹೊರಗುಳಿಯುವ ಸಾಧ್ಯತೆ ಇದೆ. 22 ವರ್ಷದ ಅಲ್ಕರಾಜ್ ಕಳೆದ ವಾರ ಬಾರ್ಸಿಲೋನಾ ಮಣ್ಣಿನ ಕೋರ್ಟ್ ಟೂರ್ನಿಯಿಂದ ಹಿಂದೆ ಸರಿದಿದ್ದರು. ಪಂದ್ಯದಲ್ಲಿ ರಿಟರ್ನ್ ಹೊಡೆಯುವಾಗ ಕೈಮಣಿ ಸಮಸ್ಯೆ ಉಂಟಾದ ಕಾರಣ, ನಂತರ ಅದು ನಿರೀಕ್ಷೆಗಿಂತ ಹೆಚ್ಚು ಗಂಭೀರ ಗಾಯ ಎಂದು ತಿಳಿಸಿದ್ದಾರೆ.



ಈಗಾಗಲೇ ಮ್ಯಾಡ್ರಿಡ್ ಓಪನ್ ನಿಂದಲೂ ಹೊರಗುಳಿದಿರುವ, ಮೇ 18ರಿಂದ ಆರಂಭವಾಗುವ ಪ್ಯಾರಿಸ್ ಟೂರ್ನಿಯಲ್ಲಿ ಭಾಗವಹಿಸುವ ಬಗ್ಗೆ ಅನುಮಾನಗಳು ಹೆಚ್ಚಾಗಿವೆ. ಈ ಬಗ್ಗೆ ಮಾಧ್ಯಮವೊಂದರಲ್ಲಿ ಮಾತನಾಡಿರುವ ಅವರು, ವೇಗವಾಗಿ ಮರಳುವುದಕ್ಕಿಂತ, ಸ್ವಲ್ಪ ಸಮಯ ತೆಗೆದುಕೊಂಡು ಸಂಪೂರ್ಣ ಚೇತರಿಸಿಕೊಂಡು ಬರಲು ಇಷ್ಟಪಡುತ್ತೇನೆ, ಎಂದು ಅಲ್ಕರಾಜ್ ಹೇಳಿದ್ದಾರೆ. ನನ್ನ ಮುಂದಿನ ವೃತ್ತಿಜೀವನ ಇನ್ನೂ ದೀರ್ಘವಾಗಿದೆ. ಈಗ ಅತಿಯಾಗಿ ಒತ್ತಡ ಹಾಕಿಕೊಂಡರೆ ಮುಂದಿನ ಟೂರ್ನಿಗಳ ಮೇಲೆ ಪರಿಣಾಮ ಬೀರುತ್ತದೆ, ಎಂದು ಅವರು ತಿಳಿಸಿದ್ದಾರೆ. ಇತ್ತೀಚೆಗೆ ಮಾಂಟೆ ಕಾರ್ಲೋ ಮಾಸ್ಟರ್ಸ್ ಫೈನಲ್‌ನಲ್ಲಿ ಜಾನಿಕ್ ಸಿನ್ನರ್ ವಿರುದ್ಧ ಸೋತ ನಂತರ ಅಲ್ಕರಾಜ್ ವಿಶ್ವ ನಂ.1 ಸ್ಥಾನವನ್ನು ಕಳೆದುಕೊಂಡಿದ್ದರು.

ಏಷ್ಯನ್ ಗೇಮ್ಸ್ ಸೋನಿಯಲ್ಲಿ ಪ್ರಸಾರ

ಹೊಸದಿಲ್ಲಿ: ಜಪಾನ್‌ನಲ್ಲಿ ನಡೆಯಲಿರುವ 20ನೇ ಏಷ್ಯನ್ ಗೇಮ್ಸ್ ಪ್ರಸಾರದ ಅಧಿಕಾರವನ್ನು ಸೋನಿ ಪಿಕ್ಚರ್ಸ್ ನೆಟ್ವರ್ಕ್ ಗೆದ್ದುಕೊಂಡಿದೆ. ಜಪಾನ್‌ನ ಐಚಿ–ನಾಗೋಯಾದಲ್ಲಿ ಸೆಪ್ಟೆಂಬರ್ 19ರಿಂದ ಅಕ್ಟೋಬರ್ 4ರವರೆಗೆ ಮಹಾಕೂಟ ನಡೆಯಲು ಸಜ್ಜಾಗಿದೆ. ಬುಧವಾರ ಬ್ರಾಡ್ ಕಾಸ್ಟಿಂಗ್ ಬಿಡ್ ಮುಕ್ತಾಯಗೊಂಡಿತು. ಏಷ್ಯಾದ ಅತಿ ದೊಡ್ಡ ಬ್ರಾಡ್ ಕಾಸ್ಟಿಂಗ್ ಸಂಸ್ಥೆಗಳಲ್ಲಿ ಒಂದಾದ ಸೋನಿ ಗೆದ್ದುಕೊಂಡಿದೆ ಎಂದು ಏಷ್ಯನ್ ಗೇಮ್ಸ್ ಆಯೋಜಕರು ಘೋಷಿಸಿದ್ದಾರೆ. ಈ ಒಪ್ಪಂದದ ಪ್ರಕಾರ ಕೂಟವನ್ನು ಏಷ್ಯಾದ್ಯಂತ ಸ್ಟಾರ್ ಸ್ಪೋರ್ಟ್ಸ್ ನೆಟ್ವರ್ಕ್‌ನಲ್ಲಿ ಪ್ರಸಾರ ಮಾಡಲಾಗುತ್ತದೆ. ಸ್ಟ್ರೀಮಿಂಗ್ ಅಧಿಕಾರವನ್ನು ಸೋನಿ ಲೀವ್ ಹೊಂದಲಿದೆ. ಏಷ್ಯನ್ ಗೇಮ್ಸ್ ಅನ್ನು ಸತತ ಮೂರನೇ ಬಾರಿಗೆ ಪ್ರಸಾರ ಮಾಡಲು ಸಿದ್ಧವಾಗಿರುವ ಸೋನಿ, ಇದು ನಮಗೆ ಹೆಮ್ಮೆ ಎಂದಿದೆ.

10ಕೆ ಬೆಂಗಳೂರು: 5ಕೋಟಿ ರೂ. ನಿಧಿ ಸಂಗ್ರಹ

ಬೆಂಗಳೂರು: ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು 18ನೇ ಆವೃತ್ತಿಗಾಗಿ ಸಜ್ಜಾಗುತ್ತಿದ್ದು, ದಿನಗಣನೆ ಶುರುವಾಗಿವೆ. ಈ ನಡುವೆ, ಸಾಮಾಜಿಕ ಅಭಿವೃದ್ಧಿಗಾಗಿ ಎನ್‌ಜಿಒಗಳಿಗೆ ನೀಡಲು ಸಂಗ್ರಹಿಸಲಾಗುವ ಮೊತ್ತದ ದಾಖಲೆಯನ್ನು ಮಂಗಳವಾರದಂದು ಬಿಡುಗಡೆ ಮಾಡಲಾಯಿತು.ಕಾರ್ಪೊರೇಟ್‌ಗಳು, ವ್ಯಕ್ತಿಗಳು ಮತ್ತು ಓಟಗಾರರ ಬೆಂಬಲದೊಂದಿಗೆ ಯುನೈಟೆಡ್ ವೇ ಬೆಂಗಳೂರು ನಡೆಸುತ್ತಿರುವ ಕೂಟದ ಲೋಕೋಪಕಾರಿ ಸ್ತಂಭವು ಈ ವರ್ಷ ಈಗಾಗಲೇ 5 ಕೋಟಿ ರೂ.ಗಳನ್ನು ಸಂಗ್ರಹಿಸಿದೆ, ಇದು 16 ಕಾರಣಗಳಲ್ಲಿ 94ಕ್ಕೂ ಹೆಚ್ಚು ಎನ್‌ಜಿಒಗಳಿಗೆ ಪ್ರಯೋಜನವನ್ನು ನೀಡುತ್ತದೆ ಎಂದು ಆಯೋಜಕರು ತಿಳಿಸಿದರು. ವರ್ಷಗಳಲ್ಲಿ, ಈ ವೇದಿಕೆಯು ಅಸಾಧಾರಣವಾಗಿ ಬೆಳೆದಿದೆ, 260 ಕ್ಕೂ ಹೆಚ್ಚು ಎನ್‌ಜಿಒಗಳಿಗೆ 59.20 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. ಲೋಕೋಪಕಾರಕ್ಕಾಗಿ ದಕ್ಷಿಣ ಭಾರತದ ಅತಿದೊಡ್ಡ ಕ್ರೀಡಾ ವೇದಿಕೆಯಾಗಿ ವಿಕಸನಗೊಂಡಿದೆ. ಈ ವರ್ಷದಲ್ಲಿ, 43ಕ್ಕೂ ಹೆಚ್ಚು ಕಂಪನಿಗಳು ಮತ್ತು 215ಕ್ಕೂ ಹೆಚ್ಚು ವೈಯಕ್ತಿಕ ನಿಧಿಸಂಗ್ರಹಕಾರರು ಒಟ್ಟಿಗೆ ಸೇರಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

ಚೆನ್ನೈಗೆ ಭಾರೀ ಹೊಡೆತ | ಗಾಯದಿಂದ ಹೊರಬಿದ್ದ ಬ್ಯಾಟರ್

ಆಯುಷ್ ಮಾತ್ರೆ ಹೊರಕ್ಕೆ

ಚೆನ್ನೈ: ಚೆನ್ನೈನ ಪ್ರತಿ ಪಂದ್ಯದಲ್ಲೂ ಉತ್ತಮ ಬ್ಯಾಟಿಂಗ್ ಮಾಡಿ ತಂಡಕ್ಕೆ ಆಸರೆಯಾಗುತ್ತಿದ್ದ ಯುವ ಬ್ಯಾಟರ್ ಆಯುಷ್ ಮಾತ್ರೆ ಐಪಿಎಲ್‌ನಿಂದಲೇ ಹೊರಬಿದ್ದರು.

ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದ ವೇಳೆ ಕಾಲಿಗೆ ಗಾಯ ಮಾಡಿಕೊಂಡ ಅವರು, ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. ಅವರಿಗೆ ಸುಮಾರು 12 ವಾರಗಳ ರಿಹ್ಯಾಬ್ ಅವಶ್ಯಕತೆ ಇದೆ ಎಂದು ಚೆನ್ನೈ ಸೂಪರ್ ಕಿಂಗ್ಸ್ ಪ್ರಕಟಣೆಯಲ್ಲಿ ತಿಳಿಸಿದೆ. ಎರಡು ಪಂದ್ಯಗಳಲ್ಲಿ ಗೆದ್ದ ನಂತರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಮತ್ತೆ ಹಿನ್ನಡೆ ಅನುಭವಿಸಿರುವ ಚೆನ್ನೈ ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿದೆ. ಮೊದಲೇ ಹಿನ್ನಡೆ ಅನುಭವಿಸಿರುವ ಫ್ರಾಂಚೈಸಿಗೆ ಗಾಯ ದೊಡ್ಡ ಹೊಡೆತ ನೀಡಿದೆ.

ವಾಸ್ತವವಾಗಿ ಚೆನ್ನೈ ತಂಡ ಉತ್ತಮ ಬ್ಯಾಟಿಂಗ್ ಪಡೆ ಹೊಂದಿದ್ದರೂ ಯಾರೊಬ್ಬರೂ ಲಯದಲ್ಲಿಲ್ಲ. ಸಂಜು ಸ್ಯಾಮ್ಸನ್ ಒಂದು ಪಂದ್ಯದಲ್ಲಿ ಶತಕ ಬಾರಿಸಿದ್ದಾದರೂ, ಹೈದರಾಬಾದ್ ವಿರುದ್ಧ ನಿರಾಸೆ ಮೂಡಿಸಿದರು. ಇತ್ತ ಗಾಯಕ್ವಾಡ್ ಲಯಕ್ಕಾಗಿ ಪರದಾಟ ನಡೆಸುತ್ತಿದ್ದಾರೆ. ಚೆನ್ನೈನ ಟಾಪ್ ಆರ್ಡರ್‌ನಲ್ಲಿ ಲಯದಲ್ಲಿದ್ದವರೆಂದರೆ ಅವರು ಆಯುಷ್ ಮಾತ್ರೆ. ಇದೀಗ ಅವರೇ ಪಂದ್ಯಾವಳಿಯಿಂದ ಹೊರಬಿದ್ದಿರುವುದು ಚೆನ್ನೈ ತಂಡಕ್ಕೆ ದೊಡ್ಡ ಆಘಾತ ಎದುರಾಗಿದೆ. ಇನ್ನೂವರೆಗೂ ಚೆನ್ನೈ ಯಾವುದೇ ಬದಲಿ ಆಟಗಾರರನ್ನು ಘೋಷಿಸಿಲ್ಲ.



ತಂಡದಲ್ಲಿ ಅವರನ್ನು ಬಿಟ್ಟರೆ, ಕಾರ್ತಿಕ್ ಶರ್ಮಾ, ಪ್ರಶಾಂತ್ ವೀರ್, ಉರ್ವಿಲ್ ಪಟೇಲ್ ಕೂಡ ಇದ್ದಾರೆ.

ರಿಹ್ಯಾಬ್ ಸೆಂಟರ್ ಆದ ಸಿಎಸ್‌ಕೆ: ಒಂದು ಸಮಯದಲ್ಲಿ ಚಾಂಪಿಯನ್ ತಂಡ ಅನ್ನಿಸಿಕೊಳ್ಳುತ್ತಿದ್ದ ಚೆನ್ನೈ ಸೂಪರ್ ಕಿಂಗ್ಸ್ ಇದೀಗ ರಿಹ್ಯಾಬ್ ಸೆಂಟರ್ ಆಗಿದೆ. ಪಂದ್ಯಾವಳಿ ಶುರುವಿಗೂ ಮುನ್ನವೇ ಚೆನ್ನೈಗೆ ಗಾಯದ ಸಮಸ್ಯೆಗಳು ಶುರುವಾಗಿವೆ. ಆಸ್ಟ್ರೇಲಿಯಾ ವೇಗಿ ನಾಥನ್ ಎಲ್ಲಿಸ್ ಗಾಯದಿಂದ ಹೊರನಡೆದರು. ಮುಂದೆ ಬಂದಂತೆ ತಂಡದ ಪ್ರಮುಖ ಆಟಗಾರರಾದ ಮಹೇಂದ್ರ ಸಿಂಗ್ ಧೋನಿ ಕೂಡ ಅರ್ಧದಷ್ಟು ಐಪಿಎಲ್ ಆಡುತ್ತಿಲ್ಲ. ಇತ್ತೀಚಿಗಷ್ಟೇ ವೇಗಿ ಖಲೀಲ್ ಅಹ್ಮದ್ ಹೊರಬಿದ್ದರು. ಈಗ ಆಯುಷ್ ಮಾತ್ರೆ ಕೂಡ ಐಪಿಎಲ್‌ನಿಂದ ಹೊರಬಿದ್ದಿದ್ದು, ಚೆನ್ನೈ ಸಂಕಷ್ಟದಲ್ಲಿ ಸಿಲುಕಿಕೊಂಡಿದೆ.

ಜಿಟಿ 100 ರನ್‌ಗೆ ಆಲೌಟ್ | ಅಶ್ವಿನಿ ಕುಮಾರ್ 4 ವಿಕೆಟ್

ಮುಂಬೈಗೆ ಭರ್ಜರಿ ಜಯ

ಅಹಮದಾಬಾದ್: ಬಲಿಷ್ಠ ಗುಜರಾತ್ ಟೈಟಾನ್ಸ್ ತಂಡವನ್ನು 100 ರನ್‌ಗಳಿಗೆ ಆಲೌಟ್ ಮಾಡಿರುವ ಮುಂಬೈ ಇಂಡಿಯನ್ಸ್ ಸತತ ಸೋಲುಗಳ ನಂತರ ಕೊನೆಗೂ ಗೆಲುವಿನ ನಗೆ ಬೀರಿತು. ತಿಲಕ್ ವರ್ಮಾ ಅವರ ಶತಕದ ಬ್ಯಾಟಿಂಗ್ ನಂತರ ತಂಡದ ಸಾಂಘಿಕ ಬೌಲಿಂಗ್ ದಾಳಿಯ ನೆರವಿನಿಂದ ಮುಂಬೈ ಇಂಡಿಯನ್ಸ್ ಗೆಲುವು ಸಾಧಿಸಿತು. ಇದರೊಂದಿಗೆ ಸತತ ಮೂರು ಸೋಲುಗಳ ಸರಪಳಿ ಮುರಿದುಕೊಂಡಿತು.

ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದು ತಿಲಕ್ ಅವರ ಆಸರೆ ಪಡೆಯಿತು. ಆರಂಭದಲ್ಲಿ ವಿಕೆಟ್‌ಗಳನ್ನು ಕಳೆದುಕೊಂಡರೂ, ನಂತರದಲ್ಲಿ ತಿಲಕ್ ಅವರ ಆಟದಿಂದ ಮಿಂಚಿತು. ಅವರಿಗೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಸಾಥ್ ಕೊಟ್ಟ ನಂತರ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. ವರ್ಮಾ (101★, 45ಎ, 8ಬೌ, 7ಸಿ) ರನ್ ಬಾರಿಸಿದರು. ನಮನ್ (45, 32ಎ, 6 ಬೌ, 1ಸಿ) ಗಳಿಸಿದರು. ಗುಜರಾತ್ ಪರ ರಬಾಡ (4–0–33–3) ಮಿಂಚಿದರು. ಗುರಿ ಬೆನ್ನತ್ತಿದ ಗುಜರಾತ್ 100 ರನ್‌ಗಳಿಗೆ ಉರುಳಿತು. ಮುಂಬೈ ಪರ ಅಶ್ವಿನಿ ಕುಮಾರ್ (4–0–24–4) ಮಿಂಚಿದರು. ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದರು.

ಪವರ್ ಆಟ: ಒಂದು ಹಂತದಲ್ಲಿ ಮುಂಬೈ ಭಾರೀ ಆಘಾತ ಎದುರಿಸಿತು. ಶುರುವಿನಲ್ಲಿ ದಾನೀಶ್, ಡಿಕಾಕ್ ಬೇಗನೇ ಹೊರ ನಡೆದರು. ನಿಧಾನಗತಿ ಬ್ಯಾಟಿಂಗ್ ಮಾಡಿದ ನಮನ್ ಧಿರ್, ಸೂರ್ಯ ಕೊಂಚ ಹೊತ್ತು ಮಿಂಚಿದರು. ಆದರೆ ಸೂರ್ಯನ ಆಟ 15ರ ಮೇಲೆ ನಿಲ್ಲಲಿಲ್ಲ. ಪವರ್‌ಪ್ಲೇ ಮುಗಿಯಿತು. ಮುಂಬೈ 46 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು.



ಸಂಕ್ಷಿಪ್ತ ಸ್ಕೋರ್

ಮುಂಬೈ 20 ಓವರ್‌ಗಳಲ್ಲಿ 199/5: ತಿಲಕ್ 101★, ನಮನ್ 45; ರಬಾಡ 33/3
ಗುಜರಾತ್ 15.5 ಓವರ್‌ಗಳಲ್ಲಿ 100/10: ವಾಷಿಂಗ್ಟನ್ 26, ಶಾರುಖ್ 17; ಅಶ್ವಿನಿ 24/4

ಮಧ್ಯಮ ಓವರ್ಸ್: ಗುಜರಾತ್ ಇದೇ ಓವರ್‌ಗಳಲೇ ಪಂದ್ಯ ಸೋತಿತು. ಸೀಸನ್‌ನಲ್ಲಿ ಮೊದಲ ಬಾರಿಗೆ ಆಡಿದ ಅಶ್ವಿನಿ ಕುಮಾರ್(4–0–24–4) ಕರಾರುವಾಕ್ ದಾಳಿಯೊಂದಿಗೆ ಅಬ್ಬರಿಸಿದರು. ಇದೇ ಹೊಡೆತಕ್ಕೆ ತತ್ತರಿಸಿದ ಗುಜರಾತ್ ಯಾವುದೇ ಬ್ಯಾಟರ್ ಆಸರೆ ಪಡೆಯಲಿಲ್ಲ. ಸುಂದರ್ ಗಳಿಸಿದ್ದ 26 ರನ್ ತಂಡದಲ್ಲಿ ಆಟಗಾರ ಗಳಿಸಿದ ಅತಿ ಹೆಚ್ಚು ಸ್ಕೋರ್ ಆಗಿತ್ತು. ಅಶ್ವಿನ್ ಬಿಟ್ಟರೆ ಫಾಜ್ಲೀಫರ್, ಸ್ಯಾಂಟ್ನರ್ ಕೂಡ ತಲಾ 2 ವಿಕೆಟ್ ಕಿತ್ತರು. ಬೂಮ್ರಾ 15 ರನ್‌ಗೆ 1 ವಿಕೆಟ್ ಪಡೆದರು.

2027ರ ಚಾಂಪಿಯನ್‌ಶಿಪ್‌ಗೆ ಉಜ್ಬೇಕಿಸ್ತಾನ ಆತಿಥ್ಯ

ತಾಷ್ಕೆಂಟ್‌ನಲ್ಲಿ ಪ್ಯಾರಾ ಅಥ್ಲೆಟಿಕ್ಸ್

ಹೊಸದಿಲ್ಲಿ: ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಅನ್ನು ಉಜ್ಬೇಕಿಸ್ತಾನದ ತಾಷ್ಕೆಂಟ್‌ನಲ್ಲಿ ನಡೆಯಲಿದೆ ಎಂದು ಆಯೋಜಕರು ಘೋಷಿಸಿದ್ದಾರೆ. ವಿಶ್ವದ ಅತಿದೊಡ್ಡ ಪ್ಯಾರಾ ಕ್ರೀಡಾಕೂಟವು ಜೂನ್ 2027 ರಲ್ಲಿ ಒಲಿಂಪಿಕ್ ಸಿಟಿ ಮೇನ್ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಈ ಘೋಷಣೆ ಮಾಡಿದೆ.

ತಾಷ್ಕೆಂಟ್ 2027 ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ 13 ನೇ ಆವೃತ್ತಿಯಾಗಿದ್ದು, ದೋಹಾ 2015, ದುಬೈ 2019, ಕೋಬೆ 2024 ಮತ್ತು ನವದೆಹಲಿ 2025 ರ ನಂತರ ಏಷ್ಯಾದಲ್ಲಿ ಐದನೇ ಬಾರಿಗೆ ಈ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದೆ. 100 ಕ್ಕೂ ಹೆಚ್ಚು ರಾಷ್ಟ್ರಗಳಿಂದ ಸುಮಾರು 1,300 ಕ್ರೀಡಾಪಟುಗಳ ಭಾಗವಹಿಸುವಿಕೆಯ ನಿರೀಕ್ಷೆಯೊಂದಿಗೆ, ಚಾಂಪಿಯನ್‌ಶಿಪ್‌ಗಳು ದೇಶದಲ್ಲಿ ಇದುವರೆಗೆ ಆಯೋಜಿಸಲಾದ ಅತಿದೊಡ್ಡ ಅಂತಾರಾಷ್ಟ್ರೀಯ ಪ್ಯಾರಾ ಕ್ರೀಡಾಕೂಟವಾಗಲಿವೆ. ಈವೆಂಟ್‌ಗಳ ಅಂತಿಮ ಸಂಖ್ಯೆಯನ್ನು ಇನ್ನೂ ದೃಢೀಕರಿಸಲಾಗಿಲ್ಲವಾದರೂ, ಈ ಕಾರ್ಯಕ್ರಮವು ಕನಿಷ್ಠ 164 ಕ್ರೀಡಾಕೂಟಗಳನ್ನು ಒಳಗೊಂಡಿರುತ್ತದೆ, ಹೆಚ್ಚುವರಿ ಕಾರ್ಯಕ್ರಮಗಳ ಸಾಧ್ಯತೆಯೊಂದಿಗೆ. ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಮುಖ್ಯಸ್ಥ ಪಾಲ್ ಫಿಟ್ಜ್‌ಗೆರಾಲ್ಡ್ ಈ ಘೋಷಣೆಯನ್ನು ಸ್ವಾಗತಿಸಿದ್ದು, ರಾಷ್ಟ್ರ ಮತ್ತು ಪ್ರದೇಶ ಎರಡಕ್ಕೂ ಈ ಕಾರ್ಯಕ್ರಮದ ಮಹತ್ವವನ್ನು ಎತ್ತಿ ತೋರಿಸಿದರು. 2027 ರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗಳು ಉಜ್ಬೇಕಿಸ್ತಾನ್‌ನ ತಾಷ್ಕೆಂಟ್‌ನಲ್ಲಿ ನಡೆಯಲಿವೆ ಎಂದು ಘೋಷಿಸಲು ನಾವು ಸಂತೋಷಪಡುತ್ತೇವೆ. ಇದು ದೇಶದಲ್ಲಿ ಇದುವರೆಗೆ ನಡೆಯುವ ಅತಿ ದೊಡ್ಡ ಅಂತಾರಾಷ್ಟ್ರೀಯ ಪ್ಯಾರಾ ಸ್ಪೋರ್ಟ್ಸ್ ಇವೆಂಟ್ ಆಗಿದ್ದು, ನಮ್ಮ ಕ್ರೀಡೆ, ನಮ್ಮ ಅಭಿಮಾನಿಗಳ ನೆಲೆಯನ್ನು ಬೆಳೆಸಲು ಬೃಹತ್ ಅವಕಾಶಗಳನ್ನು ತೆರೆಯುತ್ತದೆ ಎಂದು ಅವರು ಹೇಳಿದರು.



ಸೋಲಿನಿಂದ ಹೊರಬಂದೀತೇ ಲಖನೌ?

ಲಖನೌ: ಸೋಲಿನಿಂದ ಕಂಗೆಟ್ಟಿರುವ ಲಖನೌ ಸೂಪರ್ ಜೇಂಟ್ಸ್ ಬುಧವಾರದ ಪಂದ್ಯದಲ್ಲಿ ಗೆದ್ದು ಪಂದ್ಯಾವಳಿಯಲ್ಲಿ ಕಂಬ್ಯಾಕ್ ಮಾಡುವ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ.

ಬುಧವಾರದಂದು ಇಲ್ಲಿನ ಏಕಾನಾ ಕ್ರೀಡಾಂಗಣದಲ್ಲಿ ರಾಜಸ್ಥಾನ ತಂಡವನ್ನು ಎದುರಿಸಲಿರುವ ಲಖನೌ ತವರಲ್ಲಾದರೂ ಮಿಂಚುವ ತವಕದಲ್ಲಿದೆ. ಪಂದ್ಯಾವಳಿಯಲ್ಲಿ ಮೊದಲಿನ ಪಂದ್ಯಗಳಲ್ಲಿ ಸೋತಿದ್ದ ಲಖನೌ ಸತತ ಎರಡು ಗೆಲುವಿನೊಂದಿಗೆ ಕಂಬ್ಯಾಕ್ ಮಾಡಿತ್ತು. ಆದರೆ ಸತತ ಎರಡು ಸೋಲುಗಳಿಂದ ಮತ್ತೆ ಹಿನ್ನಡೆ ಅನುಭವಿಸಿದೆ. ಇತ್ತ ರಾಜಸ್ಥಾನ ಕೂಡ ಕಳೆದ ಎರಡು ಪಂದ್ಯಗಳಲ್ಲಿ ಸೋಲನುಭವಿಸಿದೆ. ವೈಭವ್ ಸೂರ್ಯವಂಶಿ ಹಾಗೂ ಜೈಸ್ವಾಲ್ ಅವರ ಅತ್ಯುತ್ತಮ ಪ್ರದರ್ಶನದೊಂದಿಗೆ ಮಿಂಚಿದ್ದ ರಾಜಸ್ಥಾನ ಅಂಕಪಟ್ಟಿಯಲ್ಲಿ ಕೆಳಗಿಳಿದಿದೆ.

ಲಯಕ್ಕೆ ಮರಳುವುದೇ ಪಂತ್ ಪಡೆ?: ತಂಡದಲ್ಲಿರುವ ಟಿ20ಯ ಬೆಸ್ಟ್ ಬ್ಯಾಟರ್ಸ್ ಲಯಕ್ಕಾಗಿ ಪರದಾಟ ನಡೆಸುತ್ತಿದ್ದಾರೆ. ಕಳೆದ ಸೀಸನಿನಲ್ಲಿ ಮಿಂಚಿದ್ದ ಆರಂಭಿಕ ಜೋಡಿ ಈ ಬಾರಿ ರನ್ ಮಾಡುವುದಕ್ಕೆ ಪರದಾಡುತ್ತಿದೆ. ರಿಷಭ್ ಪಂತ್ ಕಳೆದ ಪಂದ್ಯದಲ್ಲಿ ಸಿಕ್ಸರ್‌ಗಳೊಂದಿಗೆ ಮಿಂಚಿದರೂ ತಮ್ಮ ಅಸಲು ಆಟದ ಹುಡುಕಾಟದಲ್ಲಿದ್ದಾರೆ. ಮುಖ್ಯವಾಗಿ ತಂಡಕ್ಕೆ ಬಲ ತರುತ್ತಿದ್ದ ನಿಕೋಲಸ್ ಪೂರಣ್ ಒಂದೊಂದು ರನ್‌ಗಾಗಿ ಪರದಾಟ ನಡೆಸುತ್ತಿರುವುದು ದೊಡ್ಡ ಹಿನ್ನಡೆಯಾಗಿದೆ. ಮಧ್ಯಮ ಕ್ರಮಾಂಕದಲ್ಲಿ ಆಯುಷ್ ಬದೋನಿ ಮಿಂಚಿದ್ದಾರೆ. ಯುವ ಬ್ಯಾಟರ್ ಮುಕುಲ್ ಚೌಧರಿ ಒಂದೇ ಪಂದ್ಯದಲ್ಲಿ ಅಬ್ಬರಿಸಿದ್ದಾರೆ. ಅಬ್ದುಲ್ ಸಮದ್ ಮಿಂಚಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಪ್ರಿನ್ಸ್ ಯಾದವ್ ಕಳೆದ ಪಂದ್ಯಗಳಲ್ಲಿ ತಂಡದ ಕೀ ಬೌಲರ್ ಆಗಿ ಕಾಣಿಸಿಕೊಂಡಿದ್ದಾರೆ. ಅನುಭವಿ ಮೊಹಮ್ಮದ್ ಶಮಿ ಕೂಡ ಮಿಂಚಿದ್ದಾರೆ. ಸ್ಪಿನ್ನರ್‌ಗಳಲ್ಲಿ ಸಿದ್ಧಾರ್ಥ್ ಹಾಗೂ ದಿಗ್ವೇಶ್ ಅಲ್ಪ ಹಿನ್ನಡೆ ಅನುಭವಿಸಿದ್ದಾರೆ.



ಪಿಚ್: ಲಖನೌನ ಏಕಾನಾ ಕ್ರೀಡಾಂಗಣ ಬ್ಯಾಟರ್‌ಗಳಿಗೆ ಅಲ್ಪ ಕಾಟ ಕೊಡಬಹುದು. ವೇಗಿ ಮತ್ತು ಸ್ಪಿನ್ನರ್‌ಗಳಿಗೆ ಸ್ವಲ್ಪ ಅನುವು ಮಾಡಿಕೊಡಲಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ತಪ್ಪಿದ್ದಲ್ಲ. ಪರಿಣಾಮ ಮೊದಲು ಬೌಲಿಂಗ್ ಮಾಡಿದ ತಂಡವು ಲಾಭ ಪಡೆಯುತ್ತದೆ.

ಪಂದ್ಯದ ವಿವರ

ಯಾವಾಗ: ಬುಧವಾರ, ಎಲ್ಲಿ: ಏಕಾನಾ, ಲಖನೌ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ರಾಜಸ್ಥಾನಕ್ಕೆ ಪುಟಿದೇಳುವ ತವಕ: ಇತ್ತ ರಾಜಸ್ಥಾನ ಮೊದಲಿನ ಪಂದ್ಯಗಳಲ್ಲಿ ಬೆಸ್ಟ್ ತಂಡದಂತೆ ಆಡಿದ್ದರೂ ಕಳೆದೆರಡು ಪಂದ್ಯಗಳಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ಆರಂಭಿಕರಿಬ್ಬರೂ ವಿಕೆಟ್ ಒಪ್ಪಿಸಿದರೆ ಮುಂದೆ ಯಾರೊಬ್ಬರೂ ನಿಲ್ಲುತ್ತಿಲ್ಲ. ಹೆಟ್ಮೇರ್ ಲಯದ ಹುಡುಕಾಟದಲ್ಲಿದ್ದಾರೆ. ರಿಯಾನ್ ಪರಾಗ್ ರನ್ ಮಾಡುತ್ತಿಲ್ಲ. ಬೌಲಿಂಗ್ ವಿಚಾರಕ್ಕೆ ಬಂದರೆ ಆರ್ಚರ್, ರವಿ ಬಿಷ್ಣೋಯ್ ಮಿಂಚಿದ್ದಾರೆ. ಆದಾಗ್ಯೂ ಉಳಿದ ಬೌಲರ್‌ಗಳು ದುಬಾರಿಯಾಗಿದ್ದಾರೆ.

3 ವರ್ಷ ಬಳಿಕ ಬಂದ ಶಿವಾ ನರ್ವಾಲ್‌ಗೆ ಚಿನ್ನ | ಪನಾಹ್‌ಗೂ ರಜತ

ಜೂ. ಆರ್ಚರಿ: ಭಾರತಕ್ಕೆ ಚಿನ್ನದ ಪದಕ

ಹೊಸದಿಲ್ಲಿ: ಮೂರು ವರ್ಷಗಳಿಂದ ಮೈದಾನಕ್ಕಿಳಿಯದ ಮಾಜಿ ಮಿಶ್ರ ತಂಡದ ಚಾಂಪಿಯನ್ ಶಿವಾ ನರ್ವಾಲ್ 10ಮೀ. ಏರ್ ಪಿಸ್ತೂಲ್ ಜೂನಿಯರ್ ಕೂಟದಲ್ಲಿ ಚಿನ್ನ ಗೆಲ್ಲುವುದರೊಂದಿಗೆ ಆರ್ಚರಿಗೆ ಮರಳಿದರು. ಇಜಿಪ್ಟ್‌ನ ಕ್ಯಾರಿಯೊದಲ್ಲಿ ನಡೆದ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಪಂದ್ಯಾವಳಿ ನಡೆಯುತ್ತಿದ್ದು ಅಲ್ಲಿ ಶಿವಾ ಉತ್ತಮ ಪ್ರದರ್ಶನ ನೀಡಿದರು.

ಇಷ್ಟಕ್ಕೆ ನಿಲ್ಲದೆ, ಚಿರಾಗ್ ಶರ್ಮ ನರ್ವಾಲ್ ಅವರೊಂದಿಗೆ ಜೊತೆಗೂಡಿ ಕಂಚಿನ ಪದಕ ಗೆದ್ದರೆ, ಮಹಿಳೆಯರ ವಿಭಾಗದಲ್ಲಿ ಪನಾಹ್ ಭುಗ್ರಾ 10 ಮೀ. ಏರ್ ರೈಫಲ್‌ನಲ್ಲಿ ಬೆಳ್ಳಿ ಗೆದ್ದರು.

ಬುಧವಾರದ ಸ್ಪರ್ಧೆಯಲ್ಲಿ ಶಿವಾ ಆರಂಭದಿಂದಲೂ ಉತ್ತಮ ಪ್ರದರ್ಶನ ನೀಡಿದರು. ಅರ್ಹತಾ ಸುತ್ತಿನಲ್ಲಿ 576–19 ಅಂಕದೊಂದಿಗೆ ಅಗ್ರಸ್ಥಾನ ಪಡೆದರು. ಭಾರತದ ಮತ್ತೋರ್ವ ಅಭಿನವ್ 576–16 ಅಂಕದೊಂದಿಗೆ ಎರಡನೇ ಸ್ಥಾನದಲ್ಲಿ ಕಾಣಿಸಿಕೊಂಡರೆ, ಚಿರಾಗ್, ಹಿಮಾಂಶು, ಅಭಯ್ ಕೂಡ ಫೈನಲ್‌ಗೇರಿದರು.



ಪ್ರಶಸ್ತಿ ಸುತ್ತಿನಲ್ಲಿ ಶಿವಾ ನರ್ವಾಲ್ 241.8 ಅಂಕ ಗಳಿಸಿ ಉಜ್ಬೇಕಿಸ್ತಾನದ ಸೋದಿಕಜೊನ್ ಅಬ್ದುಲ್ಲೇವ್ ಅವರನ್ನು ಹಿಂದಿಕ್ಕಿದರು. ಭಾರತದ ಮತ್ತೋರ್ವ ಚೀರಾಗ್ 218.9 ಅಂಕಗಳೊಂದಿಗೆ ಪೋಡಿಯಂ ಫಿನಿಶ್ ಮಾಡಿದರು. ಅಭಿನವ್ ದೇಶ್ವಾಲ್ ಕೂಡ ಏಳನೇ ಸ್ಥಾನ ಪಡೆದರು.


ಮಹಿಳಾ ವಿಭಾಗ: ಮಹಿಳೆಯರ ಜೂನಿಯರ್ 10ಮೀ. ಏರ್ ರೈಫಲ್‌ನಲ್ಲಿ ಪನಾಹ್, ಅರ್ಹತಾ ಸುತ್ತಿನಲ್ಲಿ 629.4 ಅಂಕಗಳಿಸಿದರು. ಅರ್ಹತಾ ಸುತ್ತಿನಲ್ಲೇ ಅಗ್ರ ಮೂರರಲ್ಲಿ ಕಾಣಿಸಿಕೊಂಡ ಅವರು, ಫೈನಲ್‌ನಲ್ಲಿ 250.6 ಅಂಕಗಳಿಸಿ ಬೆಳ್ಳಿ ಪದಕ ಗೆದ್ದರು. ಫ್ರೆಂಚ್‌ನ ಅಂಕೆಲೈನ್ 252.0 ಅಂಕದೊಂದಿಗೆ ಚಿನ್ನ ಗೆದ್ದರೆ ಅಲ್ಲಿನವರೇ ಆದ ಹೆಲೆನಾ ಈಕೆಲ್ 228.6 ಅಂಕದೊಂದಿಗೆ ಕಂಚಿನ ಪದಕ ಗೆದ್ದರು.

ಜೂನಿಯರ್‌ಗಳ ಮೊದಲ ಇವೆಂಟ್‌ನಲ್ಲಿ 25 ಮೀ ಪಿಸ್ತೂಲ್ ಪುರುಷ ಮತ್ತು ಮಹಿಳಾ ನಿಖರತೆಯ ಸುತ್ತಿನ ಜೊತೆಗೆ ಸ್ಕೀಟ್ ಪುರುಷರು ಮತ್ತು ಮಹಿಳೆಯರ ಮೊದಲ 75 ಗುರಿಗಳು ಸಹ ಪ್ರಾರಂಭವಾಗಿವೆ. 25 ಮೀ ಪಿಸ್ತೂಲ್ ಮಹಿಳೆಯರು ಮತ್ತು 50 ಮೀ. ಸ್ಕೀಟ್ ಹಂತ ಮತ್ತು ಫೈನಲ್‌ಗಳು ಮತ್ತು ಸ್ಕೀಟ್ ಪುರುಷರು ಮತ್ತು ಮಹಿಳೆಯರ ಫೈನಲ್‌ಗಳು ಬುಧವಾರ ನಡೆಯಲಿವೆ. ಪುರುಷರು ಮತ್ತು ಮಹಿಳೆಯರಿಗಾಗಿ 25 ಮೀ ಪಿಸ್ತೂಲ್ ಪುರುಷರು ಮತ್ತು 50 ಮೀ ರೈಫಲ್ ಪ್ರೋನ್‌ನ ಪದಕಗಳನ್ನು ಬುಧವಾರ ಅರ್ಹತಾ ಸುತ್ತಿನಿಂದ ನಿರ್ಧರಿಸಲಾಗುತ್ತದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5961



ಎಡದಿಂದ ಬಲಕ್ಕೆ
1.ಗದುಗಿನ ನಾರಾಣಪ್ಪನವರ ಕಾವ್ಯನಾಮ (5)
5.ಮರದ ನಡುವೆ ಮರಸಭೆಯಡಗಿದೆ (5)
8.ಗತಕಾಲದ ಕಂದಾಯ ಅಧಿಕಾರಿ (3)
9.ಕಬ್ಬು–ಬಿದಿರುಗಳ ಗಂಟು (2)
10.ಗೆಲ್ಲುವುದು–ಪಡೆದ ಯಶಸ್ಸು (2)
11.ಮದುವೆಗೆ ಸಿದ್ಧನಾದ ಹುಡುಗ (2)
12.ಲೋಹದ ಸಣ್ಣ ನಾಣ್ಯ (2)
14.ಗಟ್ಟಿಯಾದ ಒಣಧಾನ್ಯ–ಕಾಣುಗಳು (3)
15.ಪಾದರಸ ಬಳಿದ ಗೋಲಾಕಾರದ ಗುಂಡು (5)
17.ಮನುಷ್ಯನನ್ನು ವಾಹವಾಗಿ ಉಳ್ಳ ಕುಬೇರ (5)

ಮೇಲಿನಿಂದ ಕೆಳಕ್ಕೆ
2.ಅಮಲೇರಿಸುವ ಪಾನೀಯ (5)
3.ಸರಿಸಮಾನ–ಮಟ್ಟಸವಾದುದು (2)
4.ಬಹಳ ಶ್ರೇಷ್ಠನಾದವನು–ಈಶ್ವರ (5)
6.ನಾವು ಹಾಗೆ ಹೇಳಿದ್ದು ಈ ಮರದ ಮೆಟ್ಟಿನ ಬಗ್ಗೆ (3)
7.ಚಲಿಸುವಂಥಾದ್ದು–ಜೀವಂತವಾಗಿರುವಂಥಾದ್ದು (2)
10.ಈ ಆಲಸಿಯ ಕಡೆಯಲ್ಲಿ ರಾಮಸಹೋದರನಿದ್ದಾನೆ (5)
11.ಪ್ರವಾಸಿಗರ ತಾತ್ಕಾಲಿಕ ತಂಗುದಾಣ (5)
13.ಹೆಚ್ಚುಕಡಮೆ–ಅಂದಾಜು ಎಂಬರ್ಥದ ಶಬ್ದ (3)
14.ನದಿ–ಸಮುದ್ರದ ಪಕ್ಕದ ನೆಲದ ಭಾಗ (2)
16.ಚಲಿಸುವಿಕೆಯಿಲ್ಲಿ ತಲೆಕೆಳಗಾಗಿದೆ (2)

5960 ಉತ್ತರ

ಎಡದಿಂದ ಬಲಕ್ಕೆ:
2.ರಾಧಾರಮಣ 6.ಕಸ
8.ಬನ 9.ಕಾವಲು
10.ತಬಲ 11.ಭಾರ
12.ನಗ 14.ಮನಸು
16.ಶತಾವರಿ 12.ಭವಪಾಶ

ಮೇಲಿನಿಂದ ಕೆಳಕ್ಕೆ :
1.ಅಡಕ 3.ಧಾರೆವಟ್ಟಲು
4.ಮಲಯಾಚಲ 5.ಕುಜನ
7.ಸರಕಾರ 8.ಬಡತನ
11.ಭಾವಾವೇಶ
13.ಗಣಾಧೀಶ
14.ಮಜೂರಿ 15.ಸುಲಭ

ಕಿರುಸುದ್ದಿ

ಅಪ್ರಾಪ್ತ ಚಲಾಯಿಸಿದ ಸ್ಕೂಟರ್ ವಶಕ್ಕೆ : ಆರ್.ಸಿ. ಮಾಲಕಿಯ ವಿರುದ್ಧ ಕೇಸು

ಮಂಜೇಶ್ವರ: ಅಪ್ರಾಪ್ತ ಬಾಲಕನಿಗೆ ಸ್ಕೂಟರ್ ಚಲಾಯಿಸಲು ನೀಡಿದ ಆರ್.ಸಿ. ಮಾಲಕಿಯ ವಿರುದ್ಧ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಸೋಮವಾರ ಎಸ್ಐ ವೈಷ್ಣವ್ ರಾಮಚಂದ್ರನ್ ನೇತೃತ್ವದ ತಂಡ ಮೀಂಜ ಗ್ರಾಮದ ಬೇರಿಕೆ ಜಂಕ್ಷನ್‌ನಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದ ವೇಳೆ ಬಾಳಿಯೂರು ಕಡೆಯಿಂದ ಅಪ್ರಾಪ್ತ ಬಾಲಕ ಚಲಾಯಿಸಿದ ಸ್ಕೂಟರ್‌ನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದು, ಈ ಸಂಬಂಧ ಆರ್.ಸಿ.ಮಾಲಕಿಯ ವಿರುದ್ಧ ಕೇಸು ದಾಖಲಿಸಲಾಗಿದೆ.

ಯುವಕನನ್ನು ಆಟೋದಲ್ಲಿ ಕರೆದೊಯ್ದು ಹಲ್ಲೆ

ಕುಂಬಳೆ: ಯುವಕನನ್ನು ಆಟೋರಿಕ್ಷಾದಲ್ಲಿ ಉಪಾಯದಿಂದ ಕರೆದೊಯ್ದು ಇಬ್ಬರು ಹಲ್ಲೆಗೈದು ಗಂಭೀರ ಗಾಯಗೊಳಿಸಿದ ಬಳಿಕ ರಸ್ತೆ ಬದಿ ಬಿಟ್ಟು ಪರಾರಿಯಾದ ಬಗ್ಗೆ ದೂರಲಾಗಿದೆ. ಉಪ್ಪಳ ಪತ್ವಾಡಿಯ ಸವಾದ್ (23) ಎಂಬವರು ಹಲ್ಲೆಯಿಂದ ಗಾಯಗೊಂಡು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಸವಾದ್ ಮಾಂಸದಂಗಡಿಯ ಕಾರ್ಮಿಕನಾಗಿದ್ದಾರೆ. ಸೋಮವಾರ ಸಂಜೆ ಇಬ್ಬರು ವ್ಯಕ್ತಿಗಳು ಅವರನ್ನು ಸಂಪರ್ಕಿಸಿ ಬಳಿಕ ಮಾತನಾಡಲೆಂದು ತಿಳಿಸಿ ಆಟೋರಿಕ್ಷಾದಲ್ಲಿ ಕರೆದೊಯ್ದಿದ್ದಾರೆ. ಬಳಿಕ ಉಪ್ಪಳ ಮಜಲ್‌ಗೆ ಬಂದು ಕಬ್ಬಿಣದ ರಾಡ್‌ನಿಂದ ಸವಾದ್ ತಲೆಗೆ ಹೊಡೆದು ಗಾಯಗೊಳಿಸಿದ್ದು, ಇದರಿಂದ ಅರೆಪ್ರಜ್ಞಾವಸ್ಥೆಯಲ್ಲಿದ್ದ ಸವಾದ್‌ರನ್ನು ದುಷ್ಕರ್ಮಿಗಳು ರಸ್ತೆ ಬದಿ ಬಿಟ್ಟು ಪರಾರಿಯಾಗಿದ್ದಾರೆ ಎನ್ನಲಾಗಿದೆ. ರಸ್ತೆ ಬದಿ ಬಿದ್ದಿದ್ದ ಸವಾದ್‌ರನ್ನು ಸ್ಥಳೀಯರು ಮೊದಲು ಉಪ್ಪಳದ ಆಸ್ಪತ್ರೆಗೂ ಬಳಿಕ ಮಂಗಳೂರಿನ ಆಸ್ಪತ್ರೆಗೆ ತಲುಪಿಸಿದ್ದಾರೆ. ಪತ್ವಾಡಿಯ ಇರ್ಫಾನ್ ಹಾಗೂ ಅನಸ್ ಎಂಬವರು ತನ್ನನ್ನು ಉಪಾಯದಿಂದ ಕರೆದೊಯ್ದು ಹಲ್ಲೆಗೈದಿರುವುದಾಗಿ ಸವಾದ್ ತಿಳಿಸಿದ್ದಾರೆ. ಮಾದಕವಸ್ತು ಮಾರಾಟವನ್ನು ವಿರೋಧಿಸಿದ ದ್ವೇಷ ಹಲ್ಲೆಗೈಯ್ಯಲು ಕಾರಣ ಎನ್ನಲಾಗಿದೆ. ಈ ಬಗ್ಗೆ ಕುಂಬಳೆ ಪೊಲೀಸರಿಗೆ ಮಾಹಿತಿ ಲಭಿಸಿದ್ದು, ಆದರೆ ದೂರು ಲಭಿಸದ ಹಿನ್ನೆಲೆಯಲ್ಲಿ ಕೇಸು ದಾಖಲಿಸಿಲ್ಲವೆನ್ನಲಾಗಿದೆ. ಸವಾದ್ ಹಾಗೂ ಹಲ್ಲೆಗೈದ ವ್ಯಕ್ತಿಗಳ ಮಧ್ಯೆ ಪೂರ್ವದ್ವೇಷವಿತ್ತೆಂದೂ ಪೊಲೀಸರು ತಿಳಿಸಿದ್ದಾರೆ.

ಗಣಿಗಾರಿಕೆ: ಕಾಸರಗೋಡು ಜಿಲ್ಲೆಯ 5 ಕೇಂದ್ರಗಳಿಗೆ ವಿಜಿಲೆನ್ ದಾಳಿ: ವ್ಯಾಪಕ ಅವ್ಯವಹಾರ ಪತ್ತೆ

ಕಾಸರಗೋಡು: ಮಣ್ಣು ಗಣಿಗಾರಿಕೆಯಲ್ಲಿ ವ್ಯಾಪಕವಾದ ರೀತಿಯ ಕಾನೂನು ಉಲ್ಲಂಘನೆ, ಅವ್ಯವಹಾರ ಭ್ರಷ್ಟಾಚಾರ ಹಾಗೂ ಅಕ್ರಮ ಮಣ್ಣು ಸಾಗಾಟ ನಡೆಯುತ್ತಿದೆ ಎಂಬ ರೀತಿಯ ದೂರುಗಳು ಲಭಿಸಿರುವ ಹಿನ್ನೆಲೆಯಲ್ಲಿ ಅದನ್ನು ಪತ್ತೆಹಚ್ಚಲು ವಿಜಿಲೆನ್ಸ್ ತಂಡ ಸೋಮವಾರ ಆಪರೇಷನ್ ಅರ್ತ್ ಗಾರ್ಡ್ ಎಂಬ ಹೆಸರಲ್ಲಿ ಜಿಲ್ಲೆಯ ಐದು ಕೇಂದ್ರಗಳಿಗೆ ದಿಢೀರ್ ದಾಳಿ ನಡೆಸಿ ಪರಿಶೀಲನೆ ನಡೆಸಿದೆ. ಅದರಂತೆ ಜಿಲ್ಲಾ ಜಿಯೋಲಜಿಕ್ (ಭೂವಿಜ್ಞಾನ) ಕಚೇರಿ ಹಾಗೂ ಕುಂಬಳೆ, ಮಡಿಕ್ಕೈ, ಕಯ್ಯೂರು– ಚೀಮೇನಿ ಮತ್ತು ಚೆರುವತ್ತೂರು ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಗೊಳಪಟ್ಟ ಐದು ಕೇಂದ್ರಗಳಿಗೆ ವಿಜಿಲೆನ್ಸ್ ತಂಡ ಈ ರೀತಿಯ ಮಿಂಚಿನ ದಾಳಿ ಮತ್ತು ಪರಿಶೀಲನೆ ನಡೆಸಿದೆ. ಕೆಲವೆಡೆಗಳಲ್ಲಿ ಪರ್ಮಿಟ್ ಪ್ರಕಾರ ನೀಡಲಾಗಿರುವ ಅನುಮತಿಗಿಂತಲೂ ಹೆಚ್ಚಾಗಿ ಮಣ್ಣು ಅಗೆದು ಸಾಗಿಸಲಾಗಿದೆ. ಡೆವಲಪ್‌ಮೆಂಟ್ ಪರ್ಮಿಟ್ ನೀಡಲಾದ ಕೆಲವು ಸ್ಥಳಗಳಲ್ಲಿ ಮಣ್ಣು ತೆಗೆದು ಸಾಗಿಸಲಾಗಿದೆಯೇ ವಿನಃ ಅಲ್ಲಿ ಈ ತನಕ ಯಾವುದೇ ರೀತಿಯ ನಿರ್ಮಾಣ ಕೆಲಸಗಳನ್ನು ಆರಂಭಿಸದೇ ಇರುವುದನ್ನು ಪರಿಶೀಲನೆಯಲ್ಲಿ ಪತ್ತೆಹಚ್ಚಲಾಗಿದೆ. ವಿಜಿಲೆನ್ಸ್ ಡಿವೈಎಸ್‌ಪಿ ವಿ.ಉಣ್ಣಿಕೃಷ್ಣನ್‌ರ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು.

ಕತ್ತಿಯಿಂದ ಕಡಿದು ಕೊಲೆ ಯತ್ನ

ಬೆಳ್ತಂಗಡಿ : ಕುಡಿದ ಮತ್ತಿನಲ್ಲಿ ತಂದೆ–ಮಗನ ನಡುವೆ ನಡೆದ ಗಲಾಟೆ ಕತ್ತಿಯಿಂದ ಕಡಿದು ಕೊಲೆ ಯತ್ನದವರೆಗೂ ಹೋಗಿದ್ದು. ಸದ್ಯ ತಂದೆ ಉಜಿರೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಮಗನನ್ನು ಬೆಳ್ತಂಗಡಿ ಪೊಲೀಸರು ಬಂಧಿಸಿದ್ದಾರೆ. ಬೆಳ್ತಂಗಡಿ ತಾಲೂಕಿನ ಉಜಿರೆ ಗ್ರಾಮದ ಮಣಿಕೆ ನಿವಾಸಿ ಗಾರೆಕೆಲಸ ಮಾಡುತ್ತಿರುವ ನಾರಾಯಣ (52) ಮತ್ತು ಟಿಂಬರ್ ಕೆಲಸ ಮಾಡುತ್ತಿದ್ದ ಮಗ ಭರತ್ (25) ನಡುವೆ ಮನೆಯಲ್ಲಿರುವಾಗ ಏ.19 ರಂದು ರಾತ್ರಿ ಸುಮಾರು 7.30 ಕ್ಕೆ ಕುಡಿದ ಮತ್ತಿನಲ್ಲಿ ಇಬ್ಬರ ನಡುವೆ ಗಲಾಟೆ ನಡೆದಿದೆ. ಈ ನಡುವೆ ಮನೆಯ ಹೊರಭಾಗದಲ್ಲಿದ್ದ ತಂದೆಗೆ ಕತ್ತಿಯಿಂದ ಕುತ್ತಿಗೆ ಮತ್ತು ಕೈಗೆ ಕಡಿದಿದ್ದಾನೆ. ತಕ್ಷಣ ಹತ್ತಿರದ ಮನೆಯವರು ಉಜಿರೆ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಬಗ್ಗೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳ್ತಂಗಡಿ ಪ್ರಭಾರ ಸಬ್ ಇನ್ಸ್‌ಪೆಕ್ಟರ್ ಸಿಖಂದರ್ ಪಾಷ ನೇತೃತ್ವದ ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿರುವಾಗ ಆರೋಪಿ ಮಗ ಭರತ್ (25) ಏ.20 ರಂದು ಬೆಳಗ್ಗೆ ಉಜಿರೆಯಲ್ಲಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿ ರಾತ್ರಿ ಬಂಟ್ವಾಳ ನ್ಯಾಯಾಧೀಶರ ಮನೆಗೆ ಹಾಜರುಪಡಿಸಿದ್ದು ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ದಿಶಾ ಸಭೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಾಗಿ ಭೂಸ್ವಾಧೀನ ಹೆಸರಿನಲ್ಲಿ ಅವ್ಯವಹಾರವಾದ ಬಗ್ಗೆ ಗಂಭೀರ ಚರ್ಚೆ

ಸಮಗ್ರ ಪರಿಶೀಲನೆಗೆ ಸಂಸದ ಚೌಟ ಸೂಚನೆ

ಮಂಗಳೂರು: ರಾಷ್ಟ್ರೀಯ ಹೆದ್ದಾರಿಗಾಗಿ ಸ್ವಾಧೀನಗೊಂಡ ಭೂಮಿ ಸಮರ್ಪಕವಾಗಿ ಬಳಕೆಯಾಗಿದೆಯೇ ಎಂಬುದರ ಕುರಿತು ಸಮಗ್ರ ಪರಿಶೀಲನೆಯಾಗಬೇಕು. ಹೆದ್ದಾರಿ ಅಧಿಕಾರಿಗಳು ಈ ನಿಟ್ಟಿನಲ್ಲಿ ವಿಶೇಷ ಒತ್ತು ನೀಡಬೇಕು ಎಂದು ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಸೂಚನೆ ನೀಡಿದ್ದಾರೆ.

ದ.ಕ.ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ನಡೆದ ದ.ಕ. ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ (ದಿಶಾ) ಪ್ರಸ್ತಾಪಗೊಂಡ ಭೂ ಅವ್ಯವಹಾರ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ ಸಂಸದರು, ರಾಷ್ಟ್ರೀಯ ಹೆದ್ದಾರಿ ವ್ಯಾಪ್ತಿಯಲ್ಲಿ ಸ್ವಾಧೀನಗೊಂಡ ಭೂಮಿಯು ನಿಜವಾಗಿಯೂ ಸ್ವಾಧೀನವಾಗಿದೆಯೇ ಎಂಬುದು ಖಚಿತವಾಗಬೇಕು ಎಂದರು.

44ಲಕ್ಷ ರೂ.ನೀಡಿದರೂ ಸ್ವಾಧೀನವಾಗದ ಭೂಮಿ

ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಶಾಸಕ ಹರೀಶ್ ಪೂಂಜ ಅವರು, ಬೆಳ್ತಂಗಡಿಯ ಕುವೆಟ್ಟು ಗ್ರಾ.ಪಂ. ವ್ಯಾಪ್ತಿಯಲ್ಲಿ ರಸ್ತೆ ಬದಿಯಲ್ಲಿ ಮನೆ ಇರುವ ಭೂ ಸ್ವಾಧೀನಕ್ಕಾಗಿ ಫಲಾನುಭವಿಗೆ 44 ಲಕ್ಷ ರೂ.ಗಳ ಪರಿಹಾರ ನೀಡಲಾಗಿದೆ. ಆದರೆ ಒಂದು ಸೆಂಟ್ಸ್ ಭೂಮಿಯೂ ಭೂಸ್ವಾಧೀನದ ಉದ್ದೇಶಕ್ಕೆ ಬಳಕೆಯಾಗಿಲ್ಲ. ಆದರೆ ಫಲಾನುಭವಿ ಪಂಚಾಯತ್‌ನಿಂದ ಮನೆ ರಿಪೇರಿಗೆ ಪರವಾನಿಗೆ ಪಡೆದು ಇರುವ ಕಟ್ಟಡದಲ್ಲಿ ಮತ್ತೆ ಒಂದು ಮಹಡಿಯ ಮನೆ ನಿರ್ಮಿಸಿ ಕೊಂಡಿದ್ದಾರೆ. ಇದಕ್ಕೆ ಯಾವ ರೀತಿಯಲ್ಲಿ ಪರವಾನಿಗೆ ನೀಡಲಾಗಿದೆ ಎಂಬುದು ಅರ್ಥವಾಗುತ್ತಿಲ್ಲ. ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯ ರಸ್ತೆ ಅಭಿವೃದ್ಧಿ ಸಂದರ್ಭ ಇಂತಹ ಹಲವು ಪ್ರಕರಣಗಳು ನಡೆದಿರುವ ಸಾಧ್ಯತೆ ಇದೆ. ಈ ಮೂಲಕ ಸರ್ಕಾರದ ಬೊಕ್ಕಸಕ್ಕೆ ಸಾಕಷ್ಟು ಹಣ ಪೋಲಾಗಿರಬಹುದು. ಈ ಬಗ್ಗೆ ಡಿಡಿಎಲ್‌ಆರ್ ಮೂಲಕ ಪರಿಶೀಲನೆ ನಡೆಸಿ ಕ್ರಮ ಆಗಬೇಕು ಎಂದು ಹರೀಶ್ ಪೂಂಜ ಒತ್ತಾಯಿಸಿದರು.

ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಪ್ರತಿಕ್ರಿಯಿಸಿ, ಹೆದ್ದಾರಿಗಳ 40 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಕಟ್ಟಡ, ನಿರ್ಮಾಣ ವ್ಯವಸ್ಥೆ ಮಾಡುವಂತಿಲ್ಲ. ನಿರ್ದಿಷ್ಟ ಪ್ರಕರಣದಲ್ಲಿ ಅಂತಹ ಅವ್ಯವಹಾರ ಆಗಿದ್ದರೆ ಆ ಕಟ್ಟಡ ನೆಲಸಮಗೊಳಿಸಲು ಕ್ರಮ ವಹಿಸಲಾಗುವುದು ಎಂದರು.

ಸೆಂಟ್ರಲ್ ರೈಲ್ವೆ ನಿಲ್ದಾಣ ಅಭಿವೃದ್ಧಿಗೆ ಕ್ರಿಯಾ ಯೋಜನೆ

ರೈಲ್ವೆ ಇಲಾಖೆಯು ಮಂಗಳೂರು ಸೆಂಟ್ರಲ್ ರೈಲ್ವೇ ನಿಲ್ದಾಣದಲ್ಲಿ ಈ ಹಿಂದೆ 340 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಮುಂದಾಗಿದ್ದ ಪ್ರಸ್ತಾವನೆಯನ್ನು ಸದ್ಯ 95 ಕೋಟಿ ರೂ.ಗಳಿಗೆ ಸೀಮಿತಗೊಳಿಸಿ ಕ್ರಿಯಾ ಯೋಜನೆ ರೂಪಿಸಿದೆ.



ಕಸ ಎಸೆಯುವವರ ವಿರುದ್ಧ ಕ್ರಮವಾಗಲಿ

ಫರಂಗಿಪೇಟೆಯಿಂದ ಮಂಗಳೂರಿಗೆ ಬರುವ ದಾರಿಯಲ್ಲಿ ಹೆದ್ದಾರಿ ರಸ್ತೆಯಲ್ಲಿ ಅಲ್ಲಲ್ಲಿ ತ್ಯಾಜ್ಯವನ್ನು ಎಸೆಯಲಾಗುತ್ತಿದೆ. ಜಿಲ್ಲೆಯ ವಿವಿಧೆಡೆ ಹೆದ್ದಾರಿ ಬದಿಯಲ್ಲಿ ಇದು ಮುಂದುವರಿದಿದ್ದು, ಇದರ ವಿರುದ್ಧ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಬ್ಲ್ಯಾಕ್ ಸ್ಪಾಟ್‌ಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕು. ಅದಕ್ಕೆ ಅಗತ್ಯವಾದ ಕ್ರಿಯಾ ಯೋಜನೆಯನ್ನು ಸಲ್ಲಿಸಿ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ರಾಷ್ಟ್ರೀಯ ಹೆದಾರಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ರೈಲ್ವೆಯ ಪಾಲಕ್ಕಾಡ್ ವಿಭಾಗದ ಅಧಿಕಾರಿಗಳು ಈ ಮಾಹಿತಿ ನೀಡಿದರು.

ಈ ಹಿಂದೆ, 340 ಕೋಟಿ ರೂ.ಗಳ ವೆಚ್ಚದಲ್ಲಿ ಮಂಗಳೂರು ಸೆಂಟ್ರಲ್ ರೈಲ್ವೆ ನಿಲ್ದಾಣದ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ಪ್ರಸ್ತಾವಿಸಲಾಗಿತ್ತು. ಅದನ್ನು ರೈಲ್ವೆ ಮಂಡಳಿಯು 100 ಕೋಟಿ ರೂ.ನೊಳಗೆ ಕಡಿತಗೊಳಿಸಿದ್ದು, 95 ಕೋಟಿ ರೂ.ಗಳ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ. ಯೋಜನೆಯು ಅಂತಿಮ ಪರಿಶೀಲನೆಗಾಗಿ ವಲಯ ಪ್ರಧಾನ ಕಚೇರಿಯಲ್ಲಿದ್ದು, ಯೋಜನೆಯನ್ನು ಇಂಜಿನಿಯರಿಂಗ್, ಖರೀದಿ ಮತ್ತು ನಿರ್ಮಾಣ (ಇಪಿಸಿ) ಮಾದರಿಯಲ್ಲಿ ಕಾರ್ಯಗತಗೊಳಿಸುವ ಸಾಧ್ಯತೆಯಿದೆ. ಪುನರಾಭಿವೃದ್ಧಿ ಯೋಜನೆಯಡಿಯಲ್ಲಿ ಲಿಫ್ಟ್‌ಗಳು, ಎಸ್ಕಲೇಟರ್‌ಗಳು, ಪಾರ್ಕಿಂಗ್ ಮತ್ತು ಇತರ ಸೌಲಭ್ಯಗಳು ಸೇರಿದಂತೆ ವಿವಿಧ ಕಾಮಗಾರಿಗಳನ್ನು ಒದಗಿಸಲಾಗುವುದು ಎಂದು ರೈಲ್ವೇ ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು.

> ಕೇಂದ್ರ ಸರ್ಕಾರದ ಯೋಜನೆಗಳನ್ನು ಜಾರಿಗೆ ಮಾಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಜಲಜೀವನ್, ಆಯುಷ್ಮಾನ್ ಯೋಜನೆಗಳ ಕುರಿತಂತೆ ರಾಜ್ಯ ಸರ್ಕಾರ ಅಸಡ್ಡೆ ತೋರಿಸುತ್ತಿದೆ. ಮಹಿಳಾ ಮೀಸಲಾತಿ ಮಸೂದೆ ಕುರಿತಂತೆ ತಪ್ಪು ವಿವರ ನೀಡಿ ಮಹಿಳೆಯರಿಗೆ ಅನ್ಯಾಯ ಮಾಡಿರುವಂತೆ ಕೇಂದ್ರ ಸರ್ಕಾರದ ಯೋಜನೆಗಳ ಜಾರಿಯಲ್ಲಿಯೂ ರಾಜ್ಯ ಸರಕಾರ ಜನರಿಗೆ ಅನ್ಯಾಯ ಮಾಡುವುದು ಬೇಡ.
> ■ ಕ್ಯಾ. ಬ್ರಿಜೇಶ್ ಚೌಟ ಸಂಸದ

ಪ್ರಾಕೃತಿಕ ವಿಕೋಪ ಎದುರಿಸಲು ಸಿದ್ಧರಾಗಿ

ಮಳೆಗಾಲದಲ್ಲಿ ಎದುರಾಗುವ ಪ್ರಾಕೃತಿಕ ವಿಕೋಪಗಳನ್ನು ಎದುರಿಸಲು ಜಿಲ್ಲಾಡಳಿತ ಅಗತ್ಯ ಸಿದ್ಧತೆಗಳನ್ನು ಆರಂಭಿಸಬೇಕು. ರಾಜಾ ಕಾಲುವೆಗಳ ಹೂಳೆತ್ತುವಿಕೆ ಕಾಮಗಾರಿ, ಒಳಚರಂಡಿ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡುವ ಕಾರ್ಯ ಸೇರಿದಂತೆ ಅಗತ್ಯ ಕಾರ್ಯಗಳು ಈಗಿಂದೀಗಲೇ ಆರಂಭವಾಗಬೇಕು. ಅಧಿಕಾರಿಗಳು ಸಮಸ್ಯೆ ಎದುರಾಗುವ ಪ್ರದೇಶಗಳ ಪಟ್ಟಿಯನ್ನು ತಯಾರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಸೂಚನೆ ನೀಡಿದರು.

ಕೂಳೂರಿನಲ್ಲಿನಡೆಯುತ್ತಿರುವಹೊಸಮೇಲ್ಸೇತುವೆ ಕಾಮಗಾರಿ ಕುಂಟುತ್ತಾ ಸಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸಂಸದರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಆದಷ್ಟು ಶೀಘ್ರ ಕಾಮಗಾರಿ ಮುಗಿಸಿ ಲೋಕಾರ್ಪಣೆಗೆ ದಿನಾಂಕ ನಿಗದಿಗೊಳಿಸುವಂತೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.

ಮಹಾಕಾಳಿ ಪಡ್ಪು ಪಂಪ್ ಸಮಸ್ಯೆ!

ಮಹಾಕಾಳಿಪಡ್ಪು ಬಳಿ ರೈಲ್ವೆ ಕೆಳ ಸೇತುವೆ ಕಾಮಗಾರಿ ಪೂರ್ಣಗೊಂಡು ಸ್ಮಾರ್ಟ್ ಸಿಟಿಯಿಂದ ಒಳಚಂರಡಿ ವ್ಯವಸ್ಥೆಯನ್ನೂ ಮಾಡಲಾಗಿದೆ. ಆದರೆ ಮಳೆಗಾಲದಲ್ಲಿ ಕೃತಕ ನೆರೆ ಸಂಭವಿಸಿದಲ್ಲಿ ನೀರೆತ್ತಲು ಪಂಪ್ ವ್ಯವಸ್ಥೆ ಇಲ್ಲ ಎಂದು ಸಭೆಯಲ್ಲಿ ಸ್ಮಾರ್ಟ್ ಸಿಟಿ ಅಧಿಕಾರಿ ಅರುಣ್ ಪ್ರಭಾ ತಿಳಿಸಿದರು.

ಈ ಸಂದರ್ಭ ಅಸಮಾಧಾನಗೊಂಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಕೋಟ್ಯಂತರ ರೂ. ಖರ್ಚು ಮಾಡಿ ಕಾಮಗಾರಿ ನಡೆಸಿರುವಾಗ ಪಂಪ್ ಖರೀದಿಸಲು ಆಗುವುದಿಲ್ಲ ಎಂದರೆ ಏನರ್ಥ. ಅದಕ್ಕೆ ಪಾಲಿಕೆಯಿಂದ ಯಾಕೆ ಹಣ ಕೊಡಬೇಕು ಎಂದು ಪ್ರಶ್ನಿಸಿದರು.

ಸಭೆಯಲ್ಲಿ ಜಿ.ಪಂ. ಸಿಇಒ ನರ್ವಾಡೆ ವಿನಾಯಕ ಕರ್ಬಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್ ಉಪಸ್ಥಿತರಿದ್ದರು.

ಪೊಲೀಸ್ ಸಶಸ್ತ್ರ ಮೀಸಲು ಪಡೆಯ ಕಚೇರಿ ನಿರ್ಮಾಣ ಸ್ಥಳಕ್ಕೆ ಡಿಜಿ ಭೇಟಿ



ಬಂಟ್ವಾಳ: ತಾಲೂಕಿನ ಕಾವಳಪಡೂರು ಗ್ರಾಮದ ಬರ್ಕಟ ಎಂಬಲ್ಲಿ ಪೊಲೀಸ್ ಸಶಸ್ತ್ರ ಮೀಸಲು ಪಡೆಯ ಕಚೇರಿ ನಿರ್ಮಾಣಕ್ಕೆ ಮೀಸಲಿರಿಸಲಾಗಿದ್ದ ಜಮೀನಿಗೆ ಮಂಗಳವಾರ ರಾಜ್ಯ ಪೊಲೀಸ್ ಮಹಾನಿರ್ದೇಶಕರಾದ (ಡಿ.ಜಿ.) ಸಲೀಂ ಅವರು ಭೇಟಿ ನೀಡಿ ಪರಿಶೀಲಿಸಿದರು.

ಸಶಸ್ತ್ರಮೀಸಲು ಪಡೆಯ ಕಚೇರಿ ಹಾಗೂ ಮೈದಾನ ನಿರ್ಮಾಣಕ್ಕಾಗಿ ಕಾವಳಪಡೂರುಗ್ರಾಮದ ಬರ್ಕಟ ಎಂಬಲ್ಲಿ ಸುಮಾರು 14 ಎಕರೆ ಜಮೀನು ಮಂಜೂರಾಗಿದ್ದು, ಇದನ್ನು ಪರಿಶೀಲಿಸಿದ ಅವರು ಜಿಲ್ಲೆಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಬಳಿಕ ಬೆಂಜನಪದವಿನಲ್ಲಿರುವ ಸ್ಪೆಷಲ್ ಆಕ್ಷನ್ ಫೋರ್ಸ್ (ಎಸ್.ಐ.ಎಫ್) ಕಚೇರಿಗೆ ಬೇಟಿ ನೀಡಿ ಅಲ್ಲಿನ ವ್ಯವಸ್ಥೆಗಳ ಬಗ್ಗೆ ವೀಕ್ಷಿಸಿದರು. ಈ ಸಂದರ್ಭದಲ್ಲಿ ಐಜಿಪಿ ಅಮಿತ್ ಸಿಂಗ್, ಎಸ್. ಪಿ.ಡಾ। ಅರುಣ್ ಹಾಗೂ ಹೌಸಿಂಗ್ ಬೋರ್ಡ್ ಸೊಸೈಟಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ರೌಡಿಶೀಟರ್ ಆರೀಫ್ ಹತ್ಯೆ ಪ್ರಕರಣ

15ಕ್ಕೂ ಅಧಿಕ ಆರೋಪಿಗಳು ಬಾಗಿ

ಮಂಗಳೂರು: ಇತ್ತೀಚೆಗೆ ತೊಕ್ಕೊಟ್ಟು ಮೇಲ್ಸೇತುವೆಯಲ್ಲಿ ನಡೆದ ರೌಡಿಶೀಟರ್ ಆರೀಫ್ ಹತ್ಯೆ ಪ್ರಕರಣದಲ್ಲಿ 15ಕ್ಕೂ ಅಧಿಕ ಮಂದಿ ಆರೋಪಿಗಳು ಭಾಗಿಯಾಗಿರುವುದು ಸ್ಪಷ್ಟವಾಗಿದೆ. ಈಗಾಗಲೇ 10 ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ತನಿಖೆ ಕೈಗೆತ್ತಿಕೊಂಡಿರುವ ಪೊಲೀಸರಿಗೆ ಇದೀಗ ಮತ್ತಷ್ಟು ಮಾಹಿತಿ ಲಭ್ಯವಾಗಿದೆ. ಬಂಧಿತರನ್ನು ವಿಚಾರಣೆ ಮತ್ತು ತನಿಖೆಗಾಗಿ ಪೊಲೀಸ್ ವಶಕ್ಕೆ ಪಡೆದುಕೊಳ್ಳಲಾಗಿತ್ತು. ಪೊಲೀಸ್ ಕಸ್ಟಡಿ ಅವಧಿ ಪೂರ್ಣಗೊಂಡಿದ್ದು, ಇದೀಗ ನ್ಯಾಯಾಂಗ ಬಂಧನಕ್ಕೆ ಮರು ಹಸ್ತಾಂತರಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.



ತನಿಖೆಯಲ್ಲಿ ವೇಳೆ ಐವರು ಆರೋಪಿಗಳ ಪಾತ್ರವೂ ಬೆಳಕಿಗೆ ಬಂದಿದೆ. ಈ ಪೈಕಿ ಕೆಲವರು ಪ್ರಸ್ತುತ ವಿದೇಶದಲ್ಲಿದ್ದಾರೆ. ಅವರನ್ನು ಬಂಧಿಸುವ ನಿಟ್ಟಿನಲ್ಲಿ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದವರು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ–ಕೋಕಾ ಜಾರಿಗೊಳಿಲಾಗಿದ್ದು, ಇದು ಎಲ್ಲ ಆರೋಪಿಗಳೂ ಅನ್ವಯವಾಗಲಿದೆ. ಇದಕ್ಕೆ ಸಂಬಂಧಿಸಿದ ಆದೇಶಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಅನಂತರ, ವಿಚಾರಣೆಗೆ ಪ್ರಕರಣವನ್ನು ಮೈಸೂರು ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಲಾಗುತ್ತದೆ.

ಕೆ–ಕೋಕಾ ಅಡಿಯಲ್ಲಿ ಸಂಘಟಿತ ಅಪರಾಧ ಸಂಘಟನೆಯ ಪಾಲುದಾರರು ಅಥವಾ ಅದರೊಂದಿಗೆ ಗುರುತಿಸಿಕೊಳ್ಳುವುದು ಕೂಡಾ ಅಪರಾಧವಾಗಿದ್ದು, ಅದಕ್ಕೂ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಹತ್ಯೆಯಲ್ಲಿ ಪ್ರತಿ ಆರೋಪಿಗಳ ಪಾತ್ರಕ್ಕೆ ಗಂಭೀರ ಸೆಕ್ಷನ್‌ಗಳನ್ನು ಹಾಕಲಾಗುವುದು ಎಂದು ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಬಳ್ಪ ಗ್ರಾಮ ವ್ಯಾಪ್ತಿಯಲ್ಲಿ ಗಾಳಿಮಳೆಗೆ ಅಪಾರ ಹಾನಿ

ಸುಬ್ರಹ್ಮಣ್ಯ: ಬಳ್ಪ ಗ್ರಾಮ ವ್ಯಾಪ್ತಿಯಲ್ಲಿ ಸೋಮವಾರ ಸಂಜೆ ಬೀಸಿದ ಭೀಕರ ಬಿರುಗಾಳಿಗೆ ಅಪಾರ ಹಾನಿಯುಂಟಾಗಿದೆ. ಬಳ್ಪ ಗ್ರಾಮದ ಚಿತ್ತರಂಜನ್ ಜೋಗಿ ಮತ್ತು ಹರಿಪ್ರಸಾದ್ ಉಕ್ಕಿನಮನೆ ಸೇರಿದಂತೆ ಹಲವು ಮನೆಗಳ ಮೇಲೆ ಮರ ಬಿದ್ದು ಅಪಾರ ಹಾನಿ ಸಂಭವಿಸಿದೆ.

ಎಣ್ಣೆಮಜಲು ಭಾಗದಲ್ಲಿ ವಿದ್ಯುತ್ ಟಿಸಿಯ ಮೇಲೆ ಮರ ಬಿದ್ದು ಟಿಸಿಗೆ ಹಾನಿಯಾಗಿದೆ. ರಸ್ತೆ ಬದಿಯ ಹಲವು ಮರಗಳು ಧರಾಶಾಹಿಯಾಗಿದೆ. ಮರಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದು ಹಲವಾರು ವಿದ್ಯುತ್ ಕಂಬಗಳು ತುಂಡಾಗಿರುವುದಾಗಿ ಗ್ರಾಮಸ್ಥರಾದ ಸುಬ್ರಹ್ಮಣ್ಯ ಕುಳ ತಿಳಿಸಿದ್ದಾರೆ.



ಚಿತ್ತರಂಜನ್ ಜೋಗಿ ಅವರ ಮನೆಯ ಮೇಲೆ ಮರ ಬಿದ್ದು ಅಪಾರ ಹಾನಿ ಸಂಭವಿಸಿದೆ

ಭೀಕರ ಗಾಳಿ ಮಳೆ : ಯೇನೆಕಲ್ಲಿನ ಅಜಿಪ್ರೋಳಿ ಬಳಿ ಅಪಾರ ಹಾನಿ



ಸುಬ್ರಹ್ಮಣ್ಯ: ಸೋಮವಾರ ಸಂಜೆ ಬೀಸಿದ ಭೀಕರ ಗಾಳಿ ಮಳೆಗೆ ಯೇನೆಕಲ್ಲು ಗ್ರಾಮದಲ್ಲಿ ಅವಾಂತರವನ್ನೇ ಸೃಷ್ಟಿಸಿ ಅಪಾರವಾದ ನಷ್ಟವನ್ನುಂಟು ಮಾಡಿದೆ. ಯೇನೆಕಲ್ಲು ಗ್ರಾಮದ ಅಜಿಪ್ರೋಳಿ ಎಂಬಲ್ಲಿ ಉದಯಕುಮಾರ್, ಮತ್ತು ಉಮೇಶ್ ಎಂಬವರ ಮನೆಯ ಮೇಲೆ ಮರ ಬಿದ್ದು ಅಪಾರ ಹಾನಿಯುಂಟಾಗಿದೆ. ಇದರಿಂದ ಮನೆಯ ಚಾವಣಿ ಸಂಪಯ ಧ್ವಂಸವಾಗಿದೆ. ಅಲ್ಲದೆ ಭಾರೀ ಗಾಳಿಗೆ. ಆ ಭಾಗದ ಕೃಷಿಕರ ಹಲವು ತೋಟಗಳಲ್ಲಿ ಅಡಿಕೆ ಮರಗಳು, ಮುರಿದಿದೆ, ವಿದ್ಯುತ್ ಕಂಬಗಳು ಮುರಿದು ಬಿದ್ದಿದೆ.

ಗಾಳಿ –ಮಳೆ: ಕುಂಬಳೆ ಪರಿಸರದಲ್ಲಿ ವಿವಿಧೆಡೆ ಅಪಾರ ಹಾನಿ, ನಷ್ಟ

ಕುಂಬಳೆ: ಸೋಮವಾರ ರಾತ್ರಿ ಸುರಿದ ಮಳೆಯೊಂದಿಗೆ ಬೀಸಿದ ಬಿರು ಗಾಳಿಯಿಂದ ವಿವಿಧೆಡೆ ಹಾನಿ ಸಂಭವಿಸಿದೆ. ಕುಂಬಳೆ ಮಾವಿನಕಟ್ಟೆಯಲ್ಲಿ ರಮೇಶ್ ಎಂಬವರ ಹೆಂಚಿನ ಮನೆ ಮೇಲೆ ತೆಂಗಿನ ಮರವೊಂದು ಬಿದ್ದಿದೆ. ಇದರಿಂದ ಮನೆಗೆ ವ್ಯಾಪಕ ಹಾನಿ ಉಂಟಾಗಿದ್ದು ಭಾರೀ ನಷ್ಟ ಉಂಟಾಗಿದೆ. ಮನೆಮಂದಿ ಅಪಾಯದಿಂದ ಪಾರಾಗಿದ್ದಾರೆ. ಕಂಚಿಕಟ್ಟೆಯಲ್ಲಿ ಸೇತುವೆ ಮೇಲೆ ತೆಂಗಿನ ಮರಬಿದ್ದ ಪರಿಣಾಮ ವಾಹನ ಸಂಚಾರಕ್ಕೆ ಅಡಚಣೆಯಾಗಿದೆ. ಅದೇ ರೀತಿ ಆರಿಕ್ಕಾಡಿ ಕುಟುಂಬ ಆರೋಗ್ಯ ಕೇಂದ್ರದ ಕಟ್ಟಡದ ಹೆಂಚು ಗಾಳಿಗೆ ಹಾರಿ ಹೋಗಿ ರಾಷ್ಟ್ರೀಯ ಹೆದ್ದಾರಿ ರಸ್ತೆ ಮೇಲೆ ಬಿದ್ದಿದೆ. ಅಲ್ಲದೆ ವಿವಿಧೆಡೆ ಮಳೆ ಸುರಿದಿದ್ದು ಇದರಿಂದ ತೀವ್ರಗೊಂಡ ಉಷ್ಣತೆಗೆ ಅಲ್ಪ ಶಮನ ಉಂಟಾದಂತಾಗಿದೆ.

ಏಪ್ರಿಲ್ 23, 24ರಂದು ಸಿಇಟಿ ಪರೀಕ್ಷೆ । ಉಡುಪಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ । ಅಧಿಕಾರಿಗಳು, ಕಾಲೇಜು ಪ್ರಾಂಶುಪಾಲರುಗಳು ಭಾಗಿ

ಯಾವುದೇ ರೀತಿಯ ಗೊಂದಲ ನಿರ್ಮಾಣವಾಗದಂತೆ ನೋಡಿಕೊಳ್ಳಿ: ಸ್ವರೂಪ

ಉಡುಪಿ : ಏಪ್ರಿಲ್ 23 ಮತ್ತು 24 ರಂದು ಜಿಲ್ಲೆಯಲ್ಲಿ ನಡೆಯಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ವಿದ್ಯಾರ್ಥಿ ಸ್ನೇಹಿಯಾಗಿ ಸುವ್ಯವಸ್ಥಿತವಾಗಿ ನಡೆಸಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಹೇಳಿದರು.

ಅವರು ಮಂಗಳವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ 2026 ನೇ ಸಾಲಿನ ಸಿಇಟಿ ಪರೀಕ್ಷೆ ಹಾಗೂ ದ್ವಿತೀಯ ಪಿ.ಯು.ಸಿ ಪರೀಕ್ಷೆ –2 ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿವಿಧ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗಾಗಿ ಏಪ್ರಿಲ್ 23 ಮತ್ತು 24 ರಂದು ಜಿಲ್ಲೆಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯು ನಡೆಯಲಿದ್ದು, ಪ್ರವೇಶಾತಿ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಪರೀಕ್ಷೆಯಲ್ಲಿ ಹಾಜರಾಗಿ ಗೊಂದಲಗಳಿಲ್ಲದ ರೀತಿಯಲ್ಲಿ ಪರೀಕ್ಷೆಯನ್ನು ಎದುರಿಸಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುವುದರೊಂದಿಗೆ ಪರೀಕ್ಷಾ ಪಾವಿತ್ರ್ಯತೆಯನ್ನು ಕಾಪಾಡಬೇಕು ಎಂದರು.

ಪ್ರಸಕ್ತಸಾಲಿನಸಿಇಟಿಪರೀಕ್ಷೆಗಳುಜಿಲ್ಲೆಯಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕಿನ 23 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, 8746 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಇದಕ್ಕಾಗಿ ಉಡುಪಿಯಲ್ಲಿ 11, ಕಾರ್ಕಳ 5 ಹಾಗೂ ಕುಂದಾಪುರದಲ್ಲಿ ತಲಾ 7 ಸೇರಿದಂತೆ ಒಟ್ಟು 23 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಗೊಂದಲವಾಗದಂತೆ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂದರು.

ಪರೀಕ್ಷೆಗಳು ಆರಂಭವಾಗುವ ಎರಡೂವರೆ ಗಂಟೆ ಮೊದಲೇ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು. ವಿದ್ಯಾರ್ಥಿಗಳ ಪರಿಶೋಧನೆ ಕಾರ್ಯವನ್ನು ಗೊಂದಲಗಳಿಗೆ ಅವಕಾಶವಿಲ್ಲದಂತೆ ನಡೆಸಿ, ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಗಳಿಗೆ ತೆರಳಲು ಅನುವು ಮಾಡಿಕೊಡಬೇಕೆಂದರು.



ಸಿಇಟಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದೊಳಗೆ ಯಾವುದೇ ರೀತಿಯ ವಾಚ್‌ಗಳು, ಮೊಬೈಲ್ ಸೇರಿದಂತೆ ಯಾವುದೇ ಇಲೆಕ್ಟ್ರಾನಿಕ್ ಉಪಕರಣಗಳು ಹಾಗೂ ಆಭರಣಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ ಎಂದರು.

ಪ್ರತೀ ಪರೀಕ್ಷಾ ಕೇಂದ್ರಕ್ಕೆ ವೀಕ್ಷಕರನ್ನು, ಕೊಠಡಿ ಮೇಲ್ವಿಚಾರಕರನ್ನು ನೇಮಿಸಲಾಗುವುದು ಎಂದ ಅವರು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀ. ಪ್ರದೇಶವನ್ನು ನಿಷೇಧಿತ ಸ್ಥಳವೆಂದು ಘೋಷಿಸಿ, ಸೂಕ್ತ ಪೊಲೀಸ್ ಭದ್ರತೆ ನೀಡುವಂತೆ ಪೊಲೀಸ್ ಇಲಾಖೆಗೆ ಹಾಗೂ ಮುಂಜಾಗ್ರತೆಯಾಗಿ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಆರೋಗ್ಯ ಸಹಾಯಕರನ್ನು ನೇಮಿಸುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ ಅವರು, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಓ.ಆರ್.ಎಸ್ ಪ್ಯಾಕೆಟ್‌ಗಳನ್ನು ಪರೀಕ್ಷಾ ಕೇಂದ್ರಗಳಲ್ಲಿ ದಾಸ್ತಾನು ಇಟ್ಟುಕೊಳ್ಳುವಂತೆ ತಿಳಿಸಿದರು.

ಪ್ರತಿಯೊಂದು ಪರೀಕ್ಷಾ ಕೊಠಡಿಯಲ್ಲಿ ಗಡಿಯಾರದ ವ್ಯವಸ್ಥೆಯನ್ನು ಮಾಡಬೇಕು. ಬೇಸಿಗೆ ಕಾಲದ ಹಿನ್ನೆಲೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದ ಅವರು, ಪರೀಕ್ಷಾ ದಿನದಂದು ಹಾಗೂ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ತಯಾರಾಗಲು ಅನುಕೂಲವಾಗುವಂತೆ ವಿದ್ಯುತ್ ಸಂಪರ್ಕ ವ್ಯತ್ಯಯವಾಗದಂತೆ ಎಚ್ಚರವಹಿಸುವಂತೆ ಮೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾವನ್ನು ಕಡ್ಡಾಯವಾಗಿ ಅಳವಡಿಸಬೇಕು. ವೆಬ್‌ಕಾಸ್ಟಿಂಗ್ ಸಹ ನಡೆಯಲಿದೆ ಎಂದ ಅವರು, ಸಿಇಟಿ ಪರೀಕ್ಷೆ ಕುರಿತ ಪ್ರಶ್ನೆಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳನ್ನು ಖಜಾನೆಯಲ್ಲಿ ಸೂಕ್ತ ಪೊಲೀಸ್ ಭದ್ರತೆಯಲ್ಲಿ ಇಡುವಂತೆ ತಿಳಿಸಿದ ಅವರು, ಖಜಾನೆಗಳಲ್ಲಿ ಸಿಸಿಟಿವಿ ವ್ಯವಸ್ಥೆ ಅಳವಡಿಸುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಎ.ಎಸ್.ಪಿ ಸುಧಾಕರ್ ನಾಯಕ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಉದಯ್ ಕುಮಾರ್ ಶೆಟ್ಟಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಾರುತಿ, ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲೆಯ ವಿವಿಧ ಕಾಲೇಜು ಪ್ರಾಂಶುಪಾಲರುಗಳು, ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿರುವ ಎಲ್ಲಾ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 36° 26° | ಉಡುಪಿ 33° 27°


ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 22, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಸಹಕಾರಿ ಸಂಘಗಳಿಂದ ಗ್ರಾಮೀಣ ಆರ್ಥಿಕತೆಯಲ್ಲಿ ಸ್ವಾವಲಂಬನೆ: ಕೋಟ


ಪುಟ 5
ಉತ್ತಮ ಸಮಾಜ ನಿರ್ಮಾಣದಲ್ಲಿ ಮಾತೆಯರ ಪಾತ್ರ ದೊಡ್ಡದು

ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಳ ಜಾತ್ರೆ : ಚಿನ್ನದ ಪಲ್ಲಕ್ಕಿಯಲ್ಲಿ ಮೆರವಣಿಗೆ


ಪುರಾಣ ಪ್ರಸಿದ್ಧ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ ನಡೆಯುತ್ತಿದ್ದು, ಆರಾಟದ ಅಂಗವಾಗಿ ಎಕ್ಕಾರುವರೆಗೆ ಚಿನ್ನದ ಪಲ್ಲಕ್ಕಿಯಲ್ಲಿ ದೇವರು ಮೆರವಣಿಗೆಯಲ್ಲಿ ಸಾಗಿ ನಂತರ ಕಟ್ಟೆಪೂಜೆಗಳ ನಡೆದು ರಾತ್ರಿ ಸಂಭ್ರಮದ ಮಹಾ ರಥೋತ್ಸವ ನಡೆಯಿತು. ಸಹಸ್ರಾರು ಭಕ್ತರು ಭಾಗವಹಿಸಿ ಕೃತಾರ್ಥರಾದರು.

ಸುತ್ತ ಮುತ್ತ

ಅಪ್ರಾಪ್ತೆಗೆ ನಿಶ್ಚಿತಾರ್ಥ: ಕಾರ್ಯಕ್ರಮ ರದ್ದು ಮಾಡಿದ ಅಧಿಕಾರಿಗಳು

ಕುಶಾಲನಗರ: ಕುಶಾಲನಗರದ ಮುಳ್ಳುಸೋಗೆ ಗ್ರಾಮದಲ್ಲಿ ಅಪ್ರಾಪ್ತೆಗೆ ನಡೆಸಲು ಉದ್ದೇಶಿಸಿದ್ದ ನಿಶ್ಚಿತಾರ್ಥ ಕಾರ್ಯಕ್ರಮವನ್ನು ಅಧಿಕಾರಿಗಳು ಮೊಟಕುಗೊಳಿಸಿದ ಪ್ರಸಂಗ ನಡೆದಿದೆ.
ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ 15 ವರ್ಷ ಪ್ರಾಯದ ಅಪ್ರಾಪ್ತೆಗೆ ಪಿರಿಯಾಪಟ್ಟಣ ಯುವಕನೊಂದಿಗೆ ನಿಶ್ಚಿತಾರ್ಥ ಏರ್ಪಡಿಸಲಾಗಿತ್ತು. ಸ್ಥಳೀಯರ ಮಾಹಿತಿ ಮೇರೆಗೆ ಸ್ಥಳಕ್ಕೆ ಧಾವಿಸಿದ ಮಹಿಳಾ -ಮಕ್ಕಳ ಕಲ್ಯಾಣ ಇಲಾಖೆ ತಾಲೂಕು ಅಧಿಕಾರಿ ಶ್ರೀದೇವಿ, ಕುಶಾಲನಗರ ಟೌನ್ ಪೊಲೀಸ್ ಠಾಣೆ ಸಿಬ್ಬಂದಿಗಳ ಸಮ್ಮುಖದಲ್ಲಿ ಕಾರ್ಯಕ್ರಮ ಸ್ಥಗಿತಗೊಳಿಸಿ ಪೋಷಕರಿಗೆ ತಿಳುವಳಿಕೆ ನೀಡಿ ಮಕ್ಕಳ ಕಲ್ಯಾಣ ಸಮಿತಿಗೆ ಮುಂದಿನ ಕ್ರಮಕ್ಕೆ ಹಸ್ತಾಂತರಿಸಿದ್ದಾರೆ.

ಕ್ಲೀನ್ ಶನಿವಾರ ಜೊತೆ 'ಸಂಡೇಸ್ ಆನ್ ಸೈಕಲ್ ರೈಡ್'
ಸ್ವಚ್ಛತೆಯತ್ತ ದಿಟ್ಟ ಹೆಜ್ಜೆ
ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಜಾಗೃತಿ ಅಭಿಯಾನ

ಮಂಗಳೂರು: ಮಂಗಳೂರು ಸೇರಿದಂತೆ ದ.ಕ. ಜಿಲ್ಲೆಯಾದ್ಯಂತ ಸ್ವಚ್ಛತಾ ಕಾರ್ಯ ಈಗ ಚುರುಕುಗೊಂಡಿದೆ. ಜಿ.ಪಂ. ವತಿಯಿಂದ ಪ್ರತಿ ಶನಿವಾರ 'ಸ್ವಚ್ಛ ಶನಿವಾರ' ಅಭಿಯಾನ ನಡೆಯುತ್ತಿದ್ದು, ಇದೀಗ 'ಸಂಡೇಸ್ ಆನ್ ಸೈಕಲ್-ಸ್ವಚ್ಛತಾ ರೈಡ್-ಸ್ವಚ್ಛತೆಗಾಗಿ ಸೈಕಲ್ ಜಾಥ' ಮೂಲಕ ಸಾರ್ವಜನಿಕರಲ್ಲಿ ಸ್ವಚ್ಛತೆ ಬಗ್ಗೆ



ಜಾಗೃತಿ ಮೂಡಿಸುವ ಕಾರ್ಯ ನಡೆದಿದೆ. ಕಳೆದ ಹಲವು ಸಮಯದಿಂದ ಸ್ವಚ್ಛ ಶನಿವಾರ ಅಭಿಯಾನ ನಡೆಯುತ್ತಿದೆ. ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವವರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಜಿ.ಪಂ. ಕಸ ಎಸೆಯುವವರಿಗೆ ದಂಡದ ಜೊತೆ ಎಫ್ಐಆರ್ ದಾಖಲಿಸುವ ಮೂಲಕ ಖಡಕ್ ವಾರ್ನಿಂಗ್ ನೀಡಿತ್ತು. »» ಪುಟ 4

16ಕ್ಕೂ ಅಧಿಕ ಕೇಸ್

ಕಳೆದ ಎರಡು ವಾರಗಳಲ್ಲಿ ಜಿಲ್ಲೆಯಲ್ಲಿ ಎಲ್ಲೆಂದರಲ್ಲಿ ಕಸ ಎಸೆದ 16 ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿದ್ದು, 50 ಸಾವಿರಕ್ಕೂ ಅಧಿಕದಂಡ ವಸೂಲಿಯಾಗಿದೆ. ದಂಡ ಪಾವತಿಸಲು ನಿರಾಕರಿಸಿದ ಬೆಳ್ತಾರೆ ವ್ಯಕ್ತಿಯೊಬ್ಬರ ಮೇಲೆ ಎಫ್ಐಆರ್ ದಾಖಲಾಗಿದೆ.

ಟ್ರಾನ್ಸ್‌ಫಾರ್ಮರ್‌ಗೆ ಲೋಡ್ ಹೆಚ್ಚಳ
ಬೇಕೂರಿನಲ್ಲಿ ಕಾಡಿದ ವೋಲ್ಟೇಜ್ ಸಮಸ್ಯೆ!
ಸ್ಥಳೀಯರಿಗೆ ಸಂಕಷ್ಟ। ಪರಿಹಾರಕ್ಕೆ ಆಗ್ರಹ

ಉಪ್ಪಳ: ಮಂಗಲ್ಪಾಡಿ ಪಂ.ವ್ಯಾಪ್ತಿಯ ಬೇಕೂರು ಪರಿಸರಗಳಲ್ಲಿ ವಿದ್ಯುತ್ ವೋಲ್ಟೇಜ್ ಕ್ಷಾಮ ತೀವ್ರಗೊಂಡಿದೆ ಎಂದು ದೂರಲಾಗಿದೆ. ನೂರಾರು ಮನೆಗಳಿರುವ ಈ ಪ್ರದೇಶದಲ್ಲಿ ವೋಲ್ಟೇಜ್ ಕ್ಷಾಮದಿಂದ ರಾತ್ರಿ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಓದಲು, ಮನೆ ಮಂದಿಗೆ ಗೃಹೋಪಕರಣ ಉಪಯೋಗಿಸಲು, ವ್ಯಾಪಾರಿ ಸಂಸ್ಥೆಗಳು, ಉದ್ದಿಮೆಗಳು ಕಾರ್ಯಾಚರಿಸಲು ಸಾಧ್ಯವಾಗುತ್ತಿಲ್ಲ ಎನ್ನಲಾಗಿದೆ.



ಬಿಸಿ ಹೆಚ್ಚಳದಿಂದ ಫ್ಯಾನ್, ಎ.ಸಿ. ಉಪಯೋಗಿಸಲು ಸಾಧ್ಯವಾಗದ ಸ್ಥಿತಿ ಇದೆ. ಇದರಿಂದ ಸ್ಥಳೀಯರು ಸಂಕಷ್ಟಕ್ಕೀಡಾಗಿದ್ದಾರೆ. »» ಪುಟ 4

ಸುತ್ತಮುತ್ತ

ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಶಾಸಕ ಕಾಮತ್ ಖಂಡನೆ

ಮಂಗಳೂರು: ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರನ್ನು ಭಯೋತ್ಪಾದಕ



ಎಂದು ಕೀಳು ಮಟ್ಟದ ಹೇಳಿಕೆ ನೀಡುವ ಮೂಲಕ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಹಿರಿತನದ ಗೌರವವನ್ನು ಕಳೆದುಕೊಂಡಿದ್ದು, ಕೂಡಲೇ ಕ್ಷಮೆಯಾಚಿಸಬೇಕೆಂದು ಶಾಸಕ ವೇದವ್ಯಾಸ ಕಾಮತ್ ಆಗ್ರಹಿಸಿದ್ದಾರೆ. ನಿಜವಾದ ಭಯೋತ್ಪಾದಕರನ್ನು ಬ್ರದರ್ಸ್ ಗಳು ಎನ್ನುವುದು, ದೇಶಕ್ಕಾಗಿ ಸರ್ವಸ್ವವನ್ನು ಮರೆತು ದುಡಿಯುವವರನ್ನು ಭಯೋತ್ಪಾದಕರು ಎನ್ನುವುದು ಕಾಂಗ್ರೆಸ್ ಪಕ್ಷದ ಸಂಸ್ಕೃತಿ. ಚುನಾವಣೆ ಸಂದರ್ಭದಲ್ಲಿ ಓಲೈಕೆ ರಾಜಕಾರಣಕ್ಕಾಗಿ ಇಂತಹ ಹೇಳಿಕೆಗಳನ್ನು ನೀಡುವುದು ಕಾಂಗ್ರೆಸ್ ನಾಯಕರ ಹುಟ್ಟು ಗುಣ. ಅದಕ್ಕೆ ತಕ್ಕ ಬೆಲೆಯನ್ನು ಜನರೇ ನೀಡುತ್ತಾ ಬಂದಿದ್ದರೂ ಅವರಿಗೆ ಬುದ್ಧಿ ಬಂದಿಲ್ಲ ಎಂದು ಅವರು ಹೇಳಿದ್ದಾರೆ.

ಹತಾಶೆಯಿಂದ ವರ್ತನೆ

ಜಾಗತಿಕ ಮಟ್ಟದ ಅತ್ಯಂತ ಪ್ರಭಾವಶಾಲಿ ನಾಯಕರ ಸಾಲಿನಲ್ಲಿ ಮೋದಿಯವರು ಅಗ್ರಸ್ಥಾನದಲ್ಲಿದ್ದಾರೆ. ಅವರ ನಾಯಕತ್ವದಲ್ಲಿ ಭಾರತವು ವಿಶ್ವವ್ಯಾಪಿ ಮನ್ನಣೆಯನ್ನು ಗಳಿಸಿದೆ. ಅಲ್ಲದೇ ವಿಶ್ವದ ಅನೇಕ ರಾಷ್ಟ್ರಗಳು ತಮ್ಮ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಹೀಗಾಗಿಯೇ ದೇಶದ ಜನತೆ ಹೆಮ್ಮೆಯಿಂದ ಮೂರನೇ ಬಾರಿಗೆ ಅವರನ್ನು ಪ್ರಧಾನಿಯಾಗಿ ಮುಂದುವರಿಸಿದ್ದಾರೆ. ಇದನ್ನು ಸಹಿಸಿಕೊಳ್ಳಲಾಗದೇ ಕಾಂಗ್ರೆಸ್ಸಿಗರು ದ್ವೇಷ ಕಾರುತ್ತಾ ಹತಾಶೆಯಿಂದ ವರ್ತಿಸುತ್ತಿದ್ದಾರೆ ಎಂದು ಕಾಮತ್ ಹೇಳಿದ್ದಾರೆ.

ಇಂದು ರಥೋತ್ಸವ

ಕಾರ್ಕಳ: ಪಡುತಿರುಪತಿ ಖ್ಯಾತಿಯ ಶ್ರೀ ವೆಂಕಟರಮಣ ದೇವಳದ ರಥೋತ್ಸವ ಏ.22ರಂದು ನಡೆಯಲಿದೆ. ಧಾರ್ಮಿಕ ಕಾರ್ಯಕ್ರಮ, ಬೆಳಗ್ಗೆ 9.30ಕ್ಕೆ ಫಲಕಾಣಿಕೆ ಸಮರ್ಪಣೆ, ಪ್ರಾರ್ಥನೆ, ಯಜ್ಞಶಾಲೆಗೆ ದೇವರ ಪ್ರವೇಶ, ಸಂಜೆ 4 ಗಂಟೆಗೆ ಮಹಾ ಪೂರ್ಣಾಹುತಿ, ಸುತ್ತುಬಲಿ, ಚಕ್ರ ಉತ್ಸವ, ಸಂಜೆ 6 ಗಂಟೆಗೆ ರಥಾರೋಹಣ, ರಾತ್ರಿ 12 ಗಂಟೆಗೆ ಫಲಾವಳಿ, ಬ್ರಹ್ಮರಥ ಉತ್ಸವ, ಮಣ್ಣಗೋಪುರದಲ್ಲಿ ಸಂಜೆ ರಾಜೋಪಚಾರ ಸೇವೆ, ಬಳಿಕ ವಸಂತ ಪೂಜೆ, ರಾತ್ರಿ ಪೂಜೆ ಬಳಿಕ ಏಕಾಂತ ಸೇವೆ ನಡೆಯಲಿದೆ. ಏ. 23ಕ್ಕೆ ಮಧ್ಯಾಹ್ನ 3.30ಕ್ಕೆ ಸ್ವರ್ಣ ಪಲ್ಲಕ್ಕಿ ಉತ್ಸವ, ಬಳಿಕ ಶ್ರೀ ದೇವರು ರಾಮಸಮುದ್ರಕ್ಕೆ ಹೊರಡುವುದು, ಅವಭೃತ ಸ್ನಾನ, ಕಂಕಣ ವಿಸರ್ಜನೆ, ರಾತ್ರಿ ಸಂಪ್ರೋಕ್ಷಣ, ವಸಂತ ಪೂಜೆ, ಅಂಕುರ ಪ್ರಸಾದ ಸೇವೆ ನಡೆಯಲಿದೆ.

ತೊಕ್ಕೊಟ್ಟು ಶಿವಾಜಿ ಫ್ರೆಂಡ್ಸ್ ಸರ್ಕಲ್: ಅಧ್ಯಕ್ಷರಾಗಿ ನವೀನ್

ಉಳ್ಳಾಲ: ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ತೊಕ್ಕೊಟ್ಟು ಭಟ್ನಗರದ ಶಿವಾಜಿ ಫ್ರೆಂಡ್ಸ್ ಸರ್ಕಲ್ ಹಾಗೂ ಸ್ವಾಮಿ ಕೊರಗಜ್ಜ ಶಿವಾಜಿ ಸೇವಾ ಸಮಿತಿ ಇದರ ವಾರ್ಷಿಕ ಮಹಾಸಭೆಯು ಸಂಸ್ಥೆಯ



ಅಧ್ಯಕ್ಷ ಯು.ಹೆಚ್ ಅಲ್ತಾಫ್ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಧಾನ ಕಾರ್ಯದರ್ಶಿ ರೋಹನ್ ತೊಕ್ಕೊಟ್ಟು ವರದಿ ವಾಚಿಸಿದರು. ಕೋಶಾಧಿಕಾರಿ ಯು.ಹಮೀದ್ ಲೆಕ್ಕಪತ್ರ ಮಂಡಿಸಿದರು.

2026-27ನೇ ಸಾಲಿನ ನೂತನ ಅಧ್ಯಕ್ಷರಾಗಿ ನವೀನ್ ಪೂಜಾರಿ ಭಟ್ನಗರ, ಗೌರವ ಅಧ್ಯಕ್ಷರಾಗಿ ಚಂದ್ರಶೇಖರ ಎಸ್.ಉಚ್ಚಿಲ್, ಸುವರ್ಣ ಸಂಭ್ರಮ ಆಚರಣೆಯ ಪ್ರಧಾನ ಸಂಚಾಲಕರಾಗಿ ಸಿರಿಲ್ ರಾಬರ್ಟ್.ಡಿ ಸೋಜ ಭಟ್ನಗರ, ಉಪಾಧ್ಯಕ್ಷರಾಗಿ ಉರ್ಬಾನ್ ಲಾರೆನ್ಸ್ ಡಿಸೋಜ, ಪ್ರಧಾನ ಕಾರ್ಯದರ್ಶಿಯಾಗಿ ರೋಹನ್ ತೊಕ್ಕೊಟ್ಟು,ಸಹ ಕಾರ್ಯದರ್ಶಿಯಾಗಿ ಸುಧೀರ್ ತೊಕ್ಕೊಟ್ಟು, ಕೋಶಾಧಿಕಾರಿ ಸದಾನಂದ ಒಂಬತ್ತುಕೆರೆ,ಕ್ರೀಡಾ ಕಾರ್ಯದರ್ಶಿಯಾಗಿ ಯು.ಎಚ್ ಅಲ್ತಾಫ್ ಹಳೆಕೋಟೆ, ಸಹ ಕ್ರೀಡಾ ಕಾರ್ಯದರ್ಶಿಯಾಗಿ ಕೇಶವ ಕುತ್ತಾರು, ಲೆಕ್ಕ ಪರಿಶೋಧಕರಾಗಿ ಸಂತೋಷ್ ಮಾಡೂರು, ಸಂಘಟನಾ ಕಾರ್ಯದರ್ಶಿಯಾಗಿ ಚಂದ್ರಶೇಖರ ಬೋಳಾರ್ ಚೆಂಬುಗುಡ್ಡೆ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆನಂದ ಧರ್ಮನಗರ, ಝುಬೇರ್ ಆಳೇಕಲ, ಜಯಪ್ರಕಾಶ್ ಮಾಡೂರು, ಸಂತೋಷ್ ಗಟ್ಟಿ ಕಾಪಿಕಾಡ್, ವಿನ್ಸೆಂಟ್ ಡಿಸೋಜ ಭಟ್ನಗರ, ಹರೀಶ್ ಪಂಡಿತ್ ಹೌಸ್, ಸುರೇಶ್ ಟೈಲರ್ ತೊಕ್ಕೊಟ್ಟು, ನಾಗರಾಜ ಚೆಂಬುಗುಡ್ಡೆ,ರೋಶನ್ ಶೆಟ್ಟಿ,ನವೀನ್ ಕುತ್ತಾರು ಆಯ್ಕೆಗೊಂಡರು.

ದ.ಕ. ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ಸಮಾವೇಶ

ಅಪೌಷ್ಟಿಕತೆ ನಿವಾರಣೆ ಕಾಳಜಿ ಶ್ಲಾಘನಾರ್ಹ: ಖಾದರ್

ಮಂಗಳೂರು: ಮಕ್ಕಳ ಅಪೌಷ್ಟಿಕತೆ ನಿವಾರಿಸುವಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಪಾತ್ರ ಪ್ರಮುಖವಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ದ.ಕ. ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ವತಿಯಿಂದ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಸೋಮವಾರ ನಡೆದ ಐಸಿಡಿಎಸ್ 50ರ ಸಂಭ್ರಮ ಮತ್ತು ಜಿಲ್ಲಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ಹುಟ್ಟಿನಿಂದ ಸಾವಿನವರೆಗೆ ಸೇವೆ ಮಾಡುವವರು. ಮಗುವಿನ ಜನನ, ಗರ್ಭಿಣಿಯರ ಬಗ್ಗೆ ಕಾಳಜಿ ಹೊಂದಿದವರಾಗಿದ್ದು, ತಾಯಿಗಿಂತ ಹೆಚ್ಚಿನ ಕಾಳಜಿ ವಹಿಸುವವರಾಗಿದ್ದಾರೆ ಎಂದರು.

ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಸ್ವತಂತ್ರ ಸಂಘದ ರಾಜ್ಯಾಧ್ಯಕ್ಷೆ ಪ್ರೇಮಾ ಮಾತನಾಡಿ, ಸಮಾವೇಶ ಆಯೋಜನೆಯ



ಮೂಲಕ ಸರಕಾರಕ್ಕೆ ಬೇಡಿಕೆ ತಲುಪಿಸುವ ಜತೆಗೆ ಒತ್ತಡ ನಿವಾರಣೆಗೆ ಕಾರ್ಯಕ್ರಮ ನಡೆಸಲಾಗಿದೆ. 5 ಉದ್ದೇಶ ಹಾಗೂ ಸೇವೆಯೊಂದಿಗೆ ಆರಂಭವಾದ ಯೋಜನೆ ಈಗ ನೂರಾರು ಉದ್ದೇಶ ಹಾಗೂ ಸೇವೆ ಹೊಂದಿದೆ. ಯಾವುದೇ ಕೆಲಸ ನೀಡಿದ್ದಲ್ಲಿ ನಾವು ಮಾಡಲು ಸಿದ್ಧ. ಪ್ರಾಮಾಣಿಕ ಕೆಲಸವನ್ನು ಗುರುತಿಸಿ ಸರಕಾರ ಪದೇ ಪದೆ ಹೆಚ್ಚಿನ ಜವಾಬ್ದಾರಿಯನ್ನು ನೀಡುತ್ತಿದೆ. ಅಂಗಳದಲ್ಲಿ ಆಡುವ ಮಕ್ಕಳನ್ನು ಅಂಗನವಾಡಿಗೆ ಕರೆತಂದು ಶಾಲೆಗೆ ಬೇಕಾದ ಪೂರ್ವ ತಯಾರಿಯನ್ನು ಮಾಡಲಾಗುತ್ತಿದೆ. ಕಾನ್ವೆಂಟ್ ಶಾಲೆಗಳಿಗೆ ಸ್ಪರ್ಧೆ ನೀಡುವ ಮಟ್ಟದಲ್ಲಿ ಮುಂದುವರಿದಿದ್ದೇವೆ. ಕಾರ್ಯಕರ್ತೆಯರು ತಮ್ಮದೇ ಯೋಚನೆಯನ್ನು ಬಳಸಿಕೊಂಡು ಕಲಿಕೆಯ ಗುಣಮಟ್ಟವನ್ನು ವೃದ್ಧಿಸಿದ್ದಾರೆ ಎಂದರು.

> ಅಂಗನವಾಡಿ ಕಾರ್ಯಕರ್ತೆಯರ ಕೆಲಸ ಶ್ರಮದಾಯಕವಾಗಿದೆ. ಅವರ ಸೇವೆಯನ್ನು ಎಲ್ಲರೂ ಗೌರವಿಸಬೇಕಿದೆ. ಮಗುವಿನ ಹಾಗೂ ಗರ್ಭಿಣಿಯ ಆರೈಕೆಯಲ್ಲಿ ಅವರ ಪಾತ್ರ ಮಹತ್ವದ್ದು.
> ● ಭಾಗೀರಥಿ ಮುರುಳ್ಯ, ಶಾಸಕಿ

ದ.ಕ. ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ತಾರಾ ಬಳ್ಳಾಲ್, ಪದಾಧಿಕಾರಿಗಳಾದ ರಾಜೀವಿ, ಗುಲಾಬಿ, ಚಂದ್ರಾವತಿ, ಅರುಣಾ, ವಿವಿಧ ತಾಲೂಕುಗಳ ಶಿಶು ಅಭಿವೃದ್ಧಿ ಅಧಿಕಾರಿಗಳಾದ ಶೈಲಜಾ, ಹರೀಶ್, ಮಮ್ತಾಜ್, ಶ್ವೇತಾ, ಶೈಲಾ, ಪ್ರಿಯಾ ಆಗ್ನೇಸ್ ಮತ್ತಿತರರಿದ್ದರು. ಕಾರ್ಯದರ್ಶಿ ಆಶಾಲತಾ ಸ್ವಾಗತಿಸಿ, ಖಜಾಂಚಿ ರೇಣುಕಾ ವಂದಿಸಿದರು. ದೇವಿಕಾ, ಶರ್ಮಿಳಾ ನಿರೂಪಿಸಿದರು.

> ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಅಪೌಷ್ಟಿಕತೆ, ರಕ್ತ ಹೀನತೆ, ಶಿಶು ತಾಯಿ ಮರಣ ಪ್ರಮಾಣ ಇಳಿಕೆಯಾದರೂ ಸ್ಥೂಲಕಾಯದ ಮಕ್ಕಳ ಸಮಸ್ಯೆ ಜೀವಂತವಾಗಿದೆ. 1975ರಲ್ಲಿ ದ.ಕ.ದಲ್ಲಿ ಶಿಶುಮರಣ ಪ್ರಮಾಣ 70-80ರ ಆಸುಪಾಸಿನಲ್ಲಿತ್ತು. ಇದೀಗ ಆ ಪ್ರಮಾಣ 8ಕ್ಕೆ ಇಳಿಕೆಯಾಗಿದೆ. ತಾಯಂದಿರ ಮರಣ ಪ್ರಮಾಣ 1 ಲಕ್ಷಕ್ಕೆ 33ರಷ್ಟು ಇಳಿಕೆಯಾಗಿದೆ. ರಾಜ್ಯದಲ್ಲೇ ಈ ಪ್ರಮಾಣ ಬೇರೆಲ್ಲೂ ಇಲ್ಲ, ಆದರೆ, ಪಕ್ಕದ ಕೇರಳ ರಾಜ್ಯದಲ್ಲಿ ನಮ್ಮದೇ ಜಿಲ್ಲೆಗಿಂತಲೂ ಮರಣ ಪ್ರಮಾಣ ಕಡಿಮೆ ಇದೆ.
> ● ಉಸ್ಮಾನ್ ಎ., ದ.ಕ. ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ

ಪಡುಬಿದ್ರಿ, ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಳದ ಜೀರ್ಣೋದ್ಧಾರ

ಸ್ವರ್ಣ ಪಲ್ಲಕ್ಕಿ, ಬೆಳ್ಳಿಯ ಹೊದಿಕೆ ಸಮರ್ಪಣೆ

ಪಡುಬಿದ್ರಿ: ಪಡುಬಿದ್ರಿ ಶ್ರೀ ವನದುರ್ಗಾ ಟ್ರಸ್ಟ್, ಬೇಂಗ್ರೆ ಶಿವಳ್ಳಿ ಬ್ರಾಹ್ಮಣ ಹತ್ತು ಸಮಸ್ತರ ಆಡಳಿತ ಮಂಡಳಿಯ ವತಿಯಿಂದ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಜೀರ್ಣೋದ್ಧಾರದ ಪ್ರಯುಕ್ತ ಸುಮಾರು ಒಂದು ಕೋಟಿ ಇಪ್ಪತ್ತು ಲಕ್ಷ ವೆಚ್ಚದಲ್ಲಿ ಸ್ವರ್ಣ ಪಲ್ಲಕ್ಕಿ ಹಾಗೂ ಶ್ರೀ ಮಹಾಗಣಪತಿ ದೇವರ ಗರ್ಭಗುಡಿಯ ಬಾಗಿಲಿಗೆ ಬೆಳ್ಳಿಯ ಹೊದಿಕೆ ಸಮರ್ಪಣೆಯ ಶೋಭಾ ಯಾತ್ರೆಯು ಏ.25ಕ್ಕೆ ಸಂಜೆ 3:30 ನಡೆಯಲಿದೆ ಎಂದು ವನದುರ್ಗಾ ಟ್ರಸ್ಟ್ ಕಾರ್ಯದರ್ಶಿ ವೈ. ಎನ್. ರಾಮಚಂದ್ರ ರಾವ್ ಅವರು ಮಂಗಳವಾರ ಖಡ್ಗೇಶ್ವರಿ ಜ್ಞಾನ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬ್ರಹ್ಮಸ್ಥಾನದಲ್ಲಿ ಪ್ರಾರ್ಥನೆ

ಶ್ರೀ ಖಡ್ಗೇಶ್ವರಿ ಬ್ರಹ್ಮಸ್ಥಾನದಲ್ಲಿ ದೇವತಾ ಪ್ರಾರ್ಥನೆಯೊಂದಿಗೆ ಚಾಲನೆ ದೊರೆಯಲಿದೆ. ಶೋಭಾಯಾತ್ರೆಯು ಭಜನಾ ತಂಡ, ಚೆಂಡೆ ವಾದನದೊಂದಿಗೆ ಬ್ರಹ್ಮಸ್ಥಾನ ಮಾರ್ಗವಾಗಿ ಪೇಟೆಯ ಮೂಲಕ ಪಡುಬಿದ್ರಿ ದೇವಳಕ್ಕೆ ಸಾಗಿ ಬರಲಿದೆ. ಶೋಭಾ ಯಾತ್ರೆಯ ಬಳಿಕ ಜರಗುವ ಸಭಾ ಕಾರ್ಯಕ್ರಮದಲ್ಲಿ ಶ್ರೀ ಪಲಿಮಾರು ಮಠದ ಹಿರಿಯ ಶ್ರೀಗಳಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಂದ ಆಶೀರ್ವಚನ



- ಪಡುಬಿದ್ರಿ ಶ್ರೀ ವನದುರ್ಗಾ ಟ್ರಸ್ಟ್, ಬೇಂಗ್ರೆ ಶಿವಳ್ಳಿ ಬ್ರಾಹ್ಮಣ ಹತ್ತು ಸಮಸ್ತರ ಆಡಳಿತ ಮಂಡಳಿಯ ವತಿಯಿಂದ ಕೊಡುಗೆ
- ಏ.25ಕ್ಕೆ ಸಂಜೆ 3:30ಕ್ಕೆ ಶೋಭಾ ಯಾತ್ರೆ
- ಒಂದು ಕೋಟಿ ಇಪ್ಪತ್ತು ಲಕ್ಷ ವೆಚ್ಚದಲ್ಲಿ ನಿರ್ಮಾಣ

ನೆರವೇರಲಿದೆ.

ಕಾರ್ಯಕ್ರಮದಲ್ಲಿ ಪಡುಬಿದ್ರಿ ದೇವಳದ ತಂತ್ರಿಗಳಾದ ವೇದಮೂರ್ತಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯ, ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಕಾಪು ಶಾಸಕ ಸುರೇಶ್ ಶೆಟ್ಟಿ ಗುರ್ಮೆ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಡಾ.ಕೆ. ಪ್ರಕಾಶ್ ಶೆಟ್ಟಿ, ಜನಪದ ಸಂಶೋಧಕ ಕೆ.ಎಲ್. ಕುಂಡಂತಾಯ, ಪಡುಬಿದ್ರಿ ಮಠತ್ರಾಮಮನೆ ಗಂಗಾಧರ್ ರಾವ್, ದೇವಳದ ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಕ್ಷೇತ್ರದ ಅರ್ಚಕರಾದ ಎಚ್. ಪದ್ಮನಾಭ ಭಟ್, ವೈ. ಗುರುರಾಜ ಭಟ್, ಅನುವಂಶಿಕ ಮೊಕ್ತೇಸರರುಗಳಾದ ರತ್ನಾಕರ ರಾಜ ಅರಸು ಕಿನ್ನಕ್ಕ ಬಲ್ಲಾಳ್, ಪೇಟೆಮನೆ ಭವಾನಿ ಶಂಕರ್ ಹೆಗ್ಡೆ, ಕೊರ್ನಾಯ ಶ್ರೀಪತಿ ರಾವ್ ಉಪಸ್ಥಿತರಿರಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊರ್ನಾಯ ಪದ್ಮನಾಭ ರಾವ್ ವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಶ್ರೀ ವನದುರ್ಗಾ ಟ್ರಸ್ಟ್ ನ ಕಾರ್ಯದರ್ಶಿ ರಾಮಚಂದ್ರ ರಾವ್ ವೈ. ಎನ್, ಒಂದನೇ ಗುರಿಕಾರ ಕೊರ್ನಾಯ ಪದ್ಮನಾಭ ರಾವ್, ಕೋಶಾಧಿಕಾರಿ ಸುರೇಶ್ ರಾವ್ ವೈ. ಎರಡನೇ ಗುರಿಕಾರ ನಟರಾಜ ಪಿ.ಎನ್, ಮೂರನೇ ಗುರಿಕಾರ ಮುರುಡಿ ಜಗದೀಶ್ ರಾವ್, ಟ್ರಸ್ಟ್ ಸದಸ್ಯರಾದ ಪಿ. ಶ್ರೀನಿವಾಸ್ ರಾವ್, ರವೀಂದ್ರ ಪಿ. ಎಚ್ ಉಪಸ್ಥಿತರಿದ್ದರು.

ಬಂಟ್ವಾಳ ಸಮಾಜ ಸೇವಾ ಸಹಕಾರಿ ಸಂಘದ ಸಾಧನೆ | ವ್ಯವಹಾರದಲ್ಲಿ ಪ್ರಗತಿ

ಆರ್ಥಿಕ ವರ್ಷದಲ್ಲಿ 5.28 ಕೋಟಿ ರೂ. ಲಾಭ

ಬಂಟ್ವಾಳ: ಸ್ವಾತಂತ್ರ್ಯ ಹೋರಾಟಗಾರರಾದ ದಿ. ಡಾ. ಅಮ್ಮೆಂಬಳ ಬಾಳಪ್ಪರ ನೇತೃತ್ವದಲ್ಲಿ ಹಾಗೂ ಸಹಕಾರಿ ಧುರೀಣ ಹೂವಯ್ಯ ಮೂಲ್ಯ ಅವರ ಸಾರಥ್ಯದಲ್ಲಿ 131 ಸದಸ್ಯರನ್ನೊಳಗೊಂಡು 22,620 ರೂ. ಪಾಲು ಬಂಡವಾಳದೊಂದಿಗೆ ಸ್ಥಾಪಿಸಲ್ಪಟ್ಟ ಬಂಟ್ವಾಳ ಸಮಾಜ ಸೇವಾ ಸಹಕಾರಿ ಸಂಘವು 2025-26ನೇ ಸಾಲಿನಲ್ಲಿ 1432.13 ಕೋ.ರೂ.ವ್ಯವಹಾರ ನಡೆಸಿ 5.28 ಕೋ.ರೂ. ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಸುರೇಶ್ ಕುಲಾಲ್ ಬಂಟ್ವಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

17 ಶಾಖೆ ಹೊಂದಿದೆ

ಸಂಘವು ಪ್ರಸ್ತುತ 17 ಶಾಖೆಗಳನ್ನು ಹೊಂದಿದ್ದು, ದ.ಕ ಮತ್ತು ಉಡುಪಿ ಜಿಲ್ಲೆಯಲ್ಲೂ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿದೆ. ಸಂಘದ ಪುಂಜಾಲಕಟ್ಟೆ, ಮುಡಿಪು ಮತ್ತು ಉಪ್ಪಿನಂಗಡಿ ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯಾಚರಿಸುತ್ತಿದೆ ಎಂದು ತಿಳಿಸಿದ್ದಾರೆ.

8.28 ಕೋ.ರೂ. ಪಾಲು ಬಂಡವಾಳ, 22.64 ಕೋ.ರೂ. ನಿಧಿಗಳು, 62.88 ಕೋ.ರೂ. ವಿನಿಯೋಗಗಳು, 264.08 ಕೋ.ರೂ. ಠೇವಣಾತಿ, 248.99 ಕೋ. ರೂ. ಹೊರಬಾಕಿ ಸಾಲಗಳಿದ್ದು, ಸಂಘದ



> ಸಂಘವು ತನ್ನ ವಿವಿಧ ಶಾಖೆಗಳಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ನೀಡುತ್ತಿದೆ. ಗ್ರಾಹಕರ ಹಿತ ಕಾಪಾಡುವುದೇ ಸಂಸ್ಥೆಯ ಮುಖ್ಯ ಗುರಿಯಾಗಿದೆ.
> ● ಸುರೇಶ್ ಕುಲಾಲ್ ಬಂಟ್ವಾಳ

ದುಡಿಯುವ ಬಂಡವಾಳ 297.71 ಕೋ.ರೂ.ಆಗಿರುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಡಿಟ್ ವರ್ಗೀಕರಣದಲ್ಲಿ 'ಎ' ತರಗತಿಯನ್ನು ಪಡೆದಿದ್ದು, ಸಂಘವು ಸಂಪೂರ್ಣ ಗಣಕೀಕೃತ ಸಿಬಿಎಸ್ ತಂತ್ರಾಂಶದೊಂದಿಗೆ ಇ- ಕಲೆಕ್ಷನ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ. ಸಂಘವು ಸದಸ್ಯರ ಅನುಕೂಲಕ್ಕಾಗಿ ಬಂಟ್ವಾಳ ಬೈಪಾಸ್ ಶಾಖೆಯಲ್ಲಿ ಇ-ಸ್ಟ್ಯಾಂಪ್ ಸೌಲಭ್ಯ, ಕೆಲವು ಶಾಖೆಗಳಲ್ಲಿ ಸೇಫ್ ಲಾಕರ್ ಸೌಲಭ್ಯ, ಮಣಿಪಾಲ ಆರೋಗ್ಯ ಕಾರ್ಡ್ ಸೌಲಭ್ಯ, ಸದಸ್ಯರ ಮಕ್ಕಳಿಗೆ ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿ ವೇತನ, ಯಶಸ್ವಿನಿ ಸದಸ್ಯರಿಗೆ ನೀಡುತ್ತಾ ಬಂದಿದೆ ಎಂದು ತಿಳಿಸಿದ್ದಾರೆ.

ಮೇ 17ರಂದು 8ನೇ ಶಾಖೆ ಉದ್ಘಾಟನೆ

ಪ್ರಸಕ್ತ ಸಾಲಿನಲ್ಲಿ ಸಂಘವು ಅತ್ಯುತ್ತಮ ಸಾಧನೆ ಮಾಡವಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿರುವ ಅವರು ಸಂಘದ 18ನೇ ಶಾಖೆಯು ಉಳ್ಳಾಲ ತಾಲೂಕಿನ ಬೋಳಿಯಾರಿನಲ್ಲಿ ಮೇ 17 ರಂದು ಕೇಶವ ಎಸ್ ಭಂಡಾರಿಯವರ ಕಟ್ಟಡದಲ್ಲಿ ಶುಭಾರಂಭಗೊಳ್ಳಲಿದೆ ಎಂದು ಬಂಟ್ವಾಳ ಸಮಾಜ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸುರೇಶ್ ಕುಲಾಲ್ ಬಂಟ್ವಾಳ ಅವರು ತಿಳಿಸಿದ್ದಾರೆ.

ಸರ್ವತೋಮುಖ ಪ್ರಗತಿ

ವ್ಯವಹಾರದಲ್ಲಿ ಸರ್ವತೋಮುಖ ಪ್ರಗತಿ ಸಾಧಿಸಿ ಹಾಗೂ ಬ್ಯಾಂಕಿನೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದಕ್ಕಾಗಿ ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು ಇವರಿಂದ ಹಲವು ಬಾರಿ ಸಾಧನಾ ಪ್ರಶಸ್ತಿಗಳು ಲಭಿಸಿದೆ. 72 ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಂಘವು ದ.ಕ. ಜಿಲ್ಲೆಯ ಉತ್ತಮ ಪತ್ತಿನ ಸಹಕಾರಿ ಸಂಘ ಪ್ರಶಸ್ತಿಯನ್ನು ಪಡೆದುಕೊಂಡಿದೆ ಎಂದು ಸುರೇಶ್ ಕುಲಾಲ್ ತಿಳಿಸಿದ್ದಾರೆ.

ಬ್ಯಾಡ್ಮಿಂಟನ್: ಆಳ್ವಾಸ್ ಕಾಲೇಜಿಗೆ ಸತತ 22ನೇ ಬಾರಿಗೆ 'ಅವಳಿ ಪ್ರಶಸ್ತಿ'



ಮೂಡುಬಿದಿರೆ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಮಡಂತ್ಯಾರಿನ ಸೇಕ್ರೆಡ್ ಹಾರ್ಟ್ ಕಾಲೇಜಿನ ಆಶ್ರಯದಲ್ಲಿ ನಡೆದ ಮಂಗಳೂರು ವಿ.ವಿ. ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ಆಳ್ವಾಸ್ ಕಾಲೇಜು ಸತತ 22ನೇ ಬಾರಿ ಅವಳಿ ಪ್ರಶಸ್ತಿಯನ್ನು ಪಡೆದುಕೊಂಡಿದೆ.

ಟ್ರೋಫಿ ತನ್ನದಾಗಿಸಿಕೊಂಡ ತಂಡ

ಫೈನಲ್ ಪಂದ್ಯಾಟದಲ್ಲಿ ಪುರುಷರ ತಂಡವು ಶ್ರೀ ಭುವನೇಂದ್ರ ಕಾಲೇಜು ತಂಡವನ್ನು ಸೋಲಿಸಿ ಶ್ರೀ ಎಂ.ಕೆ ಅನಂತರಾಜ್ ಮೆಮೋರಿಯಲ್ ರೋಲಿಂಗ್ ಟ್ರೋಫಿಯನ್ನು ಪಡೆದುಕೊಂಡಿತು. ಮಹಿಳೆಯರ ತಂಡವು ಎಸ್.ವಿ.ಟಿ ಕಾಲೇಜು ಕಟೀಲು ತಂಡವನ್ನು ಸೋಲಿಸಿ ಫೇಬಿಯನ್ ಬಿ.ಎನ್. ಕುಲೊಸೊ ಮೆಮೋರಿಯಲ್ ರೋಲಿಂಗ್ ಟ್ರೋಫಿಯನ್ನು ಪಡೆದುಕೊಂಡಿದೆ.

ಡಾ. ಮೋಹನ್ ಆಳ್ವ ಅಭಿನಂದನೆ

ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ವಿಜೇತ ಕ್ರೀಡಾಪಟುಗಳನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಅಭಿನಂದಿಸಿ, ಶುಭ ಹಾರೈಸಿದ್ದಾರೆ.

ಪುರುಷರ ವಿಭಾಗದಲ್ಲಿ ಬೆಸ್ಟ್ ಆಲ್ ರೌಂಡರ್ ಪ್ರಶಸ್ತಿಯನ್ನು ಆಳ್ವಾಸ್‌ನ ನಂದ ಕುಮಾರ್ ಪಡೆದುಕೊಂಡರೆ, ಬೆಸ್ಟ್ ರಿಸಿವರ್ ಪ್ರಶಸ್ತಿಯನ್ನು ಆಕಾಶ್ ಪಡೆದುಕೊಂಡರು. ಮಹಿಳೆಯರ ವಿಭಾಗದಲ್ಲಿ ಬೆಸ್ಟ್ ಆಲ್ ರೌಂಡರ್ ಪ್ರಶಸ್ತಿಯನ್ನು ಆಳ್ವಾಸ್‌ನ ತನುಶ್ರೀ ಪಡೆದುಕೊಂಡರೆ ಬೆಸ್ಟ್ ರಿಸಿವರ್ ಪ್ರಶಸ್ತಿಯನ್ನು ಗೀತಾ ಪಡೆದುಕೊಂಡರು.

ಬ್ರಹ್ಮಕಲಶೋತ್ಸವ ಸಂಭ್ರಮದಲ್ಲಿರುವ ಪೆರಡಾಲ ದೇವಳಕ್ಕೆ ಸದಾಶಿವ ಶೆಟ್ಟಿ ಭೇಟಿ



ಬದಿಯಡ್ಕ: ಬ್ರಹ್ಮಕಲಶೋತ್ಸವದ ಸಂಭ್ರಮ ಸಡಗರದಲ್ಲಿರುವ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನಕ್ಕೆ ಮಂಗಳವಾರ ಸಂಜೆ ಕೊಡುಗೈದಾನಿ, ಧಾರ್ಮಿಕ ಹಾಗೂ ಸಾಮಾಜಿಕ ಮುಂದಾಳು, ಉದ್ಯಮಿ ಸದಾಶಿವ ಶೆಟ್ಟಿ ಕುಳೂರು ಕನ್ಯಾನ ಭೇಟಿ ನೀಡಿ ಶ್ರೀ ದೇವರ ಪ್ರಸಾದ ಸ್ವೀಕರಿಸಿದರು. ಶ್ರೀ ದೇವರಲ್ಲಿ ಪ್ರಾರ್ಥಿಸಿದ ಅವರು ಬ್ರಹ್ಮಕಲಶೋತ್ಸವದ ಉಗ್ರಾಣ, ವೇದಿಕೆ ವೀಕ್ಷಿಸಿ ಗೋಮಾತೆಗೆ ನಮಿಸಿದರು.

ಪಾಕಶಾಲೆಯನ್ನು ವೀಕ್ಷಿಸಿದ ಅವರು, ಕಾರ್ಯಕರ್ತರೊಂದಿಗೆ ಕುಶಲೋಪರಿಯಾಗಿ ಮಾತನಾಡಿ ಶ್ರೀ ಕ್ಷೇತ್ರವನ್ನು ತುಂಬಾ ಅಚ್ಚುಕಟ್ಟಾಗಿ ನಿರ್ಮಿಸಲಾಗಿದೆ. ಊರಿನ ಜನರ ಶ್ರಮ, ಕಾರ್ಯಕರ್ತರ ಬೆವರ ಹನಿಗೆ ಶಿವನ ಅನುಗ್ರಹವಾಗಿದೆ ಎಂಬುದಕ್ಕೆ ಇಲ್ಲಿನ ಅಭಿವೃದ್ಧಿಯೇ ಸಾಕ್ಷಿ ಎಂದು ತಿಳಿಸಿದರು. ಬ್ರಹ್ಮಕಲಶೋತ್ಸವದ ಸಿದ್ಧತೆಗಳ ಬಗ್ಗೆ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಶ್ರೀಕ್ಷೇತ್ರದಿಂದ ಗೌರವ

ಶ್ರೀ ಕ್ಷೇತ್ರದ ವತಿಯಿಂದ ಸದಾಶಿವ ಶೆಟ್ಟಿ ಕುಳೂರು ಕನ್ಯಾನ ಅವರನ್ನು ಶಾಲು ಹೊದೆಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮೊಕ್ತೇಸರ, ವಕೀಲ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲಗುತ್ತು, ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ಮೊಕ್ತೇಸರ ಸೀತಾರಾಮ ಪಿ., ಹೊರೆಕಾಣಿಕೆ ಸಮಿತಿಯ ಅಧ್ಯಕ್ಷ ಕೃಷ್ಣಮೂರ್ತಿ ಪುದುಕೋಳಿ, ಪ್ರಮುಖರಾದ ಜಯದೇವ ಖಂಡಿಗೆ, ಪ್ರೊ.ಎ.ಶ್ರೀನಾಥ್, ಕಾರ್ತಿಕ್ ಶೆಟ್ಟಿ, ಭಾಸ್ಕರ ಪಂಜಿತ್ತಡ್ಕ, ಚಂದ್ರಹಾಸ ರೈ ಪೆರಡಾಲಗುತ್ತು, ಜಯಪ್ರಕಾಶ ಶೆಟ್ಟಿ ಕಡಾರುಬೀಡು, ರಾಜೇಶ್ ಮಾಸ್ತರ್ ಅಗಲ್ಪಾಡಿ, ಗಂಗಾಧರ ಗೋಳಿಯಡ್ಕ, ಮಹೇಶ್ ವಳಕ್ಕುಂಜ ಮುಂತಾದವರು ಜೊತೆಗಿದ್ದರು.

ಶ್ರೀ ಮಹಾಲಿಂಗೇಶ್ವರ ದೇವಸ್ಥಾನ; ಸಂಪ್ರೋಕ್ಷಣೆ; ಮಂತ್ರಾಕ್ಷತೆ ವಿತರಣೆ

ಪುತ್ತೂರು: ಪುತ್ತೂರು ಮಹಾತೋಭಾರ ಶ್ರೀ ಮಹಾಲಿಂ ಗೇಶ್ವರ ದೇವಸ್ಥಾನ ವರ್ಷಾವಧಿ ಜಾತ್ರೆಯ ಹಿನ್ನೆಲೆಯಲ್ಲಿ ಸೋಮವಾರ ರಾತ್ರಿ ಸಂಪ್ರೋಕ್ಷಣೆ-ಮಂತ್ರಾಕ್ಷತೆ ಸಹಿತ ನಿತ್ಯ ಬಲಿ ಉತ್ಸವ, ವಸಂತ ಕಟ್ಟೆ ಪೂಜೆ ನೆರವೇರಿತು.

ಕ್ಷೇತ್ರದ ತಂತ್ರಿ ಕುಂಟಾರು ರವೀಶ್ ತಂತ್ರಿಯವರು ದೇವರ ಶ್ರೀ ಸತ್ಯ ಧರ್ಮದ ನಡೆಯಲ್ಲಿ ಪ್ರಾರ್ಥಿಸಿ ಭಕ್ತರಿಗೆ ಮಂತ್ರಾಕ್ಷತೆ ವಿತರಿಸಿದರು. ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹಾಗೂ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಅವರು ಅರ್ಚಕ ವೃಂದ, ಚಾಕರಿಯವರಿಗೆ ವಸ್ತ್ರ ವಿತರಿಸಿದರು. ವ್ಯವಸ್ಥಾಪನಾ ಸಮಿತಿ ಸದಸ್ಯರಾದ ವಸಂತ ಕುಮಾರ್ ಕೆದಿಲಾಯ, ಬಿ. ಈಶ್ವರ್ ಬೆಡೇಕರ್, ಕೃಷ್ಣವೇಣಿ, ನಳಿನಿ



ಪಿ. ಶೆಟ್ಟಿ, ದಿನೇಶ್ ಕುಲಾಲ್ ಪಿ.ವಿ., ಮಹಾಬಲ ರೈ ವಳತ್ತಡ್ಕ, ಸುಭಾಶ್ ರೈ ಬೆಳ್ಳಿಪ್ಪಾಡಿ, ವಿನಯ ಕುಮಾರ್ ಸುವರ್ಣ ಬಿ., ಕಾರ್ಯನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ, ಕಚೇರಿ ವ್ಯವಸ್ಥಾಪಕ ಹರೀಶ್ ಶೆಟ್ಟಿ ಮತ್ತಿತರರು ಪಾಲ್ಗೊಂಡಿದ್ದರು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮಂತ್ರಾಕ್ಷತೆ ಸ್ವೀಕರಿಸಿದರು.

ಐನೆಕಿದು: ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆ

ಸುಬ್ರಹ್ಮಣ್ಯ: ಐನೆಕಿದು ಗ್ರಾಮದ ಖಾಸಗಿಯವರ ಜಾಗದ ಪಕ್ಕದ ಕಾಡಿನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಅಸ್ಥಿ ಪಂಜರ ಪತ್ತೆಯಾಗಿದೆ. ಇದು ಕಲ್ಮಕಾರು ಗ್ರಾಮದ ಯಶವಂತ ಕಾಜಿಮಡ್ಕ ಎಂಬವರದ್ದು ಆಗಿರಬಹುದು ಎಂದು ಶಂಕಿಸಲಾಗಿದೆ. ಯಶವಂತ ಕಾಜಿಮಡ್ಕ ಎಂಬವರು ನಾಲ್ಕು ತಿಂಗಳ ಹಿಂದೆ ಕಾಣೆಯಾಗಿದ್ದು ಆ ಬಳಿಕ ಪತ್ತೆಯಾಗಿರಲಿಲ್ಲ, ಈ ಕುರಿತು ಸುಬ್ರಹ್ಮಣ್ಯ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಮಂದಾರ್ತಿ ಸೇವಾ ಸಹಕಾರ ಸಂಘದ ಬಿಲ್ಲಾಡಿ ಶಾಖೆಯ ಉದ್ಘಾಟನಾ ಸಮಾರಂಭ | ಶಾಖೆಯಲ್ಲಿ 2 ಕೋಟಿ 78 ಲಕ್ಷ ಠೇವಣಿ ಸಂಗ್ರಹ

ಸಹಕಾರಿ ಸಂಘಗಳಿಂದ ಗ್ರಾಮೀಣ ಆರ್ಥಿಕತೆಯಲ್ಲಿ ಸ್ವಾವಲಂಬನೆ: ಶ್ರೀನಿವಾಸ ಪೂಜಾರಿ

ಬ್ರಹ್ಮಾವರ: ಸಹಕಾರಿ ಸಂಘಗಳು ಗ್ರಾಮೀಣ ಜನರಿಗೆ ಸಾಲ ನೀಡುವುದರ ಮೂಲಕ ಜನರ ಆರ್ಥಿಕ ಅಭಿವೃದ್ಧಿಗೆ, ಸ್ವಾವಲಂಬನೆಗೆ ಕಾರಣವಾಗಿವೆ. ಮಂದಾರ್ತಿ ಸಹಕಾರ ಸಂಘ ಕೂಡ 5 ಗ್ರಾಮಗಳ ಜನರ ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರ ನೀಡಿದೆ. ಈ ಸಂಘದ ಬೆಳವಣಿಗೆಗೆ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ಕಾರಣ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ನುಡಿದರು.

ಅವರು ಮಂದಾರ್ತಿ ಸೇವಾ ಸಹಕಾರ ಸಂಘದ ಬಿಲ್ಲಾಡಿ ಶಾಖೆಯ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕುಂದಾಪುರ ಶಾಸಕ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಭದ್ರತಾ ಕೊಠಡಿ ಉದ್ಘಾಟಿಸಿ, ಸಂಘ ಶತಮಾನ ಪೂರೈಸಿದ್ದು, ಆರ್ಥಿಕವಾಗಿ ಬಲಿಷ್ಠವಾಗಿದೆ. ಸಹಕಾರಿ



ಸಂಘ ಬಲಿಷ್ಠವಾದಲ್ಲಿ ಹಳ್ಳಿಯ ಜನರಿಗೆ ಇದರಿಂದ ಸೌಲಭ್ಯ ಪಡೆಯಲು ಸಾಧ್ಯ ಎಂದು ನುಡಿದರು.

ಮಂದಾರ್ತಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಎಚ್.ಗಂಗಾಧರ ಶೆಟ್ಟಿ ಸಭಾಧ್ಯಕ್ಷತೆ ವಹಿಸಿ, ಮದ್ರಾಸ್ ಸರಕಾರ ಇದ್ದಾಗ ನೋಂದಣಿಯಾಗಿ ಆರಂಭಗೊಂಡ ಮಂದಾರ್ತಿ ಸಂಘ 2000ನೇ ಇಸವಿಯಿಂದ ಲಾಭಕ್ಕೆ ಬಂದಿದ್ದು ಪ್ರಸ್ತುತ ಸದಸ್ಯರಿಗೆ ಶೇ.18 ಡಿವಿಡೆಂಡ್ ಕೊಡುತ್ತಾ ಬಂದಿದೆ. ಎಲ್ಲರ ಸಹಕಾರದಲ್ಲಿ ಸಂಸ್ಥೆ ಇಂದು ವ್ಯವಸ್ಥಿತವಾಗಿ ಮುಂದುವರಿಯುತ್ತಿದೆ. 2024ರಲ್ಲಿ ಸಂಸ್ಥೆ ಶತಮಾನೋತ್ಸವ ಆಚರಿಸಿದೆ. ಹೆಗ್ಗುಂಜೆ, ನಡೂರು, ಶಿರೂರು ಗ್ರಾಮಗಳಲ್ಲಿ ಶಾಖೆ ಹೊಂದಿದ್ದು ಬಿಲ್ಲಾಡಿಯಲ್ಲಿ 4ನೇ ಶಾಖೆ ಉದ್ಘಾಟಿಸಿದೆ. ಈ ಶಾಖೆಯಲ್ಲಿ 2 ಕೋಟಿ 78 ಲಕ್ಷ ಠೇವಣಿ ಸಂಗ್ರಹಿಸಲಾಗಿದೆ ಎಂದರು.

ದ.ಕ. ಜಿ.ಕೇ.ಸ.ಬ್ಯಾಂಕ್ ನಿರ್ದೇಶಕ ಬೆಳಪು ಡಾ. ಐಕಳಬಾವ ದೇವಿಪ್ರಸಾದ್ ಶೆಟ್ಟಿ ಭದ್ರತಾಕೋಶ ಉದ್ಘಾಟಿಸಿ, ರಾಷ್ಟ್ರೀಕೃತ ಬ್ಯಾಂಕ್‌ಗಳಿಗಿಂತ ಸಹಕಾರಿ ಸಂಘಗಳು ಸದಸ್ಯರಿಗೆ ಅತಿ ಶೀಘ್ರ ಸಾಲ ನೀಡುತ್ತವೆ. ರೈತಾಪಿ ವರ್ಗದವರಿಗೆ ಬಡ್ಡಿರಹಿತ ಸಾಲ ಕೊಡುತ್ತೇವೆ. ಆದರೆ ಸರಕಾರ ಬಡ್ಡಿ ಕೊಡುವಾಗ ವಿಳಂಬ ಮಾಡುತ್ತಿದೆ. ಮಂದಾರ್ತಿ ಸಂಘ ಇಂದು ಜಿಲ್ಲೆಯಲ್ಲಿ ಉತ್ತಮ ಸಹಕಾರಿ ಸಂಘವಾಗಿ ಬೆಳೆದಿದೆ ಎಂದರು.

ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಬಿ.ಜಯಕರ ಶೆಟ್ಟಿ ಇಂದ್ರಾಳಿ ಗೋದಾಮು ಉದ್ಘಾಟಿಸಿದರು. ಕಂಪ್ಯೂಟರನ್ನು ಉಡುಪಿ ತಾಲೂಕು ವ್ಯವಸಾಯ ಉತ್ಪನ್ನ ಸಹಕಾರ ಮಾರಾಟ ಸಂಘದ ಬಿ.ಅಶೋಕ್ ಕುಮಾರ್ ಶೆಟ್ಟಿ ಮೈರ್ಮಾಡಿ ಉದ್ಘಾಟಿಸಿದರು. ಸಾಲಪತ್ರವನ್ನು ಮಂದಾರ್ತಿ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಎಚ್.ವಿಠಲ ಶೆಟ್ಟಿ ಉಳಿತಾಯ ಖಾತೆ ಪುಸ್ತಕವನ್ನು ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿರ್ದೇಶಕ ರಾಜೇಶ್ ರಾವ್ ವಿತರಿಸಿದರು. ಠೇವಣಿ ಪತ್ರವನ್ನು ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿರ್ದೇಶಕ ಬೆಳ್ಳಂಪಳ್ಳಿ ಅಶೋಕ್ ಕುಮಾರ್ ಶೆಟ್ಟಿ ಠೇವಣಿ ಪತ್ರ ಬಿಡುಗಡೆಗೊಳಿಸಿದರು. ಸಮಾರಂಭದಲ್ಲಿ ಸಹಕಾರ ಸಂಘಗಳ ಉಪನಿಬಂಧಕ ಕೆ.ಆರ್.ಲಾವಣ್ಯ ಉಪಸ್ಥಿತರಿದ್ದರು. ಉಪಾಧ್ಯಕ್ಷ ಸುರೇಶ್ ಶೆಟ್ಟಿ ಕಾಡೂರು, ನಿರ್ದೇಶಕ ಶಂಭು ಶಂಕರ ರಾವ್, ಜಲಂಧರ ಶೆಟ್ಟಿ, ಗಣೇಶ್ ಶೆಟ್ಟಿ, ದಿನೇಶ್ ಕುಮಾರ್, ಚಂದ್ರಶೇಖರ, ಪೃಥ್ವಿರಾಜ್ ಆರ್.ಶೆಟ್ಟಿ ಪ್ರೇಮ, ಗುಲಾಬಿ, ಬಸವ ನಾಯ್ಕ್, ರಾಧ, ಪ್ರವೀಣ್ ಕುಮಾರ್ ಶೆಟ್ಟಿ, ಗುರುಪ್ರಸಾದ್, ಶಾಖಾ ವ್ಯವಸ್ಥಾಪಕ ವಿಜಯ ಹಾಗೂ ದ.ಕ.ಜಿ.ಕೇಂ.ಸ. ಬ್ಯಾಂಕ್ ಪ್ರತಿನಿಧಿ ರಾಜಾರಾಮ ಶೆಟ್ಟಿ ಉಪಸ್ಥಿತರಿದ್ದರು. ಕಟ್ಟಡ ಕಾಮಗಾರಿ ನೆರವೇರಿಸಿದ ಗುತ್ತಿಗೆದಾರ ಗಣೇಶ್ ಪ್ರಸಾದ್ ಶೆಟ್ಟಿ ಸಿವಿಲ್ ಇಂಜಿನಿಯರ್ ಅಕ್ಷಯ್ ಹೆಗ್ಡೆ ನಿವೇಶನವನ್ನು ರಿಯಾಯಿತಿ ದರದಲ್ಲಿ ನೀಡಿದ ಉದ್ಯಮಿ ಸುದೇಶ್ ಹೆಗ್ಡೆಯನ್ನು ಸನ್ಮಾನಿಸಲಾಯಿತು. ಉಜ್ವಲ ಹಾಗೂ ಪ್ರಕೃತಿ ಸ್ವಸಹಾಯ ಸಂಘಗಳಿಗೆ ಪುಸ್ತಕ ನೀಡಿ ಉದ್ಘಾಟಿಸಲಾಯಿತು. ವೈದ್ಯಕೀಯ ಚಿಕಿತ್ಸಾ ವೆಚ್ಚಕ್ಕೆ ಸಹಾಯಧನ ನೀಡಲಾಯಿತು. ಸಂಘದ ನಿರ್ದೇಶಕ ಬಿಲ್ಲಾಡಿ ಪೃಥ್ವಿರಾಜ್ ಆರ್.ಶೆಟ್ಟಿ ಸ್ವಾಗತಿಸಿದರು. ಪ್ರಧಾನ ವ್ಯವಸ್ಥಾಪಕ ರಾಮಕೃಷ್ಣ ವಂದಿಸಿದರು, ಶಿಕ್ಷಕ ಹಾವಂಜೆ ಪ್ರಶಾಂತ್ ಶೆಟ್ಟಿ ನಿರೂಪಿಸಿದರು.

ಸುತ್ತಮುತ್ತ

ಏ. 23: ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

ಉಡುಪಿ: ನಗರದ ಕುಂಜಿಬೆಟ್ಟು ಕ್ರೋಮಾ ಬಿಲ್ಡಿಂಗ್‌ನ ಪ್ರಗತಿ ಬಿಸಿನೆಸ್ ಪಾರ್ಕ್‌ನ ಎರಡನೇ ಮಹಡಿಯ ಆಕ್ಸಿಸ್ ಮ್ಯಾಕ್ಸ್‌ಲೈಫ್ ಇಲ್ಲಿ ಏ. 23ರಂದು ಬೆಳಗ್ಗೆ 10.30ಕ್ಕೆ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ಆಯೋಜಿಸಲಾಗಿದೆ. ಪಿಯುಸಿ, ಐಟಿಐ ಮತ್ತು ಇತರೆ ಪದವಿ ವಿದ್ಯಾರ್ಹತೆಯೊಂದಿಗೆ ಉತ್ತೀರ್ಣರಾದ ಅಭ್ಯರ್ಥಿಗಳು ಅಂಕಪಟ್ಟಿ, ಸ್ವವಿವರವುಳ್ಳ ರೆಸ್ಯೂಮ್, ಸಿವಿ ಹಾಗೂ ಆಧಾರ್ ಕಾರ್ಡ್‌ಪ್ರತಿಯೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾಧಿಕಾರಿ ಸಂಕೀರ್ಣ, ರಜತಾದ್ರಿ, ಮಣಿಪಾಲ, ಉಡುಪಿ ದೂರವಾಣಿ ಸಂಖ್ಯೆ: 8105618291, 9945856670 ಹಾಗೂ 9901472710 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ ತರಗತಿ ಪ್ರವೇಶಾತಿ

ಉಡುಪಿ: ಮೈಸೂರು ವಿಶ್ವವಿದ್ಯಾಲಯ ಸಂಯೋಜಿತ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನಲ್ಲಿ ಪ್ರಸಕ್ತ ಸಾಲಿಗೆ ನಾಲ್ಕು ವರ್ಷಗಳ ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ (ಬಿವಿಎ) ಪದವಿ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮದ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿದ್ದು ದ್ವಿತೀಯ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮೇ 30 ಕೊನೆಯ ದಿನವಾಗಿದ್ದು ಆಸಕ್ತ ಅಭ್ಯರ್ಥಿಗಳು ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://uucms.karnataka.gov.in ಅಥವಾ https://www.cavamysore.karnataka.gov.in ಅಥವಾ ಕಚೇರಿ ದೂರವಾಣಿ ಸಂಖ್ಯೆ 0821-2438931 ಅನ್ನು ಸಂಪರ್ಕಿಸಬಹುದು ಎಂದು ಕಾವಾ ಕಾಲೇಜು ಪ್ರಕಟಣೆ ತಿಳಿಸಿದೆ.

ಅಂಗನವಾಡಿ ಮಕ್ಕಳ ಹಬ್ಬ ಪ್ರತಿಭಾ ಪುರಸ್ಕಾರ

ಕುಂದಾಪುರ: ಕಲಾಶ್ರೀ ಶಿಕ್ಷಣ ಪ್ರೇಮಿ ಬಳಗ ಗಂಗೊಳ್ಳಿ ಮತ್ತು ಗಂಗೊಳ್ಳಿ ವಲಯ ಅಂಗನವಾಡಿ ಕೇಂದ್ರಗಳ ಜಂಟಿ ಆಶ್ರಯದಲ್ಲಿ ಅಂಗನವಾಡಿ ಮಕ್ಕಳ ಹಬ್ಬ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ದಾಕುಹಿತ್ಲು ಅಂಗನವಾಡಿ ಕೇಂದ್ರದ ವಠಾರದಲ್ಲಿ ನಡೆಯಿತು. ಡಾ.ಕಲಾಶ್ರೀ ಕಾರ್ಯಕ್ರಮವನ್ನು ಉದ್ಘಾಟಿಸಿ 30 ಪ್ರತಿಭಾನ್ವಿತ ಅಂಗನವಾಡಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿದರು. ಕಲಾಶ್ರೀ ಶಿಕ್ಷಣ ಪ್ರೇಮಿ ಬಳಗ ಗಂಗೊಳ್ಳಿ ಇದರ ಅಧ್ಯಕ್ಷೆ ಸುಮಿತ್ರಾ ಅಧ್ಯಕ್ಷತೆ ವಹಿಸಿದ್ದರು. ಗಂಗೊಳ್ಳಿ ರಥಬೀದಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಚಂದ್ರಕಲಾ, ಉಡುಪಿ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ಫಿಲೋಮಿನಾ ಫರ್ನಾಂಡಿಸ್, ಗಂಗೊಳ್ಳಿ ಬಿಲ್ಲವ ಸೇವಾ ಸಂಘದ ಅಧ್ಯಕ್ಷ ಗೋಪಾಲ ಬಿಲ್ಲವ, ಜಿ.ಈಶ್ವರ, ಶೋಭಾ ಎಸ್.ಕೆ., ಶೇಷಮ್ಮ, ಕಮಲಾ, ರೇಖಾ ಖಾರ್ವಿ, ಸಂಗೀತಾ ಬಿ., ಸಹನಾ, ನಿಖಿತಾ ಇದ್ದರು. ಸುಮಿತ್ರಾ ಕಾರ್ಯಕ್ರಮ ನಿರ್ವಹಿಸಿದರು. ರೇಖಾ ಖಾರ್ವಿ ವಂದಿಸಿದರು.

ಯುಕ್ತಿ ಕೋಡಿಂಗ್ ಕ್ಲಬ್ ಉದ್ಘಾಟನೆ

ಕುಂದಾಪುರ: ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಗಣಕ ವಿಜ್ಞಾನ ವಿಭಾಗದ ಆಶ್ರಯದಲ್ಲಿ ಯುಕ್ತಿ ಕೋಡಿಂಗ್ ಕ್ಲಬ್‌ನ ಉದ್ಘಾಟನೆ ಶನಿವಾರ ಕಾಲೇಜಿನಲ್ಲಿ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಮಾತನಾಡಿ, ಇಂದಿನ ತಂತ್ರಜ್ಞಾನ ಯುಗದಲ್ಲಿ ಕೋಡಿಂಗ್ ಬಹಳ ಮಹತ್ವವನ್ನು ಪಡೆದುಕೊಂಡಿದೆ. ಇಂತಹ ಕ್ಲಬ್‌ಗಳು ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕ ಕೋಡಿಂಗ್ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು, ನವೀನ ಆಲೋಚನೆಗಳನ್ನು ಉತ್ತೇಜಿಸಲು ಸಹಕಾರಿ ಆಗುತ್ತವೆ ಎಂದು ಹೇಳಿದರು. ಉಪ ಪ್ರಾಂಶುಪಾಲ ಡಾ.ಚೇತನ ಶೆಟ್ಟಿ ಕೋವಾಡಿ ಆಶಯ ನುಡಿಗಳನ್ನಾಡಿದರು. ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥ ಮಹೇಶ ಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕ್ರಮದ ಸಂಯೋಜಕರಾದ ಜಯಲಕ್ಷ್ಮೀ ಕೆ. ಹಾಗೂ ಪ್ರಣಮ್ ಆರ್. ಉಪಸ್ಥಿತರಿದ್ದರು. ಮನಿಷಾ ಪ್ರಾರ್ಥಿಸಿದರು. ರಕ್ಷಾ ಸ್ವಾಗತಿಸಿ, ವಾಣಿಶ್ರೀ ವಂದಿಸಿದರು. ರಶ್ಮಿತಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಕಳೆದ ಸಾಲಿನ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಲ್ಲಿ ರೈತರಿಗೆ ಅನ್ಯಾಯ | ಕಡಬದಲ್ಲಿ ಪ್ರತಿಭಟನೆ

ರೈತರಿಗೆ ಬೆಳೆವಿಮೆ ಸಮರ್ಪಕವಾಗಿ ಸಿಗಲಿ: ಶಾಸಕಿ ಭಾಗೀರಥಿ



ಕಡಬ: ಹವಾಮಾನ ಆಧಾರಿತ ವಿಮಾ ಯೋಜನೆಯಲ್ಲಿ ರೈತರಿಗೆ ಆಗಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸಿ ಸಮರ್ಪಕ ಪರಿಹಾರ ನೀಡಬೇಕು. ತಪ್ಪಿದ್ದಲ್ಲಿ ರೈತರೊಂದಿಗೆ ಮುಂಚೂಣಿಯಲ್ಲಿ ನಿಂತು ಹೋರಾಟ ನಡೆಸಲಾಗುವುದು ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಎಚ್ಚರಿಸಿದರು.

ರಾಜ್ಯದಲ್ಲಿ ಕಳೆದ 2024-25ನೇ ಸಾಲಿಗೆ ಸಂಬಂಧಿಸಿದ ಹವಾಮಾನ ಆಧಾರಿತ ಬೆಳೆ ವಿಮೆಯಲ್ಲಿ ರೈತರಿಗೆ ಆಗಿರುವ ಅನ್ಯಾಯದ ವಿರುದ್ಧ ಮಲೆನಾಡು ಜನಹಿತ ರಕ್ಷಣ ವೇದಿಕೆಯ ನೇತೃತ್ವದಲ್ಲಿ ಮಂಗಳವಾರ ಕಡಬ ತಾಲೂಕು ಕಚೇರಿಯ ಎದುರು ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಜಿಲ್ಲೆಯ ರೈತರಿಗೆ ಬೆಳೆವಿಮಾ ಪರಿಹಾರ ಹಂಚಿಕೆಯಲ್ಲಿ ಭಾರೀ ಅನ್ಯಾಯವಾಗಿದೆ. ಈ ಕುರಿತು ವಿಧಾನ ಸಭೆಯಲ್ಲಿ ಈಗಾಗಲೇ ವಿಷಯ ಪ್ರಸ್ತಾಪಿಸಿದ್ದೇನೆ. ಆಗಿರುವ ಅನ್ಯಾಯವನ್ನು ಸರಿಪಡಿಸುವ ಭರವಸೆ ಸಂಬಂಧಪಟ್ಟವರಿಂದ ಸಿಕ್ಕಿತ್ತು. ಆದರೆ, ಅದು ಈವರೆಗೆ ಈಡೇರಿಲ್ಲ. ಈ ವಿಚಾರಲ್ಲಿ ಮತ್ತೊಮ್ಮೆ ಸರ್ಕಾರದ ಗಮನ ಸೆಳೆಯಲಾಗುವುದು. ಅದಕ್ಕೆ ಸ್ಪಂದನೆ ದೊರೆಯದಿದ್ದರೆ ರೈತರೊದಿಗೆ ಸೇರಿ ಪ್ರತಿಭಟನೆ ನಡೆಸಲು ಹಿಂಜರಿಯುವುದಿಲ್ಲ ಎಂದರು.

ಮಲೆನಾಡು ಜನಹಿತ ರಕ್ಷಣಾ ವೇದಿಕೆಯ ರಾಜ್ಯ ಸಂಚಾಲಕ ಕಿಶೋರ್ ಶಿರಾಡಿ, 2024ನೇ ಸಾಲಿನಲ್ಲಿ ರೈತರು ಪಾವತಿಸಿದ ಬೆಳೆ ವಿಮೆ ಕಂತಿನ ಹಣಕ್ಕೆ ಅರ್ಹವಾಗಿ ಸಿಗುವ ಪರಿಹಾರ ನೀಡಬೇಕು, ರೈತರು ವಿಮಾ ಪರಿಹಾರದಿಂದ ವಂಚಿತರಾಗಲು ಕಾರಣಕರ್ತರಾದ ಅಧಿಕಾರಿಗಳನ್ನು ಅಮಾನತು ಮಾಡಬೇಕು, ಬೆಳೆ ವಿಮೆಯಲ್ಲಿ ಜಿಲ್ಲೆಯಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ ರಾಜ್ಯ ಮಟ್ಟದ ಉನ್ನತ ಅಧಿಕಾರಿಗಳ ತಂಡದಿಂದ ತನಿಖೆ ನಡೆಸಬೇಕು ಎಂದು ಅಗ್ರಹಿಸಿದ ಕಿಶೋರ್ ಕುಮಾರ್, ಇನ್ನು 15 ದಿನಗಳ ಒಳಗೆ ಬೆಳೆ ವಿಮೆಯ ಪರಿಹಾರ ಜಿಲ್ಲೆಯ ಜನರಿಗೆ ಸಮರ್ಪಕವಾಗಿ ವಿತರಣೆಯಾಗದಿದ್ದಲ್ಲಿ ರಸ್ತೆ ತಡೆ ಮಾಡಿ ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಎಚ್ಚರಿಸಿದರು.

ಪ್ರತಿಭಟನೆ ಮಾಹಿತಿ ಅರಿತು ಹಣ ಜಮೆ

ಬೆಳೆ ವಿಮಾ ಪರಿಹಾರ ನೀಡುವಲ್ಲಿ ಅಧಿಕಾರಿಗಳು ರೈತರಿಗೆ ವಂಚನೆ ಮಾಡಿದ್ದಾರೆ. ಬೆಳೆ ವಿಮಾ ಪರಿಹಾರ ನೀಡುವಲ್ಲಿ ಭಾರೀ ಪ್ರಮಾಣದ ಅವ್ಯಹಾರ ನಡೆದಿದೆ. ನಾವು ಪ್ರತಿಭಟನೆ ಮಾಡುವುದನ್ನು ಅರಿತ ಅಧಿಕಾರಿಗಳು ಅಲ್ಪ ಸ್ವಲ್ಪ ಹಣ ಖಾತೆಗೆ ಜಮೆ ಮಾಡಿದ್ದಾರೆ. ಈ ಕಣ್ಣೊರೆಸುವ ತಂತ್ರ ಅಗತ್ಯವಿಲ್ಲ, ರೈತರು ಸಂಘಟಿತರಾದರೆ ನಿಮ್ಮ ಈ ಕುಟಿಲ ನೀತಿಯನ್ನು ಮಟ್ಟ ಹಾಕುತ್ತಾರೆ.

● **ಕಿಶೋರ್ ಶಿರಾಡಿ,**
ಮಲೆನಾಡು ಜನಹಿತ ರಕ್ಷಣಾ ವೇದಿಕೆಯ ರಾಜ್ಯ ಸಂಚಾಲಕ

ಜಿ.ಪಂ. ಮಾಜಿ ಸದಸ್ಯ ಕೃಷ್ಣ ಶೆಟ್ಟಿ ಕಡಬ, ರೈತ ಮುಖಂಡರಾದ ಅಶೋಕ್ ಮೂಲೆಮಜಲು, ನಾಸಿರ್ ಗೋಳಿತೊಟ್ಟು ಮತ್ತಿತರರು ಮಾತನಾಡಿ ಹೋರಾಟಕ್ಕೆ ಬೆಂಬಲಿಸಿದರು. ಬಳಿಕ ಕಡಬ ತಹಶೀಲ್ದಾರ್ ಪ್ರಭಾಕರ ಖಜೂರೆ ಮುಖಾಂತರ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಯಿತು. ಪ್ರಮುಖರಾದ ಭಾಸ್ಕರ್ ಗೌಡ ಇಚ್ಲಂಪಾಡಿ, ಕುಶಾಲಪ್ಪ ಗೌಡ ಗೋಳಿತೊಟ್ಟು, ಮಿಲನ್ ಮಚ್ಚಿನಡ್ಕ, ರವಿಪ್ರಸಾದ್ ಶೆಟ್ಟಿ ನೆಲ್ಯಾಡಿ, ಉಮೇಶ್ ಶೆಟ್ಟಿ ಸಾಯಿರಾಮ್, ತೋಟಗಾರಿಕಾ ಇಲಾಖೆಯ ರೇಖಾ ಇದ್ದರು. ಇಚ್ಲಂಪಾಡಿ, ಕೌಕ್ರಾಡಿ, ನೆಲ್ಯಾಡಿ, ಕೊಣಾಲು, ಗೋಳಿತೊಟ್ಟು ಹಾಗೂ ಆಲಂತಾಯ ಗ್ರಾಮಗಳ ಸುಮಾರು 2000ಕ್ಕೂ ಅಧಿಕ ರೈತರು ತಾವು ಪಾವತಿಸಿದ ಬೆಳೆ ವಿಮೆಯ ಅರ್ಜಿ ಸಂಖ್ಯೆ ನಮೂದಿಸಿ ಬೆಳೆ ವಿಮೆ ನೀಡುವಂತೆ ವೈಯಕ್ತಿಕವಾಗಿ ತಹಶೀಲ್ದಾರ್ ಮುಖಾಂತರ ಮನವಿ ಸಲ್ಲಿಸಿದರು. ದಿವ್ಯೇಶ್ ಗೌಡ ಕಲ್ಯ ಪ್ರಸ್ತಾವಿಸಿದರು. ನಾಗೇಶ್ ಗೌಡ ನಳಿಯಾರ್ ಸ್ವಾಗತಿಸಿ, ಜಯಪ್ರಕಾಶ್ ಕೂಜುಗೋಡು ವಂದಿಸಿದರು. ರಮಾನಂದ ಎಣ್ಣೆಮಜಲು ಕಾರ್ಯಕ್ರಮ ನಿರ್ವಹಿಸಿದರು.

ಓಡ್ದೂರು ಫಾರ್ಮ್ಸ್‌ನಲ್ಲಿ ಬಿಜೆಪಿ ಉತ್ತರ ಮಂಡಲ ಪ್ರಶಿಕ್ಷಣ ವರ್ಗ ಸಮಾರೋಪ



ಕೈಕಂಬ: ಭಾರತೀಯ ಜನತಾ ಪಾರ್ಟಿಯ 2026ರ ಪಂಡಿತ್ ದೀನ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನದ ಅಂಗವಾಗಿ ಗಂಜಿಮಠ ಸಮೀಪದ ಓಡ್ದೂರು ಫಾರ್ಮ್ಸ್‌ನಲ್ಲಿ ಭಾನುವಾರ ಆರಂಭವಾಗಿದ್ದ ಮಂಗಳೂರು ಉತ್ತರ ಮಂಡಲ ಬಿಜೆಪಿಯ ಒಂದು ದಿನದ ಪ್ರಶಿಕ್ಷಣ ವರ್ಗದ ಸಮಾರೋಪ ಸೋಮವಾರ ಸಂಜೆ ನಡೆಯಿತು.

ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ, ಕಾರ್ಯಕರ್ತರು ಪಕ್ಷವನ್ನು ಇನ್ನಷ್ಟು ಬಲಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಕೇಂದ್ರ ಸರಕಾರದ ಜನಪರ ಕಾರ್ಯಗಳು, ದೇಶದ ಅಭಿವೃದ್ಧಿಗಾಗಿ ನರೇಂದ್ರ ಮೋದಿಯವರು ಹಮ್ಮಿಕೊಂಡಿರುವ ಕಾರ್ಯಗಳ ಜತೆಗೆ, ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿದ ವಿಪಕ್ಷಗಳ ಮಹಿಳಾ ವಿರೋಧಿ ಧೋರಣೆಗಳನ್ನು, ರಾಜ್ಯದ ಕಾಂಗ್ರೆಸ್ ಸರಕಾರದ ವೈಫಲ್ಯಗಳನ್ನು, ಬೆಲೆ ಏರಿಕೆ ಮುಂತಾದ ವಿಚಾರಗಳನ್ನು ಪ್ರತಿಯೊಬ್ಬರಿಗೂ ತಲುಪಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಉತ್ತರ ಮಂಡಲ ಬಿಜೆಪಿ ಅಧ್ಯಕ್ಷ ರಾಜೇಶ್ ಕೊಟ್ಟಾರಿ ಮಾತನಾಡಿ, ಕಾರ್ಯಕರ್ತರು ಪ್ರಶಿಕ್ಷಣ ವರ್ಗದಲ್ಲಿ ಪಡೆದು ಅನುಭವ ಬಳಸಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಮಂಗಳೂರು ನಗರ ಉತ್ತರ ಶಾಸಕ ಡಾ. ಭರತ್ ಶೆಟ್ಟಿ, ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್, ಪ್ರಶಿಕ್ಷಣ ವರ್ಗದ ಸಂಚಾಲಕ ರಣದೀಪ್ ಕಾಂಚನ್, ಸಹ ಸಂಚಾಲಕರಾದ ವರುಣ್ ಚೌಟ, ಪ್ರಸಾದ್‌ಕುಮಾರ್ ಎಂ. ಎಡಪದವು, ಅಮೃತ್‌ಪಾಲ್ ಡಿ'ಸೋಜಾ, ಮನಪಾ ನಿಕಟಪೂರ್ವ ಸದಸ್ಯೆ ಸಂಗೀತಾ ನಾಯಕ್, ಉತ್ತರ ಮಂಡಲ ಕಾರ್ಯದರ್ಶಿ ಸಂದೀಪ್ ಪಚ್ಚನಾಡಿ ಉಪಸ್ಥಿತರಿದ್ದರು. ಸಂದೀಪ್ ಪಚ್ಚನಾಡಿ ಸ್ವಾಗತಿಸಿ, ಪ್ರಶಾಂತ್ ಪೈ ನಿರೂಪಿಸಿ, ವರುಣ್ ಚೌಟ ಕಾರ್ಯಕ್ರಮ ವಂದಿಸಿದರು.

ಹಲೆಪ್ಪಾಡಿ ಭಜನಾ ಮಂದಿರದ ವಾರ್ಷಿಕೋತ್ಸವ, ಭಜನಾ ಮಂಗಳೋತ್ಸವ



ಬಂಟ್ವಾಳ: ಕುಡಂಬೆಟ್ಟು ಗ್ರಾಮದ ಹಲೆಪ್ಪಾಡಿ ಶ್ರೀ ರಾಮಾಂಜನೇಯ ಭಜನ ಮಂದಿರದ ವಾರ್ಷಿಕೋತ್ಸವ ಪ್ರಯುಕ್ತ ಭಜನ ಮಂಗಳೋತ್ಸವ ಹಾಗೂ ಸಾಧಕರಿಗೆ ಸಮ್ಮಾನ ಕಾರ್ಯಕ್ರಮ ಭಾನುವಾರ ರಾತ್ರಿ ನಡೆಯಿತು.

ಬೆಳಗ್ಗೆ ಭಜನ ಮಂಗಳೋತ್ಸವಕ್ಕೆ ಚಾಲನೆ, ಗಣಯಾಗ, ಮಧ್ಯಾಹ್ನ ಮಹಾಪೂಜೆ, ಸಂಜೆ ಭಜನ ಮಂಗಳ ನಡೆಯಿತು.

ಬಳಿಕ ನಡೆದ ಧಾರ್ಮಿಕ ಸಭೆಯಲ್ಲಿ ವಾಮದಪದವು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಂಜೀವ ಪೂಜಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಯುವ ಜನತೆ ಭಜನಾ ಮಂದಿರದಲ್ಲಿ ತೊಡಗಿಸಿಕೊಳ್ಳುವ ಮೂಲಕ ಆಧ್ಯಾತ್ಮಿಕ, ಧಾರ್ಮಿಕ ಚಿಂತನೆಯ ಅರಿವು ಉಂಟಾಗುತ್ತದೆ ಎಂದು ಹೇಳಿದರು. ಭಜನ ಸಂಕೀರ್ತನಕಾರ ನವೀನ್ ಶೆಟ್ಟಿ ಕಕ್ಕಿಬೆಟ್ಟು, ರಂಗಭೂಮಿ ಕಲಾವಿದ ರತ್ನದೇವ್ ಪುಂಜಾಲಕಟ್ಟೆ ಮಾತನಾಡಿದರು. ರಾಯಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ರಾಘವೇಂದ್ರ ಪೂಜಾರಿ, ನಾಟಕಕಾರ, ಚಲನಚಿತ್ರ ನಿರ್ದೇಶಕ ರಾಘವೇಂದ್ರ ಕಾರಂತ ಮೊಗರ್ನಾಡು, ಪ್ರಗತಿಪರ ಕೃಷಿಕ ಗಂಗಾಧರಮುಗೇರ, ಧರ್ಮಸ್ಥಳ ಯೋಜನೆ ಸೇವಾ ಪ್ರತಿನಿಧಿ ಮೋಹನದಾಸ ಗಟ್ಟಿ ಸಮಿತಿ ಗೌರವಾಧ್ಯಕ್ಷ ಚೇತನ್ ಕುಮಾರ್ ಕುದ್ಕಂದೋಡಿ ವೇದಿಕೆಯಲ್ಲಿದ್ದರು. ಸಮಿತಿ ಕಾರ್ಯಾಧ್ಯಕ್ಷ ಡಾ.ರಾಮಕೃಷ್ಣ ಎಸ್. ಸನಂಗುಳಿ, ಪ್ರ.ಕಾರ್ಯದರ್ಶಿ ವಿನೋದ್ ಪೂಜಾರಿ ಹಲೆಪ್ಪಾಡಿ, ಭಜನಾ ಮಂಡಳಿ ಪ್ರಮುಖರಾದ ಕೀರ್ತನ್ ಕುಮಾರ್, ಸಂಧ್ಯಾ ಆರ್. ಕೋರ್ನಾಯ, ಪ್ರಶಾಂತ್ ದೇವಾಡಿಗ, ಪುನೀತ್ ಹಲೆಪ್ಪಾಡಿ, ಶಿವ ಪ್ರಸಾದ್ ಪುಣ್ಕೆದಡಿ, ದೀಪಾ, ಶ್ರೇಯಾ, ಪೂಜಾ ಡಿ.ಕೆ. ಇದ್ದರು. ನಾಟಿ ವೈದ್ಯೆ ವೆಂಕಮ್ಮ ಪೂಜಾರ್ತಿ ಕಂಗಿತ್ಲು ಹಾಗೂ ಭಜನಾ ಸಂಕೀರ್ತನಕಾರ ನವೀನ್ ಶೆಟ್ಟಿ ಕಕ್ಕಿಬೆಟ್ಟು ಅವರನ್ನು ಸಮ್ಮಾನಿಸಲಾಯಿತು. ಮಂದಿರದ ಅಧ್ಯಕ್ಷ ಕಿರಣ್ ಕೋಟ್ಯಾನ್ ಸ್ವಾಗತಿಸಿದರು. ಸತೀಶ್ ಕರ್ಕೇರ ಕಯ್ಯಬೆ ನಿರೂಪಿಸಿ ವಂದಿಸಿದರು. ರಾತ್ರಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಪುಂಜಾಲಕಟ್ಟೆ ತಾಂಬೂಲ ಕಲಾವಿದರಿಂದ ಎಲ್ಲೆ ದಾದ ಏರೆಗ್ ಗೊತ್ತು ತುಳು ನಾಟಕ ಪ್ರದರ್ಶನ ನಡೆಯಿತು.

ಕಳತ್ತೂರು ಗರಡಿ ಪುನರ್ ಪ್ರತಿಷ್ಠೆ, ಹಸಿರು ಹೊರೆಕಾಣಿಕೆ ಸಮರ್ಪಣೆ



ಶಿರ್ವ: ಕಳತ್ತೂರು ಶ್ರೀ ಬ್ರಹ್ಮಬೈದೇರುಗಳ ಗರಡಿಯ ಸಮಗ್ರ ಜೀರ್ಣೋದ್ಧಾರ, ಪುನರ್ ಪ್ರತಿಷ್ಠೆ, ಬ್ರಹ್ಮಕಲಶೋತ್ಸವ ಪ್ರಯುಕ್ತ ಸೋಮವಾರ ಬೃಹತ್ ಹಸಿರು ಹೊರೆಕಾಣಿಕೆ ಸಮರ್ಪಿಸಲಾಯಿತು.

ಪಾದೂರು, ವಲದೂರು, ಪಾಲಮೆ, ಪುಂಚಲಕಾಡು, ಸೂರ್ಯನಗರ, ಪಯ್ಯಾರು, ಕಳತ್ತೂರು, ಶಿರ್ವ ಪರಿಸರದಲ್ಲಿ ಸಂಗ್ರಹಿಸಲ್ಪಟ್ಟ ಹಸಿರು ಹೊರೆಕಾಣಿಕೆಯನ್ನು ಕಳತ್ತೂರು ಶ್ರೀಮಹಾಲಿಂಗೇಶ್ವರ ದೇಗುಲದಲ್ಲಿ ಇಡಲಾಗಿತ್ತು. ವೇದಮೂರ್ತಿ ಪ್ರಕಾಶ್ ತಂತ್ರಿಗಳ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆಯೊಂದಿಗೆ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಸಮಿತಿಯ ಗೌರವ ಅಧ್ಯಕ್ಷ, ಶಾಸಕ ಗುರ್ಮೆ ಸುರೇಶ ಶೆಟ್ಟಿ, ಮಾಜಿ ಸಚಿವ ವಿನಯಕುಮಾರ್ ಸೊರಕೆ ಪಾಲ್ಗೊಂಡಿದ್ದರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಪಾದೂರುಗುತ್ತು ಜಯಕೃಷ್ಣ ಆಳ್ವ, ಪ್ರಧಾನ ಕಾರ್ಯದರ್ಶಿ ರಂಗನಾಥ್ ಶೆಟ್ಟಿ ಬರೆಬೆಟ್ಟುಗುತ್ತು, ಕೋಶಾಧಿಕಾರಿ ವಿಶ್ವನಾಥ್ ಪೂಜಾರಿ, ಶ್ರೀಕ್ಷೇತ್ರ ಎಲ್ಲೂರುಶ್ರೀದೇಗುಲದವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಅರುಣಾಕರ ಶೆಟ್ಟಿ ಕಳತ್ತೂರು, ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಶೆಟ್ಟಿ ಕುತ್ಯಾರು, ದಿವಾಕರ ಬಿ. ಶೆಟ್ಟಿ ಕುಶಲಶೇಖರ ಅಡಿಟೋರಿಯಂ ಆಡಳಿತ ನಿರ್ದೇಶಕ ಶೇಖರ ಬಿ. ಶೆಟ್ಟಿ, ಸುಧಾಕರ ಡಿ. ಅಮೀನ್, ಗೋಪಾಲ ಪೂಜಾರಿ, ಹರೀಶ್ ಅಮೀನ್, ಮಜೂರು ಗ್ರಾ.ಪಂ. ಅಧ್ಯಕ್ಷ ಪ್ರಸಾದ ಶೆಟ್ಟಿ ವಲದೂರು, ಕುತ್ಯಾರು ಗ್ರಾ.ಪಂ. ಅಧ್ಯಕ್ಷ ಜನಾರ್ದನ ಆಚಾರ್ಯ ಇದ್ದರು. ಶೋಭಾಯಾತ್ರೆಯಲ್ಲಿ ಸಾಂಪ್ರದಾಯಿಕ ಡೋಲು, ಕಂಬಳದ ಕೋಣಗಳು, ಹುಲಿವೇಷ, ಶಾರದಾ ಮಾತೆ, ಮರಕಾಲು ಹುಲಿ, ವಿವಿಧ ಟ್ಯಾಬ್ಲೋಗಳು, ಭಜನಾ ತಂಡ, ಬೈಕ್, ವಾಹನಗಳು ಗಮನ ಸೆಳೆದವು.

ಕಡಬದಲ್ಲಿ ಕಾಯಕಯೋಗಿ ಬಸವಣ್ಣ, ಶ್ರೀ ಶಂಕರಾಚಾರ್ಯ ಜಯಂತಿ ಆಚರಣೆ



ಕಡಬ: ಕಡಬ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿಯ ಆಶ್ರಯದಲ್ಲಿ ಕಡಬ ಪಟ್ಟಣ ಪಂಚಾಯತ್, ಕಂದಾಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಕಡಬ ವೀರ ಶೈವ ಸಮಾಜ ಸಂಘದ ಸಹಕಾರದೊಂದಿಗೆ ಬಸವ ಜಯಂತಿ ಹಾಗೂ ಶಂಕರಾಚಾರ್ಯ ಜಯಂತಿ ಆಚರಣೆಯು ಮಂಗಳವಾರ ನೆರವೇರಿತು. ಕಡಬ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿಯ ಅಧ್ಯಕ್ಷ, ಕಡಬ ತಹಶೀಲ್ದಾರ್ ಪ್ರಭಾಕರ ಖಜೂರೆ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂತರು ಹಾಗೂ ದಾರ್ಶನಿಕರು ನಮ್ಮ ಸಮಾಜದ ಸುಧಾರಣೆಗಾಗಿ ಶ್ರಮಪಟ್ಟವರು. ಅವರ ತತ್ವ ಮತ್ತು ಸಂದೇಶಗಳನ್ನು ಪರಿಪಾಲಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಉಪ ತಹಶೀಲ್ದಾರ್ ಗೋಪಾಲ ಕಲ್ಲುಗುಡ್ಡೆ ಮಾತನಾಡಿ, ಬಸವಣ್ಣ ಹಾಗೂ ಶಂಕರಾಚಾರ್ಯರು ಸಾಮಾಜಿಕ ಪರಿವರ್ತನೆಯ ಹರಿಕಾರರು. ಸಮಾಜದಲ್ಲಿ ಧನಾತ್ಮಕ ಬದಲಾವಣೆಗಳನ್ನು ತಂದಿರುವ ಇವರ ಸ್ಮರಣೆಯನ್ನು ಮಾಡುವಲ್ಲಿ ಸಮಾಜದ ಪ್ರತಿಯೊಂದು ಸ್ತರದ ಜನರು ಕೈಜೋಡಿಸಬೇಕಿದೆ. ಅದಕ್ಕಾಗಿ ಸರಕಾರವು ಅಧಿಕೃತವಾಗಿ ಈ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು.

ಕಡಬ ಪಟ್ಟಣ ಪಂಚಾಯತ್ ಅಧ್ಯಕ್ಷೆ ತಮನ್ನಾ ಜಬೀನ್ ಹಾಗೂ ಅನುಶ್ರೀ ಕಡಬ ಶುಭ ಹಾರೈಸಿದರು. ಜಿ.ಪಂ. ಮಾಜಿ ಸದಸ್ಯ ಸರ್ವೋತ್ತಮ ಗೌಡ ನೆಲ್ಯಾಡಿ, ಕೆ.ಪಿ. ತೋಮಸ್ ನೆಲ್ಯಾಡಿ, ವೀರ ಶೈವ ಸಮಾಜದ ಬಸಯ್ಯ ಹಿರೇಮಠ್, ಸಿದ್ಧಯ್ಯ ಹಿರೇಮಠ್, ಗುರುಮೂರ್ತಿ, ಅಪೂರ್ವ, ಅನೂಪ್ ಮತ್ತಿತರರು ಉಪಸ್ಥಿತರಿದ್ದರು. ಕಂದಾಯ ಇಲಾಖೆಯ ಸಿಬಂದಿ ಉದಯ ಕುಮಾರ್ ಪಿ.ಆರ್. ಸ್ವಾಗತಿಸಿ, ಕಡಬ ಪಟ್ಟಣ ಪಂಚಾಯತ್ ಸಿಬಂದಿ ಹರೀಶ್ ಬೆದ್ರಾಜೆ ವಂದಿಸಿದರು.

ಸೇವಾಭಾರತಿಯಿಂದ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ



ಬೆಳ್ತಂಗಡಿ: ಸೇವಾಭಾರತಿ, ಕನ್ಯಾಡಿ ಇದರ ಆಶ್ರಯದಲ್ಲಿ ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಶ್ರೀ ದುರ್ಗಾ ಮಾತೃ ಮಂಡಳಿ, ಕನ್ಯಾಡಿ ಇದರ ಸಹಕಾರದಲ್ಲಿ ಸಬಲಿನಿ ಯೋಜನೆಯಡಿ ಮಹಿಳೆಯರಿಗಾಗಿ 36ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ನೆರಿಯದ ಬಯಲು ಬಸದಿಯ ಹತ್ತಿರ ಶಿಲ್ಪಿಯವರ ಕಾಂಪ್ಲೆಕ್ಸ್‌ನಲ್ಲಿ ನಡೆಯಿತು.

ಮುಂಡಾಜೆ ಪ್ರಾ.ಕೃ.ಪ.ಸ.ಸಂಘದ ಅಧ್ಯಕ್ಷ ಪ್ರಕಾಶ್ ನಾರಾಯಣ ಮಾತನಾಡಿ, ಕಲಿತಂತ ವಿದ್ಯೆಯನ್ನು ಅರ್ಧಕ್ಕೆ ಕೈ ಬಿಡದೆ ಮುಂದುವರಿಸಿಕೊಂಡು ಹೋಗಿ ಎಂದು ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಕನ್ಯಾಡಿ ಸೇವಾಭಾರತಿಯ ಖಜಾಂಚಿ ಎ. ಜೈರಾಜ್ ಸಾಲ್ಯಾನ್, ಟ್ರಸ್ಟಿ ಸ್ವರ್ಣಗೌರಿ, ಕನ್ಯಾಡಿ, ದುರ್ಗಾಮಾತೃ ಮಂಡಳಿ ಅಧ್ಯಕ್ಷೆ ಮಮತಾ ಬಿ. ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಒಟ್ಟು 23 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಟೈಲರಿಂಗ್ ತರಬೇತುದಾರೆ ಸಜಿತಾ ಶುಭ ಹಾರೈಸಿದರು. ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದವರು ಸಜಿತಾ ಅವರಿಗೆ ಗೌರವಧನವನ್ನು ನೀಡಿ ಸಹಕರಿಸಿದರು. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಗಿರಿಜಾ ಸ್ವಾಗತಿಸಿ, ಸೇವಾಭಾರತಿ ಡಾಕ್ಯುಮೆಂಟೇಶನ್ ಮೋನಿಟರಿಂಗ್ ಮತ್ತು ಇವ್ಯಾಲ್ಯೂಯೇಷನ್ ಕೋಆರ್ಡಿನೇಟರ್ ಸುಮ ನಿರೂಪಿಸಿ, ರಜನಿ ವಂದಿಸಿದರು.

ಕಡಬ ಜಾತ್ರೆ ಪ್ರಯುಕ್ತ ಕಲ್ಲ ಮಾಡದಲ್ಲಿ ದೈವಗಳ ನೇಮ



ಕಡಬ: ಕಡಬ ಜಾತ್ರೆ ಅಂಗವಾಗಿ ಕಡಬ ಪೇಟೆಯ ಕಲ್ಲ ಮಾಡದಲ್ಲಿ ದೈವಗಳ ನೇಮ ಭಾನುವಾರ ನಡೆಯಿತು.

ರಾತ್ರಿ ಕಡಬ ಗುತ್ತು ಮನೆಯಿಂದ ಪುರುಷ ದೈವ, ಪೊಟ್ಟ ದೈವಗಳ ಭಂಡಾರ ಹಾಗೂ ಪಾಲೋಳಿ ಭಂಡಾರದ ಮನೆಯಿಂದ ಬರುವ ಮಹಿಷಂತಾಯ ಇಷ್ಟದೇವತೆಯ ಭಂಡಾರದೊಂದಿಗೆ ಜೊತೆ ಸೇರಿ ಮಾಡದಲ್ಲಿ ಭಂಡಾರ ಏರಿ, ರಾತ್ರಿ ಕಲ್ಲ ಮಾಡದಲ್ಲಿ ಪುರುಷ ದೈವ, ಮಹಿಷಂತ್ತಾಯ, ಇಷ್ಟದೇವತೆ ಮತ್ತು ಸ್ಥಾನದ ಪಂಜುರ್ಲಿ ದೈವಗಳ ನೇಮ ನಡೆಯಿತು.

ಸೋಮವಾರ ಸಂಜೆ ಮಾಡದಿಂದ ಶ್ರೀ ಕಡಂಬಳಿತ್ತಾಯ ದೈವ ಮತ್ತು ಇತರ ದೈವಗಳ ಭಂಡಾರದೊಂದಿಗೆ ಪಯ್ಯೋಳಿ ಮುಡಿಯಾಗುವ ಮಜಲಿಗೆ ಹೋಗಿ ಅಲ್ಲಿಂದ ಕಡಬ ಪೇಟೆಯ ಓಲೆ ಸವಾರಿ, ಕಟ್ಟೆಯಲ್ಲಿ ಕಟ್ಟೆಪೂಜೆ ನಡೆದು ಬಳಿಕ ಮಾಡಕ್ಕೆ ಬರಲಾಯಿತು. ದೈವಸ್ಥಾನದ ಪ್ರಧಾನ ಆಡಳಿತೆದಾರ ರಾಜೇಂದ್ರ ಹೆಗ್ಡೆ ಕಡಬಗುತ್ತು, ಜಾತ್ರೆ ಸಮಿತಿಯ ಅಧ್ಯಕ್ಷ ಪೂವಪ್ಪ ಗೌಡ ಪಿಜಕಳ, ಗೌರವಾಧ್ಯಕ್ಷ ಸತೀಶ್ ನಾಯಕ್ ಶಾರದಾ ಸದನ, ಪ್ರಧಾನ ಕಾರ್ಯದರ್ಶಿ ಲಕ್ಷ್ಮೀಶ ಆರಿಗ, ಕಾರ್ಯದರ್ಶಿ ಮನೋಜ್ ಕುಮಾರ್ ಆರಿಗ, ಗೌರವ ಸಲಹೆಗಾರ ಜನಾರ್ದನ ಗೌಡ ಪಣೆಮಜಲು, ಕೋಶಾಧಿಕಾರಿ ರಮೇಶ್ ರಾವ್ ಹೊಸಮನೆ, ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚಂದ್ರಶೇಖರ ಕರ್ಕೇರ, ಕಲ್ಲುರ್ಟಿ ಕಲ್ಕುಡ ದೈವಗಳ ಪಾತ್ರಿ ಮೋನಪ್ಪ ಕುಂಬಾರ ಪಾಲೋಳಿ ಇದ್ದರು.

ಬಿ.ಸಿ.ರೋಡಿನಲ್ಲಿ ಯುವವಾಹಿನಿ ಅಂತರ್‌ಘಟಕ ಸಾಂಸ್ಕೃತಿಕ ಸ್ಪರ್ಧೆ 'ಡೆನ್ನಾನ-ಡೆನ್ನನ' | ಭುವನೇಶ್ ಪಚ್ಚಿನಡ್ಕ ಕಿವಿಮಾತು

ಜಾನಪದ ಸಂಸ್ಕೃತಿಯನ್ನು ಉಳಿಸುವ ಹೊಣೆ ಯುವಜನತೆಯ ಮೇಲಿದೆ



ಬಂಟ್ವಾಳ: ಯುವವಾಹಿನಿ ಕೇಂದ್ರ ಸಮಿತಿಯ ಆಶ್ರಯದಲ್ಲಿ ಬಂಟ್ವಾಳ ಘಟಕದ ಸಹಕಾರದಲ್ಲಿ ಬಿ.ಸಿ.ರೋಡಿನ ಸ್ಪರ್ಶ ಕಲಾ ಮಂದಿರದಲ್ಲಿ ಯುವವಾಹಿನಿ ಅಂತರ್‌ಘಟಕ ಸಾಂಸ್ಕೃತಿಕ ಸ್ಪರ್ಧೆ 'ಡೆನ್ನಾನ-ಡೆನ್ನನ 2026 ನಡೆಯಿತು.

ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ ಇವರು ದೀಪ ಬೆಳಗುವುದರ ಮೂಲಕ ಸಮಾರಂಭ ಉದ್ಘಾಟಿಸಿ ಮಾತನಾಡಿ,"ನಮ್ಮ ಪೂರ್ವಜರು ಉಳಿಸಿಕೊಟ್ಟ ಜಾನಪದ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಜವಾಬ್ದಾರಿ ಯುವಜನತೆಯ ಮೇಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಅತಿಥಿಯಾಗಿದ್ದ ಪಡುಮಲೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಹರಿಕೃಷ್ಣ ಬಂಟ್ವಾಳ್ ಡೆನ್ನಾನ ಡೆನ್ನನ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿ, ಯುವವಾಹಿನಿ ಆಯೋಜಿಸುವ 'ಡೆನ್ನಾನ ಡೆನ್ನಾನ' ಕಾರ್ಯಕ್ರಮ ಕೇವಲ ಒಂದು ಸ್ಪರ್ಧೆಯಲ್ಲ, ಅದು ತುಳುನಾಡಿನ ಮಣ್ಣಿನ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುವ ಒಂದು ಅದ್ಭುತ ವೇದಿಕೆಯಾಗಿದೆ ಎಂದರು.

ಯುವವಾಹಿನಿ ಕೇಂದ್ರ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು ಧ್ವಜಾರೋಹಣ ಮಾಡಿದರು. ಯುವವಾಹಿನಿ ಬಂಟ್ವಾಳ ಘಟಕದ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು ಅಧ್ಯಕ್ಷತೆಯನ್ನು ವಹಿಸಿದ್ದರು. ಗೆಜ್ಜೆಗಿರಿ ನಂದನಬಿತ್ತ್‌ಲ್ ಕ್ಷೇತ್ರದ ಅಧ್ಯಕ್ಷ ಸಂಜೀವ ಪೂಜಾರಿ ಬಿರ್ವ, ಬೆಹರೈನ್ ಕನ್ನಡ ಸಂಘದ ಅಧ್ಯಕ್ಷ ಅಜಿತ್ ಬಂಗೇರ, ಗುಜರಾತ್ ಬಿಲ್ಲವ ಸಂಘದ ನಿಕಟಪೂರ್ವ ಅಧ್ಯಕ್ಷ ಕೌಡೋಡಿ ವಿಶ್ವನಾಥ ಪೂಜಾರಿ, ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಉಪಾಧ್ಯಕ್ಷ ಜಯಪ್ರಕಾಶ್ ಜೆ.ಎಸ್. ಬಂಟ್ವಾಳ ತಾಲೂಕು ಬಿಲ್ಲವ ಮಹಿಳಾ ಸಮಿತಿಯ ಅಧ್ಯಕ್ಷೆ ರಾಗಿಣಿ ಮಾಧವ ಮುಖ್ಯ ಅತಿಥಿಯಾಗಿದ್ದರು. 900ಕ್ಕೂ ಅಧಿಕ ಕಲಾವಿದರು, ಬೆಂಗಳೂರು, ಉಡುಪಿ ಸೇರಿದಂತೆ ಯುವವಾಹಿನಿ ಸಂಸ್ಥೆಯ 17 ಘಟಕಗಳು ಈ ಸಾಂಸ್ಕೃತಿಕ ಹಬ್ಬದಲ್ಲಿ ಭಾಗವಹಿಸಿದ್ದರು. ಯುವವಾಹಿನಿ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ರೇಖಾ ಗೋಪಾಲ್, ಸಾಂಸ್ಕೃತಿಕ ನಿರ್ದೇಶಕ ದಿನೇಶ್ ಸುವರ್ಣ ರಾಯಿ, ಯುವವಾಹಿನಿ ಬಂಟ್ವಾಳ ಘಟಕದ ಕಾರ್ಯದರ್ಶಿ ಮಧುಸೂದನ್ ಮದ್ವ, ಸಾಂಸ್ಕೃತಿಕ ನಿರ್ದೇಶಕ ಶೈಲೇಶ್ ಪೂಜಾರಿ ಕುಚ್ಚಿಗುಡ್ಡೆ, ಕಾರ್ಯಕ್ರಮದ ಪ್ರಧಾನ ಸಂಚಾಲಕ ಶ್ರೀನಿವಾಸ ಪೂಜಾರಿ ಮೆಲ್ಕಾರ್, ಸಂಚಾಲಕರಾದ ಗೀತಾ ಜಗದೀಶ್, ಉದಯ ಪೂಜಾರಿ ಮೇನಾಡು ಉಪಸ್ಥಿತರಿದ್ದರು. ಕಾರ್ಯದರ್ಶಿ ಮಧುಸೂದನ್ ಮದ್ವ ವಂದಿಸಿದರು. ರೇಣುಕಾ ಕಣಿಯೂರು ನಿರೂಪಿಸಿದರು.

ಸುತ್ತಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಕೊಣಾಜೆ, ಅಸೈಗೋಳಿ, ತಿಬ್ಲೆಪದವು, ನಡಾರ್, ದೇವರಮನೆ, ಜಲ್ಲಾಲ್ ಬಾಗ್, ದೇರಳಕಟ್ಟೆ, ಕಂಬ್ಲಪದವು, ಕಾಯರ್ ಗೋಳಿ, ಮುಡಿಪು, ನವಗ್ರಾಮ, ದರ್ಕಾಸು, ಹೂಹಾಕುವ ಕಲ್ಲು, ಮೂಳೂರು, ಮುದುಂಗಾರು ಕಟ್ಟೆ, ಬಂಗಾರ್ ಗುಡ್ಡೆ, ನಂದಾರ ಪಡ್ಪು, ಕುರ್ನಾಡ್, ದೊಂಬರಗುತ್ತು, ನಡುಪದವು, ಪಿ.ಎ ಕಾಲೇಜ್, ಕೈರಂಗಳ, ಡಿಜಿ ಕಟ್ಟೆ, ಪಡಿಕಲ್ಲು, ಧರ್ಮಕ್ಕಿ, ಮೊಂಟೆಪದವು ಸ್ಕೂಲ್, ತಿಬ್ಲೆಪದವು, ರೆಹಮತ್ ನಗರ, ಪುಲಿತ್ತಡಿ, ಬೆಳರಿಂಗೆ ದೈವಸ್ಥಾನ, ಕಲ್ಪರಕೋಡಿ, ನೆತ್ತಿಲಪದವು, ಗ್ರೀನ್‌ಭಾಗ್, ನಾಟೆಕಲ್, ಮಿಂಪ್ರಿ, ಪನ್ನೀರ್, ನಡುಕುಮೇರ್, ಉಕ್ಕುಡ, ಕೈಕಂಬ, ಕೋಣಾಜೆ, ಅಸೈಗೋಳಿ, ದೇರಳಕಟ್ಟೆ, KIADB ಇಂಡಸ್ಟ್ರಿಯಲ್, ದಿಜಿ ಕಟ್ಟೆ, ಮೊಂಟೆಪದವು ಸ್ಕೂಲ್, ಕೈರಂಗಳ, ಗ್ರಾಮಚಾವಡಿ, ಹರೇಕಳ, ಬೈತಾರ್, ಪಾವೂರು ಉಳಿಯ, ಮಲಾರ್ ಪಾವೂರು, ದುರ್ಗಾ ಕಾಂಪ್ಲೆಕ್ಸ್, ಗಾಡಿಗದ್ದೆ ಪಾವೂರು ಉಳಿಯ, ಮಲಾರ್, ಪಾವೂರು, ದುರ್ಗಾ ಕಾಂಪ್ಲೆಕ್ಸ್, ಗಾಡಿಗದ್ದೆ, ಕೊಪ್ಪರಿಗೆ, ಇನೋಳಿ, ಕಿಲ್ಲೂರ, ಕೊಪ್ಪರಿಗೆ, ಪಜೀರ್, ರಬ್ಬರ್ ಫ್ಯಾಕ್ಟರಿ, ಲಕ್ಷ್ಮಿಗುಡ್ಡೆ, ಮೂರುಕಟ್ಟೆ, ಕುಂಪಲ, ಕನೀರ್ ತೋಟ, ಸರಳಾಯ ಕಾಲನಿ, ಹನುಮಾನ್ ನಗರ, ಆಶ್ರಯ ಕಾಲನಿ, ಕುಂಪಲ ಶಾಲೆ, ಚೇತನನಗರ, ಅಸೈಗೋಳಿ, ಆರ್.ವಿ ಆರ್ಕೇಡ್, ಮಾನಸ ಫರ್ನಿಚರ್, ಶಾಂತಿಭಾಗ್, ಮುಂಡೋಳಿ, ಕೆ.ಹೆಚ್.ಬಿ, ಮೂರುಕಟ್ಟೆಬಳಿ, ನಿಸರ್ಗ ಲೇಔಟ್, ವೈದ್ಯನಾಥ ನಗರ, ಮಡ್ಯಾರ್ ಕ್ರಷರ್, ನೀಲಿಪಾಲು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.22ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಬಲ್ನಾಡು ನಡಾವಳಿಗೆ ಗೊನೆ ಮುಹೂರ್ತ



ಪುತ್ತೂರು: ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ವರ್ಷಾವಧಿ ಜಾತ್ರೆಯ ಬಳಿಕ ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಸ್ಥಾನದಲ್ಲಿ ಏ.28ರಂದು ನಡೆಯಲಿರುವ ವರ್ಷಾವಧಿ ನೇಮ ನಡಾವಳಿಗೆ ಏ.20ರಂದು ಬೆಳಗ್ಗೆ ಗೊನೆ ಮುಹೂರ್ತ ನಡೆಯಿತು. ದೈವಸ್ಥಾನದ ಪ್ರಧಾನ ಅರ್ಚಕ ರವಿಚಂದ್ರ ನೆಲ್ಲಿತ್ತಾಯ ಅವರು ದೈವಸ್ಥಾನದ ಭಂಡಾರದ ಸ್ಥಾನದಲ್ಲಿ ಪ್ರಾರ್ಥನೆ ಮಾಡಿದ ಬಳಿಕ ಸಂಪ್ರದಾಯದಂತೆ ವಾದ್ಯದೊಂದಿಗೆ ಕಾಲು ದಾರಿಯಲ್ಲಿ ತೆರಳಿ ತೋಟವೊಂದರಲ್ಲಿ ಗೊನೆ ಮುಹೂರ್ತ ಮಾಡಲಾಯಿತು. ಎರಡು ಗೊನೆಗಳಿಗೆ ಮುಹೂರ್ತ ನಡೆಸಿದ ಬಳಿಕ ಅದನ್ನು ದೈವಸ್ಥಾನಕ್ಕೆ ತಂದು ಆರತಿ ಬೆಳಗಿ ಮುಂದೆ ನಡೆಯುವ ನೇಮವು ಯಾವುದೇ ವಿಘ್ನವಿಲ್ಲದಂತೆ ಮತ್ತು ಭಕ್ತರಿಗೆ ಆಶೀರ್ವಾದವನ್ನು ನೀಡುವಂತೆ ಅರ್ಚಕರು ಪ್ರಾರ್ಥನೆ ಮಾಡಿದರು. ದೈವಸ್ಥಾನದ ಉತ್ಸವ ಸಮಿತಿ ಅಧ್ಯಕ್ಷ ತಿಮ್ಮಪ್ಪ ಗೌಡ ಬಿರ್ಮರಕೋಡಿ, ಕಾರ್ಯದರ್ಶಿ ನವೀನ ಕರ್ಕೇರ ರಾಮ್ ಬೈಲು, ಸದಸ್ಯರಾದ ಜಿನ್ನಪ್ಪ ಗೌಡ ಕಾಂತಿಲ, ಸತೀಶ ನಾಯ್ಕ ಕಾನದಗುರಿ, ಗಂಗಾಧರ ಗೌಡ ಓಟೆ, ಆನಂದ ಸುವರ್ಣ ಬಪ್ಪಳಿಗೆ, ಕರುಣಾಕರ ಕರ್ಕೇರ ರಾಂಬೈಲು, ಕಿರಣ್ ಕುಮಾರ್ ಬಸಂತಕೋಡಿ, ವಿಶ್ವನಾಥ ಗೌಡ ಸೇನರಮೂಲೆ, ರುಕ್ಕಯ ಕುಲಾಲ್ ಸುಂಕಮೂಲೆ, ಗಂಗಾಧರ ನಾಯ್ಕ ಕಬ್ಬಿನಹಿತ್ತು, ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷರಾದ ಚನಿಲ ತಿಮ್ಮಪ್ಪ ಶೆಟ್ಟಿ, ಮಾಧವ ಗೌಡ ಕಾಂತಿಲ, ಮಾಜಿ ಸದಸ್ಯರಾದ ಚಿದಾನಂದ ಬೈಲಾಡಿ, ಕಿರಣ್ ರೈ, ಅಶೋಕ್ ನಾಯ್ಕ, ನಾರಾಯಣ ಪೂಜಾರಿ ನೆಕ್ಕರೆ, ಭೋಜರಾಜ ಗೌಡ, ವಾಸ್ತು ಇಂಜಿನಿಯರ್ ಪಿ.ಜಿ. ಜಗನ್ನಿವಾಸ ರಾವ್ ಮತ್ತಿತರರು ಉಪಸ್ಥಿತರಿದ್ದರು. ದೈವಸ್ಥಾನದ ಕಚೇರಿ ಮ್ಯಾನೇಜರ್ ಚಂದ್ರಶೇಖರ್ ಭಟ್ ವಿವಿಧ ಕಾರ್ಯಕ್ರಮ ನಿರ್ವಹಿಸಿದರು.

ಬಸವೇಶ್ವರ ಜಯಂತಿ

ಬಂಟ್ವಾಳ: ಹನ್ನೆರಡನೇ ಶತಮಾನದಲ್ಲಿ ಸಾಮಾಜಿಕ ಅಸಮಾನತೆ ನಿವಾರಣೆಗೆ ಹೋರಾಡಿದ ಮಹಾನ್ ಸಮಾಜ ಸುಧಾರಕ ವಿಶ್ವಗುರು ಬಸವೇಶ್ವರರು. ಅಂದು ಅನುಭವಮಂಟಪದ ಮೂಲಕ ಜಗತ್ತಿಗೆ ಸಮಾನತೆಯ ತತ್ವವನ್ನು ಬೋಧಿಸಿದ ಇವರ ವಚನಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಶ್ರೀ ವೆಂಕಟರಮಣಸ್ವಾಮಿ ಕಾಲೇಜಿನ ಪ್ರಾಚಾರ್ಯ ಪ್ರೊ. ಎಂ.ಡಿ.ಮಂಚಿ ಹೇಳಿದರು. ಇವರು ಕಾಲೇಜಿನಲ್ಲಿ ಆಯೋಜಿಸಿದ್ದ ಶ್ರೀ ಬಸವೇಶ್ವರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಶಿವಣ್ಣಪ್ರಭು ಇದ್ದರು. ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾರಿ ಡಾ.ಕಾಶೀನಾಥ ಶಾಸ್ತ್ರಿ ಹೆಚ್.ವಿ. ಸ್ವಾಗತಿಸಿದರು.

ಏ.28 ರಂದು ಸಂದರ್ಶನ

ಕಾಸರಗೋಡು: ಜಿಲ್ಲೆಯ ಶಿಕ್ಷಣ ಇಲಾಖೆಯಲ್ಲಿ ಪ್ರೌಢಶಾಲಾ ಶಿಕ್ಷಕ (ಅರೇಬಿಕ್) ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗಾಗಿ ಏ.28 ರಂದು ಕೇರಳ ಲೋಕ ಸೇವಾ ಆಯೋಗದ ಜಿಲ್ಲಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ.

ಮೊದಲನೇ ಪುಟದಿಂದ

ವೋಲ್ಟೇಜ್ ಸಮಸ್ಯೆ!

ಈ ಪರಿಸರದಲ್ಲಿ ಸಂಪರ್ಕ ಹೆಚ್ಚಾಗಿ ಟ್ರಾನ್ಸ್‌ಫಾರ್ಮರ್‌ಗೆ ಲೋಡ್ ಹೆಚ್ಚಾಗಿರುವುದೇ ವೋಲ್ಟೇಜ್ ಕ್ಷಾಮಕ್ಕೆ ಕಾರಣವೆನ್ನಲಾಗಿದೆ. ಬೇಕೂರು ಪರಿಸರದ ಜನರು ಅನುಭವಿ ಸುವ ವೋಲ್ಟೇಜ್ ಸಮಸ್ಯೆಗೆ ಕೂಡಲೇ ಪರಿಹಾರ ಒದಗಿಸುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ನಾಗರಿಕರು ಒತ್ತಾಯಿಸುತ್ತಿದ್ದಾರೆ.

ಮಂಗಳೂರು ವಕೀಲರ ನಿಯೋಗಕ್ಕೆ ನ್ಯಾಯಮೂರ್ತಿ ವಿಧು ಭಖ್ರು ಭರವಸೆ

ಸಂಚಾರಿ ಪೀಠ ಸ್ಥಾಪನೆ ನಿಟ್ಟಿನಲ್ಲಿ ಸಮಿತಿ ರಚನೆ

ಬಂಟ್ವಾಳ: ಮಂಗಳೂರಿನಲ್ಲಿ ಹೈಕೋರ್ಟು ಸಂಚಾರಿ ಪೀಠ ಸ್ಥಾಪಿಸುವ ನಿಟ್ಟಿನಲ್ಲಿ ಪರಿಶೀಲನೆಗಾಗಿ ಸಮಿತಿ ರಚಿಸುವುದಾಗಿ ಭರವಸೆ ನೀಡಿರುವ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಧು ಭಖ್ರು ಅವರು ಅಗತ್ಯವಿದ್ದರೆ ಖುದ್ದು ತಾನೇ ಭೇಟಿ ನೀಡಿ ಲಭ್ಯವಿರುವ ಮೂಲಸೌಕರ್ಯ ಮತ್ತು ಹೆಚ್ಚುವರಿ ಅಗತ್ಯಗಳ ಕುರಿತು ವರದಿ ಪಡೆಯುವುದಾಗಿ ಅವರನ್ನು ಭೇಟಿಯಾದ ಮಂಗಳೂರಿನ ವಕೀಲರ ನಿಯೋಗಕ್ಕೆ ಭರವಸೆ ನೀಡಿದ್ದಾರೆ.

ಮಂಗಳೂರಿನ ಹಿರಿಯ ವಕೀಲರು, ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ.ಪಿ. ನೊರೊನ್ಹಾ, ಮಂಗಳೂರು ವಕೀಲರ ಸಂಘದ ಅಧ್ಯಕ್ಷ ಎಚ್. ವಿ. ರಾಘವೇಂದ್ರ ರಾವ್ ಹಾಗೂ ಬಂಟ್ವಾಳ ವಕೀಲರ ಸಂಘದ ಅಧ್ಯಕ್ಷ ರಿಚರ್ಡ್ ಎಂ. ಡಿಕೋಸ್ಟ ಅವರನ್ನೊಳಗೊಂಡ ನಿಯೋಗವು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಧು ಭಖ್ರು ಅವರನ್ನು ಭೇಟಿಯಾಗಿ ಕರಾವಳಿ ಕರ್ನಾಟಕದಲ್ಲಿ ಶಾಶ್ವತ ಹೈಕೋರ್ಟು ಪೀಠ ಸ್ಥಾಪನೆ ಆಗುವ ತನಕ ಸಂಚಾರಿ ಪೀಠವನ್ನು ಸ್ಥಾಪಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಿದರು.



ಇದಕ್ಕೆ ಸ್ಪಂದಿಸಿದ ನ್ಯಾಯಮೂರ್ತಿಗಳು, ಸಂಪೂರ್ಣ ಬೆಂಬಲ ಮತ್ತು ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ನಿಯೋಗ ಪ್ರಮುಖರು ತಿಳಿಸಿದ್ದಾರೆ. ಬಳಿಕ ಹೋರಾಟ ಸಮಿತಿಯ ನಿಯೋಗ ಜಿಲ್ಲೆಯ ಆಡಳಿತಾತ್ಮಕ ನ್ಯಾಯಾಧೀಶರಾದ ಎಚ್. ಟಿ. ನರೇಂದ್ರ ಪ್ರಸಾದ್ ಹಾಗೂ ದ.ಕ.ಜಿಲ್ಲೆಯವರೇ ಆದ ನ್ಯಾಯಾಧೀ ಶ ರಾಜೇಶ್ ರೈ ಕಲ್ಲಂಗಣ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ನ್ಯಾಯಧೀಶರು ಸಕರಾತ್ಮಕವಾಗಿ ಸ್ಪಂದಿಸಿ, ಹೈಕೋರ್ಟ್ ಪೀಠ ಸ್ಥಾಪನೆಗೆ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭ ಹೈಕೋರ್ಟ್ ವಕೀಲರಾದ ಅಜೇಯ್ ಮೆಟ್ರಿಕ್ ನೊರೊನ್ಹಾ ಜೊತೆಗಿದ್ದರು. ಕರಾವಳಿ ಪ್ರದೇಶದಲ್ಲಿಕರ್ನಾಟಕಹೈಕೋರ್ಟ್‌ಪೀಠಸ್ಥಾಪನೆಗೆ ಬಹುಕಾಲದಿಂದ ಬೇಡಿಕೆ ಇದ್ದು ಈಗಾಗಲೇ ಶಾಶ್ವತ ಹೈಕೋರ್ಟ್ ಪೀಠ ಹೋರಾಟ ಸಮಿತಿ ರಚಿಸಲಾಗಿ ಹಲವಾರು ಸಭೆಗಳು ವಿವಿಧ ಹಂತದ ಹೋರಾಟ, ಪ್ರಾಧಿಕಾರಗಳಿಗೆ ಮನವಿ ಸಲ್ಲಿಸಲಾಗಿದೆಯಲ್ಲದೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಾಮೂರ್ತಿ ಅಬ್ದುಲ್ ನಜೀರ್ ಅವರನ್ನು ಭೇಟಿ ಮಾಡಿ ವಕೀಲರ ನಿಯೋಗವು ಮಾರ್ಗದರ್ಶನವನ್ನು ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ನ್ಯಾಯಮೂರ್ತಿ ಪತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ ಖಾದರ್ ಅವರಿಗೆ ಮನವಿ ಸಲ್ಲಿಸಿದ ಹಿನ್ನಲೆಯಲ್ಲಿ ಅವರು ಮಂಗಳೂರಿನಲ್ಲಿ ಶೀಘ್ರ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕರ್ನಾಟಕದ ಮುಖ್ಯ ನ್ಯಾಯಮೂರ್ತಿ ಅವರಿಗೆ ಪತ್ರ ಬರೆದಿದ್ದಾರೆ ಎಂದು ವಕೀಲರ ನಿಯೋಗವು ತಿಳಿಸಿದೆ.

ಕುಲ್ಕುಂದ: ಬಸವನಮೂಲೆ ದೇವಳದಲ್ಲಿ ಜಾತ್ರೆ ಸಂಪನ್ನ

ಸುಬ್ರಹ್ಮಣ್ಯ: ಪುಣ್ಯ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯ ಸಮೀಪದ ಕುಲ್ಕುಂದದ ಇತಿಹಾಸ ಪ್ರಸಿದ್ಧ ಬಸವನಮೂಲೆಯ ಶ್ರೀ ಬಸವೇಶ್ವರ ದೇವಾಲಯದಲ್ಲಿ ಜಾತ್ರೆ ಭಕ್ತಿ ಸಡಗರದಿಂದ ಸೋಮವಾರ ನಡೆಯಿತು.



ವೇದಮೂರ್ತಿ ಶಿವರಾಮ ಭಟ್ ಕಿಳಿಂಗಾರು ಜಾತ್ರೋತ್ಸವದ ಧಾರ್ಮಿಕ ವಿಧಿ ವಿಧಾನ ನೆರವೇರಿಸಿದರು. ಸೋಮವಾರ ಬೆಳಗ್ಗೆ ಗಣಪತಿ ಹವನ, ಕಲಶ ಪೂಜೆ, ಶತರುದ್ರಾಭಿಷೇಕ, ಪರಿವಾರ ದೇವರುಗಳಿಗೆ ಕಲಶಾಭಿಷೇಕ, ತಂಬಿಲ ಸೇವೆ, ಮಧ್ಯಾಹ್ನ ಬಸವೇಶ್ವರ ದೇವರಿಗೆ ಕಲಶಾಭಿಷೇಕ, ಮಹಾ ಪೂಜೆ, ಅನ್ನಸಂತರ್ಪಣೆ ನಡೆಯಿತು. ಸಂಜೆ ದೀಪಾರಾಧನೆ, ತಾಯಂಬಕ ಮತ್ತು ರಂಗಪೂಜೆ ನೆರವೇರಿತು. ಮಹಾಪೂಜೆಯ ಬಳಿಕ ಶ್ರೀ ಭೂತ ಬಲಿ, ಪಲ್ಲಕ್ಕಿ ಉತ್ಸವ, ವಸಂತ ಕಟ್ಟೆ ಪೂಜೆ, ದರ್ಶನಬಲಿ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ ವಿತರಿಸಲಾಯಿತು. ಭಕ್ತರು ಶ್ರೀ ದೇವರಿಗೆ ಬಟ್ಟಲು ಕಾಣಿಕೆ ಅರ್ಪಿಸಿ ಪ್ರಸಾದ ಸ್ವೀಕರಿಸಿದರು. ದರ್ಶನ ಬಲಿ ಸಮಯದಲ್ಲಿ ಆಕರ್ಷಕ ಸುಡುಮದ್ದಿನ ಪ್ರದರ್ಶನ ಆಯೋಜಿಸಲಾಗಿತ್ತು. ದೇವಸ್ಥಾನದ ಪ್ರಧಾನ ಅರ್ಚಕ ಗಣೇಶ್ ದೀಕ್ಷಿತ್, ಆಡಳಿತ ಮಂಡಳಿ ಅಧ್ಯಕ್ಷ ಗಿರಿಧರ ಸ್ಕಂಧ ಸೇರಿದಂತೆ ಆಡಳಿತ ಮಂಡಳಿ ಸದಸ್ಯರು ಇದ್ದರು.

ವಚನಗಳಿಗೆ ಸಮಾಜದ ಡೊಂಕನ್ನು ತಿದ್ದುವ ಶಕ್ತಿಯಿದೆ: ಎಸ್. ಭೂಮರೆಡ್ಡಿ



ಮಂಗಳೂರು: ಬಸವಣ್ಣ ಹಾಗೂ ಇತರ ವಚನಕಾರರ ವಚನಗಳಿಗೆ ಸಮಾಜದ ಡೊಂಕನ್ನು ತಿದ್ದುವ ಶಕ್ತಿ ಇದೆ. ಅಂತಹ ವಚನಗಳನ್ನು ಪಾಲಿಸಿದಾಗ ಸಮಾಜದಲ್ಲಿ ಶಾಂತಿ, ಸಂಯಮ, ಮಾನವೀಯತೆಯ ಗುಣಗಳು ಬೆಳೆಯಲು ಸಾಧ್ಯ ಎಂದು ದ.ಕ. ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್ ಎಸ್. ಭೂಮರೆಡ್ಡಿ ಹೇಳಿದರು.

ದ.ಕ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದ.ಕ. ಜಿಲ್ಲೆ ಸಂಯುಕ್ತ ಆಶ್ರಯದಲ್ಲಿ ಕರಾವಳಿ ವೀರಶೈವ ಕ್ಷೇಮಾ ಭಿವೃದ್ಧಿ ಸಂಘ ಮಂಗಳೂರು ಸಹಕಾರದೊಂದಿಗೆ ಉರ್ವ ಸ್ಟೋರ್‌ನ ತುಳುಭವನದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಬಸವೇಶ್ವರ ಜಯಂತಿಯಲ್ಲಿ ಅವರು ಮಾತನಾಡಿದರು.

ಜಗತ್ತಿನಲ್ಲಿ ಈಗ ವಿಷಮಕಾರಿ ಪರಿಸ್ಥಿತಿ ಇದೆ. ಮಾನವೀಯತೆ ನಶಿಸುತ್ತಿದೆ. ಹಾಗಾಗಿ ವಚನಗಳು ಹಿಂದೆಂದಿಗಿಂತಲೂ ಈಗ ಹೆಚ್ಚು ಪ್ರಸ್ತುತ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಂ.ಪಿ.ಶ್ರೀನಾಥ್ ಮಾತನಾಡಿ, ಬಸವಣ್ಣ, ಅಕ್ಕಮಹಾದೇವಿ ಸೇರಿದಂತೆ ವಚನಕಾರರ ವಚನಗಳನ್ನು ಇಂದಿನ ವಿದ್ಯಾರ್ಥಿಗಳಿಗೆ ತಿಳಿಸುವ ಅಗತ್ಯವಿದೆ. ಶಿಕ್ಷಣದ ವಿವಿಧ ಹಂತಗಳಲ್ಲಿರುವ ವಚನಗಳ ಪಠ್ಯವನ್ನು ಕಡ್ಡಾಯವಾಗಿ ಅಭ್ಯಾಸ ಮಾಡಿಸುವ ಮೂಲಕ ತಿಳಿವಳಿಕೆ ಮೂಡಿಸಲು ಸಾಧ್ಯವಾಗುತ್ತದೆ ಎಂದರು. ಮೂಡುಬಿದಿರೆ ಆಳ್ವಾಸ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಯೋಗೀಶ ಕೈರೋಡಿ ಉಪನ್ಯಾಸ ನೀಡಿದರು. ಜಿ.ಪಂ ಯೋಜನಾ ನಿರ್ದೇಶಕ ಕೆ.ಇ. ಜಯರಾಂ, ಕರಾವಳಿ ವೀರಶೈವ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಚೆನ್ನಬಸಪ್ಪ ರೊಟ್ಟಿ ಇದ್ದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕ ಪ್ರದೀಪ್ ಡಿಸೋಜ ಸ್ವಾಗತಿಸಿದರು. ಬಬಿತಾ ನಿರ್ವಹಿಸಿದರು.

ಕಾಡಬೆಟ್ಟು ವಗ್ಗ ಶೌರ್ಯ ವಿಪತ್ತು ನಿರ್ವಹಣಾ ಘಟಕದಿಂದ ಮನೆ ದುರಸ್ತಿ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಬಂಟ್ವಾಳ ಇದರ ವಗ್ಗ ವಲಯದ ಶೌರ್ಯ ವಿಪತ್ತು ನಿರ್ವಹಣಾ ಘಟಕ ಕಾಡಬೆಟ್ಟು ವಗ್ಗ ಇದರ ವತಿಯಿಂದ ಬಂಟ್ವಾಳ ತಾಲೂಕಿನ ಕಾಡಬೆಟ್ಟು ಗ್ರಾಮದ ಬೈರ್ಲಚ್ಚಿಲ್ ಮನೆ, ರಾಮಕ್ಕು ಅವರ ಮನೆಯ ಮೇಲ್ಛಾವಣಿ ರಿಪೇರಿಯನ್ನು ಶ್ರಮದಾನ ಧನುಪೂಜೆ ಶೌರ್ಯ ವಿಪತು ನಿರ್ವಹಣಾ ಘಟಕದ ನಾಲ್ವರು ಸದಸ್ಯರು ಹಾಗೂ ಸ್ಥಳೀಯರ ಸಹಕಾರ ದೊಂದಿಗೆ ನಡೆಸಲಾಯಿತು.

ದುರಸ್ತಿ ಶ್ರಮದಾನಕ್ಕೆ ಬೇಕಾದ ಸಲಕರಣೆಗಳನ್ನು ಪಂಚಾಯತ್ ಮಾಜಿ ಅಧ್ಯಕ್ಷರಾದ ಸುಜಿತ್ ಜೈನ್, ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಪ್ರಮೋದ್ ಕುಮಾರ್ ರೈ ಕಾಡಬೆಟ್ಟು, ಶೌರ್ಯ ತಂಡದ ಸದಸ್ಯರಾದ ಜನಾರ್ದನ್ ನೀಡಿ ಸಹಕರಿಸಿದರು. ತಾಲೂಕು ಜನಜಾಗೃತಿ ವೇದಿಕೆ ಮಾಜಿ ಅಧ್ಯಕ್ಷ ರೊನಾಲ್ಡ್ ಡಿಸೋಜಾ ಉಟೋಪಾಚಾರದ ವ್ಯವಸ್ಥೆಯನ್ನು ನೀಡಿ ಸಹಕರಿಸಿದರು. ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಕೃಷಿ ಅಧಿಕಾರಿ ಭಾಸ್ಕರ್, ಮದ್ವ ಒಕ್ಕೂಟದ ಸೇವಪ್ರತಿನಿಧಿ ಸುಮಿತ್ರ, ಉಪಸ್ಥಿತರಿದ್ದರು. ಶ್ರಮದಾನ ಸೇವೆಯಲ್ಲಿ ಘಟಕ ಪ್ರತಿನಿಧಿ ಪ್ರವೀಣ್, ಸಂಯೋಜಕಿ ರೇಖಾ.ಪಿ. ಸದಸ್ಯರುಗಳಾದ ಸಂಪತ್ ಶೆಟ್ಟಿ ರೋಹಿತ್ ಮಹಾಬಲ ರೈ ಅಶೋಕ ಹಾರೋದ್ದು ಮೋಹನಂದ ಅಶೋಕ ಬೊಲ್ಮರ್, ನಾರಾಯಣ ಪೂಜಾರಿ, ನಾರಾಯಣ ಶೆಟ್ಟಿ ಲಕ್ಷ್ಮಣ ಜನಾರ್ಧನ ಶಶಿಕಲ ಪವಿತ್ರ, ಧನುಪೂಜೆ ಶೌರ್ಯ ತಂಡ ಘಟಕದ ಸದಸ್ಯ ಗಣೇಶ್ ಆಚಾರ್ಯ, ದಿನೇಶ್ ಆಚಾರ್ಯ, ಪ್ರಶಾಂತ್, ಪ್ರಮೋದ್ ಆಚಾರ್ಯ, ಭಾಗವಹಿಸಿದ್ದರು.

ಗ್ರಾಮೀಣ ಭಾಗದಲ್ಲಿ ಆರೋಗ್ಯ ಸಂರಕ್ಷಣೆಗೆ ಆದ್ಯತೆ: ಅತುಲ್ ಕುಡ್ವ



ಮುಲ್ಕಿ: ಗೌಡ ಸಾರಸ್ವತ ಬ್ರಾಹ್ಮಣ ಸಭಾ ಹಾಗೂ ಮಂಗಳೂರಿನ ಪ್ರಾದೇಶಿಕ ರಕ್ತನಿಧಿ ಕೇಂದ್ರ ಮತ್ತು ಎ.ಜೆ ಇನ್‌ಸ್ಟಿಟ್ಯೂಟ್ ಕಣ್ಣಿನ ವಿಭಾಗದ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರ ಮತ್ತು ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರವು ಇಲ್ಲಿನ ಶ್ರೀಧರ್ ಕಾಮತ್ ಸಭಾಗೃಹದಲ್ಲಿ ನಡೆಯಿತು

ಶಿಬಿರವನ್ನು ಮುಲ್ಕಿ ಶ್ರೀ ವೆಂಕಟ ರಮಣ ದೇವಳದ ಟ್ರಸ್ಟಿ ಅತುಲ್ ಕುಡ್ವ ಉದ್ಘಾಟಿಸಿ, ಗ್ರಾಮೀಣ ಭಾಗದಲ್ಲಿ ಜನರು ಆರೋಗ್ಯ ರಕ್ಷಣೆಗೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ಅಲ್ಲದೇ ಇಂತಹ ಶಿಬಿರಗಳು ಸಮಾಜಮುಖಿ ಕಾರ್ಯವಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಕಿಲ್ಪಾಡಿ ಶ್ರೀ ವ್ಯಾಸ ಮಹರ್ಷಿ ವಿದ್ಯಾಪೀಠದ ಸಂಚಾಲಕ ಪಾಂಡುರಂಗ ಭಟ್ ಮಾತನಾಡಿ, ಕಳೆದ 20 ವರ್ಷಗಳಿಂದ ಇಂತಹ ಶಿಬಿರವನ್ನು ಆಯೋಜಿಸುತ್ತಿರುವ ಸಭಾವು ಸಮಾಜಕ್ಕೆ ಮಾದರಿ ಎಂದರು.

ಮಂಗಳೂರಿನ ಎ.ಜೆ ಇನ್‌ಸ್ಟಿಟ್ಯೂಟ್‌ನ ಮುಖ್ಯಸ್ಥ ಡಾ. ಅಜಯ್ ಕುಡ್ವ, ಜಿಎಸ್‌ಬಿ ಸಭಾದ ಅಧ್ಯಕ್ಷ ಸತ್ಯೇಂದ್ರ ಶೆಣೈ, ರಕ್ತನಿಧಿ ಕೇಂದ್ರದ ಸಂಚಾಲಕ ಅಶೋಕ್, ಡಾ. ದೀಪಿಕಾ, ಸಭಾದ ಕೋಶಾಧಿಕಾರಿ ಪ್ರವೀಣ್ ಕಾಮತ್, ಕಾರ್ಯದರ್ಶಿ ವಿಶ್ವನಾಥ್ ಶೆಣೈ, ಅಜಿತ್ ಶೆಣೈ, ನರಸಿಂಹ ಭಟ್, ನಾರಾಯಣ ಶೆಣೈ, ವೆಂಕಟೇಶ್ ಕಾಮತ್, ದೇವದಾಸ್ ಶೆಣೈ, ಯು. ವೆಂಕಟೇಶ್ ಶೆಣೈ, ಅಶೋಕ್ ಕಾಮತ್ ಉಪಸ್ಥಿತರಿದ್ದರು. ಶಿಬಿರದಲ್ಲಿ ಒಟ್ಟು 42 ಯೂನಿಟ್ ರಕ್ತ ಸಂಗ್ರಹವಾಯಿತು. 100ಕ್ಕೂ ಮಿಕ್ಕಿದ ಜನರು ಆರೋಗ್ಯ ತಪಾಸಣೆ ನಡೆಸಿದರು.

ಬಹುಸಂಸ್ಕೃತಿ ಉತ್ಸವ, ಆಹಾರ ಮೇಳದ ಆಮಂತ್ರಣ ಪ್ರತಿಕೆ ಬಿಡುಗಡೆ



ಮಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಚಿಣ್ಣರಲೋಕ' ಮೋಕೆದ ಕಲಾವಿದೆರ್ ಸೇವಾ ಟ್ರಸ್ಟ್ ಬಂಟ್ವಾಳ ಚಿಣ್ಣರಲೋಕ ಸೇವಾ ಬಂಧು ಬಂಟ್ವಾಳ ಇವರ ಸಂಯುಕ್ತ ಆಶ್ರಯದಲ್ಲಿ ಕರಾವಳಿ ಕಲೋತ್ಸವ 2026 ತುಳು, ಕೊಂಕಣಿ, ಬ್ಯಾರಿ, ಅರೆ ಭಾಷೆ ಅಕಾಡೆಮಿ ಸಹಯೋಗಯೊಂದಿಗೆ ಬಹುಸಂಸ್ಕೃತಿ ಉತ್ಸವ ಹಾಗೂ ಆಹಾರ ಮೇಳ ಮೇ 4 ರಿಂದ 9 ವರೆಗೆ ಬಿ.ಸಿ ರೋಡ್‌ನ ಸ್ಪರ್ಶ ಕಲಾ ಮಂದಿರದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಆಮಂತ್ರಣವನ್ನು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮಂಗಳೂರಿನಲ್ಲಿ ನೆರವೇರಿಸಿದರು. ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಜಿಲ್ಲಾಧಿಕಾರಿ ದರ್ಶನ್ ಎಚ್ .ವಿ. ಮಂಗಳೂರು ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಸೇರಿದಂತೆ ಪ್ರಮುಖರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು. ಕರಾವಳಿ ಕಲೋತ್ಸವ ಸ್ವಾಗತ ಸಮಿತಿಯ ಅಧ್ಯಕ್ಷ ಕಾಂತಾಡಿ ಗುತ್ತು ಸೀತಾರಾಮ್ ಶೆಟ್ಟಿ ಬ್ಯಾರಿ ಸಾಹಿತ್ಯ ಸಂಭ್ರಮದ ಅಧ್ಯಕ್ಷ ಅಬ್ದುಲ್ ರಜಾ ಕ್ ಕುಕ್ಕಾಜೆ, ಸಂಸ್ಥೆಯ ನಿರ್ದೇಶಕಿ ಶೋಭಾ ಶೆಟ್ಟಿ, ಚಿಣ್ಣರ ಲೋಕ ಸಂಸ್ಥೆಯ ಸ್ಥಾಪಕಧ್ಯಕ್ಷ ಮೋಹನ ದಾಸ ಕೊಟ್ಟಾರಿ ಮುನ್ನೂರು ಇದ್ದರು. ಉದ್ಘಾಟನೆ ಕಾರ್ಯಕ್ರಮದ ಪ್ರಯುಕ್ತ ಮೇ 4 ರಂದು ಸಂಜೆ 5 ಕ್ಕೆ ಸರಿಯಾಗಿ ಜಾನಪದ ದಿಬ್ಬಣ ಮೆರವಣಿಗೆ ಅನ್ನಪೂರ್ಣೇಶ್ವರಿ ದೇವಸ್ಥಾನದಿಂದ ಆರಂಭವಾಗಿ ವಿವಿಧ ಸಾಂಸ್ಕೃತಿಕ ಕಲಾ ತಂಡಗಳನ್ನು ಒಳಗೊಂಡ ಮೆರವಣಿಗೆ ಸ್ಪರ್ಶ ಕಲಾ ಮಂದಿರಕ್ಕೆ ಸಾಗಿ ಬರಲಿದೆ. ಬಳಿಕ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಲಿದ್ದಾರೆ.

ಮುಸಲ್ಮಾನರ ದಮನಕ್ಕೆ ಕಾಂಗ್ರೆಸ್ ಸರಕಾರ ಪ್ರಯತ್ನ: ಸುನ್ನಿ ಸಮನ್ವಯ ಸಮಿತಿ

ಮಡಿಕೇರಿ: 2023ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಸಮಸ್ತ ಮುಸಲ್ಮಾನರು ಒಗ್ಗಟ್ಟಿನಿಂದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಿದೆ. ಆದರೆ ಇದೀಗ ಮುಸ ಲ್ಮಾನರ ದಮನಕ್ಕೆ ಮುಂದಾಗಿದೆ ಎಂದು ಸುನ್ನಿ ಸಮನ್ವಯ ಸಮಿತಿ ಕೊಡಗು ಜಿಲ್ಲಾ ಘಟಕ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುನ್ನಿ ಸಮನ್ವಯ ಸಮಿತಿಯ ಜಿಲ್ಲಾ ಮಾಧ್ಯಮ ಪ್ರತಿನಿಧಿ ಸಿ.ಎಂ. ಅಬ್ದುಲ್ ಹಮೀದ್ ಮೌಲವಿ, ಕಾಂಗ್ರೆಸ್ ಪಕ್ಷ ಇತ್ತೀಚಿನ ದಿನಗಳಲ್ಲಿ ಮುಸಲ್ಮಾನರನ್ನು ಕಡೆಗಣಿಸುತ್ತಿದ್ದು, ಈ ಬೆಳವಣಿಗೆ ಅತ್ಯಂತ ನೋವನ್ನುಂಟು ಮಾಡಿದೆ ಎಂದರು.

ಕಾಂಗ್ರೆಸ್ ಪಕ್ಷವು ಕರ್ನಾಟಕದ ಮುಸ್ಲಿಂ ಸಮುದಾಯ ಮತ್ತು ಅದರ ನಾಯಕರೊಂದಿಗೆ ನಡೆದುಕೊಳ್ಳುತ್ತಿರುವ ರೀತಿಯನ್ನು ಕೊಡಗು ಜಿಲ್ಲೆಯ ಪ್ರಮುಖ ಮುಸ್ಲಿಂ ಸಂಘಟನೆಗಳಾದ ಎಸ್‌ಕೆಎಸ್‌ಎಸ್‌ಎಫ್, ಎಸ್‌ಎಸ್‌ಎಫ್, ಮುಸ್ಲಿಂ ಸಂಘ ಸಂಸ್ಥೆಗಳು ಹಾಗೂ ಒಕ್ಕೂಟಗಳು ತೀವ್ರವಾಗಿ ಖಂಡಿಸುತ್ತವೆ ಎಂದರು. ಮುಸ್ಲಿಮರು ನೀಡಿರುವ ಒಗ್ಗಟ್ಟಿನ ಬೆಂಬಲದಿಂದ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯವಾಗಿದೆ. ಆದರೆ ಕಾಂಗ್ರೆಸ್ ಸರಕಾರ ಮುಸ್ಲಿಮರನ್ನು ಘನತೆಯಿಂದ ನಡೆಸಿಕೊಳ್ಳುತ್ತಿಲ್ಲ, ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿರುವ ಮುಸ್ಲಿಂ ಸಮುದಾಯಕ್ಕೆ ರಾಜಕೀಯ ನೇಮಕಾತಿಗಳಲ್ಲಿ ಹಾಗೂ ಅಧಿಕಾರಶಾಹಿಯ ಪ್ರಮುಖ ಹುದ್ದೆಗಳಲ್ಲೂ ಸೂಕ್ತ ಪ್ರಾತಿನಿಧ್ಯ ನೀಡುತ್ತಿಲ್ಲ, ಕಾಂಗ್ರೆಸ್ ಪಕ್ಷ ಮುಸ್ಲಿಂ ಸಮುದಾಯವನ್ನು ಅವಮಾನಿಸುತ್ತಿದೆ ಎಂಬ ನೋವಿನ ಭಾವನೆ ಸಮುದಾಯದಲ್ಲಿ ಮೂಡಿದೆ ಎಂದರು. ದಾವಣಗೆರೆ ಉಪ ಚುನಾವಣೆ ಹಾಗೂ ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ, ಕಾಂಗ್ರೆಸ್ ಪಕ್ಷಕ್ಕೆ ಮುಸ್ಲಿಮರು ವೋಟ್ ಬ್ಯಾಂಕ್ ಮಾತ್ರ. ಪಕ್ಷದಲ್ಲಿ ಹುದ್ದೆ, ಸ್ಥಾನಮಾನ, ಪ್ರಾತಿನಿಧ್ಯ, ಅವಕಾಶ ನಾವು ನೀಡುವ ಭಿಕ್ಷೆ. ಒಂದೊಮ್ಮೆ ನಿಮ್ಮ ಹಕ್ಕು ಅಥವಾ ನಿಮಗಾದ ಅನ್ಯಾಯದ ಕುರಿತು ಪ್ರಶ್ನೆ ಕೇಳಿದಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂಬ ಒಂದು ಸ್ಪಷ್ಟ ಸಂದೇಶ ನೀಡಿದಂತಿದೆ ಎಂದರು.

ಸಮಿತಿಯ ಜಿಲ್ಲಾ ಕಾರ್ಯದರ್ಶಿ ಎಂ.ವೈ. ಅಬ್ದುಲ್ ಹಫೀಳ್ ಸಅದಿ, ಸಮಿತಿಯ ಕಾರ್ಯದರ್ಶಿ ವೈ.ಎಂ.ಉಮ್ಮರ್ ಫೈಜಿ, ಸದಸ್ಯರಾದ ಎನ್.ಎನ್.ಇಕ್ಬಾಲ್ ಮೌಲವಿ, ಅಬ್ದುಲ್ ಹಮೀದ್ ಮದನಿ, ಮಡಿಕೇರಿಯ ಮಕ್ಕಾ ಮಸೀದಿಯ ಮೌಲಾನಾ ಅಬ್ದುಲ್ ಹಕೀಂ ಉಪಸ್ಥಿತರಿದ್ದರು.

ಖರ್ಗೆ ಹೇಳಿಕೆ ಕೀಳುಮಟ್ಟದ ರಾಜಕೀಯ: ಅರುಣ್ ಕುಮಾರ್



ಮಡಿಕೇರಿ: ದೇಶದ ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಭಯೋತ್ಪಾದಕ' ಎಂದು ಸಂಬೋಧಿಸಿದರುವ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕೀಳುಮಟ್ಟದ ರಾಜಕೀಯ ನಡೆ ಖಂಡನೀಯವೆಂದು ಕೊಡಗು ಜಿಲ್ಲಾ ಬಿಜೆಪಿ ವಕ್ತಾರ ಬಿ.ಕೆ.ಅರುಣ್ ಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ತಮಿಳುನಾಡು ಚುನಾವಣಾ ಪ್ರಚಾರದ ಸಂದರ್ಭ ಮಲ್ಲಿಕಾರ್ಜುನ ಖರ್ಗೆ ಅವರು ನಾಲಿಗೆಯನ್ನು ಹರಿಬಿಟ್ಟಿದ್ದಾರೆ. ದೇಶದ ಜನ ಮಾತ್ರವಲ್ಲದೆ ಇಡೀ ವಿಶ್ವವೇ ಮೆಚ್ಚಿಕೊಂಡಿರುವ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಲಘುವಾಗಿ ಮಾತನಾಡುವ ಮೂಲಕ ಖರ್ಗೆ ಅವರು ತಮ್ಮ ಸಣ್ಣತನವನ್ನು ಪ್ರದರ್ಶಿಸಿದ್ದಾರೆ ಎಂದು ಟೀಕಿಸಿದ್ದಾರೆ.

ಜನಸ್ನೇಹಿ ಆಡಳಿತದ ಮೂಲಕ ದೇಶವನ್ನು ಪ್ರಗತಿಪಥದತ್ತ ಸಾಗಿಸಿ 3 ಬಾರಿ ಅಧಿಕಾರಕ್ಕೇರಿರುವ ನರೇಂದ್ರ ಮೋದಿ ಅವರ ವಿರುದ್ಧ ಕಟು ಭಾಷೆಯನ್ನು ಬಳಸುವ ಮೊದಲು ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಲ್ಲಿರುವ ಖರ್ಗೆ ಅವರು ಮೊದಲು ತಮ್ಮ ಪಕ್ಷವನ್ನು ಅಧಿಕಾರಕ್ಕೆ ತರುವ ಸಾಹಸವನ್ನು ಮಾಡಲಿ ಎಂದು ಸವಾಲು ಹಾಕಿದ್ದಾರೆ. ಸುಮಾರು 50 ವರ್ಷಗಳ ರಾಜಕೀಯ ಹಿರಿತನವನ್ನು ಹೊಂದಿರುವ ಮಲ್ಲಿಕಾರ್ಜುನ ಖರ್ಗೆ ಅವರ ಕೊಡುಗೆಯ ಕುರಿತು ಪ್ರಧಾನಮಂತ್ರಿಗಳು ಇತ್ತೀಚೆಗಷ್ಟೇ ಅಧಿವೇಶನದಲ್ಲಿ ಗೌರವದಿಂದಮಾತನಾಡಿದ್ದರು.

ಆದರೆ ಖರ್ಗೆ ಅವರು ಕೇವಲ ರಾಜಕೀಯ ಲಾಭಕ್ಕಾಗಿ ಮೇರು ವ್ಯಕ್ತಿತ್ವದ ಸಜ್ಜನ ನಾಯಕ ಮೋದಿ ಅವರನ್ನು 'ಭಯೋತ್ಪಾದಕ'ರಿಗೆ ಹೋಲಿಕೆ ಮಾಡಿದ್ದಾರೆ. ಇದು ಸರ್ವ ಭಾರತೀಯರಿಗೆ ತೋರಿರುವ ಅಗೌರವ. ಆದ್ದರಿಂದ ಖರ್ಗೆ ಅವರು ತಕ್ಷಣ ದೇಶದ ಜನತೆಯ ಕ್ಷಮೆ ಯಾಚಿಸಬೇಕೆಂದು ಅರುಣ್ ಕುಮಾರ್ ಒತ್ತಾಯಿಸಿದ್ದಾರೆ. ದೇಶದ ಹಿತವನ್ನು ಕಡೆಗಣಿಸಿ ಭಯೋತ್ಪಾದಕ ಮನೋಸ್ಥಿತಿಗಳಿಗೆ ಬೆಂಬಲ ನೀಡುತ್ತಲೇ ಬಂದಿರುವ ಕಾಂಗ್ರೆಸ್ ಪಕ್ಷ ಪ್ರಸ್ತುತ ಜನರಿಂದ ತಿರಸ್ಕರಿಸಲ್ಪಟ್ಟು ಅವನತಿಯ ಹಾದಿಯಲ್ಲಿದ್ದರೂ ತನ್ನ ಚಾಳಿಯನ್ನು ಮುಂದುರಿಸಿದೆ ಎಂದರು.

ಮಾರ್ಗ ನಿರ್ಮಾಣಕ್ಕೆ ಖಾಸಗಿ ಜಾಗದಿಂದ ತೊಡಕು | ಪಿಲಾತಬೆಟ್ಟು ಗ್ರಾಮದಲ್ಲಿ 40 ವರ್ಷಗಳ ಹಳೆ ಸಮಸ್ಯೆಗೆ ಸಿಕ್ಕಿತು ಪರಿಹಾರ

ನಯನಾಡು-ನಿನ್ಯಾರು-ಕೊಳಕ್ಕೆಬೈಲು ನೂತನ ಸಂಪರ್ಕ ರಸ್ತೆಯ ಲೋಕಾರ್ಪಣೆ

ಬಂಟ್ವಾಳ: ಪಿಲಾತಬೆಟ್ಟು ಗ್ರಾಮದ ನಿನ್ಯಾರು, ಕೊಳಕ್ಕೆಬೈಲು ಗ್ರಾಮಸ್ಥರ ಬಹುವರ್ಷಗಳ ನಿರೀಕ್ಷೆಯ ರಸ್ತೆ ನಿರ್ಮಾಣದ ಕನಸು ನನಸಾಗಿದೆ. ನಯನಾಡು ಗೆಳೆಯರ ಬಳಗ ಸೇವಾ ಸಂಸ್ಥೆ ಮತ್ತು ನಯನಾಡು ಸಂತ ಫ್ರಾನ್ಸಿಸ್ ಅಸಿಸ್ಸಿ ಚರ್ಚ್ ಪಾಲನ ಸಮಿತಿ ವತಿಯಿಂದಸುಮಾರು ನಾಲ್ಕುವರೆ ಲಕ್ಷರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾದ ನಯನಾಡುನಿಂದ ನಿಂದ ನಿನ್ಯಾರು ಮತ್ತು ಕೊಳಕ್ಕೆಬೈಲು ಸಂಪರ್ಕದ ರಸ್ತೆಯನ್ನು ಲೋಕಾರ್ಪಣೆಗೊಳಿಸಲಾಯಿತು.

ಸುಮಾರು 40 ವರ್ಷಗಳಿಂದ ನಿನ್ಯಾರು ಮತ್ತು ಕೊಳಕ್ಕೆಬೈಲು ಪ್ರದೇಶದ ನಿವಾಸಿಗಳಿಗೆ ಸಂಪರ್ಕ ರಸ್ತೆ ಇಲ್ಲದೆ ಸಂಕಷ್ಟ ಅನುಭವಿಸುತ್ತಿದ್ದರು. ರಸ್ತೆ ನಿರ್ಮಾಣಕ್ಕೆ ಖಾಸಗಿ ಜಾಗದಿಂದಾಗಿ ತೊಡಕಾಗಿತ್ತು. ಗ್ರಾ.ಪಂ. ಸದಸ್ಯ ಹಾಗೂ ಗೆಳೆಯರ ಬಳಗದ ಗೌರವಾಧ್ಯಕ್ಷ ನೆಲ್ವಿಸ್ಟರ್ ಪಿಂಟೊ ಮುಂದಾಳತ್ವದಲ್ಲಿ ಸಮಿತಿ ರಚಿಸಿ, ನಯನಾಡು ಸಂತ ಫ್ರಾನ್ಸಿಸ್ ಆಸಿಸ್ಸಿ ಚರ್ಚ್ ಧರ್ಮ ಗುರು ವಂ.ಫಾ. ಅನಿಲ್ ಅವಿಲ್ಡ್ ಲೋಬೊ ಮತ್ತು ಪಾಲನ ಸಮಿತಿ ಸದಸ್ಯರಿಂದ ರಸ್ತೆ ನಿರ್ಮಾಣಕ್ಕಾಗಿ ನಿರಂತರ ಕಾನೂನು ಹೋರಾಟ ನಡೆಸಲಾಯಿತು. ಬಳಿಕ ಬಿಜೆಪಿ ಜಿಲ್ಲಾ ಕಾರ್ಯದರ್ಶಿಯಾದ ದಿನೇಶ್ ಅಮ್ಟೂರ್ ನೇತೃತ್ವದಲ್ಲಿ ಜಾಗದ ಮಾಲಕ ಶ್ಯಾಮರಾಯ ಆಚಾರ್ಯ ಅವರೊಂದಿಗೆ ರಾಜಿ ಸಂಧಾನ ನಡೆಸಲಾಯಿತು. ಈ ರಸ್ತೆಯ 5 ಸೆಂಟ್ಸ್ ಸ್ಥಳಕ್ಕಾಗಿ ಮಂಗಳೂರು ಕ್ರೈಸ್ತ ಧರ್ಮ ಪ್ರಾಂತ್ಯದ ಲಾರ್ಡ್ ಬಿಷಪ್ 16 ಸೆಂಟ್ಸ್ ಜಾಗವನ್ನು ಶ್ಯಾಮರಾಯ ಆಚಾರ್ಯ ಅವರಿಗೆ ಕಡಿಮೆ ಮೊತ್ತಕ್ಕೆ ನೀಡಲು ಒಪ್ಪಿಕೊಂಡಿರುತ್ತಾರೆ. ಜಾರಪ್ಪ ಸಪಲ್ಯ, ಶ್ಯಾಮರಾಯ ಆಚಾರ್ಯ, ಅನಿಲ್ ಮೋರಸ್ ಮತ್ತಿತರರು ರಸ್ತೆಗಾಗಿ ಜಾಗ ನೀಡಿದ್ದಾರೆ. ಇದಕ್ಕೆ ಬದಲಾಗಿ ಶ್ಯಾಮರಾಯ ಆಚಾರ್ಯ ಅವರಿಗೆ ಗೆಳೆಯರ ಬಳಗದ ವತಿಯಿಂದ 3.5 ಲಕ್ಷ ರೂ. ವೆಚ್ಚದಲ್ಲಿ ಬೇರೆ ಜಾಗ ನೀಡಲಾಗುತ್ತಿದೆ. ಈ ಪ್ರಯತ್ನದ ಫಲವಾಗಿ 14 ಅಡಿ ಅಗಲ ಮತ್ತು 600 ಮೀ. ಉದ್ದದ ರಸ್ತೆ ನಿರ್ಮಾಣ ಸಾಧ್ಯವಾಗಿದೆ.



ನೂತನ ರಸ್ತೆಯನ್ನು ಉದ್ಘಾಟಿಸಿದಧರ್ಮಗುರು ವಂ. ಅನಿಲ್ ಅವಿಲ್ಡ್ ಲೋಬೋ ಮಾತನಾಡಿ, ಈ ರಸ್ತೆ ಹಲವಾರು ಕುಟುಂಬಗಳು ಬೆಸೆಯಲು, ಕೃಷಿ ಚಟುವಟಿಕೆಗೆ ಹಾಗೂ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯೋಗವಾಗಲಿದೆ ಎಂದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರ್, ಇರ್ವತ್ತೂರು ಗ್ರಾ.ಪಂ. ಮಾಜಿ ಸದಸ್ಯ ಶಂಕರ ಶೆಟ್ಟಿ ಬೆದ್ರಮಾರ್, ಪಿಲಾತಬೆಟ್ಟು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗೀತಾ ಹೆಗಡೆ, ಗ್ರಾ.ಪಂ. ಮಾಜಿ ಅಧ್ಯಕ್ಷೆ ಶಾರದಾ, ಶ್ಯಾಮರಾಯ ಆಚಾರ್ಯ, ಪಂಚಾಯತ್ ಮಾಜಿ ಸದಸ್ಯರಾದ ಲಕ್ಷ್ಮೀನಾರಾಯಣ ಹೆಗ್ಡೆ, ಪುಷ್ಪಲತಾ ಸಾಲ್ಯಾನ್, ಧರ್ಮಗುರು ವಂ.ಫಾ. ಜೋಸೆಫ್ ಡಿಸೋಜಾ, ಐಸಿವೈಎಂ ಬೆಳ್ತಂಗಡಿ ಪ್ರಾಂತ್ಯ ಅಧ್ಯಕ್ಷ ಜೈಸನ್ ರೊಡ್ರಿಗಸ್, ಪ್ರಮುಖರಾದ ಎಲಿಯಾಸ್ ಕ್ರಾಸ್ತಾ, ಮೋಹನ್ ಸಾಲ್ಯಾನ್, ವಿಕ್ಟರ್ ಡೀಸೋಜ, ಹಾಗೂ ಗೆಳೆಯರ ಬಳಗದ ನಿರ್ದೇಶಕರು ಉಪಸ್ಥಿತರಿದ್ದರು. ಗೆಳೆಯರ ಬಳಗ ಸೇವಾ ಸಂಸ್ಥೆಯ ಗೌರವಾಧ್ಯಕ್ಷ ನೆಲ್ವಿಸ್ಟರ್ ಪಿಂಟೊ ಅವರು ಸ್ವಾಗತಿಸಿ, ಪ್ರಸ್ತಾವಿಸಿದರು. ಅಧ್ಯಕ್ಷ ಡಾನ್ ಪ್ರವೀಣ್ ಕ್ರಾಸ್ತ ನಿರೂಪಿಸಿದರು.

ಸುತ್ತಮುತ್ತ

ಮಸೂದೆಗೆ ತಡೆ: ಶಾಸಕ ಪೂಂಜ ಟೀಕೆ

ಬೆಳ್ತಂಗಡಿ: ಬದಲಾಗುತ್ತಿರುವ ಕಾಲಘಟ್ಟದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಸಂಸತ್ತಿನಲ್ಲಿ ಶೇ.33 ಮಹಿಳೆಯರಿಗೆ ಮೀಸಲಿಡುವ ಐತಿಹಾಸಿಕ ಮಸೂದೆಯನ್ನು ಲೋಕಸಭೆಯಲ್ಲಿ ಮೂರನೇ ಎರಡು ಬಹುಮತ ಪಡೆಯದಂತೆ ತಡೆಯೊಡ್ಡಿ ಇದೀಗ ವಿಘ್ನ ಸಂತೋಷಿಗಳಂತೆ ಸಂಭ್ರಮ ಆಚರಿಸುತ್ತಿರುವುದು ಮಹಿಳೆಯರಿಗೆ ಮಾಡಿದ ದ್ರೋಹದ ಜೊತೆಗೆ ಪ್ರಜಾಪ್ರಭುತ್ವಕ್ಕೆ ಮಸಿ ಬಳಿದಂತಾಗಿದೆ ಎಂದು ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಕಟುವಾಗಿ ಟೀಕಿಸಿದ್ದಾರೆ.

ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸುತ್ತಿರುವುದು ಕಾಂಗ್ರೆಸ್ ಗೆ ರಕ್ತಗತ ಚಾಳಿಯಾಗಿದೆ. ಅನೇಕ ಬಾರಿ 356ನೇ ವಿಧಿ ಪ್ರಯೋಗಿಸಿ ಚುನಾಯಿತ ಸರಕಾರಗಳ ವಜಾ, 1975ರಲ್ಲಿ ಅಲಹಾಬಾದ್ ಉಚ್ಚ ತೀರ್ಪಿಗೆ ವ್ಯತಿರಿಕ್ತವಾಗಿ ತುರ್ತು ಪರಿಸ್ಥಿತಿ ಘೋಷಣೆ, ರಾಜ್ಯಪಾಲರನ್ನು ಕೈಗೊಂಬೆ ಮಾಡಿ ಸಂವಿಧಾನ ಬಾಹಿರ ಕೃತ್ಯ ಎಸಗುವುದು ಕಾಂಗ್ರೆಸ್ ನ ಚರಿತ್ರೆಯ ಕರಾಳ ಮುಖವಾಗಿದೆ. ಇದೀಗ ತಾನೇ ಈ ಹಿಂದೆ ತರಲೆತ್ನಿಸಿದ ಮಹಿಳಾ ಮೀಸಲಾತಿ ಮಸೂದೆಗೆ ನರೇಂದ್ರ ಮೋದಿಯನ್ನು ವಿರೋಧಿಸುವ ಏಕೈಕ ಕಾರಣಕ್ಕೆ ತಡೆಹಿಡಿದಿದ್ದು ಮಹಿಳೆಯರ ಪರ ಕಾಂಗ್ರೆಸ್ ಪಕ್ಷ ನಿಲುವು ಏನೆಂಬುದು ಬಟಾಬಯಲಾಗಿದೆ. ತಂತ್ರಜ್ಞಾನ ಯುಗದಡೆಗೆ ದಾಪುಗಾಲಿಡುವ ಇಂದಿನ ದಿನದಲ್ಲಿ ಕರ್ನಾಟಕದ ಕಾಂಗ್ರೆಸ್ ಸರಕಾರ (ಇವಿಎಂ) ವಿದ್ಯುನ್ಮಾನ ಮತಯಂತ್ರದಿಂದ ಬ್ಯಾಲೆಟ್ ಪೇಪರ್‌ಗೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಲು ಉದ್ದೇಶಿಸಿದೆ. ಇಂತಹ ಮನಸ್ಥಿತಿಯಿರುವ ಕಾಂಗ್ರೆಸ್ ಪಕ್ಷದ ಜನಪ್ರತಿನಿಧಿಗಳಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ ಎಂದು ಶಾಸಕ ಹರೀಶ್ ಪೂಂಜ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಇಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ

ಕಾಸರಗೋಡು: ಕಾಸರಗೋಡು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ಏ.22ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆಯಲಿರುವುದಾಗಿ ತಿಳಿಸಲಾಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸುರತ್ಕಲ್‌ವ್ಯಾಪ್ತಿಯಲ್ಲಿ ಏ.23ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯ ಮಾಡಲಾಗುವುದು. ಕಾನ, ಕಟ್ಲ, ಜನತಾ ಕಾಲನಿ, ಸುರತ್ಕಲ್, ಗುಡ್ಡೆಕೊಪ್ಲ, ಹೊಸಬೆಟ್ಟು, ತಡಂಬೈಲ್, ಪೆಡ್ಡಿಯಂಗಡಿ, 1 ನೇ ಬ್ಲಾಕ್, 2ನೇ ಬ್ಲಾಕ್, 3ನೇ ಬ್ಲಾಕ್, 4ನೇ ಬ್ಲಾಕ್, 5ನೇ ಬ್ಲಾಕ್, 7ನೇ ಬ್ಲಾಕ್, 8ನೇ ಬ್ಲಾಕ್, 9ನೇ ಬ್ಲಾಕ್, ಆಶ್ರಯ ಕಾಲೊನಿ, ಬಾಳ, ಎಂ.ಆರ್.ಪಿ.ಎಲ್ ಕಾರ್ಗೋಗೇಟ್, ಕೈಕಂಬ, ಮಂಗಳಪೇಟೆ, ಸೂರಿಂಜೆ, ದೇಲಂತಬೆಟ್ಟು, ರಾಜೀವನಗರ, ಪೆರ್ಮುದೆ, ಕುತ್ತೆತ್ತೂರು , ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅಂಧರ ಶಾಲೆಯಲ್ಲಿ ಪ್ರವೇಶಾತಿ ಆರಂಭ

ಕಾಸರಗೋಡು: ಕಾಸರಗೋಡಿನ ವಿದ್ಯಾನಗರದಲ್ಲಿರುವ ಅಂಧರ ಶಾಲೆಯಲ್ಲಿ 1 ರಿಂದ 7ನೇ ತರಗತಿಗಳಿಗೆ ಪ್ರವೇಶಾತಿ ಪ್ರಾರಂಭವಾಗಿದೆ. ಶೇ. 40ರಷ್ಟು ದೃಷ್ಟಿದೋಷವಿರುವ ಮತ್ತು ಸಂಪೂರ್ಣ ಕುರುಡುತನ ಹೊಂದಿರುವ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರು. ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿ ಹತ್ತಿರದ ಪ್ರೌಢಶಾಲೆಗಳಲ್ಲಿ ಪ್ರವೇಶ ಪಡೆಯುವ ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಲಭ್ಯವಿದೆ. ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಾಹನ ಸೌಕರ್ಯ ಇದೆ. ಮಾಹಿತಿಗೆ 949546 2946–04994 255128 ಕರೆ ಮಾಡಬಹುದು.

ಧರಣೇಂದ್ರ ಕೆ. ಅವಿರೋಧ ಆಯ್ಕೆ



ಬೆಳ್ತಂಗಡಿ: ಟೀಚರ್ಸ್ ಕೋ ಆಪರೇಟಿವ್ ಬ್ಯಾಂಕ್ ಉಡುಪಿ ಇದು 112 ವರ್ಷಗಳ ಇತಿಹಾಸವುಳ್ಳ ಪ್ರತಿಷ್ಠಿತ ಬ್ಯಾಂಕ್ ಆಗಿದ್ದು ರಾಜ್ಯದ 18 ಜಿಲ್ಲೆಗಳಲ್ಲಿ ಪ್ರಸ್ತುತ 16 ಶಾಖೆಗಳನ್ನು, 25000 ಕ್ಕಿಂತಲೂ ಹೆಚ್ಚು ಸದಸ್ಯರನ್ನು ಹೊಂದಿರುವ ಪ್ರತಿಷ್ಠಿತ ಬ್ಯಾಂಕ್ ಆಗಿದ್ದು ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಬ್ಯಾಂಕ್ ಆಗಿರುತ್ತದೆ. ಈ ಬ್ಯಾಂಕಿನ ಉಪಾಧ್ಯಕ್ಷರಾಗಿ ಬೆಳ್ತಂಗಡಿ ತಾಲೂಕಿನ ಕರ್ನಾಟಕ ಪಬ್ಲಿಕ್ ಸ್ಕೂಲ್, ಪೂಂಜಾಲಕಟ್ಟೆಯ ಪ್ರೌಢಶಾಲಾ ವಿಭಾಗದ ಸಮಾಜ ವಿಜ್ಞಾನ ಶಿಕ್ಷಕರಾದ ಧರಣೇಂದ್ರ ಕೆ. ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಬ್ಯಾಂಕಿನ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಇವರು ಒಬ್ಬ ಅತ್ಯುತ್ತಮ ಕಾರ್ಯಕ್ರಮ ನಿರೂಪಕನಾಗಿ, ಅಸಾಮಾನ್ಯ ಸಂಘಟನಾಗಿ, ಜಿಲ್ಲೆ, ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿ ಗುರುತಿಸಿಕೊಂಡವರು.

ಕೊಂಡೆವೂರು ವಿದ್ಯಾಪೀಠಕ್ಕೆ ಶೇಕಡಾ 100 ಫಲಿತಾಂಶ

ಮಂಜೇಶ್ವರ: ಉಪ್ಪಳ ಕೊಂಡೆವೂರು ಸದ್ಗುರು ಶ್ರೀ ನಿತ್ಯಾನಂದ ವಿದ್ಯಾಪೀಠ ಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇಕಡಾ 100 ಫಲಿತಾಂಶ ಲಭಿಸಿದೆ. ಈ ಸಾಧನೆಗೆ ಸಂತಸ ವ್ಯಕ್ತಪಡಿಸಿದ ಶಾಲಾ ಸಂಸ್ಥಾಪಕ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಅವರು ಮಕ್ಕಳನ್ನು ಅಭಿನಂದಿಸಿ ಹರಸಿದ್ದಾರೆ.

ಈ ಶಾಲೆಯ 35 ಮಂದಿ ವಿದ್ಯಾರ್ಥಿಗಳು ಸಿಬಿಎಸ್‌ಇ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ್ದಾರೆ. ಅವರನ್ನು ಶಾಲಾ ಆಡಳಿತ ಮಂಡಳಿ, ಪ್ರಾಂಶುಪಾಲರು, ಪಿಟಿಎ ಸಂಘ, ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

ಪೆರಡಾಲ ಶ್ರೀ ದೇವಳ ಬ್ರಹ್ಮಕಲಶದಲ್ಲಿ ಮಾತೃ ಸಮಾವೇಶ | ಸಾಧ್ವಿ ಶ್ರೀ ಮಾತಾನಂದಮಯಿ ಆಶೀರ್ವಚನ

ಉತ್ತಮ ಸಮಾಜ ನಿರ್ಮಾಣದಲ್ಲಿ ಮಾತೆಯರ ಪಾತ್ರ ದೊಡ್ಡದು

ಬದಿಯಡ್ಕ: ಉತ್ತಮ ಸಮಾಜದ ನಿರ್ಮಾಣದಲ್ಲಿ ಮಾತೆಯರಿಗೆ ಬಲುದೊಡ್ಡ ಜವಾಬ್ದಾರಿಯಿದೆ. ಪರಿಸರದ ಬಂಧುಗಳ ಮುಗ್ಧತೆ, ನಿಷ್ಠೆ ಸೇವಾ ಮನೋಭಾವವಿದ್ದರೆ ಭಗವಂತನ ಅನುಗ್ರಹ ಒಲಿಯುತ್ತದೆ ಎಂಬುದಕ್ಕೆ ಪೆರಡಾಲ ಪುಣ್ಯಭೂಮಿಯೇ ಸಾಕ್ಷಿಯಾಗಿದೆ. ಸಮರ್ಪಣಾ ಭಾವ, ಸೇವಾ ಮನೋಭಾವ ಹೊಂದಿರುವ ಊರು ಅಭಿವೃದ್ಧಿ ಕಾಣುತ್ತದೆ ಎಂದು ಒಡಿಯೂರು ಸಾಧ್ವಿ ಶ್ರೀ ಮಾತಾನಂದಮಯಿ ಅಭಿಪ್ರಾಯ ವ್ಯಕ್ತಪಡಿಸಿದರು. ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶದ 5ನೇ ದಿನವಾದ ಮಂಗಳವಾರ ಸಂಜೆ ನಡೆದ ಧಾರ್ಮಿಕ ಸಭೆಯ ಮಾತೃ ಸಮಾವೇಶದಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.

ದೇವಾಲಯ- ವಿದ್ಯಾಲಯ ಕಣ್ಣುಗಳಿದ್ದಂತೆ

ಸುಳ್ಯ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ಮುಖ್ಯ ಅಭ್ಯಾಗತರಾಗಿ ಪಾಲ್ಗೊಂಡು ಮಾತನಾಡಿ, ದೇವಾಲಯ ಹಾಗೂ ವಿದ್ಯಾಲಯ ಆಯಾ ಊರಿಗೆ ಕಣ್ಣುಗಳಿದ್ದಂತೆ. ಅವೆರಡನ್ನೂ ಜೋಪಾನವಾಗಿ ಕಾಪಾಡಿಕೊಂಡು ಬರುವುದು ನಮ್ಮೆಲ್ಲರ



ಕರ್ತವ್ಯ. ಇಂದು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಹಿಳೆಯರು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿರುವುದು ನಾಡಿನ ಜನರ ಒಗ್ಗಟ್ಟಿನ ಫಲವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪ್ರಶಾಂತ್ ಪಕಳ ಮಲಾರ್‌ಬೀಡು ವಹಿಸಿದ್ದರು. ಮಂಗಳೂರು ಆಸರೆ ಚಾರಿಟೇಬಲ್ ಟ್ರಸ್ಟ್‌ನ ಡಾ.ಆಶಾಜ್ಯೋತಿ ರೈ ಮಾಲಾಡಿ ಧಾರ್ಮಿಕ ಭಾಷಣ ಮಾಡಿದರು. ಹಿರಿಯ ಸ್ತ್ರೀರೋಗ ತಜ್ಞೆ ಡಾ.ಶಾಂಭವಿ ಎಚ್., ಡಾ.ಕವಿತಾ ಶೆಟ್ಟಿ ಕಂಡೆತ್ತೋಡಿ, ಡಾ.ವಸುಂಧರಾ ಕೈಲಾಸನಾಥ್, ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಮುಖ್ಯ ಅಭ್ಯಾಗತರಾಗಿ ಭಾಗವಹಿಸಿ ಮಾತನಾಡಿದರು.

> **ದೇವಳ ಅಭಿವೃದ್ಧಿಯಿಂದ ನಾಡಿನ ಪ್ರಗತಿ ಸಾಧ್ಯ**
>
> ದೇವಳಗಳ ಅಭಿವೃದ್ಧಿಯಿಂದ ನಾಡಿನ ಪ್ರಗತಿ ಸಾಧ್ಯವಿದೆ. ಭಕ್ತರು ಕ್ಷೇತ್ರಗಳಿಗೆ ಭೇಟಿ ನೀಡಿ ಶ್ರೀ ದೇವರ ದರುಶನ ಮಾಡುವುದರ ಜೊತೆ ಸೇವಾ ಕಾರ್ಯ ನಿರಂತರ ಕೈಗೊಂಡಾಗ ಭಕ್ತರಲ್ಲಿ ಸಂಘಟನೆ ಬೆಳೆದು ಊರಿಗೆ ಬೆಳಕು ಲಭಿಸಿದಂತಾಗುತ್ತದೆ. ಈ ನಿಟ್ಟಿನಲ್ಲಿ ಮಾತೆಯರು, ಮಕ್ಕಳು ಸಹಿತ ಪ್ರತಿಯೋರ್ವರೂ ಭಾಗಿಗಳಾಗಬೇಕು.
>
> • ಸಾಧ್ವಿ ಶ್ರೀ ಮಾತಾನಂದಮಯಿ

ಡಾ.ಮಾಲತಿ ಪ್ರಕಾಶ್ ನೀರ್ಚಾಲು, ಪ್ರಮೀಳಾ ನಾಯ್ಕ ಮುಖ್ಯೋಪಾಧ್ಯಾಯಿನಿ ಮಿನಿ, ಬ್ರಹ್ಮಕಲಶದ ಮಾತೃ ಸಮಿತಿ ಅಧ್ಯಕ್ಷೆ ವಿನಯಾ ಜೆ.ರೈ, ಗೌರವಾಧ್ಯಕ್ಷೆ ಸೀತಾಲಕ್ಷ್ಮೀ ಪಂಜಿತ್ತಡ್ಕ, ಅಧ್ಯಾಪಿಕೆ ಪ್ರಭಾವತಿ ಕೆದಿಲ್ಲಾಯ ಪುಂಡೂರು, ಪ್ರತಿಭಾ, ದೀಪಶ್ರೀ, ಮಧುಶ್ರೀ ಅಳಕ್ಕೆ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮಾತೃ ಸಮಿತಿ ಕಾರ್ಯದರ್ಶಿ, ಅಧ್ಯಾಪಿಕೆ ಅನಿತಾ ಸ್ವಾಗತಿಸಿ, ಅಧ್ಯಾಪಿಕೆ ಜಯಲತಾ ಟೀಚರ್ ವಂದಿಸಿದರು.

ಪೆರಡಾಲ ಕ್ಷೇತ್ರದಲ್ಲಿ ಇಂದಿನ ಕಾರ್ಯಕ್ರಮ

ಪೆರಡಾಲ ಶ್ರೀ ಕ್ಷೇತ್ರದಲ್ಲಿ ಬ್ರಹ್ಮಕಲಶದ ಅಂಗವಾಗಿ ಏ.22ರಂದು ಬೆಳಗ್ಗೆ 6ರಿಂದ ವಿವಿಧ ವೈದಿಕ ಕಾರ್ಯಕ್ರಮ, ನಟರಾಜ ವೇದಿಕೆಯಲ್ಲಿ 9.30ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, 11.30ಕ್ಕೆ ಯಕ್ಷಗಾನ ತಾಳಮದ್ದಳೆ, ಅಪರಾಹ್ನ 2ರಿಂದ ಭಕ್ತಿ ಭಾವ ಗಾನ ಯಾನ, 3.30ಕ್ಕೆ ಭಕ್ತಿ ಸಂಗೀತ, ಸಂಜೆ 4ಕ್ಕೆ ಉಡುಪಿ ಪೇಜಾವರ ಮಠಾಧೀಶ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಆಗಮನ, 4.30ಕ್ಕೆ ನಡೆಯುವ ಧಾರ್ಮಿಕ ಸಭೆಯಲ್ಲಿ ಪೇಜಾವರ ಶ್ರೀಗಳಿಂದ ಆಶೀರ್ವಚನ , ಸಭೆಯಲ್ಲಿ ಬ್ರಹ್ಮಕಲಶ ಸಮಿತಿ ಗೌರವಾಧ್ಯಕ್ಷ, ಹಿರಿಯ ವಕೀಲ ಐ.ವಿ.ಭಟ್ ಕಾಸರಗೋಡು ಅಧ್ಯಕ್ಷತೆ ವಹಿಸುವರು. ವಿವಿಧ ವಲಯಗಳ ಗಣ್ಯರು ಭಾಗವಹಿಸುವರು. ರಾತ್ರಿ 7ರಿಂದ ಗೀತಾ ಸಾಹಿತ್ಯ ಸಂಭ್ರಮ, 8.45ಕ್ಕೆ ಭರತನಾಟ್ಯ, 10.45ಕ್ಕೆ ತುಳು ನಾಟಕ ಜರಗಲಿದೆ.

ಪಡುಬಿದ್ರಿ ಶ್ರೀ ದೇವಳ ಬ್ರಹ್ಮಕಲಶ | ಹೊರೆಕಾಣಿಕೆ ಸಮರ್ಪಣೆ ಪೂರ್ವಭಾವಿ ಸಭೆ

ಶಿಸ್ತು ಬದ್ಧ ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳಲು ಸೂಚನೆ

ಪಡುಬಿದ್ರಿ: ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶದ ಹೊರೆಕಾಣಿಕೆ ಸಮರ್ಪಣೆ ಪೂರ್ವಭಾವಿ ಸಭೆ ಪಡುಬಿದ್ರಿ ಭಂಟರ ಭವನದಲ್ಲಿ ನಡೆಯಿತು.

ರಾಜ್ಯ, ಹೊರ ರಾಜ್ಯ ಹಾಗೂ ವಿವಿಧ ಜಿಲ್ಲೆಯಿಂದ ಹೊರಕಾಣಿಕೆಯು ಬರುವ ನಿರೀಕ್ಷೆಯಿದ್ದು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕೆ. ಪ್ರಕಾಶ್ ಶೆಟ್ಟಿ ಮನವಿಯಂತೆ ಹೊರೆಕಾಣಿಕೆಯಲ್ಲಿ ಬರುವ ಎಲ್ಲರನ್ನು ಗೌರವಿಸಿ, ಐತಿಹಾಸಿಕ ಹೊರೆಕಾಣಿಕೆ ಮೆರವಣಿಗೆ ನಡೆಸುವ ಬಗ್ಗೆ ಚರ್ಚಿಸಲಾಯಿತು. ಹಿರಿಯರ, ಅನುಭವಿಗಳ ಸಲಹೆಗಳನ್ನು ಪಡೆದುಕೊಳ್ಳಲಾಯಿತು.

ಹೊರೆಕಾಣಿಕೆಗೆ ಉಡುಪಿ ಕಡೆಯಿಂದ ಬರುವವರು ಎರ್ಮಾಳು ಜನಾರ್ದನ ದೇವಳ ಬಳಿ ಸ್ವಾಗತಿಸಿ ಅವರಿಗೆ ಕುಡಿಯುವ ನೀರು, ಪಾನಕದ ವ್ಯವಸ್ಥೆಯನ್ನು ಸ್ಥಳೀಯರು ಮಾಡುವಂತೆ ಮಂಗಳೂರು ಕಡೆಯಿಂದ ಬರುವಂತ ಹೊರೆಕಾಣಿಕೆ ಮೆರವಣಿಗೆ ಎರ್ಮಾಳು ಮಸೀದಿ ಬಳಿ ತಿರುಗಿ ನರಳಯತಾಯ ದೇವಸ್ಥಾನದ ಮುಂದೆ ಸ್ವಾಗತಿಸಿ ಅಲ್ಲಿ ಅವರಿಗೆ ಕುಡಿಯುವ ನೀರು ಹಾಗೂ ಪಾನಕದ ವ್ಯವಸ್ಥೆಯನ್ನು ಸ್ವಯಂಸೇವಕರು ನಿರ್ವಹಿಸುವುದು. ಮುಂದೆ ಗುಲ್ವಾಡಿ ಕಟ್ಟೆಯ ಬಳಿ ಸಹಸ್ರಾರು ಭಕ್ತರು ಸೇರುವಲ್ಲಿ ಕುಡಿಯುವ ನೀರು, ಪಾನಕ, ಪ್ರಥಮ ಚಿಕಿತ್ಸಾ ವಿಭಾಗವನ್ನು ನಿರ್ವಹಿಸುವುದು.



> **ಸಹಕಾರ ಅಗತ್ಯ**
>
> ನಾವು ದೇವಸ್ಥಾನದ ಸೇವಾ ರೂಪದಲ್ಲಿ ಕಾರ್ಯನಿರ್ವಹಿಸುತ್ತಾ ಎಲ್ಲಾ ಭಕ್ತರಿಗೂ ಹೊರೆಕಾಣಿಕೆಯ ಸುದ್ದಿ ಮುಟ್ಟಿಸುವ ಕೆಲಸ ಮಾಡುತ್ತಿದ್ದೇವೆ. ಹೊರೆಕಾಣಿಕೆಯ ಯಶಸ್ವಿಗೆ ಎಲ್ಲಾ ಸಮಿತಿಯ ಸಹಕಾರ ಅಗತ್ಯ.
>
> • ದೇವಿಪ್ರಸಾದ್ ಶೆಟ್ಟಿ

ಅತಿಥಿಗಳಿಗೆ ಪ್ರತ್ಯೇಕ ಪೆಂಡಾಲು ವ್ಯವಸ್ಥೆ, ಅಲ್ಲಿ ಅವರಿಗೆ ಸರಿಯಾಗಿ ಸ್ವಯಂಸೇವಕರು ಮೇಲುಸ್ತುವಾರಿ ನೋಡಿ ಕೊಳ್ಳುವುದು. ಮೆರವಣಿಗೆ ಹೊರಡುವ ಸಂದರ್ಭ ಶಿಸ್ತು ಬದ್ಧವಾಗಿ ಕಾನೂನು ಸುವ್ಯವಸ್ಥೆ ಕಾಪಾಡಿಕೊಂಡು ಆಕರ್ಷಕ ಭವ್ಯ ಮೆರವಣಿಗೆ ನಡೆಸುವುದೆಂದು ನಿರ್ಧರಿಸಲಾಯಿತು.

ಮೆರವಣಿಗೆ ಸಮಿತಿಯ ಪ್ರಧಾನ ಸಂಚಾಲಕ ದೇವಿಪ್ರಸಾದ್ ಶೆಟ್ಟಿ ಮಾತನಾಡಿದರು. ಸಭೆಯಲ್ಲಿ ಸಹಕಾರಿ ಧುರೀಣ ಇಂದ್ರಾಳಿ ಜಯಕರ ಶೆಟ್ಟಿ ಸಲಹೆ ನೀಡಿದರು. ಕಾಪು ಮಾರಿಗುಡಿಯ ಬ್ರಹ್ಮಕಲಶೋತ್ಸವದ ಪ್ರಮುಖರಾದ ಯೋಗೀಶ್ ಶೆಟ್ಟಿ ಬಾಲಾಜಿ, ಶ್ರೀಕರ್ ಶೆಟ್ಟಿ ಕಲ್ಯ, ಅರುಣ್ ಶೆಟ್ಟಿ ಪಾದೂರು, ಗೀತಾಂಜಲಿ ಸುವರ್ಣ ಸಲಹೆ ನೀಡಿದರು. ಬಿಲ್ಲವ ಮುಖಂಡರಾದ ವೈ. ಸುಧೀರ್ ಕುಮಾರ್, ಮೊಗವೀರ ಮುಖಂಡರಾದ ಸುಕುಮಾರ್ ಶ್ರೀಯಾನ್, ವಿಶ್ವಾಸ್ ವಿ. ಅಮೀನ್, ಮಾತೃ ಮಂಡಳಿ ಅಧ್ಯಕ್ಷ ಕಸ್ತೂರಿ, ದೇವಸ್ಥಾನದ ಹಲವು ಸಮಿತಿಯ ಪ್ರಮುಖರಾದ ಸಂತೋಷ್ ಶೆಟ್ಟಿ ಪಲ್ಲವಿ, ಪ್ರಕಾಶ್ ಶೆಟ್ಟಿ ಪಾದಬೆಟ್ಟು, ರವಿ ಶೆಟ್ಟಿ ಗುಲ್ವಾಡಿ, ಸುಧಾಕರ್ ಶೆಟ್ಟಿ ಹೆಜಮಾಡಿ, ಕರುಣಕರ್ ಶೆಟ್ಟಿ ಪಾಲಿಮಾರ್, ವಿನಯ್ ಶೆಟ್ಟಿ ಎರ್ಮಾಳು, ಹರೀಶ್ ಶೆಟ್ಟಿ ಅವರಾಲ , ಸುಜಿತ್ ಶೆಟ್ಟಿ ಅಜಿತ್ ಶೆಟ್ಟಿ ಸತೀಶ್ ಆಚಾರ್ಯ, ಪ್ರೇಮನಾಥ್ ಶೆಟ್ಟಿ ಅವರಾಲು, ಭಾರತಿ ಭಾಸ್ಕರ್ ಶೆಟ್ಟಿ ಅನುಸೂಯ,ಸಾಧು ಶೆಟ್ಟಿ ಪಣಿಯೂರು, ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಮಮತ ಶೆಟ್ಟಿ, ನವೋದಯ ಸ್ವಸಹಾಯ ಸಂಘದ ಕಾಂತಿ ಆಚಾರ್ಯ ಉಪಸ್ಥಿತರಿದ್ದರು. ಪ್ರಕಾಶ್ ಶೆಟ್ಟಿ ಪಡುಹಿತ್ಲು ವಂದಿಸಿದರು.

ಪರಾರಿ ಬೊಬ್ಬರ್ಯ ದೈವಸ್ಥಾನದ ಬ್ರಹ್ಮಕಲಶ | ಧಾರ್ಮಿಕ ಸಭೆಯಲ್ಲಿ ಅಭಿಪ್ರಾಯ

ದೈವಾರಾಧನೆ, ನಾಗರಾಧನೆಯಿಂದ ಧಾರ್ಮಿಕ ನಂಬುಗೆ ಗಟ್ಟಿ

ಬ್ರಹ್ಮಾವರ : ಪರಶುರಾಮ ಸೃಷ್ಟಿಯಲ್ಲಿ ದೈವರಾಧನೆ ಹಾಗೂ ನಾಗಾರಾಧನೆಗೆ ವಿಶೇಷ ಮಹತ್ವವಿದ್ದು, ದೈವಸ್ಥಾನ ಮತ್ತು ದೇವಸ್ಥಾನಗಳಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳು, ಬ್ರಹ್ಮಕಲಶದಂತಹ ಕಾರ್ಯಕ್ರಮಗಳು ಯುವಜನತೆಯಲ್ಲಿ ಧಾರ್ಮಿಕ ಭಾವನೆಗಳ ಬೆಳೆಸಲು ಸಹಕಾರಿ ಎಂದು ಕಾಂಗ್ರೆಸ್ ಮುಖಂಡ ಪ್ರಸಾದ್ ರಾಜ್ ಕಾಂಚನ್ ಅಭಿಪ್ರಾಯಪಟ್ಟರು.

ಅವರು ಪರಾರಿ ಬೊಬ್ಬರ್ಯ ದೈವಸ್ಥಾನದ ಪುನಃ ಪ್ರತಿಷ್ಠಾಪನಾ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆಯನ್ನು ಬೊಬ್ಬರ್ಯ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕೊಳಲಗಿರಿ ಗುರುರಾಜ್ ಭಟ್ ವಹಿಸಿದ್ದರು.

ಬ್ರಹ್ಮಾವರ ಜಿ.ಎಂ. ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್‌ನ ಚೇರ್ಮನ್ ಮತ್ತು ಆಡಳಿತ ನಿರ್ದೇಶಕ ಪ್ರಕಾಶ್‌ಚಂದ್ರ ಶೆಟ್ಟಿ, ಬೊಬ್ಬರ್ಯ ಪುನಃ ಪ್ರತಿಷ್ಠಾಪನಾ ಕಾರ್ಯಕ್ರಮದಿಂದ ಈ ಭಾಗದಲ್ಲಿ ಧಾರ್ಮಿಕ ಜಾಗೃತಿ ಹೆಚ್ಚುವಂತಾಗಿದೆ ಎಂದರು.

ಬಿಲ್ಲವ ಸಮಾಜದ ಯುವ ವೇದಿಕೆಯ ಜಿಲ್ಲಾಧ್ಯಕ್ಷ ಪ್ರವೀಣ್ ಎಂ. ಪೂಜಾರಿ ಮಾತನಾಡಿ, ಮಾನವೀಯತೆ ಕಡಿಮೆಯಾಗುತ್ತಿರುವ ಇಂದಿನ ಕಾಲಘಟ್ಟದಲ್ಲಿ ಹಿರಿಯರು ಯುವಜನತೆಗೆ ಜೀವನ ಮೌಲ್ಯಗಳು ಮತ್ತು ಸಂಸ್ಕೃತಿಯ ಅರಿವು ಮೂಡಿಸಬೇಕು ಎಂದು ಹೇಳಿದರು.



> **ಕೃತಜ್ಞತೆ**
>
> ಒಂದು ಒಳ್ಳೆ ಕೆಲಸ ಮಾಡಿದ ಆತ್ಮತೃಪ್ತಿ , ಸಾರ್ಥಕ್ಯ ಭಾವನೆ ನಮಗೆ ಬಂದಿದೆ. ಇಂದು ಪರಾರಿ ದೈವದ ಈ ಜೀರ್ಣೋದ್ಧಾರ ದಿಂದ ಉಡುಪಿ ಜಿಲ್ಲೆಯಾ ದ್ಯಂತ ಧಾರ್ಮಿಕ ಸಂಚಲನ ಉಂಟಾಗಿದೆ. ಸಹಕರಿಸಿದ ಎಲ್ಲರಿಗೂ ಕೃತಜ್ಞರಾಗಿದ್ದೇವೆ
>
> • ಸತೀಶ್ ಪೂಜಾರಿ

ಪತ್ರಕರ್ತ ಮಟಪಾಡಿ ಕುಮಾರಸ್ವಾಮಿ ಮಾತನಾಡಿ, ನಮಗೆ ಹೊರಗಿನ ಆರ್ಥಿಕ, ಸಾಮಾಜಿಕ ಸ್ಥಿತಿಯ ಅಂತಸ್ತು ಹೆಚ್ಚಾದಂತೆ ಒಳಗಿನ ಮೌಲ್ಯ ಕಡಿಮೆಯಾಗುತ್ತಿದೆ. ಧಾರ್ಮಿಕ ನಂಬಿಕೆ, ಚಿಂತನೆ ಅಂತಃಸತ್ವ ಹೆಚ್ಚಿಸಲು ನೆರವಾಗಬೇಕು ಎಂದರು.

ಈ ಸಂದರ್ಭ ಪಿ.ಎಂ. ಎಲೆಕ್ಟ್ರಿಕಲ್ಸ್ ಮಾಲಿಕ ಮಾಧವ ಪಾಣ, ಉಪ್ಪೂರು ಬಿಲ್ಲವ ಸೇವಾ ಸಂಘದ ಅಧ್ಯಕ್ಷ ರಾಜು ಪೂಜಾರಿ, ಮೊಗವೀರ ಸಂಘಟನೆ ಉಪ್ಪೂರು ಘಟಕದ ಗೌರವಾಧ್ಯಕ್ಷ ಕೆ.ಸಿ. ಅಮೀನ್, ಮೌನ ಇನ್ಫ್ರಾ ಮತ್ತು ಡೆವಲಪರ್ಸ್ ಮಾಲಕ ನವೀನ್ ಪೆರ್ಡೂರು, ಜಿ.ಕೆ. ಎಲೆಕ್ಟ್ರಿಕಲ್‌ನ ವಿಕ್ರಾಂತ್ ಶೆಟ್ಟಿ ತುಳುನಾಡ ರಕ್ಷಣಾ ವೇದಿಕೆ ಉಡುಪಿ ಜಿಲ್ಲಾಧ್ಯಕ್ಷ ಫ್ರ್ಯಾಂಕಿ ಡಿಸೋಜ, ಉದ್ಯಮಿ ಆತ್ಮರಾಮ ಪಾಟೀಲ್, ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಸತೀಶ್ ಪೂಜಾರಿ ಕೀಳಿಂಜೆ, ಮತ್ಸ್ಯೋದ್ಯಮಿ ಹರೀಶ್ ಪೂಜಾರಿ, ಸುರೇಶ್ ಬಿ. ಶೆಟ್ಟಿ ಜಯ ಪೂಜಾರಿ ಮತ್ತಿತರರಿದ್ದರು.

ಗೌರವಾಧ್ಯಕ್ಷ ಸತೀಶ್ ಪೂಜಾರಿ ಕೀಳಿಂಜೆ ಮಾತನಾಡಿದರು. ಅರ್ಚಕ ಗುರುರಾಜ್ ಭಟ್ , ಪರಾರಿಯಲ್ಲಿ 400–500 ವರ್ಷಗಳಿಂದ ಬೊಬ್ಬರ್ಯನ ಪೂಜೆ ನಡೆಯುತ್ತಿದ್ದು, ಭಕ್ತರ ಸಹಕಾರದಿಂದ ದೈವಸ್ಥಾನದ ಅಭಿವೃದ್ಧಿ ಸಾಧ್ಯವಾಗಿದೆ ಎಂದರು.

ಜೀರ್ಣೋದ್ಧಾರಕ್ಕೆ ದುಡಿದ ಕಾರ್ಯಕರ್ತರು, ದಾನಿಗಳು , ಮಾಧ್ಯಮ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು. ಅರ್ಚಕ ಗುರುರಾಜ್ ಭಟ್ ಸ್ವಾಗತಿಸಿ,ಲಕ್ಷ್ಮೀಶ್ ಭಟ್ ವಂದಿಸಿ, ಪ್ರಶಾಂತ್ ಶೆಟ್ಟಿ ನಿರೂಪಿಸಿದರು.

ಪ್ರತೀ ಮನೆಯಿಂದ ಮಕ್ಕಳಿಗೆ ಸಂಸ್ಕಾರ ಶಿಕ್ಷಣ ನೀಡುವ ಕೆಲಸವಾಗಬೇಕು: ಸಾಧ್ವಿ



ಮಂಜೇಶ್ವರ: ನಾನು ಶ್ರೇಷ್ಠನಲ್ಲ, ಭಕ್ತರ ಹೃದಯವೇ ಶ್ರೇಷ್ಠ ಭಕ್ತನಲ್ಲಿ ಅನನ್ಯವಾದ ಭಕ್ತಿ ಮೂಡಿಸಿದಾಗ ನಮ್ಮ ಜೀವನ ಪಾವನವಾಗುವುದು. ಚಿಕ್ಕಂದಿನಿಂದಲೇ ಪ್ರತೀ ಮನೆಯಿಂದಲೇ ಮಕ್ಕಳಿಗೆ ಸಂಸ್ಕಾರ ಶಿಕ್ಷಣ ನೀಡಬೇಕು. ಧಾರ್ಮಿಕ ಶಿಕ್ಷಣ ಲಭಿಸಿದರೆ ಮಾತ್ರ ಮುಂದೆ ದೇಶದ ಸಮರ್ಥ ಪ್ರಜೆಗಳಾಗಲು ಸಾಧ್ಯ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್‌ನ ಸಾಧ್ವಿ ಶ್ರೀ ಮಾತಾನಂದಮಯಿ ಹೇಳಿದ್ದಾರೆ.

ಕನಿಲ ಶ್ರೀ ಭಗವತೀ ಕ್ಷೇತ್ರದಲ್ಲಿ ನಡೆಯುವ ಬ್ರಹ್ಮಕಲಶ ಅಂಗವಾಗಿ ಸೋಮವಾರ ರಾತ್ರಿ ನಡೆದ ಮಾತೃಸಂಗಮ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿ ಅವರು ಮಾತನಾಡಿದರು.

ಕನಿಲ ಶ್ರೀ ಭಗವತೀ ಸೇವಾ ಮಹಿಳಾ ಸಮಿತಿ ಅಧ್ಯಕ್ಷೆ ಮೋತಿಕಿರಣ್ ಉಪೇಂದ್ರ ಅಧ್ಯಕ್ಷತೆ ವಹಿಸಿದ್ದರು. ಸಂಧ್ಯಾ ಗೋಪಾಲಕೃಷ್ಣ ತಂತ್ರಿ ಬಡಾಜೆ ಬೂಡು ಗೌರವ ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ಕನಿಲ ಶ್ರೀ ಭಗವತೀ ಸೇವಾ ಮಹಿಳಾ ಸಮಿತಿ ಗೌರವಾಧ್ಯಕ್ಷೆ ವಿಮಲಾ ನಾರಾಯಣ, ಕುಂಬಾಜೆ ಭಗವತೀ ಕ್ಷೇತ್ರ ಮಹಿಳಾ ಸಮಿತಿ ಅಧ್ಯಕ್ಷೆ ವಕೀಲೆ ಅಕ್ಷತಾ ಇಕ್ಕೇರಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯೋಜನಾಧಿಕಾರಿ ಶಶಿಕಲಾ ಸುವರ್ಣ, ಕುದ್ರೋಳಿ ಶ್ರೀ ಭಗವತೀ ಕ್ಷೇತ್ರ ಮಹಿಳಾ ಸಮಿತಿ ಅಧ್ಯಕ್ಷೆ ಆಶಾ ಚಂದ್ರಮೋಹನ್, ಶ್ರೀ ಭಗವತೀ ಆಂಗ್ಲ ಮಾಧ್ಯಮ ಶಾಲಾ ಪ್ರಾಂಶುಪಾಲೆ ಮಂಜುಳಾ ಪಿ.ವಿ., ಉಪ ಪ್ರಾಂಶುಪಾಲೆ ಮಾಲತಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಹಿಳಾ ಸಮಿತಿ ಕೋಶಾಧಿಕಾರಿ ಚಂಚಲಾಕ್ಷಿ ಪದ್ಮನಾಭ ಕಡಪ್ಪರ ಸ್ವಾಗತಿಸಿ, ಶ್ಯಾಮಲಾ ವಂದಿಸಿದರು.

ಲಾಲ್‌ಭಾಗ್-ಕುರುಡಪದವು ರಸ್ತೆ ಕಾಮಗಾರಿ ಕಳಪೆ: ಊರವರಿಂದ ಪ್ರತಿಭಟನೆಯ ಎಚ್ಚರಿಕೆ

ಉಪ್ಪಳ: ಪೈವಳಿಕೆ ಪಂ.ನ ಲಾಲ್‌ಭಾಗ್–ಕುರುಡಪದವು ಲೋಕೋ ಪಯೋಗಿ ಇಲಾಖೆ ರಸ್ತೆಯಲ್ಲಿ ಅಮ್ಮೇರಿ ತನಕ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಯಲ್ಲಿ ಕಳಪೆ ಕಾಮಗಾರಿ ನಡೆಯುತ್ತಿರುವುದಾಗಿ ಊರವರು ಆರೋಪಿಸಿದ್ದಾರೆ. ಗುಣಮಟ್ಟದ ಕಾಮಗಾರಿ ನಡೆಯದಿದ್ದರೆ ಪ್ರತಿಭಟನೆಯ ಎಚ್ಚರಿಕೆಯನ್ನೂ ನೀಡಿದ್ದಾರೆ.

ಜಲ್ಲಿಕಲ್ಲು ಎದ್ದು ಶೋಚನೀಯ

ಸುಮಾರು ನಾಲ್ಕೂವರೆ ಕೋ.ರೂ.ವೆಚ್ಚದಲ್ಲಿ ಮೂರೂವರೆ ಕಿಲೋಮೀಟರ್ ರಸ್ತೆಯಲ್ಲಿ ಕಳೆದ ಹಲವಾರು ತಿಂಗಳಿಂದ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ರಸ್ತೆ ಅಗಲೀಕರಣ, ಚರಂಡಿ, ರಸ್ತೆ ನಿರ್ಮಾಣಗೊಳ್ಳುತ್ತಿದೆ. ಈಗಾಗಲೇ ಸುಮಾರು 1 ಕಿಲೋ ಮೀಟರ್ ರಸ್ತೆಗೆ ಕೆಲವು ದಿನಗಳ ಹಿಂದೆಯಷ್ಟೆ ಡಾಮರೀಕರಣಗೊಳಿಸಲಾಗಿದ್ದ ರಸ್ತೆಯಲ್ಲಿ ಈಗಾಗಲೇ ಜಲ್ಲಿಕಲ್ಲು ಎದ್ದಿದ್ದು, ಒಂದು ಮಳೆ ಬಂದರೆ ಪೂರ್ತಿ ಜಲ್ಲಿಕಲ್ಲು ಎದ್ದು ಹೋಗಿ ಶೋಚನೀಯಾವಸ್ಥೆಗೆ ತಲುಪಲಿದೆ. ಅಲ್ಲದೆ ಚರಂಡಿ, ಸಂಕ ಕೂಡಾ ಅವ್ಯವಸ್ಥೆಯಿಂದ ನಿರ್ಮಿಸಲಾಗಿದ್ದು ಮಳೆಗೆ ನೀರು ಹರಿದು ತಗ್ಗು ಪ್ರದೇಶದಲ್ಲಿರುವ ಹಲವಾರು ಮನೆಗಳಿಗೆ ನೀರು ನುಗ್ಗುವ ಭೀತಿ ಎದುರಾಗಿದೆ. ಈ ಕಳಪೆ ಮಟ್ಟದ ಕಾಮಗಾರಿ ಬಗ್ಗೆ ಗುತ್ತಿಗೆದಾರನಿಗೆ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರೂ ನಿರ್ಲಕ್ಷ್ಯದಿಂದ ವರ್ತಿಸುತ್ತಿದ್ದಾರೆ.



ಅಧಿಕಾರಿಗಳ ತರಾಟೆಗೆ

ಸೋಮವಾರ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭ ಅವರನ್ನು ಊರವರು ಒಟ್ಟು ಸೇರಿ ತರಾಟೆಗೆ ತೆಗೆದಿದ್ದು, ಹಲವು ವರ್ಷಗಳ ಕಾಲ ಈ ರಸ್ತೆ ಹದಗೆಟ್ಟು ಶೋಚನೀಯಾವಸ್ಥೆಯಲ್ಲಿದ್ದ ರಸ್ತೆ ಇದೀಗ ರಸ್ತೆ ಅಭಿವೃದ್ಧಿಗೊಳ್ಳುತ್ತಿರುವಾಗಲೇ ಈ ರಸ್ತೆ ಕಳಪೆ ಮಟ್ಟದಲ್ಲಿ ಕಾಮಗಾರಿ ನಡೆಯುತ್ತಿರುವುದು ಮತ್ತೆ ಆತಂಕ ತಂದಿದೆ.

ಪ್ರತಿಭಟನೆಯ ಎಚ್ಚರಿಕೆ

ಕೂಡಲೇ ಇಲ್ಲಿ ಗುಣಮಟ್ಟದ ರಸ್ತೆ ಡಾಮರೀಕರಣಗೊಳಿಸಲು ಗುತ್ತಿಗೆದಾರ ಲೋಕೋಪಯೋಗಿ ಇಲಾಖೆ ತಯಾರಾಗದಿದ್ದಲ್ಲಿ ಊರವರು ಸೇರಿ ಕಾಮಗಾರಿ ತಡೆದು ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.



ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದ 5ನೇ ದಿನ ಕ್ಷೇತ್ರಾಚಾರ್ಯ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ನೇತೃತ್ವದಲ್ಲಿ 'ಐಪತಿ ಹೋಮ, ತತ್ವಕಲಶಪೂಜೆ, ತತ್ವಹೋಮ, ತತ್ವಕಲಶಾಭಿಷೇಕ, ಅನುಜ್ಞಾ ಕಲಶಾಭಿಷೇಕ, ಅಂಕುರ ಪೂಜೆ, ತ್ರಿಕಾಲಪೂಜೆ ನಡೆಯಿತು. ವಿವಿಧೆಡೆಗಳಿಂದ ಸುವಸ್ತು ಸಮರ್ಪಣೆ ನಡೆಯಿತು. ಸಂಜೆ ಅನುಜ್ಞಾಬಲಿ, ಕ್ಷೇತ್ರಪಾಲನಲ್ಲಿ ಅನುಜ್ಞಾ ಪ್ರಾರ್ಥನೆ, ಅಂಕುರ ಪೂಜೆ, ತ್ರಿಕಾಲಪೂಜೆ, ಬಿಂಬಶುದ್ಧಿ ಕಲಶಪೂಜೆ ನಡೆಯಿತು.



ಗೋಸಾಡ ಶ್ರೀ ಮಹಿಷಮರ್ದಿನಿ ಕ್ಷೇತ್ರದಲ್ಲಿ ಮೇ 5, 6ರಂದು ನಡೆಯುವ ವಿಶೇಷ ಮೂಡಪ್ಪ ಸೇವೆ , ಚಂಡಿಕಾಯಾಗದ ಆಮಂತ್ರಣ ಪತ್ರಿಕೆಯನ್ನು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಗೆ ನೀಡಿ ಕಾರ್ಯಕ್ರಮಕ್ಕೆ ಆಮಂತ್ರಿಸಲಾಯಿತು. ಪ್ರಧಾನ ಕಾರ್ಯದರ್ಶಿ ರವೀಂದ್ರ ರೈ ಗೋಸಾಡ, ಪರಮೇಶ್ವರ ಭಟ್, ಸಮಾಜ ಸೇವಕ ಸುಧಾಮ ಗೋಸಾಡ, ಪತ್ರಕರ್ತ ಅಖಿಲೇಶ್ ನಗುಮುಗಂ, ಸೀತಾರಾಮ ರೈ ಪಿಂಚಾರ, ಸುಧಾಕರನ್ ಪಾಂಡಿಗದ್ದೆ ಗೋಸಾಡ ಇದ್ದರು.

ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮೀ ಕ್ಷೇತ್ರದ ಬ್ರಹ್ಮಕಲಶ | ಕೊಂಡೆವೂರು ಶ್ರೀ ಆಶೀರ್ವಚನ

ಅಂತರಂಗದಲ್ಲಿ ಭಗವಂತನ ಚಿಂತನೆ ಮೈಗೂಡಿದಾಗ ವ್ಯಕ್ತಿ ಶಕ್ತಿಯಾಗಿ ಬದುಕು ಸಾರ್ಥಕ

ಕಾಸರಗೋಡು: ಪ್ರತಿಯೊಬ್ಬನ ಅಂತರಂಗದೊಳಗೆ ಭಗವಂತನ ಚಿಂತನೆ ಮೈಗೂಡಿದಾಗ ವ್ಯಕ್ತಿ ಶಕ್ತಿಯಾಗಿ ಬದುಕು ಸಾರ್ಥಕವಾಗುತ್ತದೆ. ಸಕಲ ಜೀವರಾಶಿಗಳ ಅಭ್ಯುದಯವೇ ಸನಾತನ ಧರ್ಮದ ಮೇಲ್ಪಂಕ್ತಿ. ದೇವಾಲಯಗಳ ವಿವಿಧ ಆಚರಣೆಗಳಲ್ಲಿ ಪ್ರಕೃತಿ, ಸಮಾಜದ ಸಂರಕ್ಷಣೆ ಹಿತ ಅಡಗಿದೆ ಎಂದು ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಹೇಳಿದ್ದಾರೆ.

ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮೀ ಕ್ಷೇತ್ರದ ಅಷ್ಟಬಂಧ ಬ್ರಹ್ಮಕಲಶೋತ್ಸವದ ಅಂಗವಾಗಿ ಸೋಮವಾರ ರಾತ್ರಿ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಹರಿಯುವ ನದಿ, ಬೆಟ್ಟ, ಕಲ್ಲು, ಮರ ಗಿಡಗಳು ದೇವರೆಂದು ಪೂಜಿಸುವ ಮೂಲಕ ನಾವು ಪ್ರಕೃತಿಗೆ



ಹತ್ತಿರವಾಗಿದ್ದೇವೆ. ಆದರೆ ಅದರ ಸಂರಕ್ಷಣೆಯ ಪ್ರಜ್ಞೆಯೂ ನಮ್ಮೆಲ್ಲರಲ್ಲಿರಬೇಕು. ದೇವಸ್ಥಾನ ನ್ಯಾಯಾಲಯವೂ ಹೌದು, ದೇವಾಲಯವೂ ಹೌದು, ಸಮಾಜದ ಆಲಯವೂ ಆಗಿ ನಮ್ಮ ಸಕಲ ಆಗುಹೋಗುಗಳ ಕೇಂದ್ರವಾಗಿ ದೇಹದ ಹೃದಯದಂತೆ ಸಮಾಜವನ್ನು ಬೆಳೆಸಬೇಕು ಎಂದು ಸ್ವಾಮೀಜಿ ನುಡಿದರು.

ಬ್ರಹ್ಮಕಲಶ ಸಮಿತಿ ರಕ್ಷಾಧಿಕಾರಿ ವಕೀಲ ಎ. ಸದಾನಂದ ರೈ ಅಧ್ಯಕ್ಷತೆ ವಹಿಸಿದ್ದರು. ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಳ ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಆನೆಮಜಲು ದಿವ್ಯ ಉಪಸ್ಥಿತರಿದ್ದು ಮಾತನಾಡಿದರು. ಬಾಲಗೋಕುಲ ಜಿಲ್ಲಾ ಸಮಿತಿ ಸದಸ್ಯ, ವಕೀಲ ಪ್ರವೀಣ್ ಕೋಡೋತ್ ಧಾರ್ಮಿಕ ಉಪನ್ಯಾಸ ನೀಡಿ, ಪೂರ್ಣ ಅಯ್ಯಪ್ಪ ತತ್ವ ಎನ್ನುವುದು ತ್ಯಾಗದ ಜೊತೆಗೆ ಅಧರ್ಮದ ವಿರುದ್ಧ ಸೆಟೆದು ನಿಲ್ಲುವುದೂ ಆಗಿದೆ. ಹಿಂದು ಧರ್ಮಕ್ಕೆ ಎದುರಾಗುವ ಅನ್ಯಾಯದ ವಿರುದ್ಧ ಎದ್ದು ನಿಂತಾಗ ಮಾತ್ರ ಸ್ಪಷ್ಟ ಉತ್ತರ ನೀಡಲು, ಆ ಮೂಲಕ ನಮ್ಮಜೀವನವನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯ ಎಂದರು.

> **ಕೃತಾರ್ಥತೆ ಪಡೆಯುತ್ತದೆ**
>
> ಪ್ರಕೃತಿ ಸಂರಕ್ಷಣೆ, ಪ್ರಾಣಿಗಳಬಗ್ಗೆ ದಯೆ ನಮ್ಮಲ್ಲಿ ಮೂಡಿಬಂದಾಗ ಮನಸ್ಸು ದೇವ ಮನಸ್ಸಾಗಿ ಕೃತಾರ್ಥತೆ ಪಡೆಯುತ್ತದೆ. ತ್ಯಾಗಮಯ ಜೀವನಕ್ಕೆ ಅಂತಿಮ ಯಶಸ್ಸು ಸಾಧ್ಯ ಎಂಬುದು ಅಯ್ಯಪ್ಪನ ಮೂಲ ತತ್ವ. ಭಕ್ತಿಯ ಪರಿಣಾಮ ಹೃದಯ ಶುದ್ಧವಾಗುತ್ತದೆ.ಆದರಿಂದ ಅವರ ದೃಷ್ಟಿಕೋನ ಬದಲಾಗಿ ಸಮಾಜಮುಖಿ, ದೈವಪ್ರಿಯ ವ್ಯಕ್ತಿಯಾಗಬಲ್ಲ.
>
> • ಕೊಂಡೆವೂರು ಶ್ರೀ

ಹಿರಿಯ ವಕೀಲ ಎಂ.ನಾರಾಯಣ ಭಟ್, ಕಾಸರಗೋಡು ಸಾರ್ವಜನಿಕ ಗಣೇಶೋತ್ಸವ ಸಮಿತಿ ಅಧ್ಯಕ್ಷ, ವಕೀಲ ಪಿ.ಮುರಳೀಧರನ್ ಮಾತನಾಡಿದರು. ನಗರಸಭೆ ಕೌನ್ಸಿಲರ್ ಅನಿಲ್ ಚೆನ್ನಿಕೆರೆ, ಕೆ.ಸುರೇಶ್, ರಾಮಚಂದ್ರ ಕಾಮತ್ ಅಭ್ಯಾಗತರಾಗಿದ್ದರು. ಕೆ.ಸಿ.ಜಯರಾಜನ್, ಡಾ.ತೇಜಸ್ವಿ ಮಹಾಬಲ ಭಟ್, ವಿಶ್ವನಾಥ ಮಣಿಯಾಣಿ ಕೊರಕೋಡು ಶುಭಾಶಂಸನೆಗೈದರು. ಬ್ರಹ್ಮಕಲಶ ಸಮಿತಿ ಉಪಾಧ್ಯಕ್ಷ ರವೀಂದ್ರ ಕೋಟೆಕಣಿ ಸ್ವಾಗತಿಸಿ, ರಾಘವೇಂದ್ರ ಬದಿಬಾಗಿಲು ವಂದಿಸಿ, ವರಪ್ರಸಾದ್ ಕೋಟೆಕಣಿ ನಿರೂಪಿಸಿದರು.

ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರ

ರಿ.ನಂ.306/2014, ನುಳ್ಳಿಪ್ಪಾಡಿ. ಕಾಸರಗೋಡು–671121, ಫೋನ್: 6282736523









ನಾಳೆ ಅಷ್ಟಬಂಧ ಬ್ರಹ್ಮಕಲಶೋತ್ಸವ

2026 ಏಪ್ರಿಲ್ 18 ರಿಂದ ಏಪ್ರಿಲ್ 23 ರವರೆಗೆ

ಏಪ್ರಿಲ್ 23ರಂದು: ಬೆಳಗ್ಗೆ 7.34 ರಿಂದ 9.37ರ ವರೆಗಿನ ವೃಷಭ ಲಗ್ನ ಶುಭಮುಹೂರ್ತದಲ್ಲಿ ಅಷ್ಟಬಂಧ ಲೇಪನ ಮತ್ತು ಬ್ರಹ್ಮಕಲಶಾಭಿಷೇಕ

ಏಪ್ರಿಲ್ 24: ವಾರ್ಷಿಕ ಮಹೋತ್ಸವ

ಕಾಸರಗೋಡು ನಗರ ಹೃದಯಭಾಗದಲ್ಲಿರುವ ಕಾರಣಿಕ ಪ್ರಸಿದ್ಧ ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಸನ್ನಿಧಿಗೆ ಐದೂವರೆ ದಶಕಗಳ ಇತಿಹಾಸವಿದೆ. ನಾಲ್ಕು ದಶಕಗಳ ಕಾಲ ಶ್ರೀ ಧರ್ಮಶಾಸ್ತಾ ಭಜನಾ ಮಂದಿರ ನೆಲೆಗೊಂಡು ಅನಂತರ ನವೀಕರಣಗೊಂಡು ಸಂಪೂರ್ಣ ಶಿಲಾಮಯ, ಎರಡಂತಸ್ತಿನ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರವಾಗಿ ಮೈದಳೆದು ನಿಂತಿದೆ. ಪ್ರಾರಂಭದಲ್ಲಿ ಸ್ಥಳೀಯ ಆಸ್ತಿಕ ಶ್ರದ್ಧಾಳುಗಳ ಭಜನಾ ಸಂಕೀರ್ತನೆಯ ಮೂಲಕ ಶ್ರೀ ಧರ್ಮಶಾಸ್ತಾ ದೇವರನ್ನು ಆರಾಧಿಸುತ್ತಾ ಬಂದು, ಮುಂದೆ ದೈವಿಕ ಚೈತನ್ಯ ಅಭಿವೃದ್ಧಿಯಾಗಿ ಶ್ರೀ ಅಯ್ಯಪ್ಪ ಸ್ವಾಮಿಗೆ ನಿತ್ಯಪೂಜೆ, ಉತ್ಸವಾದಿಗಳು ನಡೆಯಬೇಕೆಂದು ದೇವಪ್ರಶ್ನೆಯಲ್ಲಿ ಅಪ್ಪಣೆಯಾದಂತೆ ಶ್ರೀ ಕ್ಷೇತ್ರವನ್ನು 2011ರಲ್ಲಿ ನಿರ್ಮಿಸಿ ಶ್ರೀ ದೇವರ ಶಿಲಾ ವಿಗ್ರಹ ಪ್ರತಿಷ್ಠೆ ನಡೆಸಲಾಯಿತು. ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ನಡೆದು ಇದೀಗ 15 ಸಂವತ್ಸರಗಳು ಕಳೆದಿದೆ. 12 ವರ್ಷಗಳಿಗೊಮ್ಮೆ ಕೈಗೊಳ್ಳಬೇಕಾದ ಅಷ್ಟಬಂಧ ಬ್ರಹ್ಮಕಲಶೋತ್ಸವವನ್ನು ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿರುವುದರಿಂದ ಮತ್ತೆರಡು ವರ್ಷಗಳಿಗೆ ಮುಂದೂಡುವುದು ಅನಿವಾರ್ಯವಾಯಿತು.

ಶ್ರೀಮದ್ ಎಡನೀರು ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಪೂರ್ಣಾನುಗ್ರಹದೊಂದಿಗೆ, ಶ್ರೀ ಸ್ವಾಮೀಜಿಯವರು ಮುಖ್ಯ ರಕ್ಷಾಧಿಕಾರಿಯಾಗಿಯೂ, ಕ್ಷೇತ್ರದ ತಂತ್ರಿವರ್ಯ ಉಳಿಯತ್ತಾಯ ವಿಷ್ಣು ಆಸ್ರರು ಗೌರವಾಧ್ಯಕ್ಷರಾಗಿರುವ ಅಷ್ಟಬಂಧ ಬ್ರಹ್ಮಕಲಶೋತ್ಸವ ಸಮಿತಿ ರೂಪೀಕರಿಸಿ ಅವರ ಮಾರ್ಗದರ್ಶನ ಹಾಗೂ ಪ್ರಧಾನ ಪೌರೋಹಿತ್ಯದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವವು ಆರಂಭಗೊಂಡಿದ್ದು, ಏಪ್ರಿಲ್ 23ರ ವರೆಗೆ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗುತ್ತಿದೆ.

ಶ್ರೀ ಕ್ಷೇತ್ರ ನಿರ್ಮಾಣದಿಂದ ತೊಡಗಿ ಇಂದಿನ ವರೆಗೆ ಊರ ಪರವೂರ ಭಗವದ್ಭಕ್ತರು ನೀಡುತ್ತಾ ಬಂದಿರುವ ಸರ್ವ ಸಹಾಯ ಸಹಕಾರಗಳನ್ನು ಕೃತಜ್ಞತಾಪೂರ್ವಕವಾಗಿ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತಿದ್ದೇವೆ.

ಶ್ರೀ ಕ್ಷೇತ್ರದ ಅಷ್ಟಬಂಧ ಬ್ರಹ್ಮಕಲಶೋತ್ಸವದ ಸುಸಂದರ್ಭದಲ್ಲಿ ಕ್ಷೇತ್ರದ ಗರ್ಭಗುಡಿಯ ಬಾಗಿಲಿಗೆ "ಬೆಳ್ಳಿ ಹೊದಿಕೆ" ಹಾಗೂ ದಾರಂದ, ಕ್ಷೇತ್ರದ ಸೋಪಾನ ಮೆಟ್ಟಿಲು, ಗರ್ಭಗುಡಿಯ ಮುಂಭಾಗಕ್ಕೆ "ಹಿತ್ತಾಳೆ ಹೊದಿಕೆ' ನಡೆಸಲಾಯಿತು. ಬ್ರಹ್ಮಕಲಶೋತ್ಸವ ಕಾರ್ಯಕ್ರಮಗಳಲ್ಲೂ ಏಪ್ರಿಲ್ 24ರಂದು ನಡೆಯುವ ವಾರ್ಷಿಕ ಜಾತ್ರಾ ಮಹೋತ್ಸವದಲ್ಲೂ ಎಲ್ಲಾ ಭಕ್ತರು ಭಾಗವಹಿಸಿ ಶ್ರೀ ಅಯ್ಯಪ್ಪ ಸ್ವಾಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ವಿನಂತಿ.

ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರ ನುಳ್ಳಿಪ್ಪಾಡಿ ಕಾಸರಗೋಡು
ತಾರೀಕು **18-04-2026** ರಿಂದ **23-04-2026**ರ ತನಕ
ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ

ಅಷ್ಟಬಂಧ ಬ್ರಹ್ಮಕಲಶೋತ್ಸವ

ಎಡನೀರು ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಪೂರ್ಣಾನುಗ್ರಹದೊಂದಿಗೆ ಕ್ಷೇತ್ರದ ತಂತ್ರಿವರ್ಯರಾದ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಅಸ್ರ ಇವರ ದಿವ್ಯ ಪೌರೋಹಿತ್ಯದಲ್ಲಿ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ದಿನಾಂಕ 24-04-2026ನೇ ಶುಕ್ರವಾರದಂದು ವಾರ್ಷಿಕ ಮಹೋತ್ಸವವು ಜರಗಲಿದೆ. ಈ ಪುಣ್ಯಪ್ರದವಾದ ಭಗವತ್‌ಸೇವೆಗಳಲ್ಲಿ ತಾವೆಲ್ಲರೂ ಭಾಗವಹಿಸಿ, ತನು ಮನ ಧನಗಳಿಂದ ಸಹಕರಿಸಿ ಶ್ರೀ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಭಕ್ತಿಪೂರ್ವಕ ಆಮಂತ್ರಿಸುತ್ತೇವೆ.

ಅಧ್ಯಕ್ಷರು ಹಾಗೂ ಸದಸ್ಯರು
ಬ್ರಹ್ಮಕಲಶೋತ್ಸವ ಸಮಿತಿ, ನುಳ್ಳಿಪ್ಪಾಡಿ
ಅಧ್ಯಕ್ಷರು ಹಾಗೂ ಸದಸ್ಯರು
ಶ್ರೀ ಅಯ್ಯಪ್ಪ ಸ್ವಾಮಿ ಟ್ರಸ್ಟ್ (ರಿ.) ನುಳ್ಳಿಪ್ಪಾಡಿ

22-04-2026 ಬುಧವಾರ– ವೈದಿಕ ಕಾರ್ಯಕ್ರಮಗಳು, ಬೆಳಿಗ್ಗೆ 7.30 : ಗಣಪತಿ ಹವನ, ಬ್ರಹ್ಮಕಲಶ ಪೂಜೆ, ಪರಿಕಲಶ ಪೂಜೆ, ಅಂಕುರ. ಪೂಜೆ. ಮಧ್ಯಾಹ್ನ 12.00 : ಮಧ್ಯಾಹ್ನ ಪೂಜೆ, ಸಂಜೆ 6.00 : ದೀಪಾರಾಧನೆ, ಕಲಶಾವಾಸ, ಅಧಿವಾಸ ಹೋಮಗಳು, ಮಂಡಲ ಪೂಜೆ ರಾತ್ರಿ 8.00 : ಪೂಜೆ . ಶ್ರೀ ಶಾಸ್ತಾ ವೇದಿಕೆ : ಬೆಳಿಗ್ಗೆ 8.00 ರಿಂದ 11.00 . ತತ್ವಮಸಿ ವೇದಿಕೆ:ಬೆಳಿಗ್ಗೆ 11.00 : ಗಾನಸುಧಾ: ಸ್ವರಗಾನ ಸಂಗೀತ ಬಳಗ, ಕಾಸರಗೋಡು. ಮಧ್ಯಾಹ್ನ 12.00 : ಭರತನಾಟ್ಯ, 12.30 : ಭಕ್ತಿಗಾನ ಸುಧಾ: 2.00 : ನಾಟ್ಯ ಸಂಭ್ರಮ: ಸಂಜೆ5.00 : ಪರಮಪೂಜ್ಯ ಬ್ರಹ್ಮಚಾರಿ ಶ್ರೀ ಶ್ರೀ ವೇದವೇದ್ಯಾಮೃತ ಚೈತನ್ಯ ಶ್ರೀ ಮಾತಾ ಅಮೃತಾನಂದಮಯಿ ಮಠ, ವಿವೇಕಾನಂದ ನಗರ ಇವರ ಆಗಮನ ಪೂರ್ಣಕುಂಭ ಸ್ವಾಗತ 5.30 : ಸಭಾ ಕಾರ್ಯಕ್ರಮ ರಾತ್ರಿ 7.30ರಿಂದ : ಫ್ಯೂಷನ್ ಭಜನ.

23.04.2026 ಗುರುವಾರ : ವೈದಿಕ ಕಾರ್ಯಕ್ರಮಗಳು– ಬೆಳಗ್ಗೆ 6 ಗಂಟೆಗೆ ಗಣಪತಿ ಹವನ, ವೈಶಾಖ ಶುಕ್ಲಪಕ್ಷ ಸಪ್ತಮಿ, ಮೇಷ ಮಾಸ 9 ಪುನರ್ವಸು ನಕ್ಷತ್ರ ಬೆಳಗ್ಗೆ 7.34 ರಿಂದ 9.37ರ ವರೆಗಿನ ವೃಷಭ ಲಗ್ನ ಶುಭಮುಹೂರ್ತದಲ್ಲಿ ಅಷ್ಟಬಂಧ ಲೇಪನ ಮತ್ತು ಬ್ರಹ್ಮಕಲಶಾಭಿಷೇಕ, ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, ಪ್ರಸಾದ ವಿತರಣೆ, ಸಂಜೆ 6 ಗಂಟೆಗೆ ದೀಪಾರಾಧನೆ, ರಾತ್ರಿ 8 ಗಂಟೆಗೆ ವಿಶೇಷ ಅಲಂಕಾರ ಪೂಜೆ. ತತ್ವಮಸಿ ವೇದಿಕೆ: ಬೆಳಗ್ಗೆ 11.30 ಶ್ರೀಮದ್ ಎಡನೀರು ಮಠ ಅವರಿಗೆ ಪೂರ್ಣಕುಂಭ ಸ್ವಾಗತ. ಸಮಾರೋಪ ಸಮಾರಂಭ, ಎಡನೀರು ಮಠಾಧೀಶ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಆಶೀರ್ವಚನ ನೀಡುವರು. ಬ್ರಹ್ಮಕಲಶೋತ್ಸವ ಸಮಿತಿ ಬಿ.ವಸಂತ ಪೈ ಬದಿಯಡ್ಕ, ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಅಸ್ರ ಉಪಸ್ಥಿತರಿರುವರು. ಮುಖ್ಯ ಅತಿಥಿಯಾಗಿ ಮಹಾಬಲೇಶ್ವರ ಭಟ್ ಎಡಕ್ಕಾನ ಭಾಗವಹಿಸುವರು. ಸಂಜೆ 5 ಗಂಟೆಗೆ ನಾಟ್ಯ ಮಂಟಪ, ಮಧೂರು ಸೌಮ್ಯಾ ಶ್ರೀಕಾಂತ್ ಇವರ ಶಿಷ್ಯರಿಂದ ಭರತನಾಟ್ಯ, ರಾತ್ರಿ 7 ಗಂಟೆಗೆ ಶ್ರೀ ರಾಮನಾಥ ಸಾಂಸ್ಕೃತಿಕ ಯಕ್ಷಗಾನ ತರಬೇತಿ ಕೇಂದ್ರ ರಾಮನಗರ ಕೋಟೆಕಣಿ ಇವರಿಂದ ಯಕ್ಷಗಾನ ಬಯಲಾಟ ಪ್ರಸಂಗ ಭಸ್ಮಾಸುರ ಮೋಹಿನಿ ಮತ್ತು ಶ್ರೀ ಸ್ವಾಮಿ ಅಯ್ಯಪ್ಪ ಪ್ರದರ್ಶನಗೊಳ್ಳಲಿದೆ.

24.04.2026 ಶುಕ್ರವಾರ : ವಾರ್ಷಿಕ ಮಹೋತ್ಸವ– ಬೆಳಗ್ಗೆ 7.30ಕ್ಕೆ ಗಣಪತಿ ಹವನ, ನವಕಾಭಿಷೇಕ, 8 ಗಂಟೆಗೆ ಶ್ರೀ ರಕ್ತೇಶ್ವರಿ ಮಹಿಳಾ ಭಜನಾ ಸಂಘ ಅಣಂಗೂರು ಇವರಿಂದ ಭಜನೆ, 9 ಗಂಟೆಗೆ ಶ್ರೀ ವಿದ್ಯಾಕ್ಷೇತ್ರ ಮಜಲು ಇವರಿಂದ ಭಜನೆ, 10 ಗಂಟೆಗೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಲಶ ಪ್ರತಿಷ್ಠೆ, ಮಧ್ಯಾಹ್ನ 12ಕ್ಕೆ ಶ್ರೀ ಸತ್ಯನಾರಾಯಣ ಪೂಜೆ, ಮಹಾಪೂಜೆ, ಅನ್ನಪ್ರಸಾದ ವಿತರಣೆ. ಸಂಜೆ 6ಕ್ಕೆ ತಾಯಂಬಕ, ದೀಪಾರಾಧನೆ, ರಾತ್ರಿ 7 ಗಂಟೆಗೆ ಶ್ರೀ ದೇವರ ಉತ್ಸವ ಬಲಿ, ಕಟ್ಟೆಪೂಜೆ ನಡೆಯಲಿದೆ.

ಅಷ್ಟಬಂಧ ಬ್ರಹ್ಮಕಲಶೋತ್ಸವ ಮತ್ತು ವಾರ್ಷಿಕ ಉತ್ಸವಕ್ಕೆ ಶುಭ ಕೋರುವ



ಶ್ರೀ ಕೃಷ್ಣ ಪ್ರಸಾದ್ ಪಿ.ಎಸ್. ಕೋಟೆಕಣಿ
ಪ್ರಧಾನ ಕಾರ್ಯದರ್ಶಿ,
ಬ್ರಹ್ಮಕಲಶೋತ್ಸವ ಸಮಿತಿ, ನುಳ್ಳಿಪ್ಪಾಡಿ



ಶ್ರೀ ಗಣೇಶ್ ಅಮೈ
ಅಧ್ಯಕ್ಷರು,
ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರ ಟ್ರಸ್ಟ್ (ರಿ) ನುಳ್ಳಿಪ್ಪಾಡಿ



ಶ್ರೀ ಬಾಲಕೃಷ್ಣನ್ ಕೆ.ಎನ್.ಚೆನ್ನಿಕೆರೆ
ಕಾರ್ಯಾಧ್ಯಕ್ಷರು,
ಬ್ರಹ್ಮಕಲಶೋತ್ಸವ ಸಮಿತಿ ನುಳ್ಳಿಪ್ಪಾಡಿ



- **ಸಂದೇಶ್ ಕಾಞಂಗಾಡು**
- **ವಿದ್ವತ್ ಬೆಂಗಳೂರು**



ಶ್ರೀ ಅರವಿಂದ ನಾಯ್ಕ್ ಶ್ರೀಮತಿ ಶೋಭಾ ಕೆ. ನಾಯ್ಕ್ ಅಮೈ
ಅಧ್ಯಕ್ಷೆ, ಮಹಿಳಾ ಸಮಿತಿ
ಬ್ರಹ್ಮಕಲಶೋತ್ಸವ ಸಮಿತಿ ನುಳ್ಳಿಪ್ಪಾಡಿ

ಡಾ.ವೆಂಕಟಗಿರಿ
ರಕ್ಷಾಧಿಕಾರಿ,
ಬ್ರಹ್ಮಕಲಶೋತ್ಸವ ಸಮಿತಿ
ನುಳ್ಳಿಪ್ಪಾಡಿ
SARC ASSOCIATION OF ANAESTHESIOLOGISTS 1991
ಹಿರಿಯ ಅರಿವಳಿಕೆ ತಜ್ಞರು
ಕಾಸರಗೋಡು
ಅಧ್ಯಕ್ಷರು
ಸಾರ್ಕ್ ದೇಶಗಳ ಅರಿವಳಿಕೆ
ತಜ್ಞರ ಸಂಘಟನೆ



ಎ.ಸದಾನಂದ ರೈ ಅಡ್ವಕೇಟ್
ರಕ್ಷಾಧಿಕಾರಿ, ಬ್ರಹ್ಮಕಲಶೋತ್ಸವ
ಸಮಿತಿ, ನುಳ್ಳಿಪ್ಪಾಡಿ



ಗುರುಪ್ರಸಾದ್ ಕೋಟೆಕಣಿ
ಉಪಾಧ್ಯಕ್ಷರು, ಬ್ರಹ್ಮಕಲಶೋತ್ಸವ
ಸಮಿತಿ, ನುಳ್ಳಿಪ್ಪಾಡಿ
ಅಧ್ಯಕ್ಷರು, ಪ್ರಚಾರ ಸಮಿತಿ



ಹರೀಶ್ ಕುಮಾರ್ ಕೆ ಎಮ್
ಪ್ರಧಾನ ಕಾರ್ಯದರ್ಶಿ
ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರ
ಟ್ರಸ್ಟ್ (ರಿ) ನುಳ್ಳಿಪ್ಪಾಡಿ



ಶ್ರೀ ಕಿಶೋರ್ ಕುಮಾರ್ ಮತ್ತು ಶ್ರೀಮತಿ ನಮಿತ ಮತ್ತು ಮಕ್ಕಳು
ಕೋಶಾಧಿಕಾರಿ, ಶ್ರೀ ಅಯ್ಯಪ್ಪ ಸ್ವಾಮಿ
ಕ್ಷೇತ್ರ ಟ್ರಸ್ಟ್ (ರಿ.) ನುಳ್ಳಿಪ್ಪಾಡಿ



ಅಶೋಕ ರೈ ಮತ್ತು ಮನೆಯವರು ಮಾಯಿಪ್ಪಾಡಿಗುತ್ತು
ನಿವೃತ್ತ ಮಹಾಪ್ರಬಂಧಕರು, ಕಾಸರಗೋಡು
ಸರ್ವಿಸ್ ಕೋ– ಓಪರೇಟಿವ್ ಬ್ಯಾಂಕ್





ವರಪ್ರಸಾದ್ ಕೋಟೆಕಣಿ
ಜೊತೆ ಕಾರ್ಯದರ್ಶಿ,
ಬ್ರಹ್ಮಕಲಶೋತ್ಸವ ಸಮಿತಿ
ನುಳ್ಳಿಪ್ಪಾಡಿ



ಕೆ. ಸುನಿಲ್ ಕುಮಾರ್ ಅಣಂಗೂರು ಮತ್ತು ಮನೆಯವರು
ಆರ್ಥಿಕ ಸಮಿತಿ,
ಬ್ರಹ್ಮಕಲಶೋತ್ಸವ ಸಮಿತಿ ನುಳ್ಳಿಪ್ಪಾಡಿ



ಜಗದೀಶ್ ಕೂಡ್ಲು
ಪ್ರಚಾರ ಸಮಿತಿ ಸಹ ಸಂಚಾಲಕರು,
ಬ್ರಹ್ಮಕಲಶೋತ್ಸವ ಸಮಿತಿ
ನುಳ್ಳಿಪ್ಪಾಡಿ



ಶ್ರೀ ಎ.ಟಿ.ನಾಯ್ಕ್ ಕಾಸರಗೋಡು



ಡಾ. ಶ್ರೀರಕ್ಷಾ ಎ. ನಾಯ್ಕ್, ಅಮೈ



ಶ್ರೀಕಾಂತ್ ಕಾಸರಗೋಡು
ಛಾಯಾಗ್ರಾಹಕರು



ರಾಮಚಂದ್ರ ಭಟ್
ಇರಿಯಣ್ಣೆ